ಸಂಪುಟ ೧೬
ಸಂಚಿಕೆ ೩-೪

ಕರ್ನಾಟಕ ಭಾರತಿ

ಸಂಕ್ರಮಣ ಮತ್ತು ಅಕ್ಷಯ ತೃತೀಯಾ
ಸಂಯುಕ್ತ ಸಂಚಿಕೆ

ಹಾಗೂ

ಗೋವಿಂದ ಪೈ ಶತಮಾನೋತ್ಸವದ ವಿಶೇಷಾಂಕ

ತ್ರೈಮಾಸಿಕ ಪತ್ರಿಕೆ
ಜನವರಿ ಮತ್ತು ಮೇ, ೧೯೮೪

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅದರ ಲೇಖನಗಳ ೨೫ ಪ್ರತಿಗಳನ್ನು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, ಕರ್ನಾಟಕ ಭಾರತಿ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಬರೆಯಬೇಕು.

'ಕರ್ನಾಟಕ ಭಾರತಿ'

೧ ಸ್ವಾತಂತ್ರ್ಯೋತ್ಸವ ಸಂಚಿಕೆ ೨ ರಾಜ್ಯೋತ್ಸವ ಸಂಚಿಕೆ
೩ ಸಂಕ್ರಮಣ ಸಂಚಿಕೆ ೪ ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ ರೂ. ೮-೦೦ (ಅಂಚೆ ವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ: ರೂ ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ರೂ. ಮಾತ್ರ ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲದೆ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೬ ಸಂಚಿಕೆ : ೩–೪

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೬ ಸಂಚಿಕೆ : ೩-೪

ಸಂಕ್ರಮಣ ಮತ್ತು ಅಕ್ಷಯ ತೃತೀಯಾ ಸಂಯುಕ್ತ ಸಂಚಿಕೆ
ಹಾಗೂ
ಗೋವಿಂದ ಪೈ ಶತಮಾನೋತ್ಸವದ ವಿಶೇಷಾಂಕ

ಜನೆವರಿ ಮತ್ತು ಮೇ, ೧೯೮೪


ಪ್ರಕಾಶಕರು :

ಎಸ್. ಬಿ. ನಾಯಕ, ಎಂ. ಎ.
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಎಚ್. ಗಂಗಯ್ಯ, ಎಂ.ಎಸ್‌ಸಿ.
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

ಪರಿವಿಡಿ



ರಾಷ್ಟ್ರಕವಿ ಗೋವಿಂದ ಪೈ

ಗೋವಿಂದ ಪೈ : ಶತಮಾನದ ಪುಣ್ಯಸ್ಮರಣೆ

● **ಕಯ್ಯಾರ ಕಿಞ್ಞಣ್ಣರೈ**

ಸನ್ಮಾನ್ಯ ಅಧ್ಯಕ್ಷರೇ, ವಿಶ್ವವಿದ್ಯಾಲಯದ ಕುಲಪತಿಗಳೇ, ವಿದ್ಯಾನಿಧಿಗಳಾದ ಆಚಾರ್ಯ ವರ್ಯರೇ, ಅಕ್ಕತಂಗಿಯರೆ, ಹಾಗೂ ಅಣ್ಣತಮ್ಮಂದಿರೇ,

ಕನ್ನಡನಾಡಿನಲ್ಲಿ ಮಾತ್ರವಲ್ಲ, ಇಡೀ ಭರತವರ್ಷದಲ್ಲಿಯೇ, ಓರ್ವ ಅಪೂರ್ವ ಮೇಧಾವಿಯಾಗಿದ್ದ, ಮಹಾವಿದ್ವಾಂಸರಾಗಿದ್ದ, ಬಹುಭಾಷಾ ಪಂಡಿತರಾಗಿದ್ದ, ರಾಷ್ಟ್ರ ಕವಿಯೆನಿಸಿ, ಸಂಶೋಧಕರೆನಿಸಿ ಖ್ಯಾತರಾಗಿದ್ದ ಗೋವಿಂದ ಪೈಗಳ ಜನ್ಮ ಶತ ಮಾನೋತ್ಸವವನ್ನು ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕನ್ನಡ ಅಧ್ಯಯನ ಪೀಠ ಆಚರಿಸುತ್ತಿರುವುದು ಅತ್ಯಂತ ಸೂಕ್ತವೂ ಪ್ರಶಂಸನೀಯವೂ ಆಗಿದೆ. ಅಂತಹ ಉನ್ನತ ವ್ಯಕ್ತಿತ್ವದ ಧೀಮಂತ ಮಹಾಪುರುಷನ ಕುರಿತು ನಾನು ಎಷ್ಟರಮಟ್ಟಿಗೆ ನಿಮ್ಮ ಮುಂದೆ ಹೇಳಲಾಪೆನೋ, ನನ್ನ ಮಾತಿನಿಂದ ಅವರ ಸಮ್ಮತಿಯನ್ನು ನಿಮಗೆ ತಿಳಿಸಲಾಪೆನೋ ಎಂಬ ಕುರಿತು ನಿಜವಾಗಿಯೂ ನನಗೆ ಅಳುಕು ಇದೆ. ಗಂಭೀರ ವಿಶಾಲ ಸಾಗರದ ತಡಿಯಲ್ಲಿ ನಿಂತ ಬಾಲಕನೋರ್ವನು ಸಾಗರದ ಆಳ ವಿಶಾಲ ಗಾಂಭೀರ್ಯಗಳಿಗೆ ನಿಬ್ಬೆರಗಾಗಿ ನೋಡುತ್ತಾ, ಮತ್ತೆ ದಡಕ್ಕಪ್ಪಳಿಸುತ್ತಿರುವ ಅಸಂಖ್ಯಾತವಾದ ತೆರೆಗಳ ನೊರೆಗಳಿಗೆ ಮೆಚ್ಚುಗೆಪಟ್ಟು, ತನ್ನ ಬೊಗಸೆಯಲ್ಲಿ ಒಂದಿಷ್ಟು ಸಮುದ್ರದ ನೀರನ್ನು ಎತ್ತಿಕೊಂಡು ತಂದಿದ್ದರೂ, ಆ ಕಿಂಚಿತ್ ಜಲದಲ್ಲಿಯೂ ಸಾಗರದ ಲಾವಣ್ಯಾಂಶ ಸಹಜವಾಗಿಯೇ ಇರುವಂತೆ, ನನ್ನೀ ಅಲ್ಪಭಾಷಿತದಲ್ಲೂ ಗೋವಿಂದ ಪೈಗಳ ಘನವ್ಯಕ್ತಿತ್ವದ ಸೂಕ್ಷ್ಮಾಂಶವೇನಾದರೂ ತಮಗೆ ತೋರಿಬಂದರೆ, ಅದೆಲ್ಲವೂ ಪೈಗಳ ಯೋಗ್ಯತೆಯ ಹಿರಿಮೆಯಲ್ಲದೆ ನನ್ನದೇನೂ ಇಲ್ಲವೆಂಬುದನ್ನು ಆರಂಭದಲ್ಲೇ ಅರಿಕೆ ಮಾಡಿಕೊಳ್ಳುತ್ತೇನೆ.

ಒಂದು ಅಪೂರ್ವ ಚಿತ್ರವನ್ನು ನಿಮ್ಮ ಮುಂದಿಡಲು ಬಯಸುತ್ತೇನೆ: ೧೯೫೦ ರಲ್ಲಿ ಮೂವತ್ತನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮುಂಬಯಿಯಲ್ಲಿ ಜರುಗಿತು. ಅನೇಕಸಲ ಅರ್ಪಿತವಾದ ಸಾಹಿತ್ಯ ಸಮ್ಮೇಳನಾಧ್ಯಕ್ಷ ಪೀಠವನ್ನು ಒಲ್ಲೆನೆಂದು ವಿನಯ ಪೂರ್ವಕ ಅಲ್ಲಗಳೆದರೂ, ಮತ್ತೆ ಯಾವುದೋ ನಿರ್ಬಂಧಕ್ಕೆ, ಮತ್ತೆ ರಾಷ್ಟ್ರಕವಿ ಪದವಿಯನ್ನು ಒಪ್ಪಿಕೊಂಡ ಹಂಗಿಗೆ ಆ ಸಲದ ಅಧ್ಯಕ್ಷ ಸ್ಥಾನವನ್ನು ಗೋವಿಂದ ಪೈಗಳು ಒಪ್ಪಿಕೊಂಡರು. ಆ ಸಮ್ಮೇಳನ ಜರುಗಿದ್ದ ಮುಂಬಯಿಯ ಸುಪ್ರಸಿದ್ಧ ಕಾವ್‌ಸ್‌ಜೀ ಜಹಾಂಗೀರ್ ಸಭಾಭವನದಲ್ಲಿ ಕನ್ನಡ ನಾಡಿನ ನಾನಾ ಕಡೆಗಳಿಂದ

ಹಿರಿಯ ಕಿರಿಯರನೇಕರು ಆಗಮಿಸಿದ್ದರು. ಮುಂಬಯಿಯಲ್ಲೇ ನೆಲೆಸಿರುವ, ಸಹಸ್ರ ಸಂಖ್ಯೆಯ ಕನ್ನಡಿಗರೂ ಸೇರಿದ್ದರು. ಪೈಗಳು ರಾಷ್ಟ್ರಕವಿಗಳೆಂದೂ, ಪ್ರಸಿದ್ಧ ಇತಿಹಾಸ ಸಂಶೋಧಕರೆಂದೂ, ಬಹುಭಾಷಾಭಿಜ್ಞರೆಂದೂ ಖ್ಯಾತರಾಗಿದ್ದ ಕಾರಣ ಕನ್ನಡಿಗರು ಮಾತ್ರವಲ್ಲದೆ ಮರಾಠಿ, ಗುಜರಾಥಿ, ಹಿಂದೀ, ಇಂಗ್ಲೀಷ್, ಭಾಷೆಗಳ ವಿದ್ವಾಂಸರನೇಕರೂ ಬಂದಿದ್ದರು. ಆ ಸಭೆ ಶ್ರೀಮಂತರಿಂದಲೂ ಧೀಮಂತರಿಂದಲೂ ಕೂಡಿತ್ತು. ಸಭಾ ವೇದಿಕೆಯ ಮೇಲೆ ಕನ್ನಡದ ಹಿರಿಯರನೇಕರು ಆಸೀನರಾಗಿದ್ದರು. ನನ್ನ ಹತ್ತಿರ ಕುಳಿತಿದ್ದ ಮೈಸೂರಿನ ಮಹನೀಯರೊಬ್ಬರು, ವೇದಿಕೆಯಲ್ಲಿ ಆಸೀನರಾದ ಮಹನೀಯರನ್ನೆಲ್ಲಾ ವೀಕ್ಷಿಸಿ ಪೈಗಳು ಎಲ್ಲಿ ಎಂದು ಪ್ರಶ್ನಿಸಿದರು. ರಾಷ್ಟ್ರಕವಿಯಾಗುವ ಮುನ್ನ, ಪತ್ರಿಕೆಗಳಿಗೆ ಅವರು ಫೋಟೋವನ್ನು ಕೂಡ ಕೊಡುತ್ತಿರಲಿಲ್ಲವಾಗಿ, ಹೆಚ್ಚಿನವರಿಗೆ ಪೈಗಳ ಖ್ಯಾತಿ ಮಾತ್ರ ಗೊತ್ತಿತ್ತೇ ಹೊರತು ಅವರ ರೂಪ ಪರಿಚಯವಿರಲಿಲ್ಲ. ಪೈಗಳಾದರೋ ವೇದಿಕೆಯ ಕೆಳಗೆ, ಸಭಾ ಸ್ಥಳದಲ್ಲಿ ನಮಗಿಂತ ಎರಡುಸಾಲು ಮುಂದೆ, ಪ್ರಥಮ ಪಂಕ್ತಿಗಿಂತ ಹಿಂದೆ, ಕುರ್ಚಿಯಲ್ಲಿ ಕುಳಿತಿದ್ದರು. ಮಂಜೇಶ್ವರದ ಅವರ ಮನೆಯಲ್ಲಿ ಎಂತೋ ಅಂತೆಯೇ, ಅದೇ ವೇಷ, ಅದೇ ಸರಳತೆ. ಮೊಗತುಂಬಿದ ಬಿಳಿಮೀಸೆ, ಎದ್ದುನಿಂತ ಬಿಳಿ ತಲೆಗೂದಲು, ತೇಜಸ್ವೀ ನೇತ್ರಗಳು, ಖಾದಿ ಮುಂಡು, ಅರ್ಧ ಕೈ ಅಂಗಿ; ಮುಂಬಯಿಯ ವಿಶೇಷ ವೇಷಭೂಷಣಾಲಂಕೃತ ಪ್ರತಿಷ್ಠಿತ ಆಢ್ಯ ಮಹನೀಯ ವ್ಯಕ್ತಿಗಳ ಮಧ್ಯೆ, ಈ ಕಾವ್ಯರ್ಷಿ ತನ್ನ ಸರಳ ಸೌಜನ್ಯತೆಯಿಂದಲೂ ಮಹೋನ್ನತ್ಯದಿಂದ ಶೋಭಿಸುತ್ತಿದ್ದರು. ನಮ್ಮ ಹತ್ತಿರ ಸಾಲಿನಲ್ಲಿಯೇ ಪೈಗಳು ಕುಳಿತಿದ್ದರೂ, ಈ ನಾಟಕ ಚೆನ್ನಾಗಿಯೇ ನೆರವೇರಲಿ ಎಂದು ಮೈಸೂರಿನ ಮಿತ್ರರಿಗೆ ಅವರನ್ನು ತೋರಿಸುವ ಗೋಜಿಗೆ ನಾನು ಹೋಗಲಿಲ್ಲ. ಇಂತಹ ಕುತೂಹಲ ಅಲ್ಲಿ ಸೇರಿದ್ದ ಇನ್ನೂ ಹಲವರಿಗೆ ಆಗಲೇ ಉಂಟಾಗಿದ್ದುದನ್ನು ತಿಳಿಯಬಹುದಾಗಿತ್ತು.

ಗೋವಿಂದ ಪೈಗಳ ಹೆಸರು ಅಧ್ಯಕ್ಷ ಸ್ಥಾನಕ್ಕೆ ಸೂಚಿತವಾಯಿತು; ಅನುಮೋದನೆಯೂ ಆಯಿತು; ಪೈಗಳು ತಾವು ಕುಳಿತಿದ್ದ ಆಸನದಿಂದ ನಿರಾಡಂಬರವಾಗಿ ಎದ್ದು ವೇದಿಕೆಯ ಮೆಟ್ಟಿಲೇರಿ ಹೋದರು. ವೇದಿಕೆಯ ಮೇಲೆ ಆಸೀನರಾಗಿದ್ದ ಹಿರಿಯರಲ್ಲಿ ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರೂ ಒಬ್ಬರು. ಆಗಲೇ ಅವರು, ತಮ್ಮ ಹಿಂದಿನ ರಾಜಕೀಯ ಜೀವನದಿಂದ ದೂರ ಸರಿದು ಅಧ್ಯಾತ್ಮದ ಹಾದಿ ಹಿಡಿದಿದ್ದರು; ತಪಸ್ವಿಯಂತೆ ಇದ್ದರು. ಅಲ್ಲಿ ಪಂಡಿತರಾದವರಲ್ಲಿ ಬಹುಶಃ ಗೋವಿಂದ ಪೈಗಳಿಗಿಂತ ಹಿರಿಯರಾದವರು ಅವರು ಒಬ್ಬರೇ ಇರಬೇಕು. ಪೈಗಳು ಆಲೂರರ ಕಾಲು ಮುಟ್ಟಿ ನಮಸ್ಕಾರ ಮಾಡಿ ಮತ್ತೆ ಅಧ್ಯಕ್ಷ ಪೀಠವನ್ನೇರಿದರು. ಸಭೆ ಸ್ತಂಭೀಭೂತವಾಯಿತು. ಆಲೂರರ ಕಣ್ಣುಗಳಿಂದ ಗಳಗಳನೆ ಆನಂದಭಾಷ್ಪ ಸುರಿಯುತ್ತಿತ್ತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತನ್ನ ಹಿರಿದಾದ ಪಾಂಡಿತ್ಯ ಪ್ರತಿಭೆ

ಗಳ ಫಲವಾಗಿ ಇಂತಹ ಉನ್ನತ ಮನ್ನಣೆಯ ಪೀಠವನ್ನು ಏರುವ ಸಂದರ್ಭದಲ್ಲಿ ತಾನು ಆ ಕ್ಷೇತ್ರದಲ್ಲಿ ದುಡಿಯಲು ತೊಡಗಿದಾಗ, ಯಾವ ಹಿರಿಯರು ತಮ್ಮ ಬರವಣಿಗೆಗೆ ಸ್ಫೂರ್ತಿ ಚೇತನವಿತ್ತರೋ ಅಂತಹವರಿಗೆ ಈ ರೀತಿಯ ಗೌರವ ಸಮರ್ಪಿಸುವ ಈ ಉನ್ನತ ಆದರ್ಶ ಇನ್ನೆಲ್ಲಿಯೂ ಯಾವ ಸಭೆ ಸಮ್ಮೇಳನದಲ್ಲಿಯೂ ನಾನು ಇದುವರೆಗೆ ಕಂಡಿಲ್ಲ. ಪೈಗಳ ಈ ವಿನಯವೂ ಅವರನ್ನು ಅಂದು ಮಹೋನ್ನತಿಗೆ ಏರಿಸುವಲ್ಲಿ ಸಹಕಾರಿಯಾಯಿತು.

ಆ ಮೇಲೆ, ಅವರು ತಮ್ಮ ದೀರ್ಘವಲ್ಲದ ಅಧ್ಯಕ್ಷ ಭಾಷಣವನ್ನು ಓದಿದರು. ಆ ಭಾಷಣದ ಶೈಲಿಯಾದರೋ ಅವರದೇ ಶೈಲಿಯೆಂಬಂತೆ ಶುದ್ಧವೂ ಶಿಷ್ಟವೂ ಅಸದೃಶವೂ ಆಗಿತ್ತು. ಭಾಷಣವನ್ನು ಮುಕ್ತಾಯಗೊಳಿಸುತ್ತಾ ಅವರು ಹೀಗೆ ಹೇಳಿದರು :

"ನಾನು ಎರಡು ತಾಯಂದಿರ ಕೂಸು; ಕೊಂಕಣಿ ನನ್ನ ಹೆತ್ತತಾಯಿ; ಕನ್ನಡ ಸಾಕುತಾಯಿ; ನನ್ನನ್ನು ಸಾಕಿದ ದಾಯಿ : ಹೆತ್ತತಾಯಿಯ ಮೊಲೆಯಲ್ಲಿ ಹಾಲಿರಲಿಲ್ಲ; ಕೊಂಕಣಿಯಲ್ಲಿ ಸಾಹಿತ್ಯವಿಲ್ಲ. ಆಕೆ ಆ ಬಗ್ಗೆ ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಆ ದಾಯಿಯಾದರೋ ಪಯಸ್ವಿನಿ! ಎಷ್ಟೋ ಕಾಲದಿಂದ ಎಷ್ಟೋ ಕವಿಗಳನ್ನು ಊಡಿಸಿಯೂ, ಮತ್ತೂ ಬತ್ತದ, ದೇವರ ದಯೆಯಿಂದ ಸರ್ವಥಾ ಬತ್ತಬಾರದ ಸದಾಸ್ನುಹಿ. ತನ್ನ ಮೊಲೆಯನ್ನು ಆಕೆ ತಾಯಿಗೂ ಮಿಕ್ಕ ಅಳ್ತಿಯಿಂದ ನನಗೆ ಉಣಿಸಿದಳು. ಆಕೆಯ ಆ ಅಕ್ಕರೆಯ ಸಾಲವನ್ನು ಏಳೇಳು ಜನ್ಮಕ್ಕೂ ತೆತ್ತು ತೀರಿಸಲಾರೆ! ತಾಯಿ, ನೀನು ನನ್ನಲ್ಲಿ ಇಟ್ಟ ಮಮತೆಗೂ, ನಾನು ನಿನ್ನಲ್ಲಿ ಇಟ್ಟಿರುವ ಪ್ರತಿ ಮಮತೆಗೂ ಸರ್ವಥಾ ಎಣೆಯಿಲ್ಲ. ನೀನು ನನಗೆ ತರುವಿ ಎಂದರೆ ಅಮೃತದಂತಹ ನೊರೆಹಾಲು; ನಾನು ನಿನಗೆ ತೆರುವೆನೆಂದರೆ, ನಿನ್ನ ಕಾಲುಂಗುಟವನ್ನು ಕೂಡ ತೊಳೆಯಲು ಸಾಲದ ಕಣ್ಣೀರು. ಬೇರೆ ಏನಿದೆ ನನ್ನಲ್ಲಿ?... ಅದರಿಂದ ತಾನೇ ತೃಪ್ತಳಾಗು".

ಭಾಷಣವನ್ನು ಕೊನೆಗೊಳಿಸುವಾಗ ಪೈಗಳ ಕಂಠ ಗದ್ಗದವಾಯಿತು. ಕಣ್ಣುಗಳಲ್ಲಿ ನೀರು ಊರುತ್ತಿತ್ತು. ಸಭೆ ಮೂಕ ಮೌನದಿಂದ ಆಲಿಸುತ್ತಾ ಮೈಮರೆತಿತ್ತು! ನೂರಾರು ಪುಟಗಳಲ್ಲಿ ಸಾವಿರಾರು ಪದ ಪುಂಜಗಳಲ್ಲಿ ಹೇಳಲಾರದ ಅರ್ಥಪೂರ್ಣ ಭಾವವನ್ನು ಅವರು ಆ ಚಿಕ್ಕ ವಾಕ್ಯಗಳಲ್ಲಿ ಅಡಕವಾಡಿ ಹೇಳಿದ್ದರು; ಅಂತು ರಸಿಕರನ್ನು ತಲೆದೂಗಿಸಿದರು.

—ಇದು ಗೋವಿಂದ ಪೈಗಳ ಒಂದು ಭವ್ಯಚಿತ್ರ!

ರಾಷ್ಟ್ರಕವಿ ಪದವಿಯನ್ನು ಒಪ್ಪಿಕೊಂಡ ಹಾಗೂ ಕಾರಣವಾಗಿ, ಸಮ್ಮೇಳನದ ಅಧ್ಯಕ್ಷತೆಯನ್ನು ಸ್ವೀಕರಿಸಿದರು ಎಂದು ಹಿಂದೆ ಹೇಳಿದೆ; ಅವರನ್ನು ರಾಷ್ಟ್ರಕವಿ ಪದವಿಗೆ

ಒಪ್ಪಿಸಬೇಕಾದರೂ ಏಷ್ಟೊಂದು ಪ್ರಯತ್ನ ಮಾಡಬೇಕಾಗಿತ್ತು ಎಂಬುದೂ ನಾವು ಗಮನಿಸಬೇಕಾದ ಅಂಶ; ಅದೇ ಅವರ ಅನುಪಮ ವ್ಯಕ್ತಿತ್ವದ ಅಸಾಮಾನ್ಯ ಗುಣವೂ ಆಗಿದೆ.

ಆಗ ಮಂಜೇಶ್ವರ ಸಹಿತವಾದ ದಕ್ಷಿಣಕನ್ನಡ ಮದ್ರಾಸು ಆಡಳಿತದಲ್ಲಿತ್ತು; ಮದ್ರಾಸು ಸರಕಾರ ಐದು ಭಾಷೆಗಳಲ್ಲಿ ಐದು ಮಂದಿ ರಾಷ್ಟ್ರಕವಿಗಳನ್ನು ನೇಮಿಸುವುದಾಗಿ ಸಾರಿತು; ಕನ್ನಡದ ರಾಷ್ಟ್ರಕವಿ ಆಯ್ಕೆ ಸಮಿತಿಯಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರ ಹೆಸರೂ ಇತ್ತು; ಆಯ್ಕೆ ಸಮಿತಿ ಸದಸ್ಯತ್ವವನ್ನು ಅವರು ಒಲ್ಲೆನೆಂದರು; ಹಾಗೆ ಖಾಲಿ ಬಿದ್ದ ಆಯ್ಕೆ ಸಮಿತಿ ಸದಸ್ಯ ಸ್ಥಾನಕ್ಕೆ ಮಂಗಳೂರಿನ ಸುಪ್ರಸಿದ್ಧ ವಾಗ್ಮಿ ಕಲಾವಿದ ಶ್ರೀ ನಾರಾಯಣ ಕಿಲ್ಲೆಯವರ ನೇಮಕವಾಯಿತು. ನೇಮಕದ ವಿವರ ತಿಳಿದ ಮೇಲೆ ಕಿಲ್ಲೆಯವರು ನನಗೆ ಹೇಳಿ ಕಳುಹಿಸಿದರು: ಕವಿಯೆಂಬುದರಿಂದಲೊ? ನಮ್ಮೊಳಗಿನ ಆತ್ಮೀಯತೆಯಿಂದಲೊ? ಅಷ್ಟರಲ್ಲೇ ಆಯ್ಕೆ ಸಮಿತಿ ತಯಾರಿಸಿದ ಒಂದು ಪಟ್ಟಿ ಅವರಲ್ಲಿತ್ತು; ಅದನ್ನು ನನಗೆ ತೋರಿಸಿದರು; ಅದರಲ್ಲಿ ನನ್ನ ಹೆಸರೂ ಇತ್ತು: ಪಟ್ಟಿಯನ್ನು ಎರಡು ಮೂರು ಸಲ ಓದಿ ತಲೆಯೆತ್ತಿದಾಗ, ಕಿಲ್ಲೆಯವರು ನನ್ನ ಅಭಿಪ್ರಾಯ ತಿಳಿಯುವ ಅಪೇಕ್ಷೆ ವ್ಯಕ್ತಪಡಿಸಿದರು. ನಾನು ಹೇಳಿದೆ: "ಈ ಪಟ್ಟಿಯಲ್ಲಿ ಗೋವಿಂದ ಪೈಗಳ ಹೆಸರೇ ಕಾಣುವದಿಲ್ಲವಲ್ಲ!" "ಹೌದೊ! ಪೈಗಳು ಮಹಾ ವಿದ್ವಾಂಸರು, ಖ್ಯಾತ ಸಂಶೋಧಕರು, ಬಹು ಭಾಷಾಪಂಡಿತರು– ಎಂದು ನಾನೂ ಬಲ್ಲೆ; ಅವರು ಶ್ರೇಷ್ಠ ಕವಿಗಳೂ ಹೌದೊ?" ಎಂದರು; ಕಿಲ್ಲೆಯವರು ಪ್ರಗಲ್ಭವಾಗ್ಮಿ, ಸಾಹಿತ್ಯ ರಸಜ್ಞರಾದರೂ ಪ್ರೌಢ ಕಾವ್ಯಗಳನ್ನು ಅವಗಾಹಿಸುವ ಓದುಗಾರಿಕೆಯವರಲ್ಲ; ಪೈಗಳು ಕವಿಗಳೆಂದು ಗೊತ್ತಿದ್ದರೂ. ಶ್ರೇಷ್ಠ ಕವಿ ಎಂಬುದು ಆಗ ಅವರಿಗೆ ಗೊತ್ತಿರಲಿಲ್ಲ. "ಅವರಿಗಿಂತ ಶ್ರೇಷ್ಠ ಕವಿಗಳು ನಮ್ಮಲ್ಲಿ ಅಪೂರ್ವ" ಎಂದು ನಾನು ಹೇಳಿದೆ. ಕಿಲ್ಲೆಯವರಿಗೆ ಇನ್ನಷ್ಟು ವಿವರಣೆ ಬೇಕಾಗಿತ್ತು: ಆ ದಿನ ರಾತ್ರಿ ನಾನು ಅವರ ಮನೆಯಲ್ಲಿ ಉಳಕೊಂಡೆ. ಗೋವಿಂದ ಪೈಗಳ ಗಿಳಿವಿಂಡು ಮುಂತಾದ ಕವನಗಳನ್ನು ಓದಿ ಹೇಳಿದೆ: ಅವರು ಮೈಮರೆತರು. 'ಅವರೇ ನಮ್ಮ ರಾಷ್ಟ್ರಕವಿ ಆಗಬೇಕು' ಎಂದರು. "ಅವರನ್ನು ಒಪ್ಪಿಸುವುದು ಸುಲಭವಲ್ಲ" ಎಂದೆ ನಾನು. ಆ ಕೆಲಸ ನನಗಿರಲಿ' ಎಂದರು.

ಮತ್ತೆ ಕಿಲ್ಲೆಯವರು ಮಂಜೇಶ್ವರಕ್ಕೆ ಧಾವಿಸಿದರು: ಪೈಗಳಲ್ಲಿ ವಿಷಯ ಅರಿಕೆ ಮಾಡಿಕೊಂಡರು: ಮೊದಲಿಗೆ ಅವರು ಒಪ್ಪಲೇ ಇಲ್ಲ: ಮತ್ತೂ ಹೋದರು: ಒತ್ತಾಯಪಡಿಸಿದರು: ಪೈಗಳ ಆಪ್ತರಿಂದ ಒತ್ತಾಯತರಿಸಿದರು. ಆಯ್ಕೆ ಸಮಿತಿ ಗೋವಿಂದ ಪೈಗಳನ್ನು ರಾಷ್ಟ್ರಕವಿಯೆಂದು ಸಾರಿತು! ಅದಾದ ಮೇಲೆ ಗೋವಿಂದ ಪೈಗಳದೇ ಮಾತನ್ನು ಕೇಳಿ :

"ಒಂದು– ಒಂದೂವರೆ ತಿಂಗಳ ಮೇಲೆ ನಾನು ಮಂಗಳೂರಿಗೆ ಹೋಗಿದ್ದೆ. ಅಲ್ಲಿ ಕಿಲ್ಲೆಯವರನ್ನು ಕಂಡೆ. 'ಹೇಗೂ ತಾವು ಒಪ್ಪಿಕೊಂಡಿರಷ್ಟೆ; ಅಷ್ಟೇ ನನಗೆ ಸಾಕು' ಎಂದರು (ಕಿಲ್ಲೆಯವರು). ಅವರ ಕಣ್ಣು ತುಂಬಿತು; ನನ್ನ ಕಣ್ಣು ತೊಟಕಿತು ! ಆಗ್ಗೆ ನಾನರಿತೆ: ಅವರ ಹೃದಯದ ಮಾರ್ದವನನ್ನು. ಆಪ್ರೀತಿಗೆ ನಾನವರಿಗೆ ಮಾರು ಹೋದೆ".

ಕನ್ನಡದ ಪ್ರಥಮ ರಾಷ್ಟ್ರಕವಿ ಎಂಬ ಉನ್ನತ ಬಿರುದು ಬರುವಾಗಲೂ, ಎಂತಹ ನಿರಪೇಕ್ಷೆ: ಎಂತಹ ಅನಾಸಕ್ತಿ– ಅದೇ ಗೋವಿಂದ ಪೈಗಳ ವ್ಯಕ್ತಿತ್ವದ ಮಹತ್ವ.

'ಕಾವ್ಯಂ ಯಶಸೇ ಅರ್ಥಕೃತೇ'– ಎಂದು ಭಾಮಹನು ಹಿಂದೆಯೇ ಹೇಳಿದ್ದಾನೆ. ಯಶಸ್ಸೂ ಬೇಕು, ದುಡ್ಡೂ ಬರಬೇಕು– ಕಾವ್ಯ ರಚನೆಯ ದೃಷ್ಟಿ ಇದು ಮುಖ್ಯ ವಾದುದೆಂದು ಆತನ ಮತ. ಇದೇ ಕಾರಣದಿಂದಾಗಿ, ಕಾವ್ಯ ಸಾಹಿತ್ಯ ಕಲಾ ಪ್ರಪಂಚದಲ್ಲಿಯೂ ಗುಂಪುಗಾರಿಕೆ ಅಂದಿನಿಂದ ಇಂದಿನವರೆಗೂ ಬೆಳೆದು ಬಂದಿದೆ; ಯಶಸ್ಸು ಬರುವಾಗ ಇನ್ನೊಬ್ಬರಿಗಿರಲಿ ಎಂಬವರು ಕಡಿಮೆ, ದುಡ್ಡು ಸಿಗುವಾಗ ತಮಗೆ ಬೇಡವೆನ್ನುವವರೂ ಅಪೂರ್ವ. ಹಾಗಾಗಿ, ಬಹುಕಾಲದವರೆಗೆ, ಗೋವಿಂದ ಪೈಗಳು ಮಾಡಿದ ಏಕಾಂಗವೀರ ಸಾಹಸಮಯ ಸಾಹಿತ್ಯ ವ್ಯವಸಾಯಕ್ಕೆ ಸರಿಯಾದ ಸಾರ್ವಜನಿಕ ಮನ್ನಣೆ ದೊರೆಯಲಿಲ್ಲ: ಅವರನ್ನು ಕವಿಯೆಂದರೆ, ಅವರು ಸಂಶೋಧಕರು ಎಂದು ವಾದಿಸುವುದು, ಸಂಶೋಧಕರು ಎಂದರೆ ಕವಿಯೆಂದು ಹೇಳುವುದೂ, ಎರಡರಲ್ಲೂ ಸಮರ್ಥರು ಎಂದರೆ ಅವರ ಬರವಣಿಗೆ– ಕವಿತೆಯಾಗಲಿ, ಸಂಶೋಧನೆಯಾಗಲಿ– ಅರ್ಥವಾಗುವುದಿಲ್ಲ ಎನ್ನುವುದು– ಹೀಗೆಯೇ ಬಹುಕಾಲ ನಡೆದುಬಂತು. ಮದ್ರಾಸ್ ಸರಕಾರ, ಅವರನ್ನು ರಾಷ್ಟ್ರಕವಿಯೆಂದು ಆರಿಸಿದ ನಂತರವೇ ಅವರನ್ನು ಜನತೆ ಸರಿಯಾಗಿ ಗುರುತಿಸಿಕೊಂಡಿತು. "ಹೆಚ್ಚಾಗಿ ಗೋವಿಂದ ಪೈಗಳು ಸಂಶೋಧಕರೆಂದೇ ನಂಬಿದ್ದ ನನಗೆ ಅವರ ಕವಿತಾ ಸಾಮರ್ಥ್ಯದ ಬಗೆಯಲ್ಲಿ ಮುಚ್ಚಿಕೊಂಡ ಕಣ್ಣು ತೆರೆಯಿತು" ಎಂದು ಕನ್ನಡದ ಖ್ಯಾತ ವಿದ್ವಾಂಸರಾದ ಪ್ರೊ। ಇನಾಂದಾರರೇ ಉಲ್ಲೇಖಿಸಿದ್ದನ್ನು ನಾವಿಲ್ಲಿ ಸ್ಮರಿಸಬೇಕಾಗಿದೆ. ಗೋವಿಂದ ಪೈಗಳು ತಮ್ಮ ಗುಂಪನ್ನು ಕಟ್ಟಿಕೊಳ್ಳಲಿಲ್ಲ: ಯಾರ ಗುಂಪಿಗೂ ಸೇರಿಕೊಳ್ಳಲೂ ಇಲ್ಲ. ಆದರೆ ಕೊನೆ ಕೊನೆಗೆ ಅವರು ಎಲ್ಲಾ ಗುಂಪಿನವರಿಗೂ ಗೌರವಾರ್ಹರಾದರು. ಮಂಗಳೂರು, ಬೆಂಗಳೂರು. ಧಾರವಾಡ. ಕಾರವಾರ,– ಎಲ್ಲಾ ಕಡೆಯ ಸಾಹಿತ್ಯಾಸಕ್ತರು. ಕವಿಗಳು ಸಂಶೋಧಕರು. ವಿದ್ವಾಂಸರು ಎಲ್ಲರೂ ಅವರನ್ನು ಅಭಿಮಾನಪೂರ್ವಕ ಹಿರಿಯರೆಂದು ಒಪ್ಪಿಕೊಂಡರು. 'ನರತ್ನಂ ಅನ್ವಿಷ್ಯತಿ, ಮೃಗ್ಯತೇಹಿತತ್' ಎಂಬ ಕಾಳಿದಾಸ ಮಹಾಕವಿಯ ಮಾತಿನಂತೆ. ರತ್ನದಂತಹ ಆ ಶ್ರೇಷ್ಠ ವ್ಯಕ್ತಿಯನ್ನು ಎಲ್ಲರೂ ಹುಡುಕಿಕೊಂಡು ಹೋಗುವಂತಾಯಿತು. ಅವರ ಕಾಲದಲ್ಲಿ, ಅವರು ನೆಲಸಿದ್ದ ಮಂಜೇಶ್ವರ ಕನ್ನಡಿಗರ ತೀರ್ಥಯಾತ್ರಾ ಸ್ಥಳವಾಯಿತು !

ಗ್ರಂಥ ಸಂಗ್ರಹ, ಓದುಗಾರಿಕೆ, ಅಭ್ಯಾಸ, ಬರವಣಿಗೆ, ಪತ್ರಲೇಖನ– ಇಂತಹ ಹಲವು ವಿಷಯಗಳಲ್ಲಿ ಗೋವಿಂದ ಪೈಗಳಿಗೆ ಹೋಲಿಕೆಯೆಂದರೆ ಗೋವಿಂದ ಪೈಗಳೇ ! ಒಬ್ಬ ವ್ಯಕ್ತಿಯಾಗಿ, ಮೇಲಿನ ವಿಷಯಗಳಲ್ಲಿ ಇಷ್ಟು ಮಹತ್ವದ ಸಾಧನೆಯನ್ನು ಮಾಡಿ ತತ್ಫಲವಾಗಿ ಸಿದ್ಧಿಯನ್ನು ಕೂಡಾ ಪಡೆದವರು ನಮ್ಮ ದೇಶದಲ್ಲಿ ಪೈಗಳಂತೆ ತೀರಾ ವಿರಳ ಜನರಿರಬಹುದು. ಅವರ ಮಂಜೇಶ್ವರದ ಮನೆಯ ಮಾಳಿಗೆ ತುಂಬಾ ಕಪಾಟುಗಳಲ್ಲಿ ಅಪೂರ್ವ ಪುಸ್ತಕಗಳ ರಾಶಿಯೇ ತುಂಬಿತ್ತು. ಕೊಂಡ ಗ್ರಂಥಗಳೆಲ್ಲ ವನ್ನೂ ಆದಿಯಿಂದ ಕೊನೆಯವರೆಗೆ ಓದಿಯೇ ಓದುತ್ತಿದ್ದರು. ಅವರು ಬರೆಯಲು ಉಪಯೋಗಿಸುತ್ತಿದ್ದ ನೇರಳೆ ಶಾಯಿಯಲ್ಲಿ ಪುತಿಪುಟ, ಪ್ರತಿ ಪ್ಯಾರಾಗಳಲ್ಲಿ ಗುರುತು ಹಾಕುತ್ತಿದ್ದರು. ಅಡಿಗೆರೆ ಎಳೆಯುತ್ತಿದ್ದರು. ಪ್ರಶ್ನಾರ್ಥಕ ಚಿಹ್ನೆ ತೋರಿಸು ತ್ತಿದ್ದರು. ಅವರ 'ಕಿಟ್ಟೆಲ್ ಕೋಶ'ದ ಪ್ರತಿಯಲ್ಲಿ ಪ್ರತಿಯೊಂದು ಪದಕ್ಕೂ ಎಂಬಂತೆ, ಅಕ್ಷರ ಬಿಡದೆ, ನೇರಳೆ ಶಾಯಿಯಲ್ಲಿ ಅಡಿಗೆರೆ, ಪ್ರಶ್ನೆ, ಟಿಪ್ಪಣಿ ಇತ್ಯಾದಿ ಗುರುತುಗಳು ಮೊದಲನೆಯ ಪುಟದಿಂದ ೧೭೫೨ನೆಯ ಪುಟದವರೆಗೂ ವ್ಯಾಪಿಸಿರುವು ದನ್ನು ನಾವು ನೋಡಬಹುದು. ಒಂದು ನಿಘಂಟನ್ನು ಈ ರೀತಿ ಆಮೂಲಾಗ್ರ ಅಕ್ಷರಾಕ್ಷರ ಓದಿ ಪರಿಶೀಲಿಸಿದ ಚರಿತ್ರೆ ನಮ್ಮ ಭಾರತ ದೇಶದಲ್ಲಿ ಮಾತ್ರವಲ್ಲ ಪ್ರಪಂಚದ ಯಾವುದೇ ಭಾಷಾ ವ್ಯಾಸಂಗಕ್ಷೇತ್ರದಲ್ಲಿಯೂ ಕಾಣುವುದು ತೀರಾ ಅಪೂರ್ವ.

ವೈದಿಕ, ಸಂಸ್ಕೃತ, ಪ್ರಾಕೃತ, ಪಾಲಿ, ಹಿಂದಿ, ಬಂಗಾಳಿ, ಉರ್ದು ಗುಜರಾಥಿ, ಮರಾಠಿ ಇತ್ಯಾದಿಯಾಗಿ ಆರ್ಯವರ್ಗದ ಹಲವಾರು ಭಾಷೆಗಳನ್ನೂ, ಕನ್ನಡ, ತಮಿಳು, ಮಲೆಯಾಳ ಇತ್ಯಾದಿ ದ್ರಾವಿಡ ವರ್ಗದ ಭಾಷೆಗಳನ್ನು ಗ್ರೀಕ್, ಲಾಟಿನ್, ಇಂಗ್ಲೀಷ್, ಇತಾಲಿಯನ್, ಫ್ರೆಂಚ್, ಜಪಾನ್ ಇತ್ಯಾದಿ ಹಲವಾರು ವಿದೇಶೀ ಭಾಷೆ ಗಳನ್ನೂ, ಬಿಟ್ಟು ಸುಮಾರು ಇಪ್ಪತ್ತೆರಡು ಭಾಷೆಗಳನ್ನೂ ಅವರು ಬಲ್ಲವರಾಗಿದ್ದರು. ಅವರಿಗಿಂತ ಹಿಂದೆಯಾಗಲಿ, ಅವರ ಕಾಲದಲ್ಲಾಗಲಿ, ಮುಂದೆಯಾಗಲಿ– ಇದುತನಕ ಇಷ್ಟೊಂದು ಭಾಷೆಗಳ ಜ್ಞಾನ ಪಡೆದವರು ದೇಶದಲ್ಲೂ ವಿದೇಶದಲ್ಲೂ ಯಾರನ್ನೂ ಕಾಣಲಾರೆವು. ಕೊನೆಯ ದಿನಗಳಲ್ಲಿ, ವೃದ್ಧಾಪ್ಯದ ಕಾರಣದಿಂದ ಅವರ ಕೆಲವೊಂದು ಗ್ರಂಥಗಳು 'ಪರಹಸ್ತ ಗತಂ ಗತಂ' ಆಗಿಹೋಗಿದ್ದರೂ, ಕಳೆದುಳಿದ ಒಟ್ಟು ನಲುವತ್ತ ಮೂರು ಭಾಷೆಗಳಲ್ಲಿರುವ ಸುಮಾರು ಐದು ಸಾವಿರ ಗ್ರಂಥವನ್ನು, ಪೈಗಳ ಮರಣಾ ನಂತರ, ಅವರ ತಮ್ಮಂದಿರ ಮಕ್ಕಳು ಉಡುಪಿಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿಗೆ ಕೊಟ್ಟುದನ್ನು, ಆ ಕಾಲೇಜಿನ ಆಶ್ರಯದಲ್ಲಿ ಸ್ಥಾಪಿತವಾದ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ ಇಂದಿಗೂ ನಾವು ನೋಡಬಹುದು; ನೋಡಿ ಹಿಗ್ಗಬಹುದು ! ಏಕೈಕ ವ್ಯಕ್ತಿ, ಸುಮಾರು ಅರುವತ್ತು ವರ್ಷಗಳಷ್ಟು ಕಾಲ, ಸಾಹಿತ್ಯದ ತಪಸ್ಸಿನಂತೆ, ನಿಷ್ಠೆಯಿಂದ ಇಷ್ಟೊಂದು ವಿಪುಲ ಭಾಷೆಗಳ, ವಿವಿಧ ವಿಷಯಗಳ ಬೃಹತ್

ಗ್ರಂಥ ಭಂಡಾರವನ್ನು ಸಂಗ್ರಹಿಸಿ, ಅವೆಲ್ಲವನ್ನೂ, ಪೂರ್ಣ ಓದಿ ಜೀರ್ಣಿಸಿಕೊಂಡ ರೆಂಬುದು ಅವರ ಅದ್ಭುತ ಮೇಧಾಶಕ್ತಿಯನ್ನು ಎತ್ತಿ ತೋರಿಸುತ್ತದೆ.

ಅಂದು, ಕ್ರಿಸ್ತಶಕ ೧೮೯೩ನೆಯ ಇಸವಿ ಫೆಬ್ರುವರಿ ತಿಂಗಳ ಕೊನೆಯವಾರ. ಮನೆಯಲ್ಲಿ ನೂಲ ಮದುವೆಯ ಸಂಭ್ರಮ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಮನೆಯಲ್ಲಿ ಗದ್ದಲವೇ ಗದ್ದಲ. ಗಂಡಸರು, ಹೆಂಗಸರು, ಹಿರಿಯರು, ಕಿರಿಯರು, ನೆಂಟರು ಇಷ್ಟರು– ಎಲ್ಲರ ಓಡಾಟ, ಮಾತಿನ ಗಜಿಬಿಜಿ. ಸಂಭ್ರಮವೋ ಸಂಭ್ರಮ. ಈ ಸಂಭ್ರಮ ಕೋಲಾಹಲದ ಮಧ್ಯೆ ಕುಗ್ಗಿದ ದನಿಯಲ್ಲಿ ಸವಿಗೊರಳಲ್ಲಿ ಇನಿದಾದ ಹಾಡೊಂದು ಕೇಳಿಸಿತು :

“ಅಡವಿಗೆ ಪೋಪರೇನೆ? ! ಕಂದಯ್ಯಾ”
ಅಡವಿಯೊಳಗೆ ಬಲು । ಕಡು ಖೂಳ ಮೃಗಗಳು
ಬಿಡದೆ ಬಾಧಿಪವೊ ನಿನ್ನ ॥ ಅಡುವಿಗೆ ಪೋಪರೇನೆ? । ಕಂದಯ್ಯಾ ॥

ಆ ಮನೆಯಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದ ಒಂಭತ್ತು ವರ್ಷದ ಪ್ರಾಯದ ಹುಡುಗನಿಗೆ ಈ ಹಾಡನ್ನು ಆಲಿಸಿ ಏನಾಯಿತೊ? ಏನು ತೋಚಿತೊ? ಮತ್ತೆ ಅಲ್ಲಿನ ಗೌಜು, ಕೋಲಾಹಲ ಯಾವುದೂ ಆತನಿಗೆ ಕೇಳಿಸಲಿಲ್ಲ! ನೆಟ್ಟಗ ಹೋಗಿ ತನ್ನ ಅಭ್ಯಾಸದ ಪುಸ್ತಕ ಎತ್ತಿಕೊಂಡು ಬರೆಯತೊಡಗಿದ. ಏಕಾಂಕ ನಾಟಕವೆನ್ನುವ ಒಂದು ಕೃತಿ ಅದೇ ದಿನ ಸಂಜೆಗೆ ಪೂರ್ತಿಗೊಂಡಿತು. ಅದರ ಕಥೆಯೆಂದರೆ ತಾಯಿ ತಂದೆಯರ ಒಬ್ಬನೇ ಮಗ ಕಾಡಿಗೆ ಹೊರಡುತ್ತಾನೆ: ಹೋಗಬಾರದು ಎಂದು ಹೆತ್ತವರು ಅಂಗಲಾಚಿ ಬೇಡಿಕೊಳ್ಳುತ್ತಾರೆ! ಆ ಪ್ರೊಂದು ಹಾಡಿನ ಸೊಲ್ಲು ಬಾಲಕನ ಹೃದಯವನ್ನು ಒಮ್ಮೆಲೇ ಕಲಕಿಬಿಟ್ಟಿತು; ಆದಿಕವಿ ವಾಲ್ಮೀಕಿಗೆ ಕ್ರೌಂಚಮಿಥುನದ ಅಗಲುವಿಕೆಯಿಂದ ಉಂಟಾದ ಶೋಕ ಶ್ಲೋಕವಾದಂತೆ, ಈ ಬಾಲಕನಿಗೂ ಕಂದಯ್ಯನೊಬ್ಬನು ಕಾಡಿಗೆ ಹೊರಡುವ ಕಲ್ಪನಾಮಯ ಸನ್ನಿವೇಶ ಕವನಿಸುವ ಸ್ಫೂರ್ತಿಯನ್ನು ನೀಡಿತು! ವಾಲ್ಮೀಕಿ ಆದಿಕವಿಯಾದಂತೆ, ಈ ಬಾಲಕನೂ ಮುಂದೆ ಕನ್ನಡದ ಆದಿಯ ರಾಷ್ಟ್ರಕವಿಯಾಗಿ ಮನ್ನಣೆಗೆ ಪಾತ್ರನಾದನೆಂಬುದು ಗಣನೀಯವಾದ ಸಂತೋಷದ ಘಟನೆಯಾಗಿದೆ.

ಈ ಬಾಲಕನೇ ಗೋವಿಂದ ಪೈ !

ಅವರ ಮನೆತನ ಮಂಗಳೂರಿನ ಶ್ರೀಮಂತ ಬಾಬಾ ಪೈ ಮನೆತನ: ಅವರು ಸಾಹುಕಾರರೆಂದೇ ಪ್ರಸಿದ್ಧರು. ತಂದೆ ಸಾಹುಕಾರ ತಿಮ್ಮ ಪೈ; ತಾಯಿ ದೇವಕಿ. ತಾಯಿಯ ತವರುಮನೆ ಮಂಜೇಶ್ವರ; ಅಲ್ಲಿನ ಪ್ರಸಿದ್ಧ ಶ್ರೀಮಂತರಾದ ಲಕ್ಷ್ಮಣ ಶ್ಯಾನುಭಾಗರ ಮಗಳು ದೇವಕಿ. ತಂದೆಯ ಮನೆ ಮಂಗಳೂರಲ್ಲಿ ಇದ್ದರೂ, ಗೋವಿಂದ ಪೈಗಳೂ, ಅವರ ಸೋದರ ಸೋದರಿಯರೂ ಹುಟ್ಟಿದ್ದು ಬೆಳೆದಿದ್ದೂ ಮಂಜೇಶ್ವರದಲ್ಲೆ. ಹಾಗಾಗಿ ಗೋವಿಂದ ಪೈಗಳ ಹೆಸರಿನ ಮುಂದಿನ 'ಮಂ' ಅಥವಾ

'ಎಂ' ಇವೆರಡೂ ಮಂಗಳೂರನ್ನೂ ಮಂಜೇಶ್ವರವನ್ನೂ ಸಮಾನವಾಗಿ ಸಂಕೇತಿಸು ತ್ತವೆ. ಮಂಜೇಶ್ವರದ ಶ್ಯಾನುಭಾಗರ ಮನೆತನದ ಹಿರಿಯರು, ತಮ್ಮ ಮಗಳ ಮಕ್ಕಳನ್ನು ತಮ್ಮ ಊರಲ್ಲಿಯೇ ನೆಲಸಲು ಸಕಲ ವ್ಯವಸ್ಥೆಗಳನ್ನೂ ಅತ್ಯಂತ ವಾತ್ಸಲ್ಯ ದಿಂದ ಕಲ್ಪಿಸಿಕೊಟ್ಟ ಕಾರಣ ಪೈಗಳೂ ಅವರ ಸೋದರರೂ ತಮ್ಮ ಪೂರ್ಣಾ ಯುಸ್ಸನ್ನು ಮಂಜೇಶ್ವರದಲ್ಲಿಯೇ ಕಳೆದರು.

ಗೋವಿಂದ ಪೈಗಳ ಮನೆತನದ ಮೂಲಮನೆ ಇಂದಿಗೂ ಮಂಗಳೂರಿನ ತೇರು ಬೀದಿಯಲ್ಲಿದೆ. ಅವರ ಕುಟುಂಬದವರು ಈಗಲೂ ಅಲ್ಲಿ ವಾಸಿಸುತ್ತಾರೆ, ಅಲ್ಲಿಯೇ ಅವರ ಮನೆತನದ ಆರಾಧ್ಯದೇವರಾದ ಕಾಳಿಯ ಮರ್ದನ ಕೃಷ್ಣಮಂದಿರವೂ ಇದೆ. ಗೋವಿಂದ ಪೈಗಳ ತಂದೆ ತಿಮ್ಮಪ್ಪೈ ಜ್ಯೋತಿಶ್ಶಾಸ್ತ್ರ ಪರಿಣತರಿದ್ದರು. ಅಂತೆಯೇ ಜ್ಯೋತಿಷ್ಯದಲ್ಲಿ ಇವರೂ ನಿಷ್ಣಾತರಾಗಿದ್ದರು. ಪೈಗಳ ಅಜ್ಜನ ಹೆಸರು ನಾರಾಯಣ ಪೈ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಶಃ ಇವರೇ ಮೊದಲಿಗೆ, ೧೮೫೯ರಲ್ಲಿ ಸಹಸ್ರ ಭೋಜನ ನೆರವೇರಿಸಿದವರು. ಮಂಗಳೂರು ಸರಕಾರೀ ಕಾಲೇಜಿನ ಸ್ಥಾಪಕರಲ್ಲಿ ಇವರು ಪ್ರಮುಖರು. ಪೈಗಳ ಸಾಕುತಾಯಿ ಸುಬ್ಬಮ್ಮ; ಅವರ ನೆನಪಿಗೆ 'ಹೆಬ್ಬೆರಳು' ಕೃತಿಯನ್ನು ಪಶ್ಚಾತ್ತಾಪದ ಕಾಣಿಕೆಯಾಗಿ ನೀಡಿದ್ದಾರೆ. ತಮ್ಮ ತಾಯಿಯ ಸ್ಮರಣೆ ಯಾಗಿ, ಪೈಗಳು ತಮ್ಮ ಕೆಲವು ಕವನಗಳಲ್ಲಿ 'ದೇವಕೀತನಯ' ಎಂಬ ಅಂಕಿತವಿರಿಸಿ ದ್ದಾರೆ.

ಗೋವಿಂದ ಪೈಗಳು ಹುಟ್ಟಿದ್ದು ೨೩–೩–೧೮೮೩ರಂದು, ತಾಯಿಯ ತವರಾದ ಮಂಜೇಶ್ವರದ ಶ್ಯಾನುಭಾಗರ ಮನೆಯಲ್ಲಿ, ತಿಮ್ಮಪ್ಪೈ ಮತ್ತು ದೇವಕೀ ಇವರಿಗೆ ಏಳುಮಂದಿ ಮಕ್ಕಳು; ಇಬ್ಬರು ಸೋದರಿಯರ ನಂತರ ಮೂರನೆಯವರು, ಮೊದಲ ನೆಯ ಗಂಡುಮಗು ಗೋವಿಂದ ಪೈಗಳು, ಮತ್ತೆ ಇಬ್ಬರು ಸೋದರರು, ಆ ಮೇಲೆ ಒಬ್ಬಾಕೆ ಸೋದರಿ ಮತ್ತೊಬ್ಬರು ಸೋದರರು ಗೋವಿಂದ ಪೈಗಳ ಹೆಂಡತಿ ಕೃಷ್ಣಾ ಬಾಯಿ ೧೯೧೧ರಲ್ಲಿ ಒಂದು ಹೆಣ್ಣು ಮಗುವನ್ನು ಪಡೆದಿದ್ದರೂ. ಆ ಶಿಶು ಹುಟ್ಟಿದ ಕೆಲವೇ ದಿನಗಳಲ್ಲಿ ತೀರಿ ಹೋಗಿತ್ತು; ೧೯೨೭ರಲ್ಲಿ ಹೆಂಡತಿಯೂ ತೀರಿಹೋದರು. 'ಗಿಳಿವಿಂಡು' ಕವನ ಸಂಗ್ರಹವನ್ನು 'ಕೃಷ್ಣಾರ್ಪಣ' ಮಾಡಿದ್ದಲ್ಲದೆ, ಅಗಲಿದ ಸಹ ಧರ್ಮಿಣಿಯ ನೆನಪಿಗೆ ಬಾಷ್ಪಾಂಜಲಿಯಾಗಿ, ಅಗಲಿಸಿದ ವಿಧಿಗೆ ಶ್ರದ್ಧಾಂಜಲಿಯಾಗಿಯೂ 'ನಂದಾದೀಪ' ಕವನಗಳನ್ನು ಬರೆದರು: ಪೈಗಳಿಗೆ ಪತ್ನೀ ವಿಯೋಗವಾಗುವ ಕಾಲಕ್ಕೆ ಯೌವನವಿದ್ದರೂ ಅವರು ಪುನರ್ವಿವಾಹ ಮಾಡಿಕೊಳ್ಳಲಿಲ್ಲ. ಅವರ ತಮ್ಮ ಅನಂತ ಪೈಗಳಿಗೂ ಸಂತತಿಯಿಲ್ಲ: ಇನ್ನೊಬ್ಬರು ತಮ್ಮಂದಿರಾದ ನಾರಾಯಣ ಪೈಗಳಿಗೆ ಡಾ॥ ಕೇಶವ ಪೈ, ಡಾ॥ ದಾಮೋದರ ಪೈ ಇಬ್ಬರು ಗಂಡು ಮಕ್ಕಳಿದ್ದರು. ನಾರಾಯಣ ಪೈಗಳ ಇಬ್ಬರು ಹೆಣ್ಣುಮಕ್ಕಳು ತೀರಿಹೋದಾಗ ಅವರ ನೆನಪಿಗಾಗಿ 'ವೈಶಾಖಿ'ಯನ್ನು ಕಣ್ಣೀರ ಕಾಣಿಕೆಯಾಗಿ ಅರ್ಪಿಸಿದ್ದಾರೆ. ಕೊನೆಯ ತಮ್ಮ

ಸುಬ್ರಾಯ ಪೈಗಳಿಗೆ ಶಾಂತಾ ಬಾಯಿ ಎಂಬ ಮಗಳೂ, ಶ್ರೀಗಳಾದ ತುಕಾರಾಮ ಪೈ, ವೆಂಕಟೇಶ ಪೈ, ರಂಗನಾಥ ಪೈ ಎಂಬ ಮೂವರು ಪುತ್ರರೂ ಇದ್ದಾರೆ. ಅಕ್ಕ–ತಂಗಿಯರ ಮೇಲೆ ತಮ್ಮಂದಿರ ಮೇಲೆ ಪೈಗಳಿಗೆ ಇದ್ದ ಪ್ರೀತಿ, ಅವರೆಲ್ಲರಿಗೂ ಇವರ ಮೇಲಿದ್ದ ಆತ್ಮೀಯ ಭಾವ, ಅಸದೃಶವೂ ಆದರ್ಶಮಯವೂ ಆಗಿತ್ತು.

ನೂಲಮದುವೆಯ ಚಪ್ಪರದಲ್ಲಿ ಕೇಳಿದ ಹಾಡಿನಿಂದ ಉಂಟಾದ ಸ್ಫೂರ್ತಿಯ ಘಟನೆ ೧೮೯೫ರದ್ದು. ಅಂದರೆ, ಪೈಗಳ ಕೇವಲ ಹನ್ನೆರಡು ವರ್ಷಪ್ರಾಯದಲ್ಲಿ ಆದ ಸಂಗತಿ. ಅದೇ ವರ್ಷ, ಯಕ್ಷಗಾನ ಬಯಲಾಟಗಳನ್ನು ಬಿಡದೆ ನೋಡುತ್ತಿದ್ದ ಸಂಸ್ಕಾರದ ಫಲವಾಗಿ, ಒಂದು ಯಕ್ಷಗಾನ ಪ್ರಸಂಗವನ್ನು ಬರೆದುದಾಗಿಯೂ, ಛಂದೋಲಕ್ಷಣಗಳನ್ನು ಅಭ್ಯಾಸಮಾಡಿ ೧೮೯೮ರ ತನಕ ವಿವಿಧ ಛಂದಸ್ಸುಗಳ ಕವಿತಾ ರಚನೆ ಮಾಡಿದುದಾಗಿಯೂ, ಹಾಗೆ ಬರೆದುವನ್ನು ಹರಿದು ಹಾಕಿದ್ದಾಗಿಯೂ, ಮತ್ತೆ ೧೮೯೯ರಲ್ಲಿ ಶೇಕ್ಸ್‌ಪಿಯರ್ ಕವಿಯ Twelth Night ನ ಮೊದಲನೆಯ ಅಂಶದ ಕೆಲವು ನೋಟಗಳನ್ನು ವೃತ್ತ ಕಂದಗಳಲ್ಲಿ ಬರೆದು ನಂದಳಿಕೆ ಲಕ್ಷ್ಮೀನಾರಾಯಣಪ್ಪ ಅವರಿಗೆ ಕೃತಿ ಅರ್ಪಿಸಿದುದಾಗಿಯೂ ಅವರು ತಮ್ಮ 'ಆತ್ಮಕಥನ'ದಲ್ಲಿ ಉಲ್ಲೇಖಿಸಿದ್ದಾರೆ. ಆದರೆ ನಮಗೆ ಸಿಗುವ ಅವರ ಮೊದಲಿನ ಮುದ್ರಿತ ಕವನ 'ಸುವಾಸಿನೀ' ಎಂಬ ಮೂರು ಕಂದ ಪದ್ಯಗಳು; ಅದು, ಆ ಹೆಸರಿನ ಮಂಗಳೂರಿನಿಂದ ಹೊರಡುವ ಪತ್ರಿಕೆಯ ೧೯೦೦ರ ಆಗಸ್ಟ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಯಿತು. ಆ ಪತ್ರಿಕೆ ಏರ್ಪಡಿಸಿದ ಕವಿತಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆಯಿತು. "ಜಗರೂಂವಿಷಮದೊಳಾಗದು" ಎಂಬಿತ್ಯಾದಿ ಹಲವು ವಿಧಿನಿಷೇಧಗಳಿಂದ ಕೂಡಿದ ಕಂದಪದ್ಯದ ಕವಿತಾ ರಚನೆ ಪ್ರಬುದ್ಧರಾದ ಕವಿಗಳಿಗೂ ಒರೆಗಲ್ಲು ಎನಿಸಿರುವಾಗ ಆ ಎಳೆಯ ಪ್ರಾಯದಲ್ಲಿ ಆ ಛಂದಸ್ಸಿನಲ್ಲಿ ಕವಿತೆ ಬರೆದು ಬಹುಮಾನ ಪಡೆದುದು ಅವರ ಪ್ರತಿಭಾ ಶಕ್ತಿಯ ದ್ಯೋತಕವಾಗಿದೆ.

ಕನ್ನಡ ನವೋದಯ ಕಾಲದ ಆಚಾರ್ಯ ಪುರುಷರಲ್ಲೊಬ್ಬರಾದ ಪಂಜೆ ಮಂಗೇಶರಾಯರು ಪೈಗಳಿಗೆ ಇಂಟರ್ ಮೀಡಿಯೆಟ್ ತರಗತಿಯಲ್ಲಿ ಕನ್ನಡದ ಅಧ್ಯಾಪಕರಾಗಿದ್ದರು. ದ್ವಿತೀಯಾಕ್ಷರ ಪ್ರಾಸ ಕವಿತೆಯ ಜೀವವೆಂಬಷ್ಟರ ಮಟ್ಟಿಗೆ ಆಗ ಅದರ ಅನಿವಾರ್ಯತೆ ಇತ್ತು. ಪೈಗಳು ದ್ವಿತೀಯಾಕ್ಷರ ಪ್ರಾಸವನ್ನು ಬಿಟ್ಟರೆ ಹೇಗೆಂದು ಪಂಜೆಯವರೊಡನೆ ಪ್ರಸ್ತಾಪಿಸಿದರು. ಪಂಜೆಯವರು ಆ ಪ್ರಶ್ನೆಗೆ ನೇರವಾಗಿ ಉತ್ತರಿಸದೆ ಇದ್ದ ಕಾರಣ ಮುಂದೆ ಯಾರೊಡನೆಯೂ ಪ್ರಸ್ತಾಪಿಸದೆ, ತಾನು ಮಾತ್ರ ಪ್ರಾಸಬಿಟ್ಟು ಬರೆವುದೂ, ಬರೆದುದನ್ನು ಹರಿದು ಹಾಕುವುದೂ ಮಾಡುತ್ತ ಮತ್ತೆ ೧೯೧೧ರಲ್ಲಿ ಬರೋಡಾ ರಾಜ್ಯದ ನವಸಾರಿಯಲ್ಲಿದ್ದಾಗ, ಪ್ರಾಸವನ್ನು ತೊರೆದು ಬಿಡುವುದೇ ನಿಶ್ಚಯವೆಂದು ದೃಢನಿರ್ಧಾರ ಮಾಡಿ, ಹಲವು ಕವನಗಳನ್ನು ಬರೆದು,

ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟಪಡಿಸಿದರು: ಆ ಕಾಲಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ಅದು ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿತು. ಅಂದು ಪೈಗಳು ಪ್ರಾಸಬಿಟ್ಟು ಬರೆದ 'ಮೇಕೆ ದಾರಿಯೇ ಮುಂದೆ ತೇರು ಎಳೆವ ಹೆದ್ದಾರಿ' ಆದದ್ದನ್ನು ನಾವು ಇಂದು ನೋಡುತ್ತೇವೆ. ಕನ್ನಡ ಕವಿತಾ ಕಾಮಿನಿಯನ್ನು ಪ್ರಾಸದ ಶೃಂಖಲೆಯಿಂದ ಬಿಡಿಸಿ ಮುಕ್ತ ಸ್ವಾತಂತ್ರ್ಯವಿತ್ತ ಮಹನೀಯರೆಂದು ಪೈಗಳನ್ನು ಕನ್ನಡ ಸಾಹಿತ್ಯೇತಿಹಾಸದ ಲೇಖಕರು ಸ್ಮರಿಸುವಂತಾಯಿತು !

ಮಂಗಳೂರು ಸರಕಾರೀ ಕಾಲೇಜಿನ ಇಂಟರ್ ಮೀಡಿಯೆಟ್ ವಿದ್ಯಾಭ್ಯಾಸವನ್ನು ಉತ್ತಮರೀತಿಯಲ್ಲಿ ಪೂರ್ತಿಗೊಳಿಸಿ. ಅವರು ಮೇಲಿನ ಓದಿಗಾಗಿ ಮದ್ರಾಸಿಗೆ ತೆರಳಿ ಅಲ್ಲಿನ ಕ್ರಿಶ್ಚಿಯನ್ ಕಾಲೇಜನ್ನು ಸೇರಿದರು. ಅಲ್ಲಿ ಡಾ|| ರಾಧಾಕೃಷ್ಣನ್ ಪೈಗಳ ಸಹಪಾಠಿಯಾಗಿದ್ದರು. ಮದ್ರಾಸಿನ ಶಿಕ್ಷಣ ಅವರ ಅನುಭವ ಕ್ಷೇತ್ರವನ್ನು ವಿಶಾಲಗೊಳಿಸಿತು. ಹಲವು ಪಾಶ್ಚಾತ್ಯ ಪೌರ್ವಸ್ತ್ಯ ಭಾಷೆಗಳಲ್ಲಿ ಅಲ್ಲಿ ಕಲಿತರು. ಬಿ. ಎ. ಪರೀಕ್ಷೆಯಲ್ಲಿ ಇಂಗ್ಲೀಷ್ ಭಾಷೆಯ ಪ್ರಶ್ನೆ ಪತ್ರಿಕೆಗೆ ಉತ್ತರ ಬರೆದಾಗಿತ್ತು: ಅಷ್ಟರಲ್ಲಿ ತಂದೆಯ ಅನಾರೋಗ್ಯದ ಸುದ್ದಿ ಬಂತು. ಮಿಕ್ಕ ವಿಷಯಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳದೆ ಊರಿಗೆ ಮರಳಿದರು: ಮತ್ತೆ ಬಿ.ಎ. ಪದವಿ ಪೂರ್ತಿಗೊಳಿಸಲಿಲ್ಲ: ಆದರೆ ಪರೀಕ್ಷೆಗೆ ಕುಳಿತಿದ್ದ ಇಂಗ್ಲಿಷ್ ಭಾಷಾ ವಿಷಯದಲ್ಲಿ ವಿಶ್ವವಿದ್ಯಾನಿಲಯಕ್ಕೇ ಸರ್ವ ಪ್ರಥಮರಾಗಿ ಬಂಗಾರದ ಪದಕ ಪಡೆದರು.! ಮುಂದೆ ಮಂಜೇಶ್ವರದ ಮನೆಯಲ್ಲಿಯೇ ನೆಲಸಿ ದೇಶ ವಿದೇಶಗಳಿಂದ ಹಲವು ಉದ್ಗ್ರಂಥಗಳನ್ನು ತರಿಸಿ. ಓದಿ ಪಾಂಡಿತ್ಯದ ಉತ್ತುಂಗ ಶಿಖರವನ್ನೇರಿದರು.

ಹಿಂದೆ ಪ್ರಸ್ತಾಪಿಸಿದ ಪೈಗಳ ನೌಸಾರಿ ಯಾತ್ರೆ ದೇಶಸೇವಾದೀಕ್ಷೆಯ ಸಲುವಾಗಿ ಆಗಿತ್ತು. ಬರೋಡಾದ ಮಹಾರಾಜರ ನೌಕರಿಯಲ್ಲಿದ್ದ ದೇಶಪಾಂಡೆ ಎಂಬವರು ಶ್ರೀ ಅರವಿಂದ ಘೋಷರಿಂದ ಸ್ಫೂರ್ತಿಪಡೆದು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯೊಂದನ್ನು ಅಲ್ಲಿ ನಡೆಸುತ್ತಿದ್ದರು. ಅಲ್ಲಿ ಕ್ರಾಂತಿಕಾರೀ ಗುಪ್ತ ಚಟುವಟಿಕೆಗಳೂ ನಡೆಯುತ್ತಿತ್ತು. ಭಾರತ ದೇಶದಲ್ಲಿ ಸ್ವಾತಂತ್ರ್ಯ ಸ್ಫೂರ್ತಿ ಧುಮು ಧುಮಿಸುತ್ತಿದ್ದ ಆ ಕಾಲದಲ್ಲಿ ಪೈಗಳೂ ದೇಶಸೇವಾದೀಕ್ಷೆಗಾಗಿ ನೌಸಾರಿಗೆ ತೆರಳಿದರು: ಅಲ್ಲಿ ಕಾಕಾ ಕಾಲೇಲ್ಕರರ ಪರಿಚಯವೂ ಆಯಿತು: ಅವರಿಬ್ಬರ ಮೈತ್ರಿಯ ಬೆಸುಗೆ ಕೊನೆಗಾಲದವರೆಗೂ ಇತ್ತು. ಪತ್ನಿಯ ಅಸೌಖ್ಯದ ವಾರ್ತೆ ತಿಳಿದು ಪೈಗಳು ನೌಸಾರಿಯನ್ನು ಬಿಟ್ಟು ಬರಬೇಕಾಗಿ ಬಂದರೂ ಅವರ ನಿರಂತರ ಖಾದಿಧಾರಿಗಳಾಗಿ ಉಜ್ವಲ ದೇಶಪ್ರೇಮಿಗಳಾಗಿಯೇ ಇದ್ದರು. ಕೆಲಕಾಲದ ನಂತರ. ರಾಷ್ಟ್ರಭಾಷಾ ಪ್ರಚಾರಾರ್ಥ ಕಾಕಾ ಕಾಲೇಲ್ಕರ್ ದಕ್ಷಿಣ ಕನ್ನಡ ಜಿಲ್ಲೆಗೂ ಬಂದಾಗ. ಹಳೆಯ ಮಿತ್ರರಾದ ಪೈಗಳಲ್ಲಿಯೂ ಹೋದರು. ಕಾಲೇಲ್ಕರ್ ಹೊರಡುವಾಗ, ಪೈಗಳು. ತಮ್ಮ ಹಿರಿಯರು ಉಪಯೋಗಿಸುತ್ತಿದ್ದ ಬೆತ್ತವೊಂದನ್ನು ಉಡುಗೊರೆಯಾಗಿತ್ತರು. ಮಹಾತ್ಮಾ ಗಾಂಧಿ ದಂಡಿಯಾತ್ರೆಗೆ

ಹೊರಟಾಗ ಕಾಲೇಲ್ಕರ್ ಗಾಂಧಿಯವರಿಗೆ ಆ ಬೆತ್ತವನ್ನು ನೀಡಿದರು. ಆ ಚಾರಿತ್ರಿಕ ಯಾತ್ರೆಯ ಬೆತ್ತ. ಪೈಗಳು ಅಂದು ಊಡುಗೊರೆಯಾಗಿತ್ತುದು ಇಂದು ಮಹಾತ್ಮಾ ಗಾಂಧಿಯವರು ಉಪಯೋಗಿಸಿದ ವಸ್ತುಸಂಗ್ರಹಾಲಯದಲ್ಲಿ ಶೋಭಿಸುತ್ತಿದೆ. ರಾಷ್ಟ್ರವು ಗಾಂಧಿಯವರನ್ನು, ಐತಿಹಾಸಿಕ ದಂಡೀಯಾತ್ರೆಯನ್ನು ಸ್ಮರಿಸುವಷ್ಟು ಕಾಲ ಪೈಗಳು ದಾನವಾಗಿತ್ತ ಆ ಬೆತ್ತದ ಸ್ಮರಣೆಯನ್ನೂ ಕನ್ನಡಿಗರು ಅಭಿಮಾನ ಪೂರ್ವಕ ಮಾಡುವಂತಾಯಿತು!

ಗೋವಿಂದ ಪೈಗಳ ಮೊದಲ ಪ್ರಕಟಿತ ಗದ್ಯ ಕೃತಿ 'ಶ್ರೀಕೃಷ್ಣ ಚಾರಿತ್ರ' ಇದು ಬಂಗಾಳೀ ಭಾಷೆಯ ನವೀನಚಂದ್ರಸೇನರ ಶ್ರೀಕೃಷ್ಣ ಚರಿತಾ. ತ್ಕರವಾದ ರೈವತಕ, ಕುರುಕ್ಷೇತ್ರ, ಪ್ರಭಾಸ ಎಂಬ ಮೂರು ಕಾವ್ಯಗಳ ಗದ್ಯಸಂಗ್ರಹ; ಇದನ್ನೂ ೧೯೧೧ರ ಸುಮಾರಿಗೆ ಮೊತ್ತಮೊದಲು ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಭಾಗಶಃ ಪ್ರಕಟಿಸಿದರು. ೧೯೧೧ರಲ್ಲಿ ಪಾಲಿಯಿಂದ ಕನ್ನಡಿಸಿದ ಬೌದ್ಧ ಧರ್ಮದ 'ನಿಗಾಲ ಸುತ್ತ'ವನ್ನು ಬರೆದು ಪ್ರಕಟಿಸಿದರು. ೧೯೧೬ರಲ್ಲಿ ಗ್ರೀಕ್ ರುದ್ರ ನಾಟಕಗಳನ್ನು ಅದೇ ಮಾದರಿಯಲ್ಲಿ ಕೃತಿ ರಚಿಸಲು ತೊಡಗಿ ೧೯೩೦ರಲ್ಲಿ 'ಸೈರಂಧ್ರಿ' ಎಂಬ ವೀರ ದ್ವಿಪದಿಯ ನಾಟಕವನ್ನು ಬರೆದರು. ಅದು ಅಪೂರ್ಣವಾದುದು ಮಾತ್ರವಲ್ಲದೆ, ಈಗ ಅದರ ಹಸ್ತಪ್ರತಿಯೂ ದೊರಕುತ್ತಿಲ್ಲ. ೧೯೩೦ರ ಸಾಲಿಗೆ ಅವರ ಮೊದಲ ಕವನ ಸಂಗ್ರಹ 'ಗಿಳಿವಿಂಡು' ಪ್ರಕಟವಾಯಿತು. ಕನ್ನಡದಲ್ಲಿ ಮೊತ್ತಮೊದಲನೆಯದಾಗಿ ವಿಶ್ವವಿಖ್ಯಾತ ಉಮರ್ ಖಯಾಮ್ ಕವಿಯ ರುಬಾಯಿಯಾತ್‌ನ ಕನ್ನಡ ಪದ್ಯಾನು ವಾದವನ್ನು ಶ್ರೀ ಪೈಗಳು 'ಗಿಳಿವಿಂಡು' ಕವನ ಸಂಕಲನದಲ್ಲಿ ಕೊಟ್ಟಿದ್ದಾರೆ. ೧೯೩೦ರ ರಷ್ಟು ಹಿಂದೆ ರಚಿತವಾದ 'ಗೊಲ್ಗೊಥಾ' ಎಂಬ ಕ್ರಿಸ್ತ ಪುರಾಣದ ಕಥೆಯನ್ನು ಆಧರಿಸಿದ ಖಂಡ ಕಾವ್ಯವೂ ಪ್ರಕಟವಾದುದಲ್ಲದೆ 'ಶ್ರೀ ಗೋಮಟ ಜಿನಸ್ತುತಿ' ಎಂಬ ವೃತ್ತ ಛಂದಸ್ಸಿನ ಕವನಗಳೂ ಪ್ರಕಟವಾದುವು. ಪತ್ನಿ ವಿಯೋಗದ ಮೇಲೆ, ಆಗಾಗ 'ನಂದಾದೀಪ' ಹೆಸರಿನ ಕೆಲವೊಂದು ಕವಿತೆಗಳನ್ನು ಬರೆದದ್ದಲ್ಲದೆ, ಮತ್ತೆ ಅವರು ಕೆಲಕಾಲ ಸಂಶೋಧನೆಯಲ್ಲಿಯೇ ತಲ್ಲೀನರಾದರು. ಹೀಗೆ, ಕವನಿಸುವುದನ್ನು ಕಡಿಮೆಮಾಡಿ, ಸಂಶೋಧನೆಯಲ್ಲಿಯೇ ತನ್ಮಯರಾದುದರ ಕುರಿತು ಒಮ್ಮೆ ನನ್ನೊಡನೆ ಅವರು ಈ ಅಭಿಪ್ರಾಯ ಹೇಳಿದ್ದರು :

"ಕಾವ್ಯದ ಗತಿ ತೀರಾ ಮಾರ್ದವ, ನವರಸಪೂರ್ಣ: ಅದಕ್ಕೆ ಕೈಹಚ್ಚಿದಾಗ, ಮತ್ತೆ ರಸಲೋಕದ ಗಾರ್ಹಸ್ಥ್ಯ ಜೀವನ ಹಾಗೂ ಲೌಕಿಕ ಸುಖದ ಅವಿಮನಸ್ಸಿನಲ್ಲಿ ಮರುಕೊಳಿಸಲು ಆಸ್ಪದವಾಗುತ್ತದೆ. ಇದನ್ನು ಮರೆತು ನನ್ನ ಗಮನ ಬೇರೆ ಕಡೆಗೆ ಹರಿಸಬೇಕಾಗಿತ್ತು; ಅದಕ್ಕಾಗಿ ಸಂಶೋಧನೆ ಕೈಗೆತ್ತಿಕೊಂಡೆ. ಸಂಶೋಧನೆ ಎಂದರೆ ಸತ್ಯವನ್ನು ಕಂಡು ಹುಡುಕುವ ಕೆಲಸ; ಸ್ವಲ್ಪ ಸತ್ಯ, ಅರ್ಧಸತ್ಯ ತಿಳಿದರೆ ಸಾಲದು; ಪೂರ್ಣಸತ್ಯದ ಅರಿವಾಗಬೇಕು. ಆ ಪೂರ್ಣಸತ್ಯವನ್ನು ತಿಳಿಯಲು ಏಕಾ

ಗ್ರತೆಯನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಆಗ ಮನಸ್ಸಿನ ಮಾರ್ದವ. ನವರಸಗಳ ಆವಿಷ್ಕಾರ ಕುಂಠಿತವಾಗುತ್ತದೆ. ಗಾರ್ಹಸ್ಥ್ಯದ ಸಮೀಸದು ಮಾಸಿ ಮನಸ್ಸು ಸಂಶೋಧನೆಯ ಏಕಾಗ್ರತೆಯಲ್ಲಿ ನೆಲೆನಿಲ್ಲುತ್ತದೆ. ಆದಕ್ಕಾಗಿ ನಾನು ಸಂಶೋಧನೆಗೆ ಶರಣುಹೋದೆ"

ಕಾವ್ಯ ಮಾರ್ಗದಲ್ಲಿ ಮೃಗರಾಜನಂತೆ ನಿರ್ಭಯರಾಗಿ ಮುಂದಡಿಯಿಟ್ಟ ಪೈಗಳು ಪತ್ನಿಯ ಅಕಾಲ ನಿಧನಾನಂತರ ಉಂಟಾದ ಉದಾತ್ತ ರೀತಿಯಿಂದ ಆತ್ಮ ಸಂಯಮನವನ್ನು ಸಾಧಿಸಿಕೊಂಡರೆಂಬುದು ಇಲ್ಲಿ ಗಮನಿಸತಕ್ಕ ಸಂಗತಿಯಾಗಿದೆ.

ಹೀಗೆ ಪೈ ಅವರು ಸಂಶೋಧನೆಯಲ್ಲಿಯೇ ತಲ್ಲೀನರಾಗಿರಲು. ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಶ್ರೀ ಪಾಂಡೇಶ್ವರ ಗಣಪತಿರಾಯರು ತಮ್ಮ 'ಚೆಂಗಲವೆ' ಎಂಬ ಕವಿತಾ ಸಂಗ್ರಹದಲ್ಲಿ 'ಪಂಡಿತವಕ್ಕಿ' ಎಂಬ ಕವನವನ್ನು ಬರೆದು ಆ ಮೂಲಕ ಪೈಗಳನ್ನು ಎಚ್ಚರಿಸಿದರು. "ಹಾಡುವುದು ಮರೆತಿಂತು ಕುಳಿತೆಯೋ ಹಕ್ಕಿ! ಹಾಡಲಾರದೆ ನಾವು ಅಳುತಿಹೆವುಬಿಕ್ಕಿ– ಮುಂದಿರುವ ಮೃತ್ಯುವದು ಕಾಣ ಕಣ್ಣಿಕ್ಕಿ!" ಎಂದು ಆ ಪದ್ಯದಲ್ಲಿ ಹೇಳುತ್ತಾ ಕೊನೆಗೆ 'ಸಲಿಸು ಕಾಮನೆಯ" ಎಂದು ಪ್ರಾರ್ಥಿಸಿದರು. ಈ ಎಚ್ಚರ, ಈ ಪ್ರಾರ್ಥನೆ ಫಲಿಸಿತು. ಮುಂದೆ 'ಹೆಬ್ಬೆರಳು' ಎಂಬ ಕಾವ್ಯಮಯ ನಾಟಕವನ್ನೂ. 'ವೈಶಾಖಿ' ಎಂಬ ಖಂಡಕಾವ್ಯವನ್ನೂ, ಹಲವಾರು ಕಿರು ಹಾಗೂ ದೀರ್ಘ ಕವನಗಳನ್ನೂ ಅಸಂಖ್ಯ ಚತುರ್ದಶ ಪದಗಳನ್ನೂ ರಚಿಸಿ ಕನ್ನಡದ ಕಾವ್ಯ ಸಂಪತ್ತನ್ನು ಹೆಚ್ಚಿಸಿದರು. ಇಲ್ಲಿ ಒಂದು ಚಾರಿತ್ರಿಕ ಮಹತ್ವದ ಸಂಗತಿಯನ್ನು ನಾವು ತಿಳಿದುಕೊಳ್ಳತಕ್ಕದ್ದಿದೆ. ಗೋವಿಂದ ಪೈಗಳಿಗೆ ಹೆಚ್ಚಿನ ಖ್ಯಾತಿಯನ್ನು ತಂದ 'ಗೊಲ್ಗೊಥಾ' ಎಂಬ ಯೇಸುವಿನ ಕೊನೆಯ ದಿನಗಳ ಕುರಿತಾದ ಖಂಡಕಾವ್ಯ. ಅದರಲ್ಲಿನ ಕಾವ್ಯ ಸಂಪತ್ತಿನಿಂದ ಮಾತ್ರವಲ್ಲ, ಅದುವರೆಗೆ ಜೈನ. ಬ್ರಾಹ್ಮಣ. ವೀರಶೈವ ಮತಗಳ ಕಥೆಗಳಿಂದ ಅತಿವೃಷ್ಟಿಯಾಗಿ ಬೆಳೆದಿದ್ದ ಕನ್ನಡದ ಹೊಲದಲ್ಲಿ. ಯೇಸು ಕ್ರಿಸ್ತನ ಕಥೆಯ ಈ ನಾವೀನ್ಯವು ಆ ಕಾವ್ಯದ ಜನಪ್ರಿಯತೆಗೆ ನಿತ್ಯನೂತನತೆಗೆ ಕಾರಣವಾಯಿತು: ಈ 'ಗೊಲ್ಗೊಥಾ' ಕಾವ್ಯವನ್ನು ಬರೆಯಲೂ. ಶ್ರೀ ಪಾಂಡೇಶ್ವರರು ರಚಿಸಿದ 'ಕ್ರಿಸ್ತ ಜನ್ಮ' ಎಂಬ ಕವಿತೆಯೇ ತನಗೆ ಪ್ರೇರಣೆ ನೀಡಿತೆಂಬುದನ್ನು ಪೈಗಳೇ ಸ್ಮರಿಸಿಕೊಂಡಿದ್ದಾರೆ. ಅವರು ಕ್ರಿಸ್ತ ಪುರಾಣದಿಂದ ಮಾತ್ರವಲ್ಲ. ಬೌದ್ಧ ಪುರಾಣದಿಂದಲೂ. ಕಥೆಗಳನ್ನು ಎತ್ತಿಕೊಂಡು, ಹಲವು ಹ್ರಸ್ವ ದೀರ್ಘ ಕವನಗಳನ್ನೂ. 'ವೈಶಾಖಿ' ಎಂಬ ಖಂಡ ಕಾವ್ಯವನ್ನೂ ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ವಿಶಾಲತೆಯ ಕಡೆಗೆ ವಿಸ್ತರಿಸಿದ ಕೀರ್ತಿಶಾಲಿಗಳಾಗಿದ್ದಾರೆ. ಅವರು ರಚಿಸಿದ ಎಲ್ಲಾ ಖಂಡಕಾವ್ಯಗಳಿಗೂ ಅವುಗಳದೇ ಆದ ವೈಶಿಷ್ಟ್ಯವಿದೆ: 'ಗೊಲ್ಗೊಥಾ' ಯೇಸುವಿನ ಕೊನೆಯ ದಿನಕ್ಕೂ 'ವೈಶಾಖಿ' ಬುದ್ಧನ ಕೊನೆಯ ದಿನಕ್ಕೂ. ಮುಂದೆ 'ಪ್ರಭಾಸ' ಶ್ರೀಕೃಷ್ಣನ ಕೊನೆಯ ದಿನಕ್ಕೂ. 'ದೆಹಲಿ' ಗಾಂಧೀಜಿಯ ಕೊನೆಯ ದಿನಕ್ಕೂ ಸಂಬಂಧಿಸಿದ ಖಂಡ

ಕಾವ್ಯಗಳು; ಇವುಗಳಲ್ಲಿ ಕೊನೆಯುವರಡು ಅಪೂರ್ಣವಾಗಿ ಉಳಿದುವು. ಮಹಾಕಾವ್ಯದ ಅಂತಃಸತ್ವವನ್ನು– ಅಲಂಕಾರ, ವರ್ಣನೆ. ಪಾತ್ರ ಸೃಷ್ಟಿ ಎಲ್ಲದರಲ್ಲೂ– ಒಳಗೊಂಡ ಈ ಖಂಡ ಕಾವ್ಯಗಳು ಕನ್ನಡ ಸಾಹಿತ್ಯ ಇರುವವರೆಗೂ ಉಳಿಯ ಬಲ್ಲ ಶಾಶ್ವತ ಕೃತಿಗಳಾಗಿವೆ.

ಗೋವಿಂದ ಪೈಗಳ ಸಮಗ್ರ ಕವಿತೆಗಳ ಕುರಿತು ವ್ಯಾಖ್ಯಾನಿಸುವುದು ಇಲ್ಲಿ ಪ್ರಸ್ತುತವಲ್ಲ; ಸ್ಥಾಲೀ ಪುಲಾಕ ನ್ಯಾಯ'ದಂತೆ ಅವರ ಒಂದು ಚತುರ್ದಶ ಪದಿಯ ಕುರಿತು ನಿಮ್ಮ ಮುಂದೆ ವ್ಯಾಖ್ಯಾನಿಸ ಬಯಸುತ್ತೇವೆ :

"ಶ್ವಪಚನನು ಜತೆಗೊಳದೆ ದಿವಕೇರ್ವನೆಂತು ?" ಎಂಬುದು ಒಂದು ಹದಿನಾಲ್ಕು ಪಂಕ್ತಿಗಳ ಕವನ; ಹರಿಶ್ಚಂದ್ರನ ಕಥೆಗೆ ಸಂಬಂಧಿಸಿದ ಒಂದು ಘಟನೆಯ ಚಿತ್ರ. ಸತ್ಯಕ್ಕಾಗಿ ರಾಜ್ಯವನ್ನೆಲ್ಲಾ ವಿಶ್ವಾಮಿತ್ರನಿಗೆ ಧಾರೆಯೆರೆದು ಮತ್ತೂ ಋಣತೀರದಿರಲು. ಕಾಶಿಗೆ ಹೋಗಿ ಅಲ್ಲಿ ಹೆಂಡತಿ ಮಕ್ಕಳನ್ನು ಮಾರಿ ತಾನು ಹೊಲೆಯನಾಳಾಗಿ ಸ್ಮಶಾನ ಕಾಯುತ್ತಿದ್ದಾಗ. ಆತನ ಪತ್ನಿ ಚಂದ್ರಮತಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಪುತ್ರ ರೋಹಿತಾಶ್ವ ಸಮೇತ ಕೂಲಿಗೆಯ್ಯುತಿದ್ದ ಸಂದರ್ಭದಲ್ಲಿ, ಒಮ್ಮೆ ಕಾಡಿಗೆ ಸೌದೆ ತರಲು ಹೋದ ರೋಹಿತಾಶ್ವನಿಗೆ ಸರ್ಪ ಕಚ್ಚಲು ಆತನು ಮಡಿಯಲು, ಪರಾಧೀನೆಯಾದ ಚಂದ್ರಮತಿ ಧನಿಯ ಮನೆಗೆಲಸವನ್ನೆಲ್ಲಾ ಪೂರೈಸಿ, ರಾತ್ರಿ ಹೊತ್ತು ಸತ್ತ ಮಗನ ಶವವನ್ನೆತ್ತಿಕೊಂಡು ಸ್ಮಶಾನಕ್ಕೆ ಬರುವಳು. ಅಲ್ಲಿ ಮರದ ಬುಡದಲ್ಲಿ ಹುಡುಕಾಡಿ ದೊರೆತ ಸೌದೆಯನ್ನು ಹೊತ್ತು ಮಸಣದಲ್ಲಿ ಇರಿಸಿ, ಹಾವಗಿದ ತನ್ನ ಮಗನ ಶವವನ್ನೆತ್ತಿ ಮಧ್ಯರಾತ್ರಿಯ ಹೊತ್ತು ಚಿತೆ ಹಾಸಿ ಅದರಲ್ಲಿ ಮಗನನ್ನು ಮಲಗಿಸಿ ಕೊನೆಗೊಮ್ಮೆ ಆ ತಾಯಿ ಸತ್ತ ಮಗನಿಗೆ ಮುತ್ತಿಟ್ಟು ಗೋಳೆಂದು ಅತ್ತಳು. ಆ ಕೂಗನ್ನು ಕಾವಲಿನ ಹರಿಶ್ಚಂದ್ರ ಆಲಿಸಿದ : ಎಲೆಗೆ–ಕದ್ದು ಸುಡಬಂದವಳು ಯಾರು? ಮಸಣದ ತೆರಿಗೆ ಕೊಡದೆ ಸುಡಲು ಬಿಡಲಾರೆ–ಜೋಕೆ' ಎಂದು ಆತ ಗುಡುಗಿದ. ಅಯ್ಯಾ ಕೊಡಲು. ನಾನು ಉಟ್ಟ ಹಳೆ ಬಟ್ಟೆಯಲ್ಲದೆ ನನ್ನಲ್ಲಿ ಬೇರೇನೂ ಇಲ್ಲ" ಎಂದಾಕೆ ಬೇಡಿಕೊಂಡಳು. "ನನಗೆ ಸಲ್ಲುವ ಹೆಣದ ಅಕ್ಕಿಯನ್ನು ನಾನು ಧರ್ಮ ಬಿಟ್ಟೆ; ಶವದ ಬಟ್ಟೆ ಕೊಡದೆ ಬೇರೆ ದಾರಿಯಿಲ್ಲ; ನಾನು ಸತ್ಯದಿಂದ ಧರ್ಮದಿಂದ ಕದಲೆ. ಧನಿಯು ಮಂಜಿಸಲಾರೆ" ಎಂದನು ಆತ. ಆಗ ಚಂದ್ರಮತಿ, ತಾನು ಉಟ್ಟ ಹಳೆ ಸೀರೆಯಿಂದ ಒಂದು ತುಂಡನ್ನು ಹರಿದು ಕೊಡುತ್ತೇನೆಂದು ಬಟ್ಟೆಗೆ ಕೈಯಿಕ್ಕಿದಾಗ, ಆಕಾಶದಿಂದ ಗರಗರನೆ ದೇವವಿಮಾನ ಇಳಿದು ಬಂತು ! ಅಯ್ಯಾ, ನೀವು ಪಾಪಿಲೋಕದಲ್ಲಿ ಇರತಕ್ಕವರಲ್ಲ, ಬನ್ನಿ ಸ್ವರ್ಗಕ್ಕೆ ಎಂದು ಗಗನದಲ್ಲಿ ದನಿ ಮೊಳಗಿತು! ತಮ್ಮನ್ನು ಸ್ವರ್ಗಲೋಕಕ್ಕೆ ಕರೆದೊಯ್ಯಲು ದೇವ ವಿಮಾನವೇ ಬಂದಿದ್ದರೂ, ಹರಿಶ್ಚಂದ್ರ, ವಿನ್ಮಯನಾಗಿ ಹೇಳುತ್ತಾನೆ : "ನನ್ನ ದನಿ ಹೊಲೆಯನನ್ನು ಬಿಟ್ಟು ನಾನು ಒಬ್ಬನೇ ಹೇಗೆ ಬರಲಿ? "ಎಂದು ಹರಿಶ್ಚಂದ್ರನ ಕಥೆಯನ್ನು ಎಲ್ಲರೂ ಬಲ್ಲರು; ಅದರಲ್ಲಿನ ಒಂದು ಘಟನೆಯನ್ನು ಎತ್ತಿ

ಕೊಂಡು ಇಷ್ಟು ಹೃದಯಸ್ಪರ್ಶಿಯಾಗಿ, ಅರ್ಥಪೂರ್ಣವಾಗಿ ಕೇವಲ ಹದಿನಾಲ್ಕು ಪಂಕ್ತಿಯಲ್ಲಿ ಬರೆದ ಈ ಜಾಣ್ಮೆ 'ಕಿರಿದರೊಳೆ ಪಿರಿದುಮರ್ಥ ಮನಲಿಸಲ್ಕರಿವಾತನೆಲ್ಲರಿಂದಂ ಬಲ್ಲಂ' ಎಂಬ ಕವಿರಾಜಮಾರ್ಗಕಾರನ ಲಕ್ಷಣಕ್ಕೆ ಸರಿಯಾಗಿ ಹೊಂದುತ್ತದೆ.

ಈ ಪದ್ಯವನ್ನು ಅವರು ತಮ್ಮ ಪ್ರಾಯದ ಎಪ್ಪತ್ತೇಳನೆಯ ವರ್ಷದ ಸಮ್ಮ ಸಮಾನಕಾಲದಲ್ಲಿ ಬರೆದರು; ಅದು ಉಡುಪಿಯ 'ನವಯುಗ' ಪತ್ರಿಕೆಯ ಒಂದು ವಿಶೇಷಾಂಕದಲ್ಲಿ ಪ್ರಕಟವಾಯಿತು. ಆ ವಯಸ್ಸಿನಲ್ಲಿಯೂ ಅವರ ಪ್ರತಿಭಾಶಕ್ತಿಯ ಆಳವನ್ನು ವಿಶಾಲತೆಯನ್ನು ದೃಢತೆಯನ್ನು ಮೆಚ್ಚಿ ನಾನು ಅವರಿಗೊಂದು ಪತ್ರ ಬರೆದೆ ನೇರಳೆ ಶಾಯಿಯಲ್ಲಿ ಕೂಡಲೆ ೨೯-೮-೧೯೫೪ರ ದಿನಾಂಕ ನನಗೆ ಅವರ ಉತ್ತರ ಬಂತು.

" ... ... ಈ ಬಗೆಯ ಅತ್ಯಂತ ಮಮತೆಯ ಮಾತುಗಳನ್ನಾಡಿ ಕೇಶಿರಾಜನ ಶಬ್ದಮಣಿ ದರ್ಪಣ'ದ ೧೯೨-೧೩೦ನೆಯ ಸೂತ್ರಗಳಿಗೆ ನಿಟ್ಟೂರ ನಂಜಯ್ಯನು ಬರೆದ ಟೀಕೆಯಲ್ಲಿ ಚತುರ್ಥಿ ವಿಭಕ್ತಿಯ ಈಪ್ಸಾರ್ಥದ ಪ್ರಯೋಗಕ್ಕೆ ಉದಾಹರಣೆಯಾಗಿತ್ತು 'ಕವಿಗೆ ಕವಿ ಮುನಿವಂ' ಎಂಬ ವೇಷ್ಟಿತ ವಾಕ್ಯದ ಅರ್ಥವನ್ನು ಸಟೆಯಾಗಿಸಿದಿರಿ. ಶ್ರೀ ದೇವರು ತಮಗೆ ದೀರ್ಘಾಯುರಾರೋಗ್ಯವಿತ್ತು. ತಾವು ಮತ್ತೂ ಮತ್ತೂ ಮೇಲಾದ ಹಿರಿಯ ಕಿರಿಯ ಕವಿತೆಗಳನ್ನು ರಚಿಸಿ ಸದಾ ಬಾಳಿರುವಂತೆ ಕಾಪಾಡುತ್ತಿರಲಿ.... ಇತಿಶಿವಮ್-ಗೋವಿಂದ ಪೈ"

ಪತ್ರಲೇಖನದಲ್ಲಿ. ಅಂದು ತೋರಿಸುತ್ತಿದ್ದ ಆತ್ಮೀಯತೆಗೂ. ಅವರ ಹೃದಯದ ಉದಾರತೆಗೂ. ಅಪಾರ ವಿದ್ವತ್ತಿಗೂ ಇದು ಸಾಕ್ಷಿ! ಪತ್ರಲೇಖನ. ಕೇವಲ ಮನೋರಂಜನೆಗೂ. ವಾರ್ತೆಯ ತಿಳಿಸುವಿಕೆಗಳೂ ಆಗಿರದೆ ಅದರಲ್ಲಿ ಉದ್ಬೋಧಕವೂ. ಸಂಶೋಧನಾತ್ಮಕವೂ, ವಿದ್ವತ್ಪೂರ್ಣವೂ ಆದ ನಿಯಮಗಳು ಅಡಕವಾಗಿರುವಂತೆ ಬರೆಯುತ್ತಿದ್ದುದು ಅವರಲ್ಲಿ ವಿಶೇಷತೆ ಆಗಿದೆ.

ಗೋವಿಂದ ಪೈಗಳು ಸ್ವತಂತ್ರವೂ ಅನುವಾದಿತವೂ ಆಗಿ ಕೆಲವು ದೃಶ್ಯಕಾವ್ಯಗಳನ್ನು ನಾಟಕಗಳನ್ನು ರಚಿಸಿದರು. ದೃಶ್ಯಕಾವ್ಯವೆನ್ನಬಹುದಾದ ಅವರ ಪ್ರಶಸ್ತ ನಾಟಕಕೃತಿ ಹೆಬ್ಬೆರಳು; ಇದರ ಕಥೆ ಪ್ರಸಿದ್ಧವಾದ ಏಕಲವ್ಯನ ಕುರಿತಾದುದು: ಹೆಬ್ಬೆರಳನ್ನು ಏಕಲವ್ಯನು ಗುರುದಕ್ಷಿಣೆಯಾಗಿ ನೀಡಿದ್ದು: ಆರ್ಯ-ಅನಾರ್ಯ. ಬ್ರಾಹ್ಮಣ ಅಬ್ರಾಹ್ಮಣ ಈ ಘರ್ಷಣೆಯ ವಿಚಾರ ಇದಲ್ಲಿ ಮುಖ್ಯವಾಗಿ ಎತ್ತಿತೋರಿಸಲಾಗಿದೆ ಪಾತ್ರೋಚಿತವಾದ ಮಾತುಗಾರಿಕೆ ಇಲ್ಲಿನ ವೈಶಿಷ್ಟ್ಯ: ಬಿಲ್ಲ ಕುವರ ನಾದ ಏಕಲವ್ಯನ ಮಾತು. ' ಪೊಡಮಾಡುವೆ ನಿನ್ನಡಿಗೆ' ಎಂದು ಕನ್ನಡ ನುಡಿಯಲ್ಲಿದ್ದರೆ. ವಿಪ್ರನಾದ ದ್ರೋಣನ ಉತ್ತರ. 'ಮಂಗಳಾನಿ ಭವಂತು' ಎಂಬ ಸಂಸ್ಕೃತೋಕ್ತಿ : ನಾಟಕ, ಜೀವನದ ಪ್ರತಿಬಿಂಬವಾಗಿ ತೋರಬೇಕಾದರೆ ಪಾತ್ರೋಚಿತವಾದ ಮಾತು ಅವಶ್ಯ: ಸಂಸ್ಕೃತ ನಾಟಕಕಾರರು ಕಾಳಿದಾಸ ಭಾಸಾದಿ ಕವಿಗಳು ಈ ಉತ್ತಮ ಸಂಪ್ರದಾಯ ಅನುಸರಿಸಿದ್ದಾರೆ: ಕನ್ನಡದಲ್ಲಿ ಅಪೂರ್ವವಾಗಿರುವ ಈ ಶೈಲಿಯನ್ನು ಪೈಗಳು

ಪ್ರಯೋಗಿಸಿ ನಾಟಕಕ್ಕೆ ನೈಜತೆ ತಂದಿದ್ದಾರೆ. "ಹೆರರ ತಮ್ಮುನ್ನತಿಕೆಗೆತ್ತಿಕೊಂಬುದೆ ಮಹಾತ್ಮರ ಧರ್ಮ: ಪರರನಡಿಮೆಟ್ಟಿ ದೂರೀಕರಿಸುವುದು ದುರಾತ್ಮರ ಕರ್ಮ; ನಾವು ನೀವೆಂಬ ಹಳಭೇದಗಳನುಳಿದು ಸರಿಮನೆ ಸೌಂದರ್ಯದಿಂ ಸೌಹಾರ್ದದಿಂ ಮರ್ಮ ದೈಕ್ಯದಿಂದೈಕ ಮಾತ್ಯದಿಂ ಬಾಳುವುದೆ ಪಾಯಿಳೆಯ ಮರ್ಮ ಹೆಬ್ಬಾಳಿಕೆಯು" ಎಂಬೀ ಭರತವಾಕ್ಯದಿಂದೀ ನಾಟಕ ಸಮಾಪ್ತಿಗೊಳ್ಳುತ್ತದೆ.

ಅವರ ಅನುವಾದಿತ ನಾಟಕಗಳು, ತಾಯಿ ಮತ್ತು ನೋ ನಾಟಕಗಳು; ತಾಯಿ ನಾಟಕ ಅನುವಾದಿತವೆಂದು ಅವರೇ ಹೇಳಿದ್ದರೂ ಮೂಲ ತಿಳಿಸಿಲ್ಲ: ತಾಯ್ತನದ ಹಿರಿಮೆಗೆ ಹೆಣ್ಣಿನ ಹೃದಯವಿರಬೇಕಲ್ಲದೆ. ಸ್ವತಃ ತಾಯಿಯೇ ಆಗಿರಬೇಕಾಗಿಲ್ಲವೆಂದು ಇಲ್ಲಿ ಚಿತ್ರಿತವಾಗಿದೆ: ಜಪಾನಿನ 'ನೋ' ನಾಟಕಗಳನ್ನು ಮೊದಲಾಗಿ ಕನ್ನಡಕ್ಕೆ ತಂದ ಕೀರ್ತಿ ಪೈಗಳದ್ದು. ಇಂತಹ ಅನುವಾದಿತ ಒಂಭತ್ತು ನಾಟಕಗಳು ಪ್ರಕಟವಾಗಿವೆ. ಅವರ ಸ್ವತಂತ್ರ ಗದ್ಯ ನಾಟಕ 'ಚಿತ್ರಭಾನು ಅಥವಾ ೧೯೪೨' ಎಂಬುದು: ಕ್ವಿಟ್ ಇಂಡಿಯಾ ಚಳವಳಿ ಕಾಲದ ಒಂದು ಬಲಿದಾನದ ಚಿತ್ರವಿದು: ಉಜ್ವಲ ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸುವ ಕೃತಿಯಿದು. ಇದರ ಭಾಷೆ ಹರಿತವಾಗಿದೆ; ಕಾವ್ಯ ಮಯವಾಗಿದೆ. ನಾಟಕಗಳಲ್ಲಿ ಅವರು ಉಪಯೋಗಿಸುವ ಗಾದೆಗಳು, ನುಡಿಗಟ್ಟು ಗಳು, ಅಲಂಕಾರಗಳು ಅಸದೃಶವಾದವುಗಳು.

"ಕವಿತಾ ಮಾರ್ಗ ಬೇರೆ: ಸಂಶೋಧನ ಮಾರ್ಗ ಬೇರೆ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯಿತು. ವಿಶಿಷ್ಟವಾದ ದೈವಕೃಪೆಯುಳ್ಳವರು ಅವೆರಡನ್ನೂ ಕೈಕೊಂಡು ಹೊತ್ತನ್ನು ಹಿತಿತದಲ್ಲಿ ಬಳಸಿದರೆ ಸವ್ಯಸಾಚಿಸಬಹುದಾದರೂ ನನ್ನ ಬಗೆಗಾದರೋ ಅವು ಮುಳುವಾಗಿವೆ. ಹಾಲು ಕಾಸಲಿಕ್ಕೂ, ಹುರುಳಿ ಹುರಿಯ ಲಿಕ್ಕೂ ಸರಿಯಾಗದೆ. ಅವನ್ನು ಸವಡಲಿಕ್ಕೆ ಯತ್ನಿಸುವಲ್ಲಿ ಒಂದು ಒರೆಯಲ್ಲಿ ಎರಡುಕತ್ತಿ ಗಳನ್ನು ಸಿಕ್ಕಿಸಿಡಲಿಕ್ಕೆ ಹೇಣಾಡುತ್ತೇವೆ." ಹೀಗೆ ತನ್ನ ಸಂಶೋಧನ ಹಾಗೂ ಕಾವ್ಯ ರಚನಾಪ್ರವೃತ್ತಿಗಳ ಸವ್ಯಸಾಚಿತ್ವದ ಕುರಿತು ಅವರು ವಿನಯಪೂರ್ವಕ ಹೇಳಿಕೊಂಡಿದ್ದಾರೆ. ಈ ವಿನಯ ಅವರ ಉನ್ನತ ವ್ಯಕ್ತಿತ್ವಕ್ಕೆ ಭೂಷಣ. ಆದರೆ ಈ ತಿಮಿಂಗಿಲ ಯಾವ ಅಡ್ಡ ಪ್ರವಾಹವನ್ನೂ ಗಣಿಸದೆ. ಒಂದಿಷ್ಟು ಕಾಲುತಪ್ಪದೆ ಈಸಿ ಕ್ಷೀರಸಾಗರದ ಕಡೆಗೇ ಧಾವಿಸಿತು ಎಂಬುದನ್ನು ನಾವಿಂದು ಕಾಣುತ್ತೇವೆ. ಇದು ಕನ್ನಡದ ಭಾಗ್ಯ.

ಪೈಗಳ ಸಂಶೋಧನೆಯ ಬರವಣಿಗೆ ಪ್ರಾರಂಭವಾದುದು ೧೯೨೫ರಲ್ಲಿ: ಅದು ತನ್ನ ಪೂರ್ವಜರಾದ ಸಾರಸ್ವತ ಬ್ರಾಹ್ಮಣರ ಮೂಲದ ಕುರಿತು. ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಅವರು ಆಮೇಲೆ ಅಸಂಖ್ಯಾತ ಲೇಖನಗಳನ್ನು ಬರೆದು ಪ್ರಕಟಿಸಿದರು. ಇನ್ನೂ ಅವು ಗ್ರಂಥರೂಪವಾಗಿ ಬಂದಿಲ್ಲ; ಬಂದಾಗ ಕನ್ನಡನಾಡು ದೇಶಕ್ಕೆ ನೀಡಿದ ಅಮೂಲ್ಯ ಕಾಣಿಕೆಯಾಗಿ ಆ ಸಂಗ್ರಹ ಮೆಚ್ಚುಗೆ ಪಡೆದೀತು. ಅವರು, ತುಳುನಾಡಿನ ಇತಿಹಾಸದ ಕುರಿತೂ, ಅಲ್ಲಿ ಆಳಿದ ಅಲುಪರ, ಅಜಿಲರಸರ ಕುರಿತೂ

ನಾಥಪಂಥ, ಜೈನ, ದ್ವೈತಾದ್ವೈತ ಮತಗಳ ವಿಷಯವಾಗಿಯೂ ತುಳುನಾಡಿನ ಮಹನೀಯರ ಕುರಿತೂ. ಅಲ್ಲಿನ ಅಳಿಯಕಟ್ಟು. ಪಾಡ್ದನಗಳಿಗೆ ಸಂಬಂಧಿಸಿಯೂ ಹಲವು ಶಾಸನಗಳ ಆಧಾರದಿಂದ ಅನೇಕ ಉಪಯುಕ್ತ ಲೇಖನ ಬರೆದಿದ್ದಾರೆ. ಕರ್ನಾಟಕ ದೇಶ ಭಾಷೆಗಳಿಗೆ ಸಂಬಂಧಿಸಿದ, ಕನ್ನಡ ಕವಿಕಾವ್ಯಕಾಲ ವಿಚಾರದ ಅವರ ಲೇಖನಗಳು ಬಹಳ ಇವೆ. ಕರ್ನಾಟಕ್ಕೆ ಮೊತ್ತಮೊದಲು ಪ್ರವೇಶಿಸಿದ ಜೈನರೆಂದರೆ ಭದ್ರಬಾಹಲಿ ಮುನಿ ಮತ್ತು ಚಂದ್ರಗುಪ್ತ ಇವರೆಂದೂ. ಈ ಚಂದ್ರಗುಪ್ತನು ಮೌರ್ಯ ರಾಜನಾಗಿರದೆ, ಉಜ್ಜಯಿನಿಯ ಸಂಪ್ರತಿ ಚಂದ್ರಗುಪ್ತನೆಂದೂ ಅವರು ಮಾಡಿದ ಸಂಶೋಧನೆ ತುಂಬಾ ಮೌಲಿಕವಾದುದು. ಕ್ರಿ. ಶ. ಎರಡನೆಯ ಶತಮಾನದ ಗ್ರೀಸಿನ ಪ್ಟೋಲೆಮಿ ಭಾರತವನ್ನು ಸಂದರ್ಶಿಸಿ ಬರೆದ ಉಲ್ಲೇಖದಲ್ಲಿ ಕರ್ನಾಟಕದ ಉಲ್ಲೇಖವಿರುವುದನ್ನೂ ತಿಳಿಸಿದ್ದಾರೆ. ಕರ್ನಾಟಕದ ಚಾಲುಕ್ಯ. ರಾಷ್ಟ್ರಕೂಟ, ವಿಜಯನಗರ ಸಾಮ್ರಾಜ್ಯಗಳ ಕುರಿತೂ ಅವರು ಆಳವಾಗಿ ಅಭ್ಯಸಿಸಿದ್ದಾರೆ ಮಾತ್ರವಲ್ಲ ಶಾತವಾಹನ. ಪುನ್ನಾಟ, ಕದಂಬ, ಗಂಗ ಇವರ ಚರಿತ್ರೆಗಳನ್ನು ಸಂಶೋಧಿಸಿರುವರು. ಭಾರತದ ಇತಿಹಾಸಕ್ಕೆ ಸಂಬಂಧಿಸಿ, ಭಾರತ ಗ್ರೀಕ್ ಸಂಬಂಧವಾಗಿ. ಕನಿಷ್ಕಯುಗ, ಗುಪ್ತಯುಗ, ವಲ್ಲಭೀಯುಗಗಳ ಕುರಿತೂ. ವಾಕಾಟರು, ಪಲ್ಲವರು ಇವರ ವಿಚಾರವಾಗಿಯೂ ಹಲವಾರು ವಿಮರ್ಶಾತ್ಮಕ ಲೇಖನಗಳಿವೆ. ನಾಥಪಂಥ. ಜೈನ, ಬೌದ್ಧ, ಕ್ರೈಸ್ತ ಮತಗಳ ಆಳವಾದ ಅಭ್ಯಾಸ ಅವರಿಗಿತ್ತು. ಗೋಮಟೇಶ್ವರ ಮೂರ್ತಿಯ ವಿಚಾರ ಅವರ ಸಂಶೋಧನೆ ತುಂಬಾ ಮೌಲಿಕವಾದುದು. ಬುದ್ಧನ ಕಾಲನಿರ್ಣಯವನ್ನು ಅವರು ಸಂಶೋಧಿಸಿ ತಿಳಿಸಿದ್ದಾರೆ. ಬಸವೇಶ್ವರ ವಂಶಾವಳಿ. ದೇವರ ದಾಸಿಮಯ್ಯನ ಕಾಲ. ರೇವಣಸಿದ್ಧ. ಮರುಳಸಿದ್ಧ, ಏಕೋರಾಮಿ ತಂದೆ. ಮಲ್ಲಿಕಾರ್ಜುನ ಪಂಡಿತ ಇವರೆಲ್ಲರ ಕಾಲನಿರ್ಣಯವನ್ನೂ ಮಾಡಿದ್ದಾರೆ ಅವರ ಪ್ರತಿಯೊಂದು ಲೇಖನಕ್ಕೂ ಕೊಡುತ್ತಿದ್ದ ಅಡಿಟಿಪ್ಪಣಿ. ಮೂಲಾಧಾರಗಳು ಯಾರನ್ನಾದರೂ ಬೆರಗುಗೊಳಿಸುವಂತಿತ್ತು. ಅವರ ಪಾಂಡಿತ್ಯದ, ಅರಿವಿನ ಆಳವನ್ನು ತಿಳಿಸುವರೆ ಸಾಕಾಗುವವು. ವಿವಿಧ ಭಾಷೆಗಳ ತಿಳುವಳಿಕೆ. ವ್ಯಾಕರಣ. ಗಣಿತ. ಜ್ಯೋತಿಷ್ಯ ಪಾಂಡಿತ್ಯ, ಬೇರೆ ಬೇರೆ ಮತದ ಧರ್ಮಗಳ ಜ್ಞಾನ ಇವುಗಳ ಫಲವಾಗಿ ಅವರ ಸಂಶೋಧನ ಲೇಖನಗಳಾಗಲಿ ಕಾವ್ಯರಚನೆಯಾಗಲಿ. ಗದ್ಯಕೃತಿಗಳಾಗಲಿ ಅಸಾಮಾನ್ಯವಾಗಿ ಉಳಿಯುತ್ತವೆ.

ಪತ್ರಲೇಖನವನ್ನೂ ಉತ್ತಮ ಸಾಹಿತ್ಯ ರಚನೆಯಾಗಿ ಮಾಡಿ ತೋರಿಸಿದ ಕೀರ್ತಿ ಅವರದು: ಹಿರಿಯರಿರಲಿ. ಕಿರಿಯರಿರಲಿ. ಪತ್ರ ಬರೆದರೆ ಅದಕ್ಕೆ ಕೂಡಲೇ ಸಮಂಜಸ ರೀತಿಯಲ್ಲಿ ಉತ್ತರ ಬರೆಯುತ್ತಿದ್ದರು. ಅವರ ಪತ್ರಗಳಲ್ಲಿ ಹೆಚ್ಚಾಗಿ ಸಾಹಿತ್ಯಿಕ ವಿಚಾರಗಳೇ ತುಂಬಿರುತ್ತಿದ್ದವು. ಬರಿಯ ಓದಿ ಬಿಸಾಡುವ ಲಘುವಾದ ಬರೆಹ ಅವರ ಪತ್ರವಲ್ಲ. ಎರಡು ಸಲ. ಮೂರು ಸಲ. ನಾಲ್ಕು ಸಲವೂ ಅವನ್ನು

ಓದಿ ತಿಳಿದುಕೊಳ್ಳಬೇಕು. ವೇದದ ಮಂತ್ರ, ಬುದ್ಧನ ಮಂತ್ರ, ಬೈಬಲ್ ಆಧಾರ, ಕೇಶಿರಾಜನ ವ್ಯಾಕರಣ, ನಾಗವರ್ಮನ ಛಂದಸ್ಸು, ಪಂಪನ ಸೂಕ್ತಿ–ಇಂತಹ ಗಹನ ವಿಷಯಗಳೂ ಅವರ ಪತ್ರಗಳಲ್ಲಿ ಅಡಕವಾಗಿರುತ್ತಿದ್ದುವು. ಕರ್ನಾಟಕಾದ್ಯಂತ, ಎಲ್ಲಿ ಹೋದರೂ, ಅವರ ಕಾಲೀನರಾದ ಹಿರಿಯ ಕಿರಿಯರು ಪೈಗಳು ತಮಗೆ ಬರೆದ ಪತ್ರಗಳ ವಿಚಾರ ಅಭಿಮಾನ ಪೂರ್ವಕ ಹೇಳಿಕೊಳ್ಳುತ್ತಾರೆ.

ಅವರ ಗದ್ಯಲೇಖನಗಳೂ ಹಲವಾರು: ಅವೆಲ್ಲವೂ ಇನ್ನೂ ಗ್ರಂಥ ರೂಪದಲ್ಲಿ ಬಂದಿಲ್ಲ. ಅವರ 'ಆತ್ಮ ಕಥನ' ಬರೆಹಗಾರನ ಹಣೆಬರೆಹ, ಎಂಬೀ ಪ್ರಬಂಧಗಳೂ, ಸಮ್ಮೇಳನಾಧ್ಯಕ್ಷ ಭಾಷಣ, ಕಿಲ್ಲೆ, ಕಾಮತ್, ಪಂಜೆಯವರ ಕುರಿತು ಬರೆದ ಲೇಖನಗಳು ಇವು ಕೆಲವು ಮಾತ್ರ ಇಂದು ಸಂಗ್ರಹೀತವಾಗಿವೆ: ಅವರ ಎಲ್ಲಾ ಗದ್ಯಲೇಖನಗಳು ಸಂಗ್ರಹೀತವಾದರೆ ಒಂದು ಉದ್ಗ್ರಂಥವಾದೀತು. ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯಾದೀತು.

ಬೆನ್ನ ಹಿಂದೆ ಉನ್ನತ ಶಿಖರದಿಂದ ಕಂಗೊಳಿಸುವ ಪಶ್ಚಿಮಾದ್ರಿ: ಕಣ್ಣಮುಂದೆ ಗಂಭೀರ ವಿಶಾಲ ನೀಲಸಮುದ್ರ: ಅದರ ಮಧ್ಯೆ ತುಳುನಾಡಿನ ತಪೋವನದ ಭಾರ್ಗವನಂತೆ ಗೋವಿಂದ ಪೈಗಳು ಮಂಜೇಶ್ವರದಲ್ಲಿ ಅರುವತ್ತು ವರ್ಷಗಳಷ್ಟು ದೀರ್ಘಕಾಲ ಕವಿತಾರಚನೆ, ಸಂಶೋಧನೆ, ಇಂತಹ ಸಾಹಿತ್ಯ ಸೃಷ್ಟಿ ಏಕಾಂಗಿಯಾಗಿ ಏಕಧ್ಯಾನದಲ್ಲಿ ತಪಸ್ಸಿನಂತೆ ನಡೆಸಿ ಅದರಲ್ಲಿ ಪೂರ್ಣಸಿದ್ಧಿಯನ್ನು ಪಡೆದರು. ಉಡುಪಿಯ ಶ್ರೀಕೃಷ್ಣನನ್ನು, ಧರ್ಮಸ್ಥಳದ ಮಂಜುನಾಥನನ್ನು, ವೇಣೂರು ಕಾರ್ಕಳಗಳ ಗೊಮ್ಮಟನನ್ನು ಸಂದರ್ಶಿಸಲು ನಾಡಿನಾದ್ಯಂತ ಭಕ್ತರು ತೀರ್ಥಯಾತ್ರೆಯಾಗಿ ಬರುತ್ತಿದ್ದಂತೆ ಮಂಜೇಶ್ವರದ ಈ ಕಾವ್ಯರ್ಷಿಯನ್ನು ಸಂದರ್ಶಿಸಲೂ ಆಗಮಿಸುತ್ತಿದ್ದರು. ಒಮ್ಮೆ ಅವರನ್ನು ಕಂಡು ಮಾತನಾಡಿದವರು ಅವರ ಉನ್ನತವಾದ ವ್ಯಕ್ತಿತ್ವವನ್ನು ಎಂದೂ ಮರೆಯುವಂತಿರಲಿಲ್ಲ. ಅವರ ಜೀವಿತಕಾಲದಲ್ಲಿ ಮಂಜೇಶ್ವರವು ಕನ್ನಡಿಗರ ತೀರ್ಥಯಾತ್ರಾ ಸ್ಥಳವಾಗಿ ಮೆರೆಯಿತು.

ಬಂದವರೊಡನೆ ಅವರು ಮುಕ್ತ ಮನಸ್ಸಿನಿಂದ ಮಾತನಾಡುತ್ತಿದ್ದರು. ಅಕ್ಕರೆಯಿಂದ ತಿಂಡಿ ತೀರ್ಥ ಕೊಟ್ಟು ಉಪಚರಿಸುತ್ತಿದ್ದರು. ಇದಕ್ಕೆ ದೊಡ್ಡವರು ಸಣ್ಣವರು ಎಂಬ ಭೇದವಿರಲಿಲ್ಲ. ಬಂದವರಿಗೆಲ್ಲಾ ಹೊಟ್ಟೆ ತುಂಬಾ ತಿಂಡಿ ತೀರ್ಥ ಕಿವಿ ಮನಸ್ಸುಗಳಿಗೆಲ್ಲಾ ಸಾಹಿತ್ಯದ ರಸದೂಟ ನೀಡುತ್ತಿದ್ದರು. ಪ್ರಪಂಚ ಯಾವುದೇ ವಿಷಯವನ್ನೆತ್ತಿಕೊಂಡರೂ ಅಧಿಕಾರವಾಣಿಯಿಂದ ಮಾತನಾಡುತ್ತಿದ್ದರು. ಇದಿರಿನಲ್ಲಿ ಗಂಭೀರ ಸಾಗರ ನಿರ್ಘೋಷದೊಂದಿಗೆ ತನ್ನ ಕಂಠವನ್ನು ಮೇಳೈಸಿ ಮಾತನಾಡುತ್ತಿದ್ದಾಗ ಆಲಿಸುವ ಸೊಗಸು ಅಪೂರ್ವ. ಅವರು ಮಾತನಾಡುತ್ತಿದ್ದಾಗ, ಮಧ್ಯೆ ಅಪಸ್ವರ ಸೇರಿಸಲು ನಮಗೆ ಅಂಜಿಕೆ ಆಗುತ್ತಿತ್ತು. ಬಿಚ್ಚುಮನಸ್ಸಿನಿಂದ

ಮಾತನಾಡುವ, ಮಾತಿನ ಮೋಡಿಯಿಂದ ಮೈಮರೆಸುವ ಕಲೆ ಅವರಿಗೆ ಸಂಪೂರ್ಣ ಸಿದ್ಧಿಸಿತ್ತು.

ಜೀವಿತದ ಕೊನೆಯ ಕಾಲಕ್ಕೆ ಅವರಿಗೆ ಕೆಲವು ಕೊರಗುಗಳು ಇದ್ದುವು. ಒಂದು ಭಾರತದ ವಿಭಜನೆ. ಮತ್ತೊಂದು ತನ್ನ ತಾಯ್ನೆಲವಾದ ಮಂಜೇಶ್ವರ ಸಮೇತವಾದ ಕಾಸರಗೋಡು ಕೇರಳಕ್ಕೆ ಅನ್ಯಾಯವಾಗಿ ಸೇರಿಸಲ್ಪಟ್ಟುದು ! ರಾಜ್ಯವಿಭಜನೆಯ ೧೯೫೬ರ ನವಂಬರ ಒಂದನೆಯ ದಿನವನ್ನು ತಮ್ಮ ಕೇಲೆಂಡರಿನಲ್ಲಿ ಕಪ್ಪು ಶಾಯಿಯಿಂದ ಹೊಡೆದು 'ಕರಿದಿನ' ಎಂದು ಬರೆದಿದ್ದರು. ಕನ್ನಡಿಗರನ್ನು ವಂಚಿಸಿ ಕಾಸರಗೋಡನ್ನು ಕೇರಳಕ್ಕೆ ಕೊಡಮಾಡಿದ ಮಹಾಪಾಪದಲ್ಲಿ ಸರ್ದಾರ್ ಪಣಿಕ್ಕರ್ ಮುಖ್ಯ ಪಾತ್ರ ವಹಿಸಿದರೆಂಬುದೂ ನಿಮಿತ್ತವಾದ, ಅವರು ಉಪಕುಲಪತಿಯಾಗಿದ್ದ ಮೈಸೂರ ವಿಶ್ವವಿದ್ಯಾನಿಲಯ ಬಹುಮಾನವಾಗಿ ನೀಡಿದ ಗೌರವ ಡಾಕ್ಟರೇಟನ್ನು ಅವರು ತಿರಸ್ಕರಿಸಿದರೆಂಬುದು ಗಮನಾರ್ಹ. ವಿಶ್ವವಿದ್ಯಾನಿಲಯಕ್ಕೆ ಬರೆದ ಪತ್ರದಲ್ಲಿ ಆ ವಿಷಯವನ್ನು ಅವರು ಓರ್ವ ಸದ್ಗೃಹಸ್ಥನಾಗಿ ಉಲ್ಲೇಖಿಸದಿದ್ದರೂ. ಅವರ ಸಮೀಪವರ್ತಿಗಳು ಈ ಚಾರಿತ್ರಿಕ ಸತ್ಯವನ್ನು ಬಲ್ಲವರೇ ಆಗಿದ್ದಾರೆ. ಕೊನೆಯುಸಿರೆಳೆವವರೆಗೂ ತನ್ನ ವಿಳಾಸವನ್ನು ಅಂಚೆಪೇದೆ ತನಗೆ ಪತ್ರ ತಂದುಕೊಡಲಿ–ಎಂದೆ.–ಮಂಜೇಶ್ವರ. ದಕ್ಷಿಣ ಕನ್ನಡ ಎಂದೇ ಬರೆವ ದೃಢಸಂಕಲ್ಪ ಪೂರೈಸಿದರು.

ಗೋವಿಂದ ಪೈಗಳಿಗೆ ಎಂಭತ್ತು ವರ್ಷ ಪ್ರಾಯ ದಾಟಿತು. ಭಗವಾನ್ ಬುದ್ಧದೇವನಿಗೂ ಪರಿನಿರ್ವಾಣ ಕಾಲಕ್ಕೆ ಎಂಭತ್ತು ವರ್ಷ ತುಂಬಿತ್ತು. ಆ ಮೇಲೆ ಅವರು ಅನಾರೋಗ್ಯಕ್ಕೆ ಈಡಾದರು. ತನ್ನ ಮರಣದ ಮುಲನ್ ಸೂಚನೆ ಅವರಿಗೆ ಆಗಿರಬೇಕು: ಬುದ್ಧಭಗವಂತನು ಪಾವೆಯಿಂದ ತನ್ನನ್ನು ಕುಶಿನಾರಕ್ಕೆ ಒಯ್ಯಿರೆಂದು ಕೊನೆಯ ಕಾಲದಲ್ಲಿ ಶಿಷ್ಯರಿಗೆ ಹೇಳಿ ಅಲ್ಲಿ ಪರಿನಿರ್ವಾಣ ಪಡೆದಂತೆ. ತನ್ನ ಮನೆತನದ ಮೂಲಸ್ಥಾನವಾದ ಮಂಗಳೂರಿಗೆ ತನ್ನನ್ನು ಕರೆದುಕೊಂಡು ಹೋಗಿರೆಂದು ತನ್ನ ಕುಟುಂಬದವರಿಗೆ ಹೇಳಿ. ಅಲ್ಲಿಗೆ ಅವರನ್ನು ಒಯ್ದ ಮೇಲೆ– ಕನ್ನಡದ ನೆಲದಲ್ಲಿಯೇ ೧೯೬೩ನೆಯ ಇಸವಿ ಸಪ್ಟಂಬರ ಆರನೆಯ ದಿನ ತನ್ನ ಕೊನೆಯುಸಿರೆಳೆದರು ! ಉಜ್ವಲ ದೀಪದ ಪ್ರಭೆ ಆರಿ. ಆಕಾಶದ ಸೂರ್ಯತೇಜಸ್ಸಿನಲ್ಲಿ ಐಕ್ಯಗೊಳ್ಳುವಂತೆ, ಇಂತಹ ಪಾಂಡಿತ್ಯ ಪ್ರತಿಭೆಗಳ ಮಹಾ ಪುರುಷನ ದಿವ್ಯಾತ್ಮ ಪರಮಾತ್ಮನಲ್ಲಿ ಲೀನಗೊಂಡು ಮುಕ್ತಿ ಪಡೆಯಿತು !

ಅಂತಹ ಪವಿತ್ರಾತ್ಮನ ಪುಣ್ಯಸ್ಮರಣೆ ಮಾಡುವ ನಾವು ನೀವು ಎಲ್ಲರೂ ಧನ್ಯರು !



ಗೋವಿಂದ ಪೈ ವಿಚಾರ ಸಂಕಿರಣದ ಮುಖ್ಯ ಅತಿಥಿಗಳಾದ ಶ್ರೀ ಕಯ್ಯಾರ ಕಿಞ್ಞಣ್ಣ ರೈ ಮಾತನಾಡುತ್ತಿರುವುದು.

ಗೋವಿಂದ ಪೈಯವರ ನಾಟಕಗಳು

● ಲಕ್ಷ್ಮೀನಾರಾಯಣ ಭಟ್ಟ

ಗೋವಿಂದ ಪೈ ಸಂಶೋಧನ ಪ್ರತಿಭೆ ಮತ್ತು ಸೃಜನಾತ್ಮಕ ಪ್ರತಿಭೆ ಎರಡನ್ನೂ ಅಸಾಧಾರಣ ರೀತಿಯಲ್ಲಿ ಸಂಗಮಿಸಿಕೊಂಡ ಒಬ್ಬ ವಿಶಿಷ್ಟ ಸಾಹಿತಿ. ಅವರು ತಮ್ಮ ಕಾಲದ ಒಬ್ಬ ಮಹಾಮೇಧಾವಿಯಾಗಿದ್ದಂತೆಯೇ ಕನ್ನಡ ನವೋದಯ ಸಾಹಿತ್ಯದ ರೂಪನಿರ್ದೇಶನ ಮಾಡಿದ ಹಿರಿಯ ಸಾಹಿತಿಗಳಲ್ಲಿಯೂ ಒಬ್ಬರಾಗಿದ್ದರು. ಮೇಧಾಶಾಲಿಗಳು ಹೇಗೋ ಹಾಗೆಯೇ ಅವರು ತೀವ್ರ ಭಾವನಾ ಬಲವುಳ್ಳವರೂ ಆಗಿದ್ದವರು. ಹಾಗಿದ್ದೂ ಅವರ ಬರೆಹಗಳಲ್ಲಿ ಮಾತ್ರ ಬಹಳ ಸಲ ಪಾಂಡಿತ್ಯದ್ದೇ ಮೇಲುಗೈಯಾಗುವುದುಂಟು. ಗೊಲ್ಗೊಥಾ ವೈಶಾಖಿಗಳಂಥ ಕೃತಿಗಳಲ್ಲಿ ಅವರ ಸಂವೇದನೆಗಳು ಕಾವುಗೊಂಡು ಧಾರೆಗಟ್ಟಿ ಹರಿದರೂ ಬೇರೆ ಎಷ್ಟೋ ಪದ್ಯಗಳು ಟಿಪ್ಪಣಿಗಳ ಹಿಲಾಲು ಬೆಳಕಿನಲ್ಲಿಯೇ ಸಾಗಬೇಕಾಗುತ್ತವೆ. ಪೈಯವರ ಪಾಂಡಿತ್ಯ ಅವರ ವ್ಯಕ್ತಿತ್ವದ ಪ್ರಬಲ ಅಂಶವಾಗಿದ್ದು ಅವರು ಕೃತಿರಚನೆಯಲ್ಲಿ ತೊಡಗಿದ್ದಾಗ ಕೂಡ, ಎಂದರೆ ರಸಾವೇಶದ ತಲ್ಲೀನ ಗಳಿಗೆಗಳಲ್ಲಿ ಸಹ ನಡುವೆ ನುಗ್ಗಿ ಅವರ ಸೃಜನ ಪ್ರಜ್ಞೆಯನ್ನು ಸವಾರಿ ಮಾಡಲೆಳಸುವುದು ಕಾಣುತ್ತದೆ. ಇದೇನೇ ಇದ್ದರೂ ಅಸೀಮ ಪಾಂಡಿತ್ಯದಿಂದ ಪ್ರಾಪ್ತವಾದ ಹೊಸ ಎಳೆಯೊಂದು ಅವರ ಕಾವ್ಯಪತ್ತಲದಲ್ಲಿ ಹಾಸುಹೊಕ್ಕಾಗಿ ಸೇರಿ ಅದಕ್ಕೆ ಗಮನಾರ್ಹ ಪ್ರತ್ಯೇಕತೆಯನ್ನು ಸಾಧಿಸಿಕೊಟ್ಟಿರುವುದನ್ನು ಮಾತ್ರ ಎಲ್ಲರೂ ಒಪ್ಪಬೇಕಾಗುತ್ತದೆ. ಗೊಲ್ಗೊಥಾ ಮತ್ತು ವೈಶಾಖಿಯಂಥ ಖಂಡ ಕಾವ್ಯಗಳಿಗೆ ಮತ್ತು ಹೆಬ್ಬೆರಳಿನಂಥ ಕಾವ್ಯನಾಟಕಕ್ಕೆ ಈ ಮಾತು ವಿಶೇಷವಾಗಿ ಅನ್ವಯವಾಗುತ್ತದೆ ಎನ್ನಬಹುದು.

ಗೋವಿಂದ ಪೈಯವರ ಸ್ವತಂತ್ರ ನಾಟಕಗಳು ಎರಡು. ಮೊದಲನೆಯದು ಹೆಬ್ಬೆರಳು. ಎರಡನೆಯದು ಚಿತ್ರಭಾನು ಅಥವಾ ೧೯೪೨. ತಾಯಿ ಎಂಬ ಒಂಬತ್ತು ಪುಟಗಳ ಏಕಾಂಕ ನಾಟಕ ಒಂದು ಅನುವಾದಿತ ಕೃತಿ. ಇದರ ಮೂಲ ಯಾವುದೆನ್ನುವುದು ತಿಳಿಯದು. ಇದಲ್ಲದೆ ಅವರು ಜಪಾನೀ ಸಾಹಿತ್ಯಕ್ಕೇ ವಿಶಿಷ್ಟವಾದ ಎಂಟು 'ನೋ' ನಾಟಕಗಳನ್ನೂ ಅನುವಾದಿಸಿದ್ದಾರೆ.

ಪೈಯವರು ತಮಗೆ ತುಂಬ ಹೆಸರು ತಂದ ಗೊಲ್ಗೊಥಾ ಖಂಡಕಾವ್ಯವನ್ನು ರಚಿಸಿ ಸುಮಾರು ಹದಿನೈದು ವರ್ಷಗಳ ನಂತರ ತಮ್ಮ ಇನ್ನೊಂದು ಮುಖ್ಯ ಕೃತಿಯಾದ ಹೆಬ್ಬೆರಳು ನಾಟಕವನ್ನು ಬರೆದರು. ಈ ಮಧ್ಯೆ ತಾವು ಕೆಲವು ಸಾನೆಟ್ಟುಗಳನ್ನು

ಮತ್ತು ಇತರ ಪದ್ಯಗಳನ್ನು ಮಾತ್ರ ಬರೆದಿದ್ದುದಾಗಿಯೂ, ದೀರ್ಘ ಕೃತಿಗಳನ್ನು ಬರೆಯುವ ಅಭ್ಯಾಸವೇ ತಪ್ಪಿ ಹೋಗಿದೆಯೋ ಅಥವಾ ಆ ಸಾಮರ್ಥ್ಯವೇ ಉಡುಗಿ ಹೋಗಿದೆಯೋ ಪರೀಕ್ಷಿಸಿಕೊಳ್ಳಲು 'ಹೆಬ್ಬೆರಳು' ನಾಟಕ ರಚನೆಗೆ ಕೈಹಾಕಿದುದಾಗಿಯೂ ಪೈ ತಿಳಿಸುತ್ತಾರೆ. ಈ ಮಾತಿನಲ್ಲಿ ಅವರ ಸ್ವಭಾವಕ್ಕೆ ಸಹಜವಾಗಿದ್ದ ಸೌಜನ್ಯದ ಅಂಶವೇ ಹೆಚ್ಚಾಗಿರುವಂತೆ ಕಾಣುತ್ತದೆ. ಗ್ರೀಕ್ ಭಾಷಾ ಸಾಹಿತ್ಯಗಳನ್ನು ಚೆನ್ನಾಗಿ ತಿಳಿದಿದ್ದ ಅವರಿಗೆ ಆ ಸಾಹಿತ್ಯದ ಶೃಂಗ ಕೃತಿಗಳೆನಿಸಿದ ದುರಂತ ನಾಟಕಗಳು ಹಿಡಿಸಿರಬೇಕು. ಅಲ್ಲದೆ ಗ್ರೀಕ್ ನಾಟಕ ಹಾಗೂ ಜಪಾನಿನ ನೋ ನಾಟಕಗಳೆರಡರಲ್ಲಿಯೂ ಕಾಣುವ ಮೇಳ ಮತ್ತು ಗಾಯನ ಪದ್ಧತಿಗಳು ಅವರನ್ನು ಸೆಳೆದಿರಬೇಕು. ಹಾಗೆಂದೇ ಮುಂದೆ ಅವರು ನೋ ನಾಟಕಗಳನ್ನು ಭಾಷಾಂತರಿಸಿದರು. ಅದಕ್ಕಿಂತ ಕೊಂಚ ಮುಂಚೆ ಗ್ರೀಕ್ ನಾಟಕದ ಮಾದರಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಸ್ವತಂತ್ರ ವಸ್ತುವಿನಿಂದ ಕೂಡಿದ ಹೆಬ್ಬೆರಳು ನಾಟಕವನ್ನು ಬರೆದರು.

ಹೆಬ್ಬೆರಳು ನಾಟಕಕ್ಕಿಂತ ಮುಂಚೆ ಹೊರಬಂದದ್ದು ಪೈಯವರ 'ತಾಯಿ' ಎಂಬ ಏಕಾಂಕ ನಾಟಕ. ಈ ನಾಟಕ ಒಂದು ರೂಪಾಂತರ. ಇದರ ಮೂಲ ಯಾವುದೆಂದು ತಿಳಿಯದು. ಒಂಬತ್ತು ಪುಟಗಳ ಈ ಏಕಾಂಕ ಕೇವಲ ಸ್ವಗತ ಸಂಭಾಷಣೆಗಳಲ್ಲಿಯೇ ಬೆಳೆಯುತ್ತದೆ. ನಾಟಕಕ್ಕೆ ಹೆಚ್ಚು ಸಹಜವಾದ. ಘಟನಾಭರಿತವಾದ ಒಡಲು ಇದಕ್ಕಿಲ್ಲ. ನಾಟಕದ ಲಕ್ಷ್ಯವಿರುವುದೆಲ್ಲ ಒಂದು ತತ್ವದ ನೇರ ನಿರೂಪಣೆಯ ಮೇಲೆ. ಹೆಣ್ಣೊಬ್ಬಳು ಒಂದು ಮಗುವಿಗೆ ಜನ್ಮ ಕೊಡಬಹುದು. ಆದರೆ ಅಷ್ಟರಿಂದಲೇ ಅವಳು ಅದರ ತಾಯಿಯಾಗಲಾರಳು. ಹಾಗೆಯೇ ಸ್ವಂತ ಸುಖ ದುಃಖಗಳನ್ನೂ ಬದಿಗೆ ಸರಿಸಿ ಒಂದು ಮಗುವಿನ ಲಾಲನೆ ಪಾಲನೆ ಮಾಡುವವಳು ಹೆತ್ತವಳಲ್ಲದಿದ್ದರೂ ಅದರ ತಾಯಿಯೆನಿಸಬಲ್ಲಳು. ಈ ತತ್ವದ ಪ್ರತಿಪಾದನೆಯಷ್ಟೇ ನಾಟಕದ ಉದ್ದೇಶ. ಆದರೆ ನಾಟಕ ಪ್ರಕಾರಕ್ಕೆ ವಿಶಿಷ್ಟವಾದ ರೀತಿಯಲ್ಲಿ, ಘಟನಾತ್ಮಕವಾಗಿ ಈ ತತ್ವ ಪ್ರತಿಪಾದಿತವಾಗುವುದಿಲ್ಲ. ಮಾತ್ರವಲ್ಲ. ನಾಟಕಕ್ಕೆ ಬಳಸಿರುವ ಭಾಷೆ ಹೊಸಗನ್ನಡವಾಗಿದ್ದರೂ ಪಾತ್ರಗಳ ಮಾತಿನ ಶೈಲಿ ಕೊಂಚ ಕೃತಕವಾಗಿ ಕಾಣುತ್ತವೆ. ಒಂಬತ್ತು ಪುಟಗಳ ಈ ಚಿಕ್ಕ ಏಕಾಂಕದಲ್ಲಿ ಒಂದೂ ಮುಕ್ಕಾಲು ಪುಟಗಳ ಒಂದು ದೀರ್ಘ ಸ್ವಗತವಿರುವುದು ನಾಟಕದ ಕಟ್ಟಡ ಎಷ್ಟು ಶಿಥಿಲವಾದುದು ಎನ್ನುವುದನ್ನು ತಿಳಿಸುತ್ತದೆ.

ಮಲ್ಲಿಗೆ ಮತ್ತು ಸಂಪಿಗೆ ಎಂಬ ಅಕ್ಕತಂಗಿಯರು ಈ ನಾಟಕದ ಮುಖ್ಯ ಪಾತ್ರಗಳು. ಅಕ್ಕ ಮಲ್ಲಿಗೆ ಅವಿವಾಹಿತೆ. ತಂಗಿ ಸಂಪಿಗೆಗೆ ಒಂದು ಮಗುವಿದ್ದು ಅವಳ ಪತಿ ತೀರಿಹೋಗಿದ್ದಾನೆ. ಹೆತ್ತ ಮಗುವಿನ ಮೇಲೆ ಅವಳಿಗೆ ಅಂಥ ಕಾಳಜಿಯೇನೂ ಇಲ್ಲ. ಅದರ ಲಾಲನೆ ಪಾಲನೆಗಿಂತ ಹೊರಗಿನ ಓಡಾಟ ವಿನೋದಗಳಲ್ಲಿ ಅವಳಿಗೆ ಹೆಚ್ಚು ಆಸಕ್ತಿ. ಮಗುವನ್ನು ನೋಡಿಕೊಳ್ಳುತ್ತಿರುವುದೆಲ್ಲ ಅಕ್ಕಮಲ್ಲಿಗೆ.

ಮಲ್ಲಿಗೆಯ ಸ್ವಗತವೊಂದರ ಮೂಲಕ ಅವಳು ತನ್ನ ತಂಗಿಯಾದ ಸಂಪಿಗೆಯ ಗಂಡನನ್ನೇ ಪ್ರೀತಿಸುತ್ತಿದ್ದಳೆಂದು ತಿಳಿಯುತ್ತದೆ. ಆದರೆ ಕಾರಣಾಂತರದಿಂದ ತನ್ನ ಪ್ರೀತಿಯನ್ನು ಅವಳು ಸಂಬಂಧಿಸಿದ ಗಂಡಿಗೂ ಸಹ ತಿಳಿಸುವುದಿಲ್ಲ. ಅವನು ಅಲ್ಪ ಕಾಲದಲ್ಲಿಯೇ ತೀರಿಕೊಳ್ಳುತ್ತಾನೆ. ಈಗ ಮಲ್ಲಿಗೆ ಆ ಪ್ರೀತಿಯನ್ನೆಲ್ಲ ಅವನ ಮಗುವಿನ ಲಾಲನೆ ಪಾಲನೆಯಲ್ಲಿ ಸೂರೆ ಮಾಡುತ್ತಾಳೆ. ತನ್ನ ಮಗು ಖಾಯಿಲೆಯಿಂದ ನರಳುತ್ತಿರುವಾಗಲೂ ಹೆತ್ತ ತಾಯಿ ಸಂಪಿಗೆ ಜಾತ್ರೆಯ ಆಕರ್ಷಣೆಗೆ ಒಳಗಾಗಿ ಅಲ್ಲಿಗೆ ಹೋಗುತ್ತಾಳೆ. ಅಲ್ಲಿಂದ ಬರುವಾಗ ಮಗುವಿಗೆ ಒಂದೆರಡು ಆಟಿಕೆ ಸಾಮಾನು ತಂದರೆ ತಾಯಿಯ ಪ್ರೀತಿ ತೋರಿಸಿದಂತೆ ಎಂದು ಅವಳ ಲೆಕ್ಕ. ಅವಳು ಜಾತ್ರೆಯ ಸಂಭ್ರಮ ಮುಗಿಸಿ ಆಟಿಕೆ ಕೊಂಡು ಮನೆಗೆ ಹಿಂತಿರುಗುವ ವೇಳೆಗೆ ಅವಳಿಗಾಗಿ ಆವರೆಗೆ ಹಂಬಲಿಸುತ್ತಿದ್ದ ಮಗು ತೀರಿಕೊಂಡಿರುತ್ತದೆ.

ಇದಿಷ್ಟು ನಾಟಕದ ವಸ್ತು. ಇದನ್ನು ನಿರ್ವಹಿಸಿದ ರೀತಿ ನಾಟಕ ಮಾಧ್ಯಮದ ಅನಿವಾರ್ಯತೆಯನ್ನೇನೂ ಪ್ರಕಟಿಸುವುದಿಲ್ಲ. ಬದಲಾಗಿ ಎರಡು ಪಾತ್ರಗಳಿಗೆ ಒಟ್ಟು ಮಾತನ್ನು ಹಂಚಿ ಹಾಕಿದಂತಿದೆ. ನಾಟಕ ಮಾಧ್ಯಮಕ್ಕೆ ವಿಶಿಷ್ಟವಾದ ಯಾವ ಕೌಶಲವೂ ಇದರಲ್ಲಿ ಕಾಣುವುದಿಲ್ಲ.

'ಹೆಬ್ಬೆರಳು' ಪೈಯವರಿಂದ ರಚಿತವಾದ ಒಂದು ಉತ್ತಮ ಪದ್ಯನಾಟಕ. ಈ ನಾಟಕದ ವಸ್ತು ಏಕಲವ್ಯ ಗುರುದ್ರೋಣರಿಗೆ ತನ್ನ ಹೆಬ್ಬೆರಳನ್ನು ಕಾಣಿಕೆಯಾಗಿ ಸಮರ್ಪಿಸಿದ್ದು. ಮಹಾಭಾರತದ ಆದಿಪರ್ವದ ೧೩೨ನೆಯ ಅಧ್ಯಾಯದಲ್ಲಿ ಬರುವ ಈ ಕಥೆಯನ್ನು ಆಧರಿಸಿ ಕೈಲಾಸಂ, ಗೋವಿಂದ ಪೈ ಮತ್ತು ಕುವೆಂಪು ಮೂವರೂ ನಾಟಕಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಮೊದಲು ಹೊರಬಂದ ನಾಟಕ ಕೈಲಾಸಂ ಅವರ 'ಪರ್‌ಪಸ್' (Purpose). ಇಂಗ್ಲಿಷಿನಲ್ಲಿ ರಚಿತವಾದದ್ದು. ಹೆಬ್ಬೆರಳು ಹೊರಬಂದದ್ದು ೧೯೪೬ರಲ್ಲಿ. ಬೆರಳ್ಗೆ ಕೊರಳ್ ಪುಸ್ತಕರೂಪದಲ್ಲಿ ಪ್ರಕಟವಾಗಿರುವುದು ೧೯೪೭ರಲ್ಲಿ.

ಮೂಲಭಾರತದ ಕಥೆಯನ್ನೇ ಎಲ್ಲರೂ ಬಳಸಿದ್ದರೂ ಅವರಲ್ಲಿ ಅವರು ಕೆಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಪೈಯವರಂತೂ ಅದನ್ನು ಸಮಕಾಲೀನವಾಗಬಲ್ಲ ಹೊಸದೃಷ್ಟಿಯೊಂದಕ್ಕೆ ಅಳವಡಿಸಿಕೊಂಡಿದ್ದಾರೆ. ಮಹಾಭಾರತವು ಏಕಲವ್ಯ ವೃತ್ತಾಂತವನ್ನು ಕಾಣುವ ರೀತಿ ಎಂಥದೆನ್ನುವುದು ದ್ರೋಣ ಪರ್ವದಲ್ಲಿ ಬರುವ ಕೃಷ್ಣಾರ್ಜುನ ಸಂವಾದದಿಂದ ವ್ಯಕ್ತವಾಗುತ್ತದೆ. ಪಾಂಡವರನ್ನು ರಕ್ಷಿಸಲು ತಾನು ಮಾಡಿದ ಕಾರ್ಯಗಳನ್ನು ವಿವರಿಸುತ್ತ ಕೃಷ್ಣ ಹೇಳುತ್ತಾನೆ.

ಜರಾಸಂಧಶ್ಚೇದಿರಾಜೋ ಮಹಾತ್ಮಾ
ಮಹಾಬಾಹುಶ್ಚೈಕಲವ್ಯೋ ನಿಷಾದ:
ಏಕೈಕಶೋಃ ನಿಹತಾಃ ಸರ್ವಏತೇ
ಯೋಗಸ್ತೈಸ್ತ್ವದ್ಧಿತಾರ್ಥಂ ಮಯೈವ

ಅಲ್ಲಿ ಬರುವ ಸಂವಾದದ ಒಟ್ಟು ಅರ್ಥವನ್ನು ಹೀಗೆ ಸಂಗ್ರಹಿಸಬಹುದು. "ಜರಾಸಂಧ ಶಿಶುಪಾಲ. ನಿಷಾದರಾಜನಾದ ಏಕಲವ್ಯ ಇವರು ಮಹಾಬಲರು. ಅವರು ಅಂದೇ ಹತರಾಗದಿದ್ದರೆ ಇಂದು ಭಯಂಕರರಾಗುತ್ತಿದ್ದರು. ಆ ಮಹಾರಥಿಕರನ್ನು ದುರ್ಯೋಧನ ಅವಶ್ಯಕವಾಗಿ ಬಳಸಿಕೊಳ್ಳುತ್ತಿದ್ದ. ಅವರೂ ಸಹ ನಮ್ಮಲ್ಲಿ ನಿತ್ಯದ್ವೇಷಿಗಳಾದುದರಿಂದ ಕೌರವರನ್ನು ಆಶ್ರಯಿಸುತ್ತಿದ್ದರು. ಅವರಲ್ಲಿ ಸತ್ಯವಿಕ್ರಮನಾದ ನೈಷಾಧನಿಗೆ ದ್ರೋಣನನ್ನು ಆಚಾರ್ಯನನ್ನಾಗಿ ಮಾಡಿ ಅವನ ಹೆಬ್ಬೆರಳನ್ನು ಹೋಗಲಾಡಿಸಿದೆ. ಏಕಲವ್ಯನೇನಾದರೂ ಅಂಗುಷ್ಠವನ್ನು ಕಳೆದುಕೊಂಡು ಅಶಕ್ತನಾಗದಿದ್ದರೆ ದೇವ ದಾನವ ರಾಕ್ಷಸರೆಲ್ಲ ಸೇರಿದ್ದರೂ ಅವನನ್ನು ಜಯಿಸಲಾಗುತ್ತಿರಲಿಲ್ಲ. ಇನ್ನು ಮನುಷ್ಯರ ಮಾತೇಕೆ? ಅವನನ್ನು ಯುದ್ಧದ ಮೊದಲು ನಿನ್ನ ಹಿತಕ್ಕಾಗಿ ಕೊಂದೆ".

ಮಹಾಭಾರತದ ಪ್ರಕಾರ ಏಕಲವ್ಯ ಪಾಂಡವರ ಪ್ರಚ್ಛನ್ನ ಶತ್ರು. ಅರ್ಜುನನಿಗಿಂತ ಅವನು ಮೇಲಾದ ವೀರನಾಗಬಾರದೆಂಬ ದೃಷ್ಟಿಯಿಂದ ದ್ರೋಣರು ಅವನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೇಳುತ್ತಾರೆ. ಈ ಘಟನೆ ಕೂಡ ತನ್ನ ಇಚ್ಛೆಯಂತೆಯೇ, ಪಾಂಡವ ರಕ್ಷಣೆಗಾಗಿ. ಆದುದೆಂದು ಮುಂದೆ ಕೃಷ್ಣ ವಿವರಿಸುತ್ತಾನೆ.

ವೀರರಿಬ್ಬರ ನಡುವಿನ ಈ ಸಂಘರ್ಷವನ್ನು ಪೈಯವರು ಎರಡು ಜನಾಂಗಗಳ ನಡುವಿನ ಸಂಘರ್ಷವನ್ನಾಗಿ ರೂಪಿಸಲು ಯತ್ನಿಸಿ ಸಫಲರಾಗಿದ್ದಾರೆ. ಅವರು ಹೆಬ್ಬೆರಳು ನಾಟಕವನ್ನು ಬರೆದದ್ದು ೧೯೪೬ರಲ್ಲಿ. ಅಂದರೆ 'ತಾಯಿ' ರೂಪಾಂತರವನ್ನು ಹೊರತಂದ ಹನ್ನೆರಡು ವರ್ಷಗಳ ನಂತರ. ಈ ಹೊತ್ತಿಗೆ ನಾಟಕ ಮಾಧ್ಯಮವನ್ನು ಕುರಿತ ಅವರ ದೃಷ್ಟಿ ಸಾಕಷ್ಟು ಬೆಳೆದಿರಬೇಕು. ಈ ನಾಟಕವನ್ನು ಅವರು ತಮಗೆ ಮೆಚ್ಚು ಹೊಂದುವ ಪದ್ಯಮಾಧ್ಯಮದಲ್ಲಿ ಬರೆದಿರುವುದು. ಗ್ರೀಕ್ ನಾಟಕದಲ್ಲಿ ಬರುವ ಗೊಂದಳ (Chorus) ವನ್ನು ಪ್ರಯೋಜನಕಾರಿಯಾಗಿ ಬಳಸಿರುವುದು. ನಾಟಕದಲ್ಲಿ ದೃಶ್ಯಗಳು ಒಂದರಮೇಲೊಂದು ಘಟಿಸುವುದು. ತಾಯಿ ನಾಟಕದಲ್ಲಿ ಕಾಣುವಂಥ ದೀರ್ಘಸ್ವಗತಗಳಾಗಲೀ ಮಾತಾಗಲೀ ಎಲ್ಲೂ ಕಾಣದಿರುವುದು. ಮಾತುಗಳೆಲ್ಲ ಪಾತ್ರಗಳ ಭಾವವನ್ನು ನಾಟಕೀಯವಾಗಿ ಹಿಡಿಸುತ್ತ ಮಾತಿನಿಂದ ಮಾತು ಹೊತ್ತಿಕೊಳ್ಳುತ್ತ ಹೋಗುವುದು. ಉಚಿತವಾದ ಉಪಮೆಗಳೂ, ಬಗೆಬಗೆಯ ವಕ್ರೋಕ್ತಿಗಳೂ ಹದವರಿತ ದೇಸಿನುಡಿಯಲ್ಲಿ ಹೆಣೆದುಕೊಂಡು, ಶೈಲಿಗೆ ಒಂದು ಬಗೆಯ ಬಿಕ್ಕಟ್ಟು ಮತ್ತು ಕಾವ್ಯ ಸತ್ವ ಒದಗಿರುವುದು– ಇವನ್ನೆಲ್ಲ ನೋಡಿದಾಗ ಪೈಯವರು ಕಾವ್ಯನಾಟಕವೊಂದರ ಮಾಧ್ಯಮವನ್ನು ಬಳಸುವ ರೀತಿಯನ್ನು ಚೆನ್ನಾಗಿ ಗ್ರಹಿಸಿದ್ದರೆನಿಸುತ್ತದೆ. ಗ್ರೀಕ್ ದುರಂತ ನಾಟಕಗಳ ಪ್ರಭಾವ ಅವರ ಮೇಲೆ ದಟ್ಟವಾಗಿಯೇ ಆಗಿರಬೇಕು. ಮಹಾಭಾರತದ ಕಾಲದಲ್ಲಿಯೇ ಇದ್ದು ಈಗಲೂ ಬೇರೊಂದು ಬಗೆಯಲ್ಲಿ ಉಳಿದು ಬಂದಿರುವ ಆರ್ಯ–ಅನಾರ್ಯ ಭೇದದ ಅನೌಚಿತ್ಯವನ್ನೂ ಅದು ನಮ್ಮ ರಾಷ್ಟ್ರಪ್ರಜ್ಞೆಯನ್ನೇ ನಾಶಮಾಡಿ ದೇಶವನ್ನು ವಿನಾಶದತ್ತ ಕೊಂಡೊಯ್ಯಬಾರದೆಂಬ ಕಳಕಳಿಯನ್ನೂ

ಆ ಬಗೆಯ ನಾಟಕವೊಂದರಲ್ಲಿ ಮೂಡಿಸಿಕೊಡಲು ಪೈ ಈ ಪ್ರಯತ್ನಕ್ಕೆ ಕೈಹಾಕಿದರೆನ್ನಿಸುತ್ತದೆ. ಇಷ್ಟಾದರೂ ಅವರು ಗ್ರೀಕ್ ರುದ್ರ–ನಾಟಕಗಳಂತೆ ಇಲ್ಲಿ ಮಾನವ ಪಾತ್ರಗಳ ಜೊತೆ ದೇವತೆಗಳನ್ನು ಬೆರೆಸಲು ಹೋಗಿಲ್ಲ. ಮಹಾಭಾರತದಂಥ ಪುರಾಣ ಕೃತಿಯಿಂದ ಆಯ್ದ ವಸ್ತುವಿನಲ್ಲಿ ದೇವಪಾತ್ರಗಳನ್ನು ತರಲು ಅವಕಾಶವೇನೋ ಇತ್ತಾದರೂ ಮನುಷ್ಯ ಮನುಷ್ಯರ ನಡುವಿನ ಸಂಬಂಧ ಸಂಘರ್ಷಗಳನ್ನೇ ಅತ್ಯಂತ ತೀವ್ರವಾಗಿ ಚಿತ್ರಿಸುವುದು ಅವರ ಉದ್ದೇಶವಾಗಿರಬೇಕು. ಈಗಿರುವಂತೆ ಈ ನಾಟಕ ಹೊರಮೈಯಲ್ಲಿ ಆ ಕಾಲದ ಸಮಸ್ಯೆಯೊಂದನ್ನು ಚಿತ್ರಿಸುವ ನಾಟಕವಾಗಿರುತ್ತ ಒಳತಿರುಳಿನಲ್ಲಿ ಭಾರತದ ಸದ್ಯದ ವರ್ಣಸಮಸ್ಯೆಯ ಸ್ವರೂಪವನ್ನು ಧ್ವನಿಸುವ ಒಂದು ಸಮಕಾಲೀನ ನಾಟಕವೂ ಆಗಿದೆ.

ನಲವತ್ತು ಪುಟಗಳ ಈ ನಾಟಕ ನಾಲ್ಕು ನೋಟಗಳಾಗಿ ವಿಭಾಗಗೊಂಡಿದೆ. ಹಸ್ತಿನಾವತಿ ಮತ್ತು ಅದರಿಂದ ಹತ್ತು ಗಾವುದ ದೂರದ ಗಂಗೆಯ ತಡಿಯಲ್ಲಿರುವ ಭಿಲ್ಲರ ಒಂದು ಹಳ್ಳಿಗಾಡು– ಈ ಎರಡು ಸ್ಥಳಗಳನ್ನು ನಾಟಕದ ದೃಶ್ಯಗಳು ಒಳಗೊಳ್ಳುತ್ತವೆ. ಆರಂಭದ ನೋಟ ಈ ಹಳ್ಳಿ ವೀರ ಭಿಲ್ಲರ ವಾಸಸ್ಥಳವೆನ್ನುವುದನ್ನು ದೃಶ್ಯವತ್ತಾಗಿ ಮನಗಾಣಿಸಿಕೊಡುವ ವಿವರಗಳೊಂದಿಗೆ ತೆರೆಯುತ್ತದೆ. ಬಿಲ್ಗಾರಿಕೆಯಲ್ಲಿ ಆಗಲೇ ನಿಪುಣನಾಗಿರುವ ಹುಡುಗ ಏಕಲವ್ಯ ಹರ್ಷಚಿತ್ತನಾಗಿ ಬಿಲ್ಲಿನ ಹೆದೆ ಮೀಟುತ್ತ ಸಿಳ್ಳಿನಲ್ಲಿ ಹಾಡುತ್ತ ಬರುತ್ತಿದ್ದಾನೆ. ಆರ್ಯ–ಅನಾರ್ಯರ ನಡುವೆ ಘಟಿಸಿದ ಕಲಹವೊಂದರಲ್ಲಿ ಏಕಲವ್ಯನ ತಂದೆ ತೀರಿಕೊಂಡಿದ್ದು ಈಗ ಅವನ ತಮ್ಮನಾದ ಹಿರಣ್ಯಧನು ಪಾಳ್ಯದ ಒಡೆತನವನ್ನೂ ಏಕಲವ್ಯನನ್ನೂ ನೋಡಿಕೊಳ್ಳುತ್ತಿದ್ದಾನೆ. ಏಕಲವ್ಯನ ಮಾತುಗಳಲ್ಲಿ ಅವನ ಮನಸ್ಸನ್ನು ಕಾಡುತ್ತಿರುವ ವಿಚಾರ ಪ್ರಕಟವಾಗುತ್ತದೆ. ದ್ರೋಣ ಕುರುಕುಲದ ರಾಜಕುಮಾರರನ್ನು ಶಸ್ತ್ರವಿದ್ಯೆಯಲ್ಲಿ ತರಬೇತು ಮಾಡುತ್ತಿರುವುದು ಅವನಿಗೆ ತಿಳಿದಿದೆ. ತಂದೆಯಿಂದ ಕಲಿತದ್ದನ್ನು ದ್ರೋಣನಿಂದ ಬೆಳೆಸಿಕೊಳ್ಳುವ ಅಪೇಕ್ಷೆ ಅವನದು. ಏಕಲವ್ಯನ ಮುಖದಿಂದ ದ್ರೋಣನ ಮಾತು ಬರುತ್ತಿದ್ದಂತೆಯೇ ಗೊಂದಳ ದ್ರೋಣನ ಶರಕೌಶಲ್ಯದ ಬಗ್ಗೆ ಹೊಸ ಸಂಗತಿಗಳನ್ನು ಹೇಳುತ್ತದೆ. ಕುರುರಾಜಕುಮಾರರು ಬಾಣಕ್ಕೆ ಗುರಿಯಾಗಿಟ್ಟುಕೊಂಡಿದ್ದ ಚಕ್ಕಳದ ಜಿಂಕೆ ಬಾವಿಗೆ ಬಿದ್ದದ್ದು. ಬಾಣಗಳ ಸರಪಳಿಯನ್ನೇ ಹೆಣೆದು ದ್ರೋಣ ಅದನ್ನು ತೆಗೆದುಕೊಟ್ಟದ್ದು. ಭೀಷ್ಮ ಅವನನ್ನು ಆ ರಾಜಕುವರರಿಗೆಲ್ಲ ಶಸ್ತ್ರವಿದ್ಯಾಚಾರ್ಯನನ್ನಾಗಿ ಮಾಡಿದ್ದು ಇವನ್ನೆಲ್ಲ ಗೊಂದಳದಿಂದ ತಿಳಿದ ಏಕಲವ್ಯ

ಆಃ ತೊಗಲ ಚಿಗರಿಯನ್ನಾಂತೆತ್ತಿದನೆ ? ಅವನೆ
ಬಿಲ್ಲಾಯ್ತುರಲಿ ಗಡ ಪಿನಾಕಿ ! ಗಡ ಭಾರ್ಗವಂ
ಕಲಿವೊಡವನೊಳೆ ಕಲಿಯಬೇಕಸ್ತ್ರವಿದ್ಯೆಯಂ

ಎಂಬ ನಿಶ್ಚಯಕ್ಕೆ ತಲಪುತ್ತಾನೆ. ಆದರೆ ಅವನ ಚಿಕ್ಕಪ್ಪನ ಪ್ರತಿಕ್ರಿಯೆಯೇ ಬೇರೆ. ಆರ್ಯ–ಅನಾರ್ಯರ ನಡುವಿನ ಭೇದ ವೈಷಮ್ಯಗಳನ್ನು ಅವನು ಬಲ್ಲ. ಆ ಹಿನ್ನೆಲೆ ಯಲ್ಲಿ ಮಗನ ತೀರ್ಮಾನ ಶುದ್ಧ ಹುಚ್ಚು ಎನಿಸುತ್ತದೆ ಅವನಿಗೆ. ದ್ರೋಣನಲ್ಲಿಗೆ ಹೋಗಲು ಏಕಲವ್ಯ ಅನುಮತಿ ಬೇಡಿದಾಗ–

..........................ಎಲೆ ಮರುಳೆ
ಮೊದಲೆ ಆರ್ಯಂ ಮೇಲೆ ಪಾರ್ವನಾತಂ, ನಮಗೆ
ಕರಿಯ ಭಿಲ್ಲರನಾರ್ಯರಿಗೆ ವಿದ್ಯೆ ಹೇಳುವನೆ ?

ಎಂದು ಅವನ ಆಸೆಯ ಅನೌಚಿತ್ಯವನ್ನು ವಿವರಿಸುತ್ತಾನೆ. ಹೀಗೆ ನಾಟಕದ ಆರಂಭ ದಲ್ಲಿಯೇ ಆರ್ಯ–ಅನಾರ್ಯರ ನಡುವಿನ ವರ್ಣವೈಷಮ್ಯದ ಪ್ರಸ್ತಾಪವಾಗಿ ಅದರ ಮೇಲೆ ಒತ್ತು ಬೀಳುತ್ತದೆ. ಏಕಲವ್ಯ ದ್ರೋಣನ ಬಗ್ಗೆ ಮಾತಾಡುವಾಗ ಅವನನ್ನು ಪ್ರಶಂಸೆಯ ದನಿಯಲ್ಲಿ 'ಭಾರ್ಗವ' ಎನ್ನುತ್ತಾನಷ್ಟೆ. ಭಾರ್ಗವನಿಂದ ಅವನ ಶಿಷ್ಯ ನಾದ ಕರ್ಣನಿಗೆ ಒದಗಿದ ದುರಂತ ಎಂಥದು ಎನ್ನುವುದನ್ನು ಮನಸ್ಸಿಗೆ ತಂದು ಕೊಂಡಾಗ ಮುಂದೆ ದ್ರೋಣನಿಂದ ಏಕಲವ್ಯನಿಗೆ ಒದಗಬಹುದಾದ ದುರಂತವನ್ನೂ ಆ ಹೋಲಿಕೆ ಧ್ವನಿಸಬಲ್ಲುದಾಗಿದೆ ಎನಿಸುತ್ತದೆ. ತಿಳಿಹೇಳಿದರೂ ಮಾತಿಗೆಲ್ಲ ಉತ್ತರ ಕೊಡುತ್ತ ತನ್ನ ಹಟವನ್ನೇ ಮುಂದೆ ಮಾಡುವ ಏಕಲವ್ಯನಿಗೆ ಹಿರಣ್ಯಧನು

ಬೇಡವನ ತಳ್ಳಿ ನಿನಗಾಂ ಕಲಿಸಿದುದೆ ನಿನ್ನ
ಸಾಸಿರವಧಿಗೆ ಸಾಕು..........................
..........................ಎಳೆಯಲೊಲ್ಲದ ಎತ್ತು
ಮಿಣಿಯು ಮೇಲ್ಬೀಳ್ವಂತೆ ಬರಿದೆ ಮೂರದಿರೆಮ್ಮ
ಬಿಲ್ಲುಗಾರಿಕೆಯನಿದೊ. ತನ್ನ ಕಂಪರಿಯದಾ
ಕಸ್ತೂರಿಯ ಮಿಗದಂತೆ ನಿನ್ನ ಶಕ್ತಿಯನರಿಯ
ದಿಂತಲೆಯಲಾಟಿಸುವೆ....................

ಎನ್ನುತ್ತಾನೆ. ಅನಾರ್ಯರು ಆರ್ಯರಿಗೆ ಯಾವ ರೀತಿಯಲ್ಲಿಯೂ ಕಡಮೆಯೇನಿಲ್ಲ. ತಮ್ಮ ಶಕ್ತಿಯ ಅರಿವು ಅವರಿಗಿಲ್ಲ ಅಷ್ಟೆ. ಗುಣಶಕ್ತಿಗಳಲ್ಲಿ ಮೇಲಾಗಿದ್ದೂ ಸ್ವಪ್ರಜ್ಞೆ ಇಲ್ಲದ ಕಾರಣದಿಂದ ನಾವು ಆರ್ಯರಿಗೆ ಕಡಮೆಯೆನಿಸಿ ಬಾಳುತ್ತಿದ್ದೇವೆ ಎಂದು ಅವನ ಮತ. ಈ ವಿಚಾರ ನಾಟಕದ ಮುಖ್ಯ ಆಶಯದ ಪ್ರಧಾನ ಎಳೆಗಳಲ್ಲಿ ಒಂದಾಗಿದ್ದು ನಾಟಕದ ಎಲ್ಲ ಘಟನೆಗಳ ಮೂಲಕ ಧ್ವನಿತವಾಗುತ್ತ ಹೋಗುತ್ತದೆ. ಅನಾರ್ಯರಿಗೆ ತಮ್ಮ ಬಗ್ಗೆ ಕೀಳರಿಮೆ ಇರುವಂತೆಯೇ ಆರ್ಯರಿಗೆ ಅವರ ಬಗ್ಗೆ ತಿರಸ್ಕಾರವಿದೆ. ಹಾಗೆಂದೇ

……………………ಬಿದಿರ ಹಿಂಡಿಗೆ ಕಲ್ಲ–
ನೆಚ್ಚು ನಗುವೆಗ್ಗರೆಂದೆಮ್ಮ ನಗುವಾರ್ಯರಾ
ನೆರವಹುದೊ ನಾ ನಂಬೆ । ನಿನ್ನ ಕುತ್ತಿಗೆಗವಂ
ಕೊಂಬುವೆರೆಯೊತ್ತದಿರೆ ನನ್ನ ಹೆಸರಂ ಮಗಚು
ಕಡ್ಡಿ ಮುರಿದಿದೊ ಪೇಳ್ವೆ ನಿನಗಲ್ಲಿಗಯ್ದುದಿರು
ಕನದ ಬತ್ತಕೆ ಗೋಣೆಯಾಂಪೆ ನೀ, ಕೇಳವಂ
ತಲೆಗೆ ಕೈಯಾಗಿಸದಿರಂ ನಿನ್ನ…………………

ಎಂದು ಹಿರಣ್ಯಧನು ಎಚ್ಚರಿಸುತ್ತಾನೆ. ಆದರೆ ಏಕಲವ್ಯ ಇದಕ್ಕೆಲ್ಲ ಮಣಿಯುವವನಲ್ಲ. ಗೊಂದಳವು ಅವನ ಛಲಕ್ಕೇ ಪುಷ್ಟಿಕೊಡುತ್ತದೆ. ಹಸ್ತಿನಾವತಿಗೆ ಹೋಗಲು ಚಿಕ್ಕಪ್ಪನಿಂದ ಅನುಮತಿ ಪಡೆದ ಗಳಿಗೆ ಅವನನ್ನು ಹಿಡಿಯುವವರಿಲ್ಲ.

ಗಜ ಪುರಕಾಂ ಹೋಗುವೆ ಗುರುವಿಗೆ ಬಾಗುವೆ ಕಲಿವೆನವರೊಳಾಂ
ಬಿಲುವಿದ್ದೆ
ಈ ಬಯಕೆ ಏವರಂ ನೆರೆಯದಾವರಂ ನನಗಕಟಾ ಬಾರದು ನಿದ್ದೆ

ಎಂದು ಸಿಳ್ಳುಹಾಕುತ್ತಾ, ಕುಣಿಯುತ್ತಾ ಏಕಲವ್ಯ ಹೊರಡುತ್ತಾನೆ. ಹೀಗೆ ಗೊಂದಳ, ಹಿರಣ್ಯಧನು, ಏಕಲವ್ಯರನ್ನು ಬಳಸಿಕೊಂಡು ಮೊದಲನೋಟ ಮುಗಿಯುತ್ತದೆ.

ಎರಡನೆಯ ನೋಟ ಏಕಲವ್ಯ, ಗೊಂದಳ, ದ್ರೋಣರನ್ನು ಬಳಸಿ ಸಾಗುತ್ತದೆ. ದ್ರೋಣ ತನ್ನ ಶಿಷ್ಯರ ಸಾಮರ್ಥ್ಯವನ್ನು ಮೆಚ್ಚಿ ಮಾತನಾಡುತ್ತಿದ್ದಾನೆ. ಎಲ್ಲರೂ ವೀರರೇ. ಆದರೆ ಅರ್ಜುನ "ಮೇಲುಗಳ ಮೇಲು, ಸರ್ವಸ್ವರದೊಳೋಂಕಾರ". ಹೊಂಗೆಯ ಮರದಲ್ಲಿ ಅರೆಮರೆಯಾಗಿ ಅಡಗಿಸಿಟ್ಟಿದ್ದ ಕೃತಕ ಶಕುನಿ ಪಕ್ಷಿಯ ಕಂಠವನ್ನು ಅವನು ಕತ್ತರಿಸಿ ಕೆಡವಿದ ಬಗೆ, ತಾನು ಗಂಗೆಯಲ್ಲಿ ಮಿಂಯುತ್ತಿರುವಾಗ ಮೊಸಳೆ ಕಾಲನ್ನು ಹಿಡಿಯಲು ಮಿಳಮಿಳನೆ ನೋಡುತ್ತಿರುವ ಉಳಿದ ಶಿಷ್ಯರೆದುರು ಅರ್ಜುನ ಅದನ್ನು ತನ್ನ ಶರಲಾಘವದಿಂದ ಕೊಚ್ಚಿ ಹಾಕಿದ ರೀತಿ– ಇದೆಲ್ಲವನ್ನೂ ಅವನು ತುಂಬ ಮೆಚ್ಚಿದ್ದಾನೆ. ಅರ್ಜುನನಿಂದ ತನ್ನ ಕೀರ್ತಿ ದಿಗಂತಖ್ಯಾತಿಯಾಗುವುದೆಂದು ಸಂತೋಷದಿಂದಿದ್ದಾನೆ. ಆ ಹೊತ್ತಿಗೆ ಏಕಲವ್ಯ ಅವನಲ್ಲಿಗೆ ಬರಲಿರುವುದನ್ನು ಗೊಂದಳ ಅವನಿಗೆ ತಿಳಿಸುತ್ತದೆ. ಅದಕ್ಕೆ ದ್ರೋಣನ ಉತ್ತರ :

ನಿನ್ನೆ ಕಂಡಿಹೆನವನ ಚಾಪಾಗಮವ ಕಲಿವ
ನಂತೆ ! ನಾನದನವಗೆ ಕಲಿಸಬೇಕಂತೆ ! ಏ–
ನುದ್ಧಟಿ ನಿಷಾದಗಮಮಾ ಧನುರ್ವೇದವೇ ?
ಕ್ಷತ್ರದಾರಕರ ಸಹವಾಸದೊಳೆ ಶಿಕ್ಷಣವೆ
ಕುರುವೃದ್ಧರೇನೆನ್ನರೆನಗೆ ? ಹಾ ನಾನೊಲ್ಲೆ

ಎನ್ನುತ್ತಾನೆ. ಏಕಲವ್ಯ ತನ್ನ ಬಳಿ ವಿದ್ಯೆ ಕಲಿಯುವೆನೆಂದು ಕೇಳುವುದೇ ಉದ್ಧಟತನ. ಅದರಲ್ಲಿಯೂ ರಾಜಕುಮಾರರ ಜೊತೆ ಅವನಿಗೆ ಶಿಕ್ಷಣವೆ ?

ಆದರೆ ದ್ರೋಣನ ವಿರೋಧ ನಿಜವಾಗಿ ವೈಯಕ್ತಿಕವಾದದ್ದಲ್ಲ. ರಾಜ್ಯಪಾಲನಾದ ಭೀಷ್ಮನಿಂದ ಇದಕ್ಕೆ ಒಪ್ಪಿಗೆ ಸಿಗುವುದಿಲ್ಲವೆನ್ನುವುದೇ ಅವನಿಗಿರುವ ನಿಜವಾದ ಅಡ್ಡಿ. ಆ ಮಾತಿನ ಜೊತೆಗೇ 'ಹಾ ನಾನೊಲ್ಲೆ' ಎಂಬ ಮಾತೂ ಬಂದು ಬಿಡುತ್ತದೆ. ಕುರುಕುಮಾರರಲ್ಲಿಯೂ ಧರ್ಮರಾಯನನ್ನು ಬಿಟ್ಟು ಉಳಿದವರು ಅವನ ಜೊತೆ ವಿದ್ಯೆ ಕಲಿಯಲು ಸಮ್ಮತಿ ತೋರುತ್ತಿಲ್ಲ. ಹೀಗೆ ಹೇಳುತ್ತಿರುವಾಗ ಏಕಲವ್ಯನೇ ಬಂದು ನಮಸ್ಕರಿಸುತ್ತಾನೆ. ವಿದ್ಯೆ ಕಲಿಸೆಂದು ಪ್ರಾರ್ಥಿಸುತ್ತಾನೆ.

ನೀ ಭಿಲ್ಲಶಾವಕಂ ನೀನನಾರ್ಯ ಕಿಶೋರ
ನಿನಗೆ ಪಂಚಮವೇದವಂ ಕಲಿಸಲಾಸ

ಎಂದು ದ್ರೋಣನ ಉತ್ತರ. ಏಕಲವ್ಯ ಅದಕ್ಕೆ ಕೊಂಚ ತಬ್ಬಿಬ್ಬಾದರೂ

ಅಂತೆನೆ ಅನಾರ್ಯರು ಮನುಷ್ಯರಲ್ಲವೆ ಜೀಯ ?

ಎಂದು ಪ್ರತಿ ಕೇಳುತ್ತಾನೆ. ಆಗ ದ್ರೋಣನ ಬಾಯಿಂದ ಹೊರಬರುತ್ತದೆ. ಆರ್ಯ–ಅನಾರ್ಯರ ನಡುವಿನ ಮೇಲು ಕೀಳುಗಳ ಅಂತರದ ಕಲ್ಪನೆ. ಅನಾರ್ಯರೂ ಮನುಷ್ಯರೇ, ನಿಜ. ಆದರೆ ಶಾರ್ದೂಲ ಮಾರ್ಜಾಲಗಳೆರಡೂ ಮೃಗಗಳಾಗಿಯೂ ಭಿನ್ನವಾಗಿರುವಂತೆ ಅವರೂ ಭಿನ್ನರು. ಗರುಡ ಕಾಗೆಗೆ ತನ್ನ ವಿಶಿಷ್ಟ ಬಗೆಯ ಆಕಾಶ ಚಲನೆಯನ್ನು ಕಲಿಸಿಕೊಡುವನೆ ? ಹುಲಿ ಬೆಕ್ಕಿಗೆ ತನ್ನ ಲಂಘನ ರೀತಿಯನ್ನು ಕಲಿಸುವುದೆ ?

....................ಮೊದಲೊಳಾಂ
ಬ್ರಾಹ್ಮಣಂ ವರ್ಣಧರ್ಮವ ವಧಃ ಪಾತಿಸಲಿ
ಶಾಸ್ತ್ರವಂ ಗಂಗೆಗೆಸೆಯಲಿ ? ದ್ವಿಜರ ವಿದ್ಯೆಯಂ
ಭಿಲ್ಲಗೊರೆಯಲಿ ? ಮೇಲೆ ಕ್ಷತ್ರೋಪಜೀವಿಯಾಂ
ವರ್ಣ ಸಂಕರವಾಗದಂತೆ ಪಾಲಿಪ ರಾಜ
ನೀತಿಗಾಂ ವ್ಯಾಘಾತ ಒಡ್ಡಲಿ ? ವೃಥಾ ರಾಜ–
ರಪಕರುಣೆ ಸಂಪಾದಿಸಲಿ ? ಭಿಲ್ಲರಿಗೆ ವಿಪ್ರ
ರಾಚಾರ್ಯತೆಯ ಸಮಾಜವೆ. ಸಂಪ್ರದಾಯವೆ ನಿ
ಷೇಧಿಸುತ್ತಿರಲಾ ಸಮಾಜಾಂಗವಾದ ನಾ
ನುಲ್ಲಂಘಿಸಲಿ ? ಸಾಕು, ಸಾಕು, ಹಾ ಹಾ ಒಲ್ಲೆ.

ಇಷ್ಟು ಕೇಳಿಯೂ ಏಕಲವ್ಯ ತನ್ನ ಛಲ ಬಿಡುವುದಿಲ್ಲ. ಅಲ್ಲದೆ ಪರಿತಪ್ತನಾಗಿಯು ಈ ಹುಡುಗ ದ್ರೋಣನನ್ನೇ ಪೇಚಿಗೆ ಸಿಕ್ಕಿಸುವ ಪ್ರಶ್ನೆ ಕೇಳುತ್ತಾನೆ. ಕಡೆಗೆ ನೀನು ಮೊರ

ಬರುತ್ತದೆ. ಈ ಆಕ್ಷೇಪವೆಲ್ಲ ದ್ರೋಣನದಲ್ಲ. ವೈಯಕ್ತಿಕವಾಗಿ ಅವನಿಗೆ ಈ ಅನಾರ್ಯ ಹುಡುಗನ ಬಗ್ಗೆ ವಿರೋಧವೇನಿಲ್ಲ. ಹಾಗೆಂದೇ ಅವನು ಹೇಳುತ್ತಾನೆ.

ಬೇಡ ಬೇಡೀ ಛಲವ ಮಾಣಯ್ಯ ! ನೀನೆನ್ನ
ಕರ್ತರೀ ಕ್ರಮುಕ ಸ್ಥಿತಿಯನರಿಯೆ ! ಧರ್ಮಸಂ
ಕಟಕೆನ್ನನೀಡುಗೊಳಿಸದಿರಣ್ಣ ! ನಮ್ಮಾರ್ಯ
ಧರ್ಮನಿಯಮಂ ಕಠೋರಂ ಗಡ ! ಕಠೋರತರ
ಮೆಮ್ಮಯ ಸಮಾಜನಿಯಮಂ ! ನಾನತಿಕ್ರಮಿಸೆ.

"ನನ್ನದು ಕತ್ತರಿಯ ನಡುವ ಸಿಕ್ಕಿಕೊಂಡಿರುವ ಅಡಕೆಯ ಸ್ಥಿತಿ. ಆರ್ಯಧರ್ಮದ ನಿಯಮ ಕಠೋರವಾದದ್ದು. ನಮ್ಮ ಸಮಾಜದ ನಿಯಮ ಅದಕ್ಕಿಂತ ಕಠೋರತರ ವಾದದ್ದು. ಅದನ್ನು ನಾನು ದಾಟಲಾರೆ"– ದ್ರೋಣನ ಈ ಮಾತಿನಲ್ಲಿ ಸಮಾಜದ ನಿಷ್ಠುರ ವ್ಯವಸ್ಥೆಯನ್ನು ಮೀರಿ ಬಾಳಲಾಗದ ಅಸಹಾಯಕನ ಭಯದ ದನಿ ಕೇಳು ತ್ತದೆ. ಏಕಲವ್ಯನ ಕೋರಿಕೆ ನಡೆಸಲಾಗದ್ದಕ್ಕೆ ಕಾರಣ ಈ ಭಯವೇ ಹೊರತು ವೈಯಕ್ತಿಕ ಮೇಲು ಕೀಳುಗಳ ಪರಿವೆಯಲ್ಲ. ಹಾಗೆಂದೇ ನನ್ನನ್ನು ಹರಸಿ ಎಂದು ಹುಡುಗ ಕೇಳಿದಾಗ ಕೈಯೆತ್ತಿ

ಕಾಮಿತಾರ್ಥವ ನಿನ್ನ ಪೂರಯಿಸಲೀಶ್ವರಂ !
ಬಿಲ್ಜಾಣನಾಗು ಜಸವಡೆದು ಜಗದಲಿ ಕಂದ !
ಚಿರಕಾಲ ಜೀವಿಸು ! ಶಿವಾಸ್ತೇ ಪಥಾಃ ಸಂತು !

ಎಂದು ಹರಸುತ್ತಾನೆ. ಆ ಆಶೀರ್ವಾದವನ್ನೇ ತನ್ನ ಬಿಲುವಿದ್ಯೆಗೆ ಓನಾಮವಾಗಿ ಸ್ವೀಕರಿಸಿದ ಏಕಲವ್ಯ ದ್ರೋಣನಿಗೆ ನಮಸ್ಕರಿಸಿ ಹೊರಡುತ್ತಾನೆ." ಕಲಿಯು ಮನಸಿರೆ ಕಲಿಸೆ ಸಾಕು ಮಣ್ಣಿನ ಗೊಂಬೆ" ಎಂಬ ಗೊಂದಳದ ಮಾತು ಅವನ ಮನಸ್ಸಿನಲ್ಲಿ ನಟ್ಟು ಹೋಗುತ್ತದೆ.

ನೋಟ ಮೂರರ ಆರಂಭಕ್ಕೆ ಏಕಲವ್ಯ ಧನುರ್ವಿದ್ಯೆಯಲ್ಲಿ ಆಗಲೇ ಪ್ರವೀಣ ನಾಗಿದ್ದಾನೆ. ಅವನ ವಿದ್ಯಾಸಾಮರ್ಥ್ಯವನ್ನು ಗೊಂದಳ ಹಿರಣ್ಯಧನುವಿನೆದುರು ಬಾಯ್ತುಂಬ ಹೊಗಳುತ್ತದೆ. ಗುರುವಿಗೆ ದಕ್ಷಿಣೆಯಿತ್ತು ಬರಬೇಕೆಂದು ಏಕಲವ್ಯನ ಆಸೆ. ಅದಕ್ಕೆ ಚಿಕ್ಕಪ್ಪನ ಅನುಮತಿ ಬೇಡುತ್ತಾನೆ. ಮತ್ತೆ ದ್ರೋಣನ ಬಳಿಗೆ ಹೋಗುವುದು ಒಳಿತಲ್ಲವೆಂದು ಹಿರಣ್ಯಧನುವಿನ ಶಂಕೆ.

ಸಾಲದೇಂ ಕಂಡೆ ಹಾವಿನ ಬಿಲದ ಬಳಿಗಯ್ದಿ
ಸೋರೆಯನ್ನೂದಿದುದೆ ? ಇನ್ನದರೊಳಗೆ ಕೋಲ
ಕುಕ್ಕಿ ಕೆಣಕಬೇಕೆ ? ಕೆಯ್ಗಾಗಕೆಯನೀವೆ !
ಕೈಯ್ಯೆ ಕಾಣಿಕೆ ಕೇಳಲೇವೆ ?

ಎಂದು ಭವಿಷ್ಯ ನುಡಿಯುವಂತೆ ಮಾತಾಡಿಬಿಡುತ್ತಾನೆ. ಅನಾರ್ಯರಿಗೆ ಇಂಥ ವಿದ್ಯೆ ದಕ್ಕಲು ಆರ್ಯರು ಬಿಡುವವರಲ್ಲ ಎಂಬ ಭಾವ ಅವನ ಮನಸ್ಸನ್ನು ಹೊಕ್ಕಿದೆ. ಅದಕ್ಕೆ ಏಕಲವ್ಯ ಕೊಡುವ ಉತ್ತರ ಮಾತ್ರ ನಿರ್ಭೀತ ಭಕ್ತನದು. ಗುರುವೆಂದು ಒಪ್ಪಿದ ಮೇಲೆ ಮುಗಿಯಿತು. ಅವನು ಕೈಯನ್ನೇ ಕೇಳಿದರೆ ತಾನೆ ಏನು?

.................!.........ಕಟಕನೆ ಕೊಡುವೆ
ಬಿಲ್ಲಾವನದೊ ತಾತ ಕೈಯಾತನದೆ! ಆತ
ಬಿಲ್ಗಣೆಯು ಕೇಳಲೊಪ್ಪಿಸುವೆನೆನೆ. ಕೈಯಿದ್ದು
ಲೇಸೇನು? ಹಲ್ಲುದುರೆ ಜಾಯಿಲನ ಗುಣವೇನು?
ಕೇಳಾತನಲಿ ತಂದೆ ಬಿಲುವಿದ್ಯೆ ಕಲಿತಂದೆ
ಇತ್ತೆನವನಿಗೆ ಕೈಯನೊತ್ತೆ, ಇನ್ನಿದು ನನ್ನ
ದಲ್ಲ; ಮರಳೀಯಲಿದ ಬಿಡಿಸಿ ತಹೆ, ಇಲ್ಲದೊಡೆ
ಬಿಟ್ಟುಬಹೆ

ಇಂಥ ನಿಶ್ಚಯದ ಹುಡುಗನನ್ನು ಯಾವ ಭಯ ಬಗ್ಗಿಸಬಹುದು? ಅವನು ಅನುಮತಿ ಪಡೆದು ಹೊರಟು ಹೋಗುತ್ತಾನೆ. ಆ ಹೊತ್ತಿಗೆ ದ್ರೋಣನೇ ರಾಜಕುಮಾರರ ಜೊತೆ ತಮ್ಮ ಗ್ರಾಮಕ್ಕೆ ಬರುತ್ತಿರುವ ಸುದ್ದಿಯನ್ನು ಗೊಂದಳೆ ತಿಳಿಸುತ್ತದೆ.

ನೋಟ ನಾಲ್ಕರ ಆರಂಭ ದ್ರೋಣನ ಸ್ವಗತದಿಂದ ಆರಂಭವಾಗುತ್ತದೆ. ಆರ್ಯ–ಅನಾರ್ಯರ ನಡುವಿನ ಭೇದ ಎಷ್ಟು ಅನಾಹುತಕಾರಿಯಾದದ್ದು ಎನ್ನುವುದು ಈ ಹೊತ್ತಿಗೆ ಅವನಿಗೆ ಮನವರಿಕೆಯಾಗಿದೆ. ಜಾತಿಯ ಅಭಿಮಾನ. ಉತ್ತಮ ಅಧಮರೆಂಬ ಪರಿಗಣನೆ ಆರ್ಯ –ಅನಾರ್ಯ ತಾರತಮ್ಯ ಎಲ್ಲೆ ಮೀರುತ್ತದೆ. ಹಿಂದೆ ಇಂಥ ಭೇದ ಅಷ್ಟಾಗಿ ಇರಲಿಲ್ಲ. ಈಗಲೋ ದ್ವಿಜರು ತಮ್ಮ ವಿದ್ಯೆಯನ್ನು ಇತರರಿಗೆ ಕಲಿಸಲು ಇಚ್ಛಿಸುತ್ತಿಲ್ಲ. ಇದರ ಜೊತೆಗೆ ದೇಶದ ಭವಿಷ್ಯವನ್ನು ಕಾಯ್ದುಕೊಳ್ಳಬೇಕಾದ ಕುರುರಾಜಕುಮಾರರ ನಡುವೆಯೂ ವಿಪರೀತ ಅಸೂಯೆ ಅಸಹನೆ ತಾಂಡವವಾಡುತ್ತಿದೆ. ಈ ಚಿಂತೆಯಲ್ಲಿ ದ್ರೋಣ ಬೇಯುತ್ತಿದ್ದಾನೆ.

ಅಷ್ಟು ಹೊತ್ತಿಗೆ ಅರ್ಜುನನ ಪ್ರವೇಶವಾಗುತ್ತದೆ. ತಮ್ಮ ಬೇಟೆ ನಾಯಿಯ ಬಾಯಿಯಲ್ಲಿ ಏನೂ ಗಾಯವಾಗದಂತೆ ಬಾಣಗಳನ್ನು ಹೊಡೆದು ಅದರ ಬೊಗಳಿಕೆ ನಿಲ್ಲಿಸಿದ ಏಕಲವ್ಯನೆಂಬ ಒಬ್ಬ ಬೇಡರ ಹುಡುಗನನ್ನು ಅವನು ಕಂಡುಬಂದಿದ್ದಾನೆ. ಅವನ ಬಿಲ್ವಿದ್ಯೆಯ ಮೇಲ್ಗಾರಿಕೆ ಕಂಡು ಚಕಿತನಾಗಿದ್ದಾನೆ. ಸಾಲದ್ದಕ್ಕೆ ಆ ಹುಡುಗ ದ್ರೋಣನ ಶಿಷ್ಯನೆಂದು ಅವನಿಗೆ ತಿಳಿದು ಬಂದಿದೆ. "ತಮ್ಮಡಿಯ ಶಿಷ್ಯನೆನೆ ಇನ್ನಾನ ನರ್ಹನೆಂ" ಎಂದು ಅರ್ಜುನ ಖೇದದಿಂದ ನುಡಿಯುತ್ತಾನೆ. ತಾನೇ ಅರಿಯದ ತನ್ನ ಶಿಷ್ಯ ಯಾರು ಎಂದು ದ್ರೋಣನಿಗೆ ಅಚ್ಚರಿ. ದ್ರೋಣನ ಮಣ್ಣಿನ ಮೂರ್ತಿಯನ್ನೇ ಗುರುವೆಂದು ಆರಾಧಿಸಿ ಆ ಭಿಲ್ಲರ ಹುಡುಗ ಇದನ್ನೆಲ್ಲ ಕಲಿತಿ

ದ್ದಾನೆಂದು ತಿಳಿಸುತ್ತದೆ. ಏಕಲವ್ಯನೂ ಕಾಣಿಸಿಕೊಂಡು ದ್ರೋಣರೇ ತನ್ನ ಗುರುವೆಂದು ತಿಳಿಸುತ್ತಾನೆ. ಅಂತೆನಲು ಗುರುದಕ್ಷಿಣೆಯು ನೀಡಬೇಡಾ ಕಂದ? ಎಂದು ದ್ರೋಣ ಕೇಳುತ್ತಾನೆ. ಅದಕ್ಕಾಗಿಯೇ ನಿಮ್ಮಲ್ಲಿಗೆ ಹೊರಟಿದ್ದೆನೆಂದು ತಿಳಿಸಿದ ಏಕಲವ್ಯ ಕಾತರತೆಯಿಂದ

ಹೆಸರಿಸಿರಿ ದೇವ ದಕ್ಷಿಣೆಯು ತಮ್ಮಲಿ ಕಲಿತ
ವಿದ್ಯೆಗೀ ಜೀವವನೆ ಮಾರಿತ್ತೆ.........

ಎನ್ನುತ್ತಾನೆ. ದ್ರೋಣ ನಗುತ್ತ ಹಾಸ್ಯಕ್ಕಾಗಿ ಎಂಬಂತೆ "ಏನೆಂಬೆ ನಿನ್ನ ಬಲಗೈಯ ಹೆಬ್ಬೆರಳನೀ ಎನ ಕಂದ" ಎಂದು ಹೇಳುತ್ತಿರುವಂತೆಯೇ ಆತುರದಿಂದ ಕಾಯುತ್ತಿರುವ ಏಕಲವ್ಯ 'ಇತ್ತೆನಿದೊ' ಎಂದು ಕೂಡಲೇ ಒಂದು ಹೆಡೆದುಂಬಿನಿಂದ ತನ್ನ ಬಲಗೈ ಹೆಬ್ಬೆರಳನ್ನು ತರಿದು ದ್ರೋಣನ ಕಾಲಬುಡದಲ್ಲಿ ಇಡುತ್ತಾನೆ. ಬೆರಳ ಸುತ್ತ ರಕ್ತ ಚೆಲ್ಲವರಿಯುತ್ತದೆ. ಚಕಿತರಾದ ಅರ್ಜುನ ದ್ರೋಣ ನಿಧಾನ ಸಾವರಿಸಿಕೊಳ್ಳುತ್ತಾರೆ.

ಮೂಲಕಥೆಯಲ್ಲಿ ದ್ರೋಣ ಉದ್ದೇಶಪೂರ್ವಕವಾಗಿಯೇ ಹೆಬ್ಬೆರಳನ್ನು ಕೇಳಿದ್ದಾಗಿ ಬರುತ್ತದೆ. ಪೈ ಇಲ್ಲಿ ಕೊಂಚ ಮಾರ್ಪಾಡು ಮಾಡುತ್ತಾರೆ. ದ್ರೋಣ ಮಾತಿಗೊಂದು ಮಾತೆಂಬಂತೆ ಆಡುತ್ತಿದ್ದಾನೆ. ಅವನ ದನಿಯ ಹಿಂದೆ ವಿನೋದದ ಎಳೆಯಿದೆಯೇ ಹೊರತು ಉದ್ದೇಶಿತವಾದ ಸಂಚಿಲ್ಲ. ಆದರೆ ಏಕಲವ್ಯ ತನ್ನ ಉಗ್ರ ನಿಷ್ಠೆಯಲ್ಲಿ ಅದನ್ನು ಕೂಡಲೇ ನಡೆಸಿಬಿಡುತ್ತಾನೆ. ದ್ರೋಣ ಈ ಅಚಾತುರ್ಯಕ್ಕಾಗಿ ದುಃಖಿಸುತ್ತಾನೆ. ಅರ್ಜುನ ಕೂಡ "ಅಕಟಾ ಗೆಳೆಯಾ ಮಹಾ ಸಾಸವೆಸಗಿದೆಯಲ್ಲ" ಎಂದು ವ್ಯಥೆಪಡುತ್ತಾನೆ.

ಹಿರಣ್ಯಧನುವಿನ ಕೋಪಕ್ಕೆ ಪಾತ್ರ ಎಲ್ಲೆಯೇ ಇಲ್ಲ. ಮುಂಚೆನಿಂದಲೇ ಶಂಕೆಗೊಂಡಿದ್ದ ಅವನಿಗೆ ಇದೆಲ್ಲ ಸಂಚಾಗಿಯೇ ಕಾಣುತ್ತದೆ. ಗಾಯದ ಬೆರಳಿಗೆ ಬಟ್ಟೆ ಸುತ್ತುತ್ತಿರುವ ದ್ರೋಣನನ್ನು ಅವನು

ಬಿಲ್ಲೋಜ ಭಿಲ್ಲನಂ ಮುಟ್ಟಿ ಮಡಿಗೆಡದಿರೈ
ನಿಮ್ಮ ಪಟ್ಟೆಯ ಬಟ್ಟೆಯನ್ನವನ ನೆತ್ತರಲಿ
ನನಸಿ ಹೊಲೆಯಿಸದಿರೈ ! ಬೆಂಕಿ ಹಚ್ಚಿಸುತಿನ್ನು
ನೀರಿಗೋಡಾಡುವಿರೆ ? ಈ ಬಗೆಯ ಜಿನದವ
ನ್ನಾರ್ಯರಲ್ಲದನಾರ್ಯರರಿಯರಕಟಾ ! ನೋಡಿ
ನಿಮ್ಮೀ ವಿನೋದದಿಂದೆಮ್ಮ ಜೀವಕೆ ಬಂತು

ಎಂದು ಮುಟ್ಟಿ ಮೂದಲಿಸುತ್ತಾನೆ. ದ್ರೋಣನ ಯಾವ ವಿವರಣೆಯೂ ಅವನಿಗೆ ಸಮಾಧಾನ ತರುವುದಿಲ್ಲ. ಕಡೆಗೆ ಎಚ್ಚರಗೊಂಡ ಏಕಲವ್ಯ ಅವನ ಕಿಡಿನುಡಿಗೆ

ತಾನು ಕ್ಷಮೆ ಕೇಳುತ್ತಾನೆ. ಏನೂ ನಡೆದಿಲ್ಲವೆಂಬಂತೆ ದ್ರೋಣ ಪರಿವಾರವನ್ನೆಲ್ಲ ತಮ್ಮ ಬೀಡಿಗೆ ಔತಣಕ್ಕೆಂದು ಆಹ್ವಾನಿಸುವಂತೆ ಕೇಳುತ್ತಾನೆ. ಮಗನ ನುಡಿದ ಮಾತಿಗೆ ಹಿರಣ್ಯಧನುವಿನ ಕೋಪವೂ ಇಳಿದು ಅವನೂ ದ್ರೋಣರನ್ನು ತಮ್ಮ ಬೀಡಿಗೆ ಆಹ್ವಾನಿಸುತ್ತಾನೆ.

ಹಿರಣ್ಯಧನು ದ್ರೋಣನೊಡನೆ ಮಾತಾಡುವಾಗ "ಯಾವೊಂದು ಕೆಲಸವನ್ನೆ ಸಗಲಿಸಗಿದ ಕೇಡೆ ಕೊನೆಗದಕೆ ಮುಳುವಹುದು" ಎಂದು ಎಚ್ಚರಿಸಿರುತ್ತಾನೆ. ಅವನು ಏಕಲವ್ಯನೊಡನೆ ಹೊರಟಮೇಲೆ ಆ ಮಾತಿನ ಅರ್ಥವೇನೆಂದು ಅರ್ಜುನ ದ್ರೋಣರನ್ನು ಕೇಳುತ್ತಾನೆ. ಅದಕ್ಕೆ ದ್ರೋಣ ಹೇಳುವ ಮಾತು ಬಹಳ ಅರ್ಥಪೂರ್ಣವಾಗಿದೆ. ಆರ್ಯ–ಅನಾರ್ಯ ಭೇದ ಭಾರತದ ಭವಿಷ್ಯಾಕಾಶವನ್ನೆ ಕವಿಯುತಿರುವ ಕಾಳಮೇಘವಾಗುವುದೆಂಬ ಶಂಕೆಯನ್ನು ಅವನು ವ್ಯಕ್ತಪಡಿಸುತ್ತಾನೆ. ಇಬ್ಬರೂ ಒಂದಾಗಬೇಕು: ರಾಷ್ಟ್ರಜೀವನ ಉಜ್ಜ್ವಲವಾಗಬೇಕು ಎಂಬ ಬಯಕೆ ದ್ರೋಣ ಮಾತಿನಲ್ಲಿ ಕಾಣಿಸಿಕೊಳ್ಳುತ್ತದೆ. ಗೊಂದಳ ಕೂಡ

ಹೆಬ್ಬೆರಳ ಹೊರತನ್ಯ ಬೆರಳುಗಳಪೂರ್ಣವೆಂ
ಬಂತನಾರ್ಯರ ವಿನಾ ಆರ್ಯಜಾತಿಯಪೂರ್ಣ
ವೆಂಬ ಸತ್ಯವ ಭಲಾ ತನ್ನ ತರಿದಿತ್ತ ಹೆ–
ಬ್ಬೆರಳಿಂದಕಟ ಸುಟ್ಟಿ ತೋರಿಸಿದನೀ ಹಸುಳೆ

ಎಂದು ಇದೀ ಘಟನೆಗೆ ಅರ್ಥಪೂರ್ಣವಾದ ವ್ಯಾಖ್ಯಾನ ಮಾಡುತ್ತದೆ.

ಕೈಲಾಸಂ ತಮ್ಮ Purpose ನಾಟಕದಲ್ಲಿ ಏಕಲವ್ಯನ ಬಿಲ್ವಿದ್ಯೆಯ ಕಲಿಕೆಗೆ ಒಂದು ಹೊಸ ಉದ್ದೇಶ ಕಲ್ಪಿಸುತ್ತಾರೆ. ತನ್ನ ಸುತ್ತಮುತ್ತ ಇರುವ ಕುರಿ ಜಿಂಕೆಗಳಂಥ ಸಾಧು ಪ್ರಾಣಿಗಳನ್ನು ಕಾಡಿನ ಕ್ರೂರಪ್ರಾಣಿಗಳ ಬಾಯಿಂದ ರಕ್ಷಿಸುವುದು ಅವನ ವಿದ್ಯಾಭ್ಯಾಸದ ಉದ್ದೇಶ. ಕುವೆಂಪು ಅವರೂ ಕೈಲಾಸಂ ಅವರಿಂದ ಪ್ರಭಾವಿತವಾಗಿಯೋ ಏನೋ ಈ ಉದ್ದೇಶವನ್ನು ತಮ್ಮ ಏಕಲವ್ಯನಲ್ಲಿಯೂ ಕಾಣಿಸುತ್ತಾರೆ. ಬೆರಳ್ಗೆ ಕೊರಳ್ ನಾಟಕದ ದ್ರೋಣ ಸಹ ಅಂತಃಕರಣವುಳ್ಳ ಗುಣವಂತನೂ ಆದ ವ್ಯಕ್ತಿಯೇ. ಏಕಲವ್ಯನಿಗೆ ಕುರುಪುತ್ರರ ಜೊತೆಯಲ್ಲಿ ವಿದ್ಯೆ ಕಲಿಸಲು ಅವನು ಇಷ್ಟಪಡುತ್ತಾನೆ. ಅವನ ಪರವಾಗಿ ಮಾತಾಡುತ್ತಾನೆ. ವಿದ್ಯೆ ಕಲಿತು ನಾಳೆ ನಿಮ್ಮ ಸೇವೆಗೇ ಅದನ್ನು ಮುಡಿಪಿಡುತ್ತಾನೆ ಎಂದೂ ಹೇಳುತ್ತಾನೆ. ಆದರೆ ಅರ್ಜುನ 'ಶೂದ್ರನೊಡನೆಮಗೆ ಸಮಚರ್ಯೆ ಸಲ್ಲದು' ಎಂಬ ಮಾತೇ ಗೆಲ್ಲುತ್ತದೆ. ಆಗಲೂ ಏಕಲವ್ಯನಿಗೆ ತನ್ನ ಮನೆಯಲ್ಲಿ ಮಗ ಅಶ್ವತ್ಥಾಮನ ಜೊತೆಯಲ್ಲಿ ವಿದ್ಯೆ ಕಲಿಸಲು ದ್ರೋಣ ಏರ್ಪಾಡು ಮಾಡುತ್ತಾನೆ. ಇದೆಲ್ಲ ದ್ರೋಣನ ಹೃದಯವಂತಿಕೆಗೆ ಸಾಕ್ಷಿ. ಅವನು ಏಕಲವ್ಯನಿಂದ ಕೇಳುವ ಗುರುದಕ್ಷಿಣೆಯ ಹಿಂದೆ ಕೂಡ ಅನ್ನ ಹಾಕಿದವರ ಪರೋಕ್ಷ ಒತ್ತಡ ಇದೆ. ಇಷ್ಟಾದರೂ ಅವನು ಏಕಲವ್ಯನನ್ನು ಪರೀಕ್ಷಿಸುವ ನೆಪದಲ್ಲಿ

ಆಕಾಶದಲ್ಲಿ ಹಾರುತ್ತಿರುವ ಪಕ್ಷಿಯನ್ನು ಹೊಡೆ ಎಂದು ಹೇಳಿ ಅವನನ್ನು ತಪ್ಪಿನಲ್ಲಿ ಕೆಡವಲು ಮಾಡುವ ಸಂಚು ಅರ್ಥವಾಗುವುದಿಲ್ಲ. ಅವನಲ್ಲಿ ಅದು ಒಂದು ಕುಂದಾಗಿಯೇ ತೋರುತ್ತದೆ.

ಮೂರು ನಾಟಕಗಳಿಗೂ ಮೂರು ಪ್ರತ್ಯೇಕ ದೃಷ್ಟಿಗಳಿವೆ. ಗುರುವನ್ನು ಅರ್ಜುನನ ನಿಂದೆಯಿಂದ ಪಾರುಮಾಡುವ ಭರದಲ್ಲಿ ತನ್ನ ಹೆಬ್ಬೆರಳನ್ನು ಕತ್ತರಿಸಿ ಚೆಲ್ಲಿ, ಮರುಗಳಿಗೆಯೇ ಅಸಹಾಯಕ ಪ್ರಾಣಿಗಳನ್ನು ರಕ್ಷಿಸಬೇಕೆಂಬ ತನ್ನ ಜೀವನೋದ್ದೇಶವೇ ವಿಫಲವಾಗಿ ಹೋದುದನ್ನು ಅರಿತು ದುರಂತಕ್ಕೆ ಪಕ್ಕಾಗುವ ಏಕಲವ್ಯ ಕೈಲಾಸಂ ಅವರಲ್ಲಿ ಕಾಣುತ್ತಾನೆ. ಒಂದು ನಿರ್ಮಲ ಬದುಕಿನ ದುರಂತ ಚಿತ್ರಣವಷ್ಟೇ Purpose ನಾಟಕದ ಉದ್ದೇಶ. ಯಾವ ಕಾರಣಕ್ಕೆ ಮಾಡಲಿ, ಯಾವ ನೆಪದಲ್ಲಿಯೇ ನಡೆಸಲಿ, ಮಾಡಿದ ಕರ್ಮ ಮರಿಗೆ ಮರಿ ಇಡುತ್ತ ಹೋಗುತ್ತದೆ— ಎಂದು ಸೂಚಿಸುವುದು ಬೆರಳ್‌ಗೆ ಕೊರಳ್ ನಾಟಕದ ಉದ್ದೇಶ. ಏಕಲವ್ಯನ ಬೆರಳಿಗೆ ದ್ರೋಣನ ಕೊರಳು ಉರುಳುವುದು ಅನಿವಾರ್ಯವೆಂಬಂತೆ ಅದು ಚಿತ್ರಿಸುತ್ತದೆ. ಜೊತೆ ಜೊತೆ ಬಾಳುವ ಮನುಷ್ಯರ ನಡುವಿನ ಮೇಲು ಕೀಳಿನ ಭೇದ ರಾಷ್ಟ್ರವನ್ನೇ ಕಬಳಿಸುವಂಥದು ಎಂದು ಸೂಚಿಸುವುದು ಹೆಬ್ಬೆರಳು ನಾಟಕದ ಉದ್ದೇಶ.

ಹೆಬ್ಬೆರಳು ಪೈಯವರ ಯಶಸ್ವೀ ಸೃಜನಾತ್ಮಕ ಕೃತಿಗಳ ಗುಂಪಿಗೆ ಸೇರುತ್ತದೆ. ವಸ್ತು ಪ್ರಾಚೀನವಾದುದಾಗಿದ್ದು, ಕಥೆಯಿಂದ ಕೂಡಿದ್ದು, ಪದ್ಯಮಾಧ್ಯಮವನ್ನು ಬಳಸಿ ಬರೆಯುವಾಗ ಪೈಯವರ ಬರೆಹ ಸತ್ವಪೂರ್ಣವಾಗುತ್ತ ಹೋಗುತ್ತದೆ. ಗೊಲ್ಗೊಥಾ ವೈಶಾಖಿಗಳ ಯಶಸ್ಸಿಗೆ ಬಹುಶಃ ಇದೇ ಕಾರಣ. ಹೆಬ್ಬೆರಳು ಸಹ, ನಾಟಕವೇ ಆದರೂ ಕಾವ್ಯನಾಟಕ. ಕಾವ್ಯನಡಿಗೆಯದಾದುದರಿಂದಲೂ, ಪುರಾಣವಸ್ತುವಾದುದರಿಂದಲೂ ಪೈಯವರಿಗೆ ಹಳಗನ್ನಡ ಭಾಷೆಯನ್ನು ಬಳಸಲು ಅದು ಅವಕಾಶ ಕೊಡುತ್ತದೆ. ಅವರು ಪಳಗಿಸಿಕೊಂಡ ಲಯದ ಬಗೆ ಬಗೆ ನಡಿಗೆಗಳಿಗೆ ಅನುಕೂಲವಾಗಿ ಒದಗುತ್ತದೆ. ಪೈಯವರಿಗೆ ಹೊಸಗನ್ನಡ ಗದ್ಯಕ್ಕಿಂತ ಹಳಗನ್ನಡ ಪದ್ಯವೇ ಹೆಚ್ಚು ಸಹಜವಾದ ಭಾಷೆ. ಅವರ ಪಾಂಡಿತ್ಯ ಕೃತಕತೆಯ ಭಯವಿಲ್ಲದೆ ಅಲ್ಲಿ ಕಾಣಿಸಿಕೊಳ್ಳಬಹುದು: ಮಾತಿಗೆ ಇನ್ನಷ್ಟು ಬಿಕ್ಕಟ್ಟು ಒದಗಿಸುವ ಒಂದು ಗುಣಾಂಶವೇ ಆಗಿ ಪರಿಣಮಿಸಬಹುದು. ಅಲ್ಲದೆ ಪೈಯವರ ಆಲೋಚನೆಯ ಗತಿ ವಿಶೃಂಖಲವಾದದ್ದು. ಅಡ್ಡಾದಿಡ್ಡಿ ಹರಿಯುವ ಅವರ ಆಲೋಚನೆಗಳನ್ನು ಪದ್ಯದ ನಡಿಗೆ ಒಂದು ನಿಯಂತ್ರಣಕ್ಕೊಳಪಡಿಸುತ್ತದೆ. ಅಲ್ಲಿ ಅದು ಲಯದ ಕಡಿವಾಣದ ಅಂಕೆಯಲ್ಲಿ ಸಾಗಬೇಕಾಗುತ್ತದೆ; ಪದ್ಯರೂಪವೊಂದರ ಅಗತ್ಯಗಳನ್ನು ಮನ್ನಿಸಿ ಮೈದಾಳಬೇಕಾಗುತ್ತದೆ. ಈ ಬಿಗಿ ನಿಯಂತ್ರಣದ ಫಲವಾಗಿಯೇ ಹೆಜ್ಜೆಗೊಮ್ಮೆ ನಾಣ್ಣುಡಿಗಳು, ಗಾದೆಗಳು, ಸೂತ್ರಪ್ರಾಯವಾದ ವಾಕ್ಯಗಳು ಮೈದೋರುವುದುಂಟು. ಹೆಬ್ಬೆರಳು ನಾಟಕದ ಉದ್ದಕ್ಕೂ ಈ ಮಾದರಿಯ ಸೊಗಸಾದ ನಿದರ್ಶನಗಳನ್ನು ಕಾಣಬಹುದು.

ನಿರ್ದಿಷ್ಟ ಲಯದ ನಿಯಂತ್ರಣವೂ ಇಲ್ಲದ, ಹಳಗನ್ನಡ ಪಾಂಡಿತ್ಯದ ಅಗತ್ಯವೂ ಇಲ್ಲದ ಹೊಸಗನ್ನಡದ ಸೃಜನಾತ್ಮಕ ಗದ್ಯದಲ್ಲಿ ಪೈಯವರು ಇಂಥ ಯಶಸ್ಸನ್ನು ಸಾಧಿಸಲಾಗಿಲ್ಲ.

ಚಿತ್ರಭಾನು ಅಥವಾ ೧೯೪೨ ಪೈಯವರ ಸ್ವತಂತ್ರ ಗದ್ಯನಾಟಕ. ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಒಂದು ಘಟನೆಯನ್ನು ಚಿತ್ರಿಸುವ ನಾಟಕ ಇದು. ೧೯೪೨ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಒಂದು ಘಟನೆ ಈ ನಾಟಕ ಬರೆಯಲು ಪ್ರೇರಣೆ ಎಂದು ಪೈ ಹೇಳಿಕೊಂಡಿದ್ದಾರೆ.

ವೇಣು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕ್ರಿಯಾತ್ಮಕ ಪಾತ್ರ ವಹಿಸಿರುವ ಒಬ್ಬ ಯುವಕ. ಅವನ ತಂದೆ ತೀರಿಕೊಂಡಿದ್ದಾನೆ. ಭೂಗತನಾಗಿ ಕೆಲಸ ಮಾಡುತ್ತಿರುವ ವೇಣು ಪೋಲೀಸಿನವರ ಕಣ್ಣು ತಪ್ಪಿಸಿ ತನ್ನ ತಾಯಿ ಮತ್ತು ಭಾವೀಪತ್ನಿ ವಾಸವಾಗಿರುವ ತನ್ನ ಮನೆಗೆ ಬರುತ್ತಾನೆ. ಅವನು ಅಲ್ಲಿಗೆ ಬರುವ ಸುಳಿವು ಪೋಲೀಸಿನವರಿಗೆ ಮುಂಚೆಯೇ ತಿಳಿದಿದೆ. ಮನೆಯಲ್ಲಿ ಅಡಗಿರುವ ಹೊತ್ತಿನಲ್ಲೇ ಅವನನ್ನು ಹಿಡಿಯಲು ಪೋಲೀಸರು ಮನೆಗೆ ನುಗ್ಗುತ್ತಾರೆ. ವೇಣುವಿನ ತಾಯಿಗೆ ಕೊಟ್ಟ ಮಾತಿಗೆ ವಿರುದ್ಧವಾಗಿ ಪೋಲೀಸರು ಅವನನ್ನು ಗುಂಡಿಕ್ಕಿ ಕೊಲ್ಲುತ್ತಾರೆ. ನೊಂದ ತಾಯಿ ಅವರನ್ನು ಶಪಿಸುತ್ತಾಳೆ. ಆ ಶಾಪವೇ ನಿಜವಾಯಿತೋ ಎಂಬಂತೆ ವೇಣುವನ್ನು ಕೊಲ್ಲಲು ಆಜ್ಞೆಯಿತ್ತವನು ಮತ್ತು ಕೊಂದವನು ಇಬ್ಬರೂ ಅಪಘಾತವೊಂದಕ್ಕೆ ಸಿಕ್ಕು ಸಾಯುತ್ತಾರೆ. ತನ್ನ ಶಾಪದಿಂದ ಹೀಗಾಯಿತೇ ಎಂದು ತಾಯಿ ಅವರಿಗಾಗಿ ಮರುಗುವಲ್ಲಿಗೆ ನಾಟಕ ಮುಗಿಯುತ್ತದೆ.

ಸುಮಾರು ಆರು ಪಾತ್ರಗಳನ್ನು ಬಳಸಿ ಬೆಳೆಯುವ ನೂರು ಪುಟಗಳ ಈ ನಾಟಕ ಅಲ್ಲಲ್ಲಿ ದೀರ್ಘ ಸ್ವಗತಗಳಿಂದ. ನಾಡನ್ನು ಕುರಿತ ಆವೇಶಪೂರ್ಣ ಭಾಷಣಗಳಿಂದ, ಅಸಹಜವೂ ಅತಿ ನಾಟಕೀಯವೂ ಆದ ಘಟನೆಗಳಿಂದ ತುಂಬಿದೆ. ನಾಟಕದ ಗತಿ ತುಂಬ ನಿಯಂತ್ರಿತವಾಗಿದ್ದು ಅದರ ಹಿಂದಿರುವ ಪ್ರಯತ್ನ ಎದ್ದು ಕಾಣುತ್ತದೆ. ತನಗೆ ತಾನಾಗಿಯೇ ದುರಂತದತ್ತ ಸಾಗಬಹುದಾಗಿದ್ದ ವಸ್ತುವೊಂದನ್ನು ಆ ದಿಕ್ಕಿಗೆ ಅಸಹಜವಾಗಿ ಓಡಿಸಿಕೊಂಡು ಹೋಗುವುದು ತಿಳಿಯುವಂತಿದೆ. ಭಾಷೆ ಕೂಡ ಕೃತಕವೆನಿಸುವಂತಿದೆ. ಒಂದು ಓದುನಾಟಕವಾಗಿ ಕೂಡ ಇದು ಬೇಸರ ತರಿಸುವಷ್ಟು ಘಟನಾಹೀನವಾಗಿದೆ. ರಂಗದ ದೃಷ್ಟಿಯಿಂದಲಂತೂ ತೀರ ಅಸಮರ್ಪಕವಾದದ್ದು ಎನಿಸುತ್ತದೆ.

ಗೋವಿಂದ ಪೈಯವರು ಪ್ರಯೋಗಶೀಲರು. ಈ ಪ್ರಯೋಗಶೀಲತೆಯೇ ಕಾರಣವಾಗಿ ಜಪಾನಿನ ಕೆಲವು ಜನಪ್ರಿಯ 'ನೋ' ನಾಟಕಗಳನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ನಾಟಕಗಳು ರಚನೆಯ ದೃಷ್ಟಿಯಿಂದ ತುಂಬ ಶಿಥಿಲ ಸ್ವರೂಪವಾಗಿದ್ದು ಇವುಗಳ ಯಶಸ್ಸನ್ನು ರಂಗಭೂಮಿಯ ಮೇಲೆ ಪ್ರಯೋಗ ಮಾಡಿಯೇ ತಿಳಿಯಬೇಕು. ಇವುಗಳ ಪ್ರಯೋಗ ಇನ್ನೂ ರಂಗಭೂಮಿಯ ಮೇಲೆ ಆದಂತಿಲ್ಲ.

ಜಪಾನಿನ ನೋ ನಾಟಕಗಳಿಗೆ ಅಡಿಪಾಯ ಹಾಕಿದವರು ಕಾನಾಮಿ ಮತ್ತು ಸೋಆಮಿ ಎಂಬ ಇಬ್ಬರು ತಂದೆಮಕ್ಕಳು. ನೋ ನಾಟಕ ಬಹುಮಟ್ಟಿಗೆ ಸಂಗೀತ ಮತ್ತು ನೃತ್ಯಗಳನ್ನು ಆಧರಿಸಿ ಸಾಗುವ ನಾಟಕ. ಪಾತ್ರಗಳ ನಡುವಿನ ಸಂಭಾಷಣೆ ಇಲ್ಲಿ ತೀರ ಕಡಮೆ. ಈ ನಾಟಕಗಳಿಗೆಲ್ಲ ಒಂದು ಧಾರ್ಮಿಕ ಹಿನ್ನೆಲೆಯೂ ಇರುತ್ತದೆ. ಪ್ರಯೋಗ ಮಾಡುವ ನಿರ್ದೇಶಕನಿಗೆ ವಿಶೇಷ ಸ್ವಾತಂತ್ರ್ಯ ಕೊಡುವಂತೆ ಅವುಗಳಿಗೆ ಒಂದು ಸ್ಥೂಲವಾದ ನಾಟಕದ ಚೌಕಟ್ಟು ಮಾತ್ರ ಇರುತ್ತದೆ. ಒಂದು ರೀತಿಯಾಗಿ ಇವು ಬರೆದ ಕೃತಿಕಾರನ ನಾಟಕಗಳಾಗುವುದಕ್ಕಿಂತ ನಿರ್ದೇಶಕನ ಕೈಯಲ್ಲಿ ಮೈತುಂಬಿ ಕೊಂಡು ಅವನ ನಾಟಕಗಳಾಗುವ ಸಾಧ್ಯತೆಯನ್ನು ಪಡೆದವಾಗಿವೆ. ಈ ದೃಷ್ಟಿ ಯಿಂದಲಾದರೂ ನಮ್ಮ ಸಮರ್ಥ ನಿರ್ದೇಶಕರು ಇವುಗಳನ್ನು ಕೈಗೆತ್ತಿಕೊಳ್ಳಬಹುದು. ಬೇರೇನಲ್ಲದಿದ್ದರೂ ಇದನ್ನು ಪೋಲುವ ಹೊಸ ಪ್ರಯೋಗಗಳತ್ತ ಯೋಚಿಸ ಲಿಕ್ಕಾದರೂ ಇವುಗಳನ್ನು ಗಮನಿಸಬಹುದು. ಪೈಯವರು ಇಂಥ ಎಂಟು ನೋ ನಾಟಕಗಳನ್ನು ಅನುವಾದಿಸಿರುವುದು ಹೊಸ ಪ್ರಯೋಗಗಳಲ್ಲಿ ಅವರಿಗಿದ್ದ ಶ್ರದ್ಧೆ ನಂಬಿಕೆಗಳಿಗೆ ಸಾಕ್ಷಿ.

ಗೋವಿಂದ ಪೈ ಅವರ ಪತ್ರ - ಪ್ರಬಂಧ ಸಾಹಿತ್ಯ

● ಎಸ್. ಓ. ಪಾಟೀಲ

ಪತ್ರ ಸಾಹಿತ್ಯ:

ಸಂಶೋಧನೆಯ ಕ್ಲಿಷ್ಟಕರವಾದ ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಅದರಲ್ಲಿಯೇ ಸದಾಕಾಲ ಸುತ್ತಾಡುವ ವ್ಯಕ್ತಿ ಬಹುಶಃ ಈ ಲೌಕಿಕ ಬದುಕಿನಿಂದ ತೀರ ದೂರ ಉಳಿಯುವ, ತನ್ನದೇ ಜಗತ್ತಿನಲ್ಲಿ ವಿಹರಿಸುವ ಸಾಧ್ಯತೆ; ಅಧಿಕವಾಗಿದೆ. ಆದರೆ ಗೋವಿಂದ ಪೈ ಅವರು ನಿತ್ಯ ಜೀವನದಲ್ಲಿ ಸಂಶೋಧಕನ ನಿಲುವಿನೊಂದಿಗೆ ಆದರ್ಶ ಗೃಹಸ್ಥನ ಸ್ನಿಗ್ಧಸಂಬಂಧಗಳನ್ನು ಬೆಳೆಸಿಕೊಂಡು ಬಂದುದು ಅವರ ಪತ್ರಸಾಹಿತ್ಯದಿಂದ ವ್ಯಕ್ತವಾಗುವ ಅಂಶವಾಗಿದೆ. ಹೀಗಾಗಿ ಗೋವಿಂದ ಪೈ ಅವರ ಸೃಜನಸಾಹಿತ್ಯದಲ್ಲಿ ಅವರ ಪತ್ರಸಾಹಿತ್ಯವೂ ಒಂದು ಪ್ರಮುಖ ಅಂಗವಾಗಿದೆ. ಪರಿಚಿತ–ಅಪರಿಚಿತರಿಂದ ಬಂದ ಪತ್ರಗಳಿಗೆ ಅವರು ತಪ್ಪದೆ, ಒಮ್ಮೊಮ್ಮೆ ಅನಾರೋಗ್ಯದಿಂದಾಗಿ ತಡವಾಗಿ ಯಾದರೂ ಉತ್ತರಿಸದೆ ಇರುತ್ತಿರಲಿಲ್ಲವೆಂದು ತೋರುತ್ತದೆ. ಉಪಲಬ್ಧವಾದ ಕೆಲವು ಪತ್ರಗಳ ಮೂಲಕ ಪೈ ಅವರ ವ್ಯಕ್ತಿತ್ವದ ಪರಿಚಯುವಾಗುವಂತೆಯೇ ಅವರು ಬಲವಾಗಿ ನಂಬಿಕೊಂಡು ಬಂದ ತತ್ವಗಳ ದರ್ಶನವೂ ಆಗುತ್ತದೆ.

ಕವಿಸ್ಮರಣೆ, ಸನ್ಮಾನ ಸಮಾರಂಭ. ನಾಡಹಬ್ಬಗಳಿಂದ ಮೊದಲುಗೊಂಡು ಹಳ್ಳಿಯ ಶಾಲೆಯ ವಾರ್ಷಿಕೋತ್ಸವಗಳವರೆಗಿನ ಸಮಾರಂಭಗಳ ಆಮಂತ್ರಣಪತ್ರಗಳು ಅವರಿಗೆ ಬಂದಾಗ ಅವೆಲ್ಲವುಗಳಿಗೆ ಉತ್ತರಿಸಬೇಕೆಂಬ ಉದಾರಮನೋಭಾವ ಹೊಂದಿದ ಪೈಗಳು ಆ ವ್ರತವನ್ನು ಜೀವನವಿಡಿ ಮುಂದುವರಿಸಿಕೊಂಡು ಬಂದಂತೆ ತೋರುತ್ತದೆ. ಕನ್ನಡದ ಕಾರ್ಯವನ್ನು ಪ್ರೋತ್ಸಾಹಿಸುವ ಧೋರಣೆ ಈ ಸಮಾರಂಭಗಳ ಹಿರಿಮೆ–ಗರಿಮೆಯನ್ನು ಲೆಕ್ಕಿಸದಂತೆ ಮಾಡಿದೆ. ಅವರಿಗಿಂತ ಕಿರಿಯರಾದ ಮಾಸ್ತಿ. ವೀಸಿ ಅವರ ಸನ್ಮಾನ. ಕುವೆಂಪು ಭಾವಚಿತ್ರ ಅನಾವರಣ ಸಮಾರಂಭಗಳ ಬಗ್ಗೆ ಅವರು ಸಂತೋಷ. ವ್ಯಕ್ತಪಡಿಸಿದ್ದಾರೆ. ಅಲ್ಲದೆ 'ನಮ್ಮ ಗುರು–ಹಿರಿಯರನ್ನು ಗೌರವಿಸುವ ಬಗ್ಗೆ ನಾವು ಆಚರಿಸತಕ್ಕ ಯಾವುದೊಂದು ಕಾರ್ಯಕ್ರಮವಿದೆಯೋ ಅದು ಪುಣ್ಯ ಕಾರ್ಯ. ಅದೊಂದು ಆರಾಧನೆ ತಾನೆ? ಎಂದು ನಮ್ಮ ಸನಾತಧರ್ಮ ಸಾರುತ್ತಲಿದೆ. ಈ ಬಗೆಗೆ ನಾವು ಕೈಕೊಳ್ಳಬೇಕಾದ ವಿಷಯಗಳು ಯಾವವೇ ಇರಲಿ. ನಮ್ಮ ಉದ್ದೇಶವಾದರೆ ಒಂದೇ ಆಗಿರಬೇಕು– ಅದು ಸದುದ್ದೇಶ......[೧] ಎಂದು ಸನ್ಮಾನ ಸಮಾರಂಭಗಳನ್ನು ಗೋವಿಂದ ಪೈ ಅವರು ಪುರಸ್ಕರಿಸಿದ್ದಾರೆ.

---

೧ ದೀವಿಗೆ (ಸಂ: ಆರ್. ರಾಮದೇವ ಶೆಣೈ: ಎಂ. ಗೋವಿಂದ ಪೈ ಸ್ಮಾರಕ ನಿಧಿ, ಭಂಡಾರಕರ, ಕಾಲೇಜ. ಕುಂದಾಪುರ (ದ. ಕ.) ೧೯೬೫. ಪು. ೩೬

ಆದರೆ ಮಾನಪತ್ರ, ಸನ್ಮಾನ ಸಮಾರಂಭಗಳು ಅವರನ್ನೇ ಸುತ್ತಿಕೊಳ್ಳುವ ಪ್ರಸಂಗ ಬಂದಾಗ ಅವರ ವ್ಯಕ್ತಿತ್ವದ ದ್ವಂದ್ವ ವ್ಯಕ್ತವಾಗುತ್ತದೆ; ಧೋರಣೆ ಭಿನ್ನವಾಗುತ್ತದೆ. 'ಬರುವ ಮಾರ್ಚ ತಿಂಗಳ ೨೩ನೆಯ ತಾರೀಖಿಗೆ...... ೭೫ ವರ್ಷಗಳು ಮುಗಿಯುತ್ತವೆ. ಸಾಯಲಿಕ್ಕೆ ಹತ್ತಿರ ಹತ್ತಿರವಾಯಿತು, ನನಗೇನು ಅಭಿನಂದನೆಗಳನ್ನೇ ವಗೈರೆ ಮಾಡಬೇಕೆಂದಿಲ್ಲ, ಮಾಡಬಾರದು. ಆ ತಕ್ಕ ಪ್ರೀತಿ ನಮ್ಮ ನಮ್ಮ ಮನಸ್ಸಿನಲ್ಲಿ ಇದ್ದರೆ ಅದೇ ಹೆಚ್ಚು ಏಕೆಂದರೆ ಸರ್ವಾಂತರ್ಯಾಮಿಯಾದ ಶ್ರೀದೇವರು ನಮ್ಮ ಮನಸ್ಸನ್ನು ನೋಡುವನೇ ವಿನಾ ಹೊರಗೆ ಸೂಸುವ ಮಾತುಗಳನ್ನಲ್ಲ.[೧] ಔಪಚಾರಿಕ ಮಾತುಗಳಿಗಿಂತಲೂ ಮನದಾಳದಲ್ಲಿಯ ಭಾವನೆಗಳ ಮೌಲ್ಯವನ್ನು ನಂಬಿದವರು; ಪೈ. ಇಂಥ ಸಮಾರಂಭಗಳು ತಮ್ಮನ್ನೇ ಆವರಿಸುವ ಸಂದರ್ಭದಲ್ಲಿ ಪೈ ಅವರು ಇನ್ನಷ್ಟು ವಸ್ತುನಿಷ್ಠರಾಗಿ ವಿಷಯವನ್ನು ಪರಿಶೀಲಿಸಿ ಔಪಚಾರಿಕೆಗಿಂತ ಅದರ ಹಿಂದಿನ ಭಾವನೆಗಳೇ ಪ್ರಮುಖವೆಂಬ ನಿಲುವನ್ನು ತಲುಪುತ್ತಾರೆ.

ಪೈ ಅವರ ವ್ಯಕ್ತಿತ್ವ ಪ್ರಚಾರ ಆಡಂಬರಗಳಿಗೆ ಹೊರತಾದುದು. ಕೈಕೊಂಡ ಕಾರ್ಯವನ್ನು ಅವಿರತ ನಿಷ್ಠೆಯಿಂದ ಮುಂದುವರಿಸಿಕೊಂಡು ಹೋಗುವ ಶ್ರದ್ಧೆಯನ್ನಿರಿಸಿಕೊಂಡುದುದು. ಹೀಗೆ ನಾನಾಕಡೆಯಿಂದ ಉಪನ್ಯಾಸಗಳಿಗೆ ಬರುತ್ತಿದ್ದ ಕರೆಯನ್ನು ಅವರು ವಿನಯಪೂರ್ವಕ ಅಲ್ಲಗಳೆದಿದ್ದಾರೆ. ಅದರಲ್ಲೂ ತಮಗೆ ಯಾವುದಾದರೊಂದು ಹೊಸ ವಿಚಾರವನ್ನು ಹೇಳುವ ಸಾಧ್ಯತೆ ಇಲ್ಲದಂತೆ ಸಂದರ್ಭದಲ್ಲಿ ಆಗಲೇ ಹೇಳಿದುದನ್ನೇ ಮತ್ತೆ ಮತ್ತೆ ಹೇಳಲು ಅವರ ಮನಸ್ಸು ಸಿದ್ಧವಿರಲಿಲ್ಲ. ಮುದ್ದಣ್ಣನ ಬಗ್ಗೆ 'ಹಿಂದೆ ಬರೆದುದಕ್ಕೆ ಒಂದಕ್ಷರವನ್ನಾದರೂ ಕೂಡಿಸಲಿಕ್ಕೆ ನಾನರಿಯೆ'[೨] ಎಂದೂ, ಮುದ್ದಣ್ಣನನ್ನು ತಾವು ಕಂಡವರಲ್ಲವೆಂದೂ, ತಮಗಿಂತ ಹೆಚ್ಚು ಪರಿಚಯವುಳ್ಳ ಹುರುಳಿ ಭೀಮರಾಯರನ್ನು ಅಧ್ಯಕ್ಷರನ್ನಾಗಿಸಿದರೆ ಎಷ್ಟೋ ಲೇಸು, ಎಂದೂ ಸೂಚಿಸುವಲ್ಲಿ ತಮ್ಮ ಉಪನ್ಯಾಸಗಳ ಬಗ್ಗೆ ಅವರು ಯಾವ ಉತ್ಸಾಹವನ್ನು ತೋರುವದಿಲ್ಲ. ತಮಗಿಂತ ಸಮರ್ಥರಾದವರನ್ನು ಸೂಚಿಸಿ ಸಮಾರಂಭದ ಔಚಿತ್ಯ, ಪ್ರಯೋಜನೆ ಇನ್ನಿಷ್ಟು ಹೆಚ್ಚಾಗುವಂತೆ ನೋಡಿಕೊಂಡಿದ್ದಾರೆ. ಕೆಲವು ಸಂದರ್ಭಗಳಲ್ಲಿ 'ಆರೋಗ್ಯ ಗಾಳಿಗೊಡ್ಡಿದ ಸೊಡರಿನಂತೆ'[೩] ಇರುವುದಾಗಿ ತಿಳಿಸಿ ಸಮಾರಂಭಗಳಿಂದ ದೂರವುಳಿದಿದ್ದಾರೆ. ಮಾನಪತ್ರಗಳನ್ನು ತೂಗುಹಾಕಲು ಮನೆಯ ಗೋಡೆಗಳು ಸಾಲದೆಂದು ಆ ವಿಚಾರವನ್ನು ಕೈಬಿಡಬೇಕೆಂದು ಸಂಘಟಕರ ಮನವೊಲಿಸಿದ್ದಾರೆ.

ಇಷ್ಟೆಲ್ಲ ನಿಮಿತ್ತಗಳನ್ನು ಒಡ್ಡಿಯೂ ಸಮಾರಂಭದಲ್ಲಿ ಪಾಲುಗೊಳ್ಳುವ ಅನಿವಾರ್ಯ ಪ್ರಸಂಗ ಬಂದಾಗ 'ನನ್ನ ಭಾಷಣ ಮಾತ್ರವೇ ಇರಲಿ, ಆಮೇಲೆ ಯಕ್ಷಗಾನ

---

೧ ಅದೇ, ಪತ್ರ ನಂ. ೧ ಪು-೨೬೫.

೨ ಅದೇ, ಪತ್ರ ನಂ. ೮, ಪು-೨೭೦

೩ ಅದೇ, ಪತ್ರ ನಂ. ೧೫, ಪು-೨೭೩

ತಾಳಮದ್ದಲೆ ಅದು, ಇದು ಏನೂ ಇರಬಾರದು'[೧] ಎಂಬ ಕಟ್ಟಪ್ಪಣೆಯನ್ನು ವಿಧಿಸಿದ್ದಾರೆ. ತುಂಬ ಔದಾರ್ಯದಿಂದ, ನಯವಾಗಿ ಉದಾರವಾಗಿ ನಡೆದುಕೊಳ್ಳು ತ್ತಿದ್ದ ಗೋವಿಂದ ಪೈ ಅವರ ವ್ಯಕ್ತಿತ್ವದ ಈ ನಿಷ್ಠುರ ದಿಟ್ಟ ನಿಲುವಿನ ದರ್ಶನವೂ ಅವರ ಪತ್ರಸಾಹಿತ್ಯದಿಂದ ಉಂಟಾಗುತ್ತದೆ.

ಅಕ್ಷರಸ್ಖಾಲಿತ್ಯ ಮತ್ತು ಪದಸ್ಖಾಲಿತ್ಯಗಳನ್ನು ಕಂಡರೆ ಗೋವಿಂದ ಪೈ ಅವರಿಗೆ ಎಲ್ಲಿಲ್ಲದ ಕಸಿವಿಸಿ. ತರುಣ ಲೇಖಕರು ಗೌರವಪೂರ್ವಕ ಕಳಿಸಿದ ಪುಸ್ತಕಗಳನ್ನು ಓದಿ ಅವುಗಳ ಗುಣಾಂಶಗಳನ್ನು ಉದಾರವಾಗಿ ಮೆಚ್ಚಿಕೊಳ್ಳುತ್ತಿದ್ದವರಲ್ಲಿ ಗೋವಿಂದ ಪೈ ಅವರು ಮೊದಲಿಗರು. ಆರೋಗ್ಯ ಸರಿಯಿಲ್ಲದಿರುವಾಗ ಸಂಕ್ಷೇಪ ಪತ್ರಗಳನ್ನು ಬರೆದು ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಅಷ್ಟರಿಂದಲೇ ತೃಪ್ತಿಪಟ್ಟುಕೊಳ್ಳಬೇಕೆಂದು ಸೂಚಿಸಿದ್ದಾರೆ. ಜೊತೆಗೆ ಆ ಕೃತಿಗಳನ್ನು ತಿದ್ದುವ ಅವುಗಳ ಬಗ್ಗೆ ಮಾರ್ಗದರ್ಶನ ಪರ ಮಾತುಗಳನ್ನು ಹೇಳುವ ಪಾತ್ರವನ್ನು ತಾವಾಗಿಯೇ ತುಂಬ ಪ್ರಾಮಾಣಿಕವಾಗಿ, ಜವಾಬುದಾರಿಯಿಂದ ನಯವಾಗಿ ನಿರ್ವಹಿಸಿದ್ದಾರೆ. 'ಸಾಮ್ರಾಟ' ಪದ 'ಸಮ್ರಾಟ' ವೆಂದೂ, 'ನಂತರ' ಸರಿಯಲ್ಲ 'ಅನಂತರ'ವೆಂದೂ 'ಧರ್ಮಂ' ಅಲ್ಲ 'ಧಮ್ಮಂ' ಎಂದೂ ಸರಿಯಾದ ಪದಗಳನ್ನು ಸೂಚಿಸಿದ್ದಾರೆ. 'ನಮ್ಮತ್ತನ' 'ಯುಗಾದಿ' ಎಂಬ ಪದಕ್ಕೆ ಮೈಸೂರತ್ತ ಕಡೆಯಲ್ಲಿರುವ 'ಉಗಾದಿ' ಎಂಬ ರೂಪವನ್ನು ಇಲ್ಲಿಯೂ ಬಳಕೆಯಲ್ಲಿ ತಂದಿರಾ[೨]? ಎಂದು ನಯವಾಗಿ ನೋವಾಗದಂತೆ ಪ್ರಶ್ನಿಸಿದ್ದಾರೆ. ಪದಬಳಕೆಯಲ್ಲಿಯ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಕಾಪಾಡಿಕೊಂಡು ಬರಬೇಕೆಂಬುದು ಪೈಗಳ ಒಲವು. ಪದಪ್ರಯೋಗ ವಿಷಯದಲ್ಲಿ ಪೈಯವರದು ಸಾಂಪ್ರದಾಯಿಕ ದೃಷ್ಟಿ. ಅದನ್ನು ಮೀರುವದನ್ನು ಅವರು ಸಹಿಸರು.

ತಮಗೆ ಬಂದ ಹೊಸ ಪುಸ್ತಕಗಳ ವಿಷಯಕ್ಕೆ ಸಂಬಂಧಪಟ್ಟಂತೆಯೂ ಎಷ್ಟೋ ಅಭಿಪ್ರಾಯಗಳನ್ನು ತಿದ್ದುವ, ಸರಿಪಡಿಸುವ ಕರ್ತವ್ಯವನ್ನು ಅವರು ಸ್ವೀಕರಿಸಿ ಜವಾಬು ದಾರಿಯಿಂದ ನಿರ್ವಹಿಸಿದ್ದಾರೆ. 'ನಿಯೋಗ' ಹಿಂದಿ ಪುಸ್ತಕದ ಅನುವಾದ ಸಂದರ್ಭ ದಲ್ಲಿ ದೀರ್ಘವಾಗಿ ವಿಷಯವನ್ನು ಚರ್ಚಿಸಿದ್ದಾರೆಯಲ್ಲದೆ ಸರಿಯಾದ ವಿಷಯ ನಿರೂಪಣೆಗೆ ಅಗತ್ಯವಾದ ಕ್ರಮವನ್ನು ಸೂಚಿಸಿದ್ದಾರೆ. 'ಕಟ್ಟಳೆಗಳನ್ನು ಕುರಿತು ಓದಿ ತಿಳಿದುಕೊಂಡು ಸಮಾಜದ ಬೆಳವಣಿಗೆಯನ್ನು ಕುರಿತು ಅನುಭವ ಪಡಬೇಕಲ್ಲದೆ ಅವುಗಳನ್ನು ತೀರ ಕುತ್ಸಿತವೆಂದು ನಿಂದಿಸಬಾರದು. ಆ ಬಗ್ಗೆ ನಮ್ಮ ಹಿರಿಯರನ್ನು ಅಲ್ಲಗಳೆಯಬಾರದು. ಇಷ್ಟೇ ![೩] ಎಂದು ವಿಷಯ ಪ್ರತಿಪಾದನೆಯಲ್ಲಿ ಅನುಸರಿಸ ಬೇಕಾದ ಆರೋಗ್ಯಕರ ಕ್ರಮವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

---

೧. ಅದೇ, ಪತ್ರ ನಂ. ೧೩, ಪು–೨೬೨

೨. ಅದೇ, ಪತ್ರ ನಂ. ೧೬, ಪು–೨೬೪

೩. ಅದೇ, ಪತ್ರ ನಂ. ೧೯, ಪು–೨೬೬

ಸೇಡಿಯಾಪು ಕೃಷ್ಣಭಟ್ಟರ 'ಶ್ವಮೇಧ ಕೃತಿಯ ಸೊಬಗನ್ನು ತಿಳಿಸಿ, 'ಹಳ್ಳಿಯ ಬಾಳನ್ನು ಬಣ್ಣಿಸುವ ಈ ಕವಿತೆಗೆ 'ಶ್ವಮೇಧ' ಎಂಬ ಅಷ್ಟೊಂದು ದೊಡ್ಡ ಹೆಸರಾದರೂ ಕಿವಿಗಿಂತ ಓಲೆ ಗಾತ್ರವೆಂಬಂತೆ ತೋರುತ್ತದೆ.[೧] ಎಂದು ಪುಸ್ತಕದ ಹೆಸರಿನ ಔಚಿತ್ಯದ ಬಗ್ಗೆ ತಮ್ಮ ಅನಿಸಿಕೆಗಳನ್ನು ದಾಖಲೆಗೊಳಿಸಿದ್ದಾರೆ. ಆದರೆ ತಮ್ಮ ಅಭಿಪ್ರಾಯವನ್ನೇ ಬೆಂಬಲಿಸಬೇಕೆಂಬ, ಅದೇ ಮಾರ್ಗವನ್ನು ಇತರರು ಅನುಸರಿಸಬೇಕೆಂಬ ಒತ್ತಾಯದ ಬಯಕೆಯನ್ನು ಅವರು ಹೇರುವದಿಲ್ಲ. ಆದ್ದರಿಂದ 'ಹೀಗೆಂಬುದರಿಂದ ಆ ಹೆಸರನ್ನು ತೊರೆದು ಬಿಡಬೇಕೆಂದು ಹೇಳುವವನಲ್ಲ' ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಲೇಖಕರ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟು ಮಾಡದೆ ಸಮರ್ಪಕ ಮಾರ್ಗದತ್ತ ಅವರು ಒಲಿಯುವಂತೆ ಮಾಡುವುದೇ ಅವರ ಗುರಿಯಾಗಿದೆಯಲ್ಲದೆ ತಮ್ಮ ಅಧಿಕಾರವನ್ನು ಪ್ರಸ್ತಾಪಿಸುವುದಲ್ಲ.

ಪತ್ರದಲ್ಲಿ 'ತಾವು ರಚಿಸಿದ ಹಾಡುಗಳನ್ನು ನೋಡಿದೆ. ತಕ್ಕಷ್ಟು ಚೆನ್ನಾಗಿವೆ. ಪ್ರಥಮ ಪ್ರಯತ್ನವಾದರೆ ಒಳ್ಳೆಯದೇ ಸರಿ. ತಮ್ಮನ್ನು ಅಭಿನಂದಿಸುತ್ತೇನೆ. ಬೊಗಳಿ ಬೊಗಳಿ ರಾಗ (ಗಾಯನಕಲೆ) ಎಂದು ಹೇಗೋ ಹಾಗೆಯೇ ಬರೆದು (ಹಾಗೂ ಹರಿದೂ ಪರಿದೂ) ಕವನ ಎಂದೂಕೂಡ. ಹೀಗೇ ಬರೆಯುತ್ತಾ ಹೋಗಿ, ಮನಸ್ಸಿಗೆ ಒಪ್ಪದನ್ನು ಅಲ್ಲಿಗೇ ಪರಿದುಹಾಕಿ ಮುಂದುವರಿಸುತ್ತಿದ್ದರೆ ಮುಂದೆ ಒಳ್ಳೆಯ ಕವಿಗಳಾಗುವಿರಿ[೨] ಎಂದು ಸತತ ಪ್ರಯತ್ನ, ಸಂಯಮ, ಶ್ರದ್ಧೆಗಳು ಉದಯೋನ್ಮುಖ ಕವಿಗಳು ಗಮನಿಸಬೇಕಾದ ಅಗತ್ಯ ಅಂಶಗಳೆಂಬುದನ್ನು ತಿಳಿಸಿ ಧೈರ್ಯದ ಮಾತುಗಳನ್ನು ನೀಡಿದ್ದಾರೆ.

ಸಂಶೋಧನೆಗೆ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳನ್ನು ಪ್ರಶ್ನೋತ್ತರ ರೂಪದಲ್ಲಿ ಗೋವಿಂದ ಪೈ ಅವರೊಂದಿಗೆ ಚರ್ಚಿಸಿದ ಮಹನೀಯರು ಅನೇಕರು. ತಮಗೆ ಸಾಧ್ಯವಿದ್ದಲ್ಲೆಲ್ಲ ಅವರು ವಿವರವಾದ ಉತ್ತರಗಳನ್ನು ನೀಡಿ ಸಮಸ್ಯೆಯ ನಿವಾರಣೆಗೆ ಪ್ರಯತ್ನಿಸಿದ್ದುಂಟು. ಆದರೆ ತಮಗೆ ತಿಳಿಯದ ವಿಷಯದ ಬಗ್ಗೆ, ಅಥವಾ ಬರೆಯಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಯಾವ ಸಂಕೋಚವಿಟ್ಟುಕೊಳ್ಳದೆ ತಮ್ಮ ಅಸಹಾಯಕತೆಯನ್ನು ನೇರವಾಗಿ ತಿಳಿಸುವ ಪ್ರಾಮಾಣಿಕ ವ್ಯಕ್ತಿತ್ವ ಗೋವಿಂದ ಪೈ ಅವರದು. 'ಗುರುತರವೂ, ಗಂಭೀರವೂ ಆದ ಪ್ರಶ್ನೆಗಳಿಗೆ ಯಥೋಚಿತವಾಗಿ ಪತ್ರೋತ್ತರ ಬರೆಯಲಾಗುದಿಲ್ಲ.[೩] ಎಂದು ತಿಳಿಸಲು ಅವರಿಗೆ ಯಾವ ಸಂಕೋಚವೂ ಅಡ್ಡಿ ಬರಲಾರದು, ಪಾಂಡಿತ್ಯದ ಆಡಂಬರ ಅವರಿಂದ ಹಲವು ಮೈಲಿದೂರ.

---

೧. ಅದೇ, ಪತ್ರ ನಂ. ೨೨, ಪು–೨೭೯

೨. ಅದೇ, ಪತ್ರ ನಂ. ೨೯, ಪು–೨೮೩

೩. ಅದೇ, ಪತ್ರ ನಂ. ೩೮, ಪು–೨೯೯

ಪಿರ್ಯಲಕ್ಷ್ಮೀನಾರಾಯಣ ಆಳ್ವ ಅವರ 'ಶ್ರೀರಾಮಶ್ವಮೇಧದ ರಸತರಂಗಗಳು' ಕೃತಿಯ ಬಗ್ಗೆ ಗೋವಿಂದ ಪೈ ಅವರು ಬರೆದ ಅಭಿಪ್ರಾಯ ಗಮನಾರ್ಹವಾಗಿದೆ. 'ನೀವು ಆ ಗ್ರಂಥದಲ್ಲಿ ನಮ್ಮ ಮುದ್ದಣನ ಕೀರ್ತಿಯ ಅಸಾಮಾನ್ಯವಾದ ಸುವರ್ಣದ ಚೌಕಟ್ಟಿಗೆ ಒಪ್ಪುವಂಥಾ ಕೆಲ ಕೆಲ ಸುವರ್ಣದ ಹೂಗಳನ್ನು ಅಲ್ಲಲ್ಲಿ ಕೀಲಸಿರುತ್ತೀರಿ ಎಂದು ನನಗೆನಿಸಿತು. ಈ ಮಾತನ್ನು ಒಪ್ಪುವವರು ಒಪ್ಪಿಕೊಳ್ಳಲಿ, ಒಪ್ಪದವರು ಒಪ್ಪದಿರಲಿ. ಅದು ನನ್ನ ಗೊಡವೆಯಲ್ಲ. ನಾನಾದರೋ ನಮ್ಮ ಮುದ್ದಣನು ಆದಿಪಂಪನ ಪೀಳಿಗೆಯಲ್ಲಿ ಕನ್ನಡ ಸಾಹಿತ್ಯದ ಗದ್ಯಮಹಾಕವಿ ಎನಿಸುತ್ತದೆ'[೧] ಪೈ ಅವರ ಈ ಅಭಿಪ್ರಾಯ ಮುದ್ದಣನ ಬಗೆಗಿನ ಅವರ ಒಲವನ್ನೂ, ಅದನ್ನು ಬೆಂಬಲಿಸುವ ಅಭಿಪ್ರಾಯಗಳ ಬಗೆಗಿರು ಹೆಮ್ಮೆ–ಅಭಿಮಾನ–ಸಂತೋಷವನ್ನೂ ತೋರುತ್ತದೆ. ಬೇರೆಯವರ ಅಭಿಪ್ರಾಯ ಏನೇ ಇದ್ದರೂ ತನ್ನದಕ್ಕೆ ಅಂಟಿಕೊಳ್ಳುವ, ನಿಖರವಾದ ಅಭಿಪ್ರಾಯವನ್ನು ಹೊಂದಿದುದಾಗಿದೆ. ಮುದ್ದಣನ ಬಗೆಗಿನ ಗೌರವ ಮೂಲವಾದ ದೃಷ್ಟಿಕೋನ ಪೈ ಅವರನ್ನು ನಿಯಂತ್ರಿಸುವ ರೀತಿ ಇಲ್ಲಿ ವ್ಯಕ್ತವಾಗಿದೆ.

ನಗರ ಪ್ರದೇಶದಿಂದ ದೂರದ ಹಳ್ಳಿಯಲ್ಲಿ ಕುಳಿತು ಸಂಶೋಧನೆಯಲ್ಲಿ ತೊಡಗಿದ ಪೈ ಅವರು ಅಮೌಲ್ಯವಾದ ಕೆಲ ಗ್ರಂಥಗಳನ್ನೂ, ಪತ್ರಿಕೆಗಳ ಸಂಪುಟಗಳನ್ನೂ ವಾತ್ಸಲ್ಯದಿಂದ ರಕ್ಷಿಸುತ್ತ ಬಂದ ಬಗೆ ಅವರ ಪತ್ರದಿಂದ ವ್ಯಕ್ತವಾಗುತ್ತದೆ. 'ಆ ಸಂಪುಟವು ತಕ್ಕಷ್ಟು ಭಾರವಿದೆ. ಇಲ್ಲಿಂದ ಹೊರಗೆ ಕಳಿಸುವುದಕ್ಕೆ ಮನಸ್ಸು ಸಂಕುಚಿಸುತ್ತದೆ. ಏಕೆಂದರೆ ನನ್ನೊಂದಿಗೆ ಇರುವದು ಅದೊಂದೇ ಪ್ರತಿ. ಅದನ್ನು ಹೊರಗೆ ಕೊಟ್ಟು ಅದು ಮರಳಿ ಮನೆ ಸೇರದಿದ್ದರೆ? ಆದರೂ ತಾವಾದರೋ ಹೊರನಾಡಿಗೆ ಕಳುಹಿಸಿಕೊಡದೆ ಅದರಲ್ಲಿ ತಮಗೆ ಬೇಕಾದ ವಿಷಯವನ್ನು ಸಂಪ್ರತಿಸಿ. ಅದಷ್ಟು ಬೇಗನೆ ನನಗೆ ಮರಳಿ ಕಳುಹಿಸಿ ಕೊಡುವಿರಾದರೆ ತಮಗೆ ಕಳುಹಿಸಿಕೊಡಬಹುದು. ಆ ಕುರಿತು ತಮ್ಮ ಖಂಡಿತವಾದ ಭರವಸೆ ದೊರೆಯುತ್ತಲೇ ಅದನ್ನು ತಮಗೆ ರಜಿಸ್ಟೀರ್ ಬುಕ್‌ಪೋಸ್ಟ್ ದ್ವಾರಾ ಕಳುಹಿಸಿ ಕೊಡುವೆನು'[೨] ಕುಂಟ ನೆಪವೊಡ್ಡಿ ಸಂಚಿಕೆಯನ್ನು ಕಳಿಸುವುದರಿಂದ ತಪ್ಪಿಸಿಕೊಳ್ಳಬಹುದಾಗಿದ್ದರೂ ಹಾಗೆ ಮಾಡದೆ ಪೈ ಅವರು ತಮ್ಮ ಮನದ ಕಳವಳವನ್ನು ಶಬ್ದರೂಪದಲ್ಲಿ ಚಿತ್ರಿಸಿದ್ದಾರೆ. ಅಪರೂಪವಾದ ಸಂಪುಟವನ್ನು ಕಳಿಸಲು ಅವರ ಮನಸ್ಸು ಸಂಕುಚಿಸುವಂತೆಯೇ ಅದರ ಪ್ರಯೋಜನೆ ಪಡೆಯ ಬಯಸುವ ವ್ಯಕ್ತಿಗೆ ಸಹಾಯಮಾಡಲೂ ಹಂಬಲಿಸುತ್ತದೆ. ವ್ಯವಹಾರ ಔದಾರ್ಯಗಳ ಹೊಯ್ದಾಟದಲ್ಲಿ ಇಬ್ಬರಿಗೂ ತೊಂದರೆಯಾಗದಂತೆ ಅದು ಮರಳಿ ಬರುವ ಭರವಸೆ ಸಿಕ್ಕಮೇಲೆ ಅದನ್ನು ಕಳಿಸುವ ತೀರ್ಮಾನ ಕೈಕೊಳ್ಳುವುದು– ಈ ಮಾನಸಿಕ

---

೧. ಅದೇ, ಪತ್ರ ನಂ. ೩೩, ಪು–೨೮೫

೨. ಅದೇ, ಪತ್ರ ನಂ. ೪೭, ಪು–೨೯೮

ಹೊಯ್ದಾಟವೆಲ್ಲವನ್ನು ಸಂಬಂಧಿಸಿದವರ ಗಮನಕ್ಕೆ ತರುವುದು ಅವರ ವ್ಯಕ್ತಿತ್ವದ ಉನ್ನತಿಕೆಗೆ ಮಾದರಿಯಾಗಿದೆ.

ತಮಗೆ ಬಂದ ಕಿರಿಯ ಲೇಖಕರ ಕೃತಿಗಳಿಗೆ ಉದಾರವಾಗಿ ಮೆಚ್ಚುಗೆಯ ಮಾತುಗಳನ್ನು ತಿಳಿಸುತ್ತಿದ್ದುದು ಗೋವಿಂದ ಪೈ ಅವರ ವ್ಯಕ್ತಿತ್ವದ ಒಂದು ಪ್ರಮುಖ ಅಂಶವಾಗಿದ್ದಿತು. ಆದರೆ 'ಮುನ್ನುಡಿ' ಬರೆದುಕೊಡುವ ವಿಷಯದಲ್ಲಿ ಒಂದು ಪತ್ರ ಅವರ ಮನಸ್ಸನ್ನು ತೆರೆದು ತೋರುತ್ತದೆ :

'ಆ ನಾಲ್ಕು ಮಾತುಗಳಿಗೆ ಒಂದೇ ಒಂದು ಶಬ್ದವನ್ನು ಇನ್ನು ಕೂಡಿಸಲಿಕ್ಕಾಗಲಿ, ಅವುಗಳಲ್ಲಿಯ ಒಂದೇ ಒಂದು ಶಬ್ದವನ್ನು ಬದಲಾಯಿಸಲಿಕ್ಕಾಗಲಿ, ಅವುಗಳಲ್ಲಿಯ ಒಂದೇ ಒಂದು ಶಬ್ದವನ್ನು ತೆಗೆದುಬಿಡುವುದಕ್ಕಾಗಲಿ ನಾನು ಸಿದ್ಧನಾಗಿಲ್ಲ. ಇದನ್ನು ಚೆನ್ನಾಗಿ ನೆನವರಿಕೆಯಲ್ಲಿ ಇರಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅದಕ್ಕೆ ಒಪ್ಪುವಿರಾದರೆ ಮಾತ್ರ ಈ ನಾಲ್ಕು ಮಾತುಗಳನ್ನು ಸ್ವೀಕರಿಸಿರಿ. ಇಲ್ಲವಾದರೆ ಅದನ್ನು ಆದ್ಯಂತವಾಗಿ ಬಿಟ್ಟುಬಿಡಿ. ಈ ಮಾತುಗಳನ್ನು ಮರೆಯಬೇಡಿ. ನಾನು ಹೀಗೆ ವಿನಂತಿಸಿಕೊಂಡಿರುವ ಮೇರೆಗೆ ನೀವು ನಡೆದುಕೊಳ್ಳುವಿರೆಂದು ನನಗೆ ಭರವಸೆಯನ್ನು ಕೊಡತಕ್ಕಂತೆ ಒಂದೆರಡು ಪಂಕ್ತಿಗಳನ್ನು, ಈ ಪತ್ರವನ್ನು ಕಂಡಕೂಡಲೇ, ಇದರೊಂದಿಗೆ ಇಟ್ಟು ಕಳುಹಿಸಿರುವ ನನ್ನ ಮೇಲುವಿಳಾಸ ಬರೆದ ಕಾರ್ಡಿನಲ್ಲಿ ಬರೆದು ದಯಮಾಡಿ ತಿಳುಹಿಸಬೇಕಾಗಿ ವಿನಂತಿಸುತ್ತೇನೆ. ದಯಮಾಡಿ ನಿರಾಶಿಸಬಾರದೆಂದೂ ವಿನಂತಿಸುತ್ತೇನೆ. ಈ ಉಪಕಾರದ ಬಗ್ಗೆ ಅನೇಕಾನೇಕ ಧನ್ಯವಾದಗಳು'[೧] ಎಂದು ತಾವು ಬರೆದ ಮುನ್ನುಡಿಯಲ್ಲಿನ ಯತ್‌ಕಿಂಚಿತ್ ಬದಲಾವಣೆಗೂ ಅವರು ಸಿದ್ಧರಿರಲಿಲ್ಲ. ಅಲ್ಲದೆ ಅದರ ಬಗ್ಗೆ ಲೇಖಕರಿಗೆ ಸಮಾಧಾನವೆನಿಸಿರದಿದ್ದರೆ ಇಡಿಯಾಗಿ ಬಿಟ್ಟರೂ ಖೇದವಿಲ್ಲವೆಂದು ತಿಳಿಸಿದ್ದಾರೆ. ಸಂದೇಹಾತೀತವಾಗಿಯೂ. ನಿಷ್ಠುರವಾಗಿಯೂ ಪೈ ಬರೆಯಬಲ್ಲರೆಂಬುದು. ಬರೆಯುತ್ತಿದ್ದರೆಂಬುದಕ್ಕೆ ಇದೊಂದು ನಿದರ್ಶನ ಮಾತ್ರ.

ಪತ್ರಗಳ ಸೀಮಿತ ಪರಿಧಿಯಲ್ಲೂ ವ್ಯಕ್ತಿತ್ವದ ಹಿರಿಮೆ–ಗರಿಮೆಗಳನ್ನು ಚಿತ್ರಿಸುವ ಶಕ್ತಿ ಪೈ ಅವರದು. ದಿ. ಮಂಜಯ್ಯ ಹೆಗ್ಗಡೆಯವರ ಬಗ್ಗೆ ಬರೆದ ಪತ್ರದಲ್ಲಿ[೨] ಅವರ ಹಾಗೂ ಅಮ್ಮೆಂಬಳ ಸುಬ್ರಾಯ ಪೈ ಅವರ ವ್ಯಕ್ತಿತ್ವಗಳು ಒಡಮೂಡಿರುವ ರೀತಿ ಅನನ್ಯವಾಗಿದೆ. ಮಾತನಾಡುವ ಮಂಜುನಾಥರೆಂದೇ ಗುರುತಿಸಲ್ಪಡುತ್ತಿದ್ದ ಮಂಜಯ್ಯ ಹೆಗ್ಗಡೆಯವರ ಶೀಲ ಸತ್ಕಾರ್ಯ. ಸದ್ಗುಣ. ಔದಾರ್ಯಗಳೆಲ್ಲ ಸಂಕ್ಷೇಪತೆಗೆ ಮಾದರಿಯಾಗುವ ರೀತಿಯಲ್ಲಿ ಮೂಡಿ ನಿಂತಿವೆ.

---

೧. ಅದೇ, ಪತ್ರ ಸಂ. ೩೭, ಪು–೨೦೭
೨. ಅದೇ, ಪತ್ರ ಸಂ. ೧೧, ಪು–೨೭೧

ಭಾಷಾವಾರ ರಾಜ್ಯ ಪುನರ್ವಿಂಗಡನೆಯು ಪೈ ಅವರಿಗೆ ಬಲವಾದ ಆಘಾತವಾಗಿ ಪರಿಣಮಿಸಿತು. ಅದನ್ನು ಅವರಷ್ಟು ಗಂಭೀರವಾಗಿ ಪರಿಗಣಿಸಿದವರು ಬೇರಾರೂ ಇರಲಾರರು. ೧–೧೧–೧೯೫೬ರಂದು ಬರೆದ ಪತ್ರದಲ್ಲಿ– 'ಇಂದು ನಮ್ಮ ಹಬ್ಬದ ದಿನ. ಆದರೆ ಇವೊತ್ತು ನಮ್ಮ ತಾಯಿ ಜಿಲ್ಲೆಯ ಜೀವಮಾನದಲ್ಲಿ ಅದೊಂದು ಘೋರವಾದ ಮಹಾದುರ್ದಿನ !!! ಒಂದು ನಮ್ಮ ಕಾಸರಗೋಡು ತಾಲೂಕು ಕೇರಳಕ್ಕೆ ಆಹುತಿಯಾಯಿತು. ಮತ್ತೊಂದು ಕಡೆ ನಮ್ಮ ಜಿಲ್ಲೆಯು ಮಿಕ್ಕು ಪಾಲು ಏಕಮಾತ್ರವಾಗಿ ಸುಸಂಗತವೂ, ಮಂಗಲವೂ ಆಗಿರುವ 'ಕರ್ನಾಟಕ' ಎಂಬ ಹೆಸರಿನ ಪ್ರಾಂತದಲ್ಲಿಲ್ಲ. ಮಹಾಮೈಸೂರೋ, ವಿಸ್ತೃತ ಮೈಸೂರೋ, ವಿಶಾಲ ಮೈಸೂರೋ ಅಥವಾ ಮತ್ತೇನೋ ವಿಲಕ್ಷಣವಾದ ಹೆಸರುಳ್ಳ ಪ್ರಾಂತದಲ್ಲಿ ಸುಗ್ಗಿಸಲ್ಪಟ್ಟಿತು ! ದೇವರು ಏನೇನೋ ದುರವಸ್ಥೆಗಳನ್ನು ತಂದೊಡ್ಡುವನೋ[೧] ಕಾಸರಗೋಡು ಕೇರಳಕ್ಕೆ ಹೋದುದು ಅವರಿಗುಂಟಾದ ಒಂದು ಬಲವಾದ ಆಘಾತವಾದರೆ ಏಕೀಕೃತ ಕರ್ನಾಟಕದ ಕಲ್ಪನೆ ಕೃತಿಯಲ್ಲೂ ಹೆಸರಿನಲ್ಲೂ ಸಾರ್ಥಕವಾಗದಿರುವದು ಇನ್ನೊಂದು ನೋವಾಗಿದೆ. ದೇವರಲ್ಲಿ ಶ್ರದ್ಧೆಯುಳ್ಳ ಅವರು ಈ ದುರವಸ್ಥೆಗೆ ದೇವರನ್ನೇ ಗುರಿಮಾಡುವಲ್ಲಿ ಅತಿಶಯೋಕ್ತಿಯೇನಿಲ್ಲ.

ಕಿರಿಯರಬಗ್ಗೆ ವಾತ್ಸಲ್ಯ, ಪ್ರೀತಿ–ವಿಶ್ವಾಸ. ಅವರಿಗೆ ಪ್ರೋತ್ಸಾಹ ನೀಡಬೇಕೆಂಬ ಮನೋಭಾವದೊಂದಿಗೆ ಅವರ ಆರೋಗ್ಯಕರ ಬೆಳವಣಿಗೆಗೆ ಅಗತ್ಯವಾದ ಗೋವಿಂದ ಪೈ ಅವರಸಲಹೆ–ಸೂಚನೆಗಳು ಕೆಲವು ಪತ್ರಗಳನ್ನೊಳಗೊಂಡಿದ್ದರೆ. ಇನ್ನು ಕೆಲವು ಸಭೆ ಸಮಾರಂಭಗಳಿಗೆ ಶುಭಕೋರಿ, ಹಿರಿಯರ ಗುಣಗೌರವಪರ ಮಾತುಗಳನ್ನು ಒಳಗೊಂಡಿವೆ. ತಮ್ಮ ಸನ್ಮಾನ–ಗೌರವಗಳ ಪ್ರಶ್ನೆಬಂದಾಗ ನಿರಾಸಕ್ತ ಭಾವವನ್ನು ವ್ಯಕ್ತಪಡಿಸುವ ಪೈ ಅವರು ತಮಗೆ ಪ್ರಿಯರಾದ ಗೌರವವುಳ್ಳ ಜನಗಳ ಮನ್ನಣೆಯಲ್ಲಿ ಸಂತೋಷವನ್ನು ಅನುಭವಿಸಿದ ದಾಖಲೆಗಳೂ ಇಲ್ಲಿವೆ. ಉದಾರನೀತಿ, ನಯ–ವಿನಯಗಳನ್ನೊಳಗೊಂಡ ಪತ್ರಗಳಂತೆಯೇ, ನ್ಯಾಯಸಮ್ಮತ, ಶಿಷ್ಟ, ಶಿಸ್ತನ್ನು ಪಾಲಿಸುವಲ್ಲಿ ಕಠೋರ ಮನೋಭಾವವನ್ನು ಪ್ರದರ್ಶಿಸುವ ಪತ್ರಗಳು ಅವರ ವ್ಯಕ್ತಿತ್ವದ ವಿವಿಧ ಅಂಗಗಳನ್ನು ತಿಳಿಯುವಲ್ಲಿ ನೆರವಾಗುವವು. ಮುಖದ ವಿವಿಧ ಭಾವಭಂಗಿಗಳಂತೆಯೇ ಮನದ ಭಾವ–ಭಂಗಿಗಳನ್ನು ನಿರ್ದೇಶಿಸುವ ಗೋವಿಂದ ಪೈಗಳವರ ಪತ್ರಗಳು ವಿಶಿಷ್ಟವಾದುವು. ಪರಿಸರ – ಸಂದರ್ಭಗಳ ಹಿನ್ನೆಲೆಯಲ್ಲಿ ಭಿನ್ನ–ಭಿನ್ನ ವ್ಯಕ್ತಿಗಳೊಂದಿಗೆ ನಿರಾಡಂಬರ ಸಹಜ–ಸರಳ ವ್ಯಕ್ತಿಯ ಪ್ರಾಮಾಣಿಕ ಸಂವೇದನೆಗಳ ವಿನಿಮಯ ಇಲ್ಲಿನ ಪತ್ರಗಳನ್ನು ವ್ಯಾಪಿಸಿದೆ.

ಪ್ರಬಂಧ ಸಾಹಿತ್ಯ :

ಗೋವಿಂದ ಪೈ ಅವರ ಪ್ರಬಂಧದ ಹರಹು ವಿಸ್ತಾರವಾದುದು. ಇತಿಹಾಸ ಸಂಶೋಧನೆ, ಧರ್ಮ, ತತ್ವಜ್ಞಾನ, ಹಳಗನ್ನಡ ಕವಿ–ಕಾವ್ಯ, ಹೊಸಗನ್ನಡ ಮೊದ

೧. ಅದೇ, ಪತ್ರ ನಂ. ೧೨, ಪು–೨೭೧

ಲಾದ ವಿಷಯಗಳನ್ನು ಅನುಸರಿಸಿ ಅದು ವಿವಿಧ ರೂಪದಲ್ಲಿ ಹರಡಿದೆ. ಇವುಗಳಲ್ಲಿನ ಸಂಶೋಧನೆಗೆ ಸಂಬಂಧಿಸಿದ ಪ್ರಬಂಧಗಳನ್ನು ಹೊರತುಪಡಿಸಿ 'ಸಾಹಿತ್ಯಜ್ಞರ ಆತ್ಮ ಕಥನ', 'ಬರಹಗಾರನ ಹಣೆಬರಹ', 'ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ' ಮೊದಲಾದವುಗಳನ್ನು ಮಾತ್ರ ಪ್ರವೇಶಿಸಲು ಮಾಡಿದ ಪ್ರಯತ್ನವಿದಾಗಿದೆ. ವಿಶೇಷ ವಾಗಿ ಸೃಜನಸಾಹಿತ್ಯಕ್ಕೆ ಸಂಬಂಧಪಟ್ಟ ಗೋವಿಂದ ಪೈ ಅವರ ವಿಚಾರಗಳು ಇಲ್ಲಿ ವ್ಯಕ್ತವಾಗಿವೆ.

ಸಾಹಿತ್ಯ ಸ್ವರೂಪದ ಬಗ್ಗೆ ಗೋವಿಂದ ಪೈ ಅವರ ಅಭಿಪ್ರಾಯ ಸ್ಪಷ್ಟವಿದೆ. 'ಸಾಹಿತ್ಯವು ಸತ್ಯಂ ಶಿವಂ ಸುಂದರಂ' ಆಗಿರಬೇಕು. ಇದರಲ್ಲಿ ಮಧುರವೂ, ಲಲಿತವೂ, ಶಾಂತವೂ, ಶೃಂಗಾರವೂ, ಹಾಸ್ಯವೂ, ವೀರವೂ ರುದ್ರವೂ ಮೊದಲಾದ ಗುಣಗಳೆಲ್ಲವೂ ಅಡಕವಾಗಿವೆ. ......ಸಾಹಿತ್ಯದಲ್ಲಿ ಮಾನುಷಿಕವಾದ ಎಲ್ಲದಕ್ಕೂ ಎಡೆ ಇರಬೇಕು. ಕೊನೆಗೆ ಅಶ್ಲೀಲಕ್ಕೂ ಸ್ಥಾನವಿರಬೇಕು.[೧] ಪ್ರಕೃತಿಯಲ್ಲಿರುವುದೆಲ್ಲವೂ ಸಾಹಿತ್ಯದಲ್ಲಿ ಸ್ಥಾನಪಡೆಯಬಹುದೆಂದೂ ಆದರೂ 'ಅಶ್ಲೀಲದ ಸೊಗಡು ಹದಮೀರಬಾರದು. ಅದಕ್ಕೆ ತಕ್ಕ ಮರ್ಯಾದೆ ಇರಬೇಕು. ಎಂಬ ಅಭಿಪ್ರಾಯ ಅವರದು. ಆದರೆ ಕವಿ ಯಾದವನು ಹೆಮ್ಮೆಪಡದೆ ಭುವನಭಾಗ್ಯದಿಂದ ಮಹಾಕೃತಿಗಳು ನಿರ್ಮಾಣವಾಗುತ್ತ ವೆಂದು ತಿಳಿಯಬೇಕೆಂಬುದು ಪೈಗಳ ದೃಷ್ಟಿ. 'ಕವಿಯು ತನ್ನ ದೃಷ್ಟಿಯನ್ನು ತಾರಾ ಪಥದಲ್ಲಿ ನಟ್ಟಿರಬೇಕು. ಆ ಉಚ್ಚೈಸ್ತಮವನ್ನು ಮುಟ್ಟಲಿ, ಮುಟ್ಟದಿರಲಿ ಅದಕ್ಕಿಂತ ಒಂದು ಅಂಗುಲಕ್ಕೆ ಕೆಳಗಿಳಿಸಬಾರದು.[೨] ಕವಿತೆಯ ರಚನೆಯ ವಿಷಯದಲ್ಲಿನ ಪೈಗಳ ಅಭಿಪ್ರಾಯ ಇದಾಗಿದೆ. ವಸ್ತುವಿನ ಹರಹು ವಿಶಾಲವಾದುದದಾರೂ ಅದನ್ನು ದುಡಿಸಿಕೊಳ್ಳುವಲ್ಲಿ ಅನುಸರಿಸಬೇಕಾದ ಕಲೆಗಾರಿಕೆಯನ್ನು ಇಲ್ಲಿ ಅವರು ಸೂಚಿಸಿ ದ್ದಾರೆ. 'ಎಲ್ಲಕ್ಕೂ ಮಿಗಿಲಾಗಿ ಬರಹದಲ್ಲಿ ಹುರುಳಿರಬೇಕು, ತಿಳಿರುಳಿರಬೇಕು. ಸಾಕಷ್ಟು ಮರಳೂ ಇರಬೇಕು. ಅಂದರೆ ಬರಹ ಅಜರಾಮರವಾಗಿ ಬದುಕುತ್ತದೆ".[೩] ಎನ್ನುವಲ್ಲಿಯೂ ಕವಿಯ ಸೃಷ್ಟಿಕಾರ್ಯದ ಮಹತ್ವವನ್ನು ಪೈ ಬೆಂಬಲಿಸುತ್ತಾರೆ.

ಕಾವ್ಯ ನಿರ್ಮಿತಿಗೆ ಕೈಹಾಕುವ ಮುನ್ನ ಕವಿ ಮಾಡಿಕೊಂಡಿರಬೇಕಾದ ಸಿದ್ಧತೆಯ ಬಗ್ಗೆ ಪೈ ಅವರು ತಾವು ಅನುಸರಿಸಿದ ಮಾರ್ಗವನ್ನು ಇತರರಿಗೂ ತೋರಿದ್ದಾರೆ. ಛಂದೋಂಬುಧಿ, ಶಬ್ದಮಣಿದರ್ಪಣ, ಹಳಗನ್ನಡ ವ್ಯಾಕರಣ, ಸೂತ್ರಗಳಲ್ಲಿಯ ಛಂದೋಲಯಲಕ್ಷಣಗಳನ್ನು ಓದಿ ವೃತ್ತ–ಕಂದ–ಷಟ್ಪದಿಗಳ ಲಕ್ಷಣಗಳನ್ನು ಅರಿತು ಜೊತೆಗೆ ಕನ್ನಡದ ಹಿರಿಯ ಕಾವ್ಯಗಳ ಅಧ್ಯಯನ ಮಾಡಿದುದನ್ನು ತಿಳಿಸಿದ್ದಾರೆ.[೪]

---

೧. ದೀವಿಗೆ ಭಾಗ–೨, ಪು–೫

೨. ಅದೇ, ಪು–೨೦

೩. ಅದೇ, ಪು–೨೨

೪. ಅದೇ, ಪು–೧

ಇಂಥ ಸಿದ್ಧತೆಯಿಂದ ಕಾವ್ಯಕೃಷಿಗೆತೊಡಗಿ, ಪ್ರಾಸವಿಟ್ಟು ಕವಿತೆ ಬರೆಯಲಾರಂಭಿಸಿದಾಗ 'ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನನಗೆ ಪದೇ ಪದೇ ಸ್ಫುರಿಸುತ್ತಿತ್ತು. ಆದರೆ ಚೇಳಿನ ಮಂತ್ರಬಾರದೆ ಹಾವಿನ ಗುದ್ದಿನಲ್ಲಿ ಕೈ ಹಾಕಲಾರದೆ ಆ ಬಗ್ಗೆ ಬಲ್ಲವರು ಬೆನ್ನುತಟ್ಟಿದಲ್ಲದೆ ಹಾಗೆ ಬರೆಯಲಿಕ್ಕೆ ಮನಸ್ಸು ಅಳುಕುತ್ತಿತ್ತು[೧] ಆದರೆ ಬಡೋದೆಯಲ್ಲಿದ್ದಾಗ ಹಠಾತ್ತಾಗಿ ಆಗೋದು ಹೋಗುವದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ. ಇನ್ನು ಮೀನ–ಮೇಷ ನೋಡದೆ ಪ್ರಾಸವನೀಗಲೇ ತೊರೆದು ಬಿಡುವುದೇ ನಿಶ್ಚಯಂ[೨], ಎಂದು ಹೊಸಕಾವ್ಯ ಮಾರ್ಗಕ್ಕೆ ನಾಂದಿಯನ್ನು ಹಾಡಿದರು ಗೋವಿಂದ ಪೈ ಅವರು. 'ಕನ್ನಡಕ್ಕೆ ಪ್ರಾಸವೇನು ವೇದವಾಕ್ಯವೂ ಅಲ್ಲ. ಶಾಶ್ವತವೂ ಅಲ್ಲ. ಆದನ್ನು ಬೇಕಾದರೆ ಬೇಕಾದಂತೆ ಬೇಕಾದಾಗ ಬಿಟ್ಟು ಬಿಡಬಹುದು. ಆತ ಏವ ಕಾಲಕ್ಕೆ ತಕ್ಕಂತೆ ರಚನೆಯನ್ನೇ ಅಲ್ಲ, ಛಂದಸ್ಸನ್ನೂ, ವ್ಯಾಕರಣವನ್ನೂ, ಕೂಡ ತನಗೆ ಬೇಕಾದಂತೆ ಮಾರ್ಪಡಿಸಲು, ಸೇರ್ಪಡಿಸಿಯೂ ಕೊಳ್ಳಲಿಕ್ಕೆ ಕವಿಗೆ ಅಧಿಕಾರವಿದೆ'[೩] ಎಂದು ಪೈ ಅವರು ನಿಖರವಾಗಿ ಹೇಳಿದುದನ್ನು ಕನ್ನಡ–ಕಾವ್ಯ ಪರಂಪರೆ ಬೆಳೆದುಬಂದ ಬಗೆಯ ಹಿನ್ನೆಲೆಯಲ್ಲಿ ಗಮನಿಸುವುದಗತ್ಯ. ಕವಿಯ ಸ್ವಾತಂತ್ರ್ಯದ ಬಗೆಗಿನ ಈ ವಿಚಾರಗಳಿಗೆ ಪತ್ರಿಕೆಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಗಳು ಮೂಡಿಬರಬಹುದೆಂದೂ, ಆ ಮೂಲಕ ಈ ವಿಷಯದ ವಿವರವಾದ ಚರ್ಚೆಯಾಗಬಹುದೆಂದು ನಿರೀಕ್ಷಿಸಿದ್ದ ಪೈ ಅವರಿಗೆ ನಿರಾಶೆ ಕಾದಿತ್ತು. ಆದರೂ ಅವರು ಮುಂದಿಟ್ಟ ಹೆಜ್ಜೆಯನ್ನು ಹಿಂದಗೆಯಲಿಲ್ಲ. 'ತೊಟ್ಟ ಬಾಣ ತೊಟ್ಟೇ ಹೋಯಿತು. ಬಿಟ್ಟ ಪ್ರಾಸ ಬಿಟ್ಟೇ ಹೋಯಿತು.' ಕನ್ನಡದ ದ್ವಿತೀಯಾಕ್ಷರ ಪ್ರಾಸವನ್ನು ತೊರೆಯುವ ಮೂಲಕ ಪೈರವರ ಹೊಸ ಹೆಜ್ಜೆಯನ್ನಿರಿಸಿರುವಂತೆಯೇ, ಅಂತ್ಯಪ್ರಾಸ, ಅನುಪ್ರಾಸಗಳನ್ನು ಬಳಸಿ ವೈವಿಧ್ಯತೆಯನ್ನು ಹೆಚ್ಚಿಸಿದರೆಂಬುದನ್ನು ಮರೆಯಲಾಗದು. ಈ ದೃಷ್ಟಿಯಲ್ಲಿ ಪೈ ಅವರು ಕನ್ನಡ ಕಾವ್ಯಕ್ಕೆ ಹೊಸ ದಾರಿಯನ್ನು ತೋರಿದರು.

ಪ್ರಾಸದ ನಿರ್ಭಂಧವನ್ನು ಅಲ್ಲಗಳೆದ ಪೈ ಅವರು ಭಾಷೆಯ ಮೂಲಕ ತನ್ನ ಸಂವೇದನೆಯನ್ನು ಅಭಿವ್ಯಕ್ತ ಪಡಿಸಬೇಕಾದ ಕವಿ ಆ ಭಾಷೆಯ ಸತ್ವವನ್ನು, 'ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವೆಂಬುದನ್ನು ಪ್ರತಿಪಾದಿಸಿದರು. 'ಕೈಲಾದ ಮಟ್ಟಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸಿ ನಮ್ಮ ಶಬ್ದಸ್ತೋಮವನ್ನು ಹೆಚ್ಚಿಸಬೇಕು. ಏಕೆಂದರೆ ಈಗ ಹೊಸ ಹೊಸ ಭಾವನೆಗಳು ಹುಟ್ಟುತ್ತಿರುವಲ್ಲಿ ಅವುಗಳನ್ನು ಯಥಾವತ್ತಾಗಿ ಮೂಡಿಸಲಿಕ್ಕೆ ಹಳೆಯ ಶಬ್ದಸಂಗ್ರಹ ಸಾಲದು.[೪] ಎಂಬುದು ಅವರ ಅಭಿಪ್ರಾಯ. ಇದರೊಂದಿಗೆ 'ಲೋಕದ ಆಯಾ ಪ್ರಧಾನ ಭಾಷೆಗಳ ಅಮೂಲ್ಯ

---

೧. ಅದೇ, ಪು–೨

೨. ಅದೇ, ಪು–೨

೩. ಅದೇ, ಪು–೨–೩

೪. ಅದೇ, ಪು–೨೧

ವಾದ ಗ್ರಂಥಗಳನ್ನು (ಎಲ್ಲವನ್ನಲ್ಲ. ಶ್ರೇಷ್ಠವಾದುವನ್ನು ಮಾತ್ರ) ಕನ್ನಡದಲ್ಲಿ ಅನುವಾದಿಸಬೇಕು...... ಪದ್ಯಗ್ರಂಥಗಳನ್ನು ಕನ್ನಡ ಪದ್ಯರೂಪದಲ್ಲಿ ಅಲ್ಲ, ಗದ್ಯದಲ್ಲಿ ಭಾಷಾಂತರಸಬೇಕು.[೨] ಎಂದು ವಿವಿಧ ಭಾಷೆಗಳ ಶ್ರೇಷ್ಠಕೃತಿಗಳು ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ನೆರವಾಗುತ್ತವೆಂಬುದು ಅವರ ಧೋರಣೆ. ಆದರೆ ಪದ್ಯ ಗ್ರಂಥಗಳನ್ನು ಗದ್ಯದಲ್ಲಿ ಅನುವಾದಿಸಬೇಕೆಂಬ ಅವರ ಅಭಿಪ್ರಾಯ ಪದ್ಯಗ್ರಂಥಗಳ ಅನುವಾದ ಕಷ್ಟಕರವಾದುದೆಂಬ ಭಾವನೆಯಿಂದ ಪ್ರೇರಿತವಾದಂತೆ ತೋರುತ್ತದೆ. ಆದರೆ ಸ್ವತಃ ಪೈ ಅವರು ಇಂಗ್ಲಿಷ್ ಹಾಗೂ ಇತರ ಭಾಷೆಗಳಿಂದ ಕವಿತೆಗಳನ್ನು ಅನುವಾದಿಸಿರುವುದನ್ನು ನೋಡಿದಲ್ಲಿ, ಮೂಲ ಲೇಖಕರ ಅಭಿಪ್ರಾಯಗಳಿಗೆ ಭಾವನೆಗಳಿಗೆ ಅನ್ಯಾಯ ಬಗೆಯಬಾರದೆಂದು ದೃಷ್ಟಿ ಅವರದಾಗಿರುವಂತೆ ತೋರುತ್ತದೆ. ಶ್ರೀಯರಿಗಿಂತ ಪೂರ್ವದಲ್ಲಿಯೇ ಇಂಗ್ಲೀಷ್ ಭಾವಗೀತಗಳ ಅನುವಾದ ಕ್ಷೇತ್ರದಲ್ಲಿ ಕೃಷಿ ಮಾಡಿದ ಪೈ ಅವರ ಹೊಸದೃಷ್ಟಿ, ಸೃಷ್ಟಿಯನ್ನು ಅರಿಯಲು ಈ ಹೇಳಿಕೆ ನೆರವಾಗುತ್ತದೆ.

ಸೃಜನಸಾಹಿತ್ಯಕ್ಕೆ ಸಂಬಂಧಪಟ್ಟ ಇನ್ನೊಂದು ಮಹತ್ವದ ವಿಷಯದ ಮೇಲೆ ಗೋವಿಂದ ಪೈ ಅವರು ಬೆಳಕು ಬೀರಿದ್ದಾರೆ. 'ಕೇವಲ ಶ್ರೇಷ್ಠ ದರ್ಜೆಯ ಕವಿಗಳು ಬರೆದರೆ ಸಾಕಲ್ಲವೆ?' ಎಂಬ ಪ್ರಶ್ನೆ ಯಾವ ಕಾಲಕ್ಕೂ ಎಲ್ಲರನ್ನೂ ಎದುರಿಸತಕ್ಕುದೇ. ಗೋವಿಂದ ಪೈ ಅವರು ಈ ಅಭಿಪ್ರಾಯವನ್ನು ಒಪ್ಪುವ ಮನೋಧರ್ಮದವರಲ್ಲ. 'ಮೇಲ್ತರದ ಕವನಗಳಿಗೂ ಕೆಳತರದವರಿಗೂ ವ್ಯತ್ಯಾಸವಿರುವುದಾದರೂ ಎಷ್ಟು? ಅವರು ಪಿಂಗಾಣಿಯ ಒಡವೆಯಾದರೆ, ಇವರು ಮಣ್ಣಿನ ಒಡವೆ. ಅದು ಸೊಂಪಿಗಾದರೆ ಇದು ತಂಪಿಗೆ. ಮಣ್ಣು ಮಣ್ಣೇ ಪಿಂಗಾಣಿಯಷ್ಟೇ ಜೋಪಾನ ಮಾಡಿದರೆ ಮಣ್ಣಿನ ಒಡವೆಯೂ ಅಷ್ಟೇ ಕಾಲ ಬಂದೀತು.[೩] ಆದುದರಿಂದ ಸಾಹಿತ್ಯ ನಿರ್ಮಿತಿಯಲ್ಲಿಯ ಮೇಲುದರ್ಜೆ, ಕೆಳದರ್ಜೆಯ ಸಾಹಿತ್ಯವೆಂಬ ಭೇದ–ಭಾವ; ಅಲ್ಲಗಳೆಯುವಿಕೆಯಲ್ಲಿ ಅವರಿಗೆ ವಿಶ್ವಾಸವಿಲ್ಲ. ಕಾಲವೇ ಅದರ ಪರೀಕ್ಷೆಯನ್ನು ನಡೆಸುವುದಾಗಿಯೂ, ಅದನ್ನು ಎದುರಿಸಿ ನಿಲ್ಲುವ ಕೃತಿಗಳು ಉಳಿಯುವದರಲ್ಲಿ ಸಂದೇಹವಿಲ್ಲ, ಆದರೆ ಅದಕ್ಕಾಗಿ ಇತರ ಕೃತಿಗಳ ರಚನೆಯನ್ನೇ ಪ್ರಶ್ನಿಸುವುದು ಉಚಿತವಲ್ಲವೆಂಬುದು ಅವರ ಧೋರಣೆ.

ಸೃಜನಸಾಹಿತ್ಯ ಕೃಷಿ ಹಾಗೂ ಸಂಶೋಧನಾ ಮಾರ್ಗಗಳ ಭಿನ್ನ ರೀತಿಯನ್ನು ಪೈ ಅವರು ಸರಿಯಾಗಿಯೇ ಗುರುತಿಸಿದ್ದಾರೆ. 'ಕವಿತಾ ಮಾರ್ಗ ಬೇರೆ, ಸಂಶೋಧನದ ಮಾರ್ಗ ಬೇರೆ. ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಎಳೆಯಿತು...... ವಿಶಿಷ್ಟವಾದ ದೈವಕೃಪೆ ಉಳ್ಳವರು ಅವೆರಡನ್ನೂ ಕೆಯ್ಕೊಂಡು ಪೊತ್ತನ್ನು ಹಿಡಿತದಿಂದ ಬಳಸಿದರೆ ಸವ್ಯಸಾಚಿಸಬಹುದಾದರೂ, ನನ್ನ ಬಗೆಗಾದರೊ ಅವು ಮುಳು

---

೨. ಅದೇ ಪು–೨೧

೩. ಅದೇ, ಪು–೬

ವಾಗಿವೆ. ಪಾಲುಕಾಸಲಿಕ್ಕೂ ಪುರುಳಿ ಹುರಿಯಲಿಕ್ಕೂ ಸರಿಯಾಗದೆ, ಅವನ್ನು ಸರಿಪಡಿಸಲಿಕ್ಕೆ ಯತ್ನಿಸುವಲ್ಲಿ ಒಂದು ಒರೆಯಲ್ಲಿ ಎರಡು ಕತ್ತಿಗಳನ್ನು ಸಿಕ್ಕಿಸಲಿಕ್ಕೆ ಪೇಚಾಡುತ್ತೇನೆ.[೧] ಎಂದಿದ್ದಾರೆ. ಸೃಜನಸಾಹಿತ್ಯ ನಿರ್ಮಿತಿ ಹಾಗೂ ಸಂಶೋಧನಾ ಕಾರ್ಯಗಳು ಅಪೇಕ್ಷಿಸುವ ಭಿನ್ನ ಸಿದ್ಧತೆಗಳು ತೀರ ಪರಸ್ಪರ ವಿರೋಧಿಗಳೇನೋ ಎಂಬಂತಿರುವುದನ್ನು, ಅವೆರಡನ್ನೂ ಅಷ್ಟೇ ಪರಿಣಾಮಕಾರಿಯಾಗಿ ಬಳಸುವಲ್ಲಿ ವೈವಿಧ್ಯಮಯ ವ್ಯಕ್ತಿತ್ವದ ಅಗತ್ಯವೆಂಬುದನ್ನು ಪೈ ಅವರು ಗುರುತಿಸಿದ್ದಾರೆ. ಎರಡೂ ಕ್ಷೇತ್ರದಲ್ಲಿ ಸವ್ಯಸಾಚಿಯಾಗಲೂ ಅವರ ಪೇಚಾಟ ಮುಂದುವರಿದಿದ್ದರೂ ಅವರ ತರುವಾಯದ ಒಲವು ಸಂಶೋಧನ ಕ್ಷೇತ್ರದೆಡೆಗೆ ವಾಲಿದುದು ಸ್ಪಷ್ಟವಿದೆ.

'ಬರಹಗಾರನ ಹಣೆಬರಹ' ಪ್ರಬಂಧದ ಆರಂಭದಲ್ಲಿ ಸಂಪಾದಕರೊಬ್ಬರು ಕಿರಿಯ ಕವಿಯ ಬಗ್ಗೆ ತೋರುವ ಅನಾಸ್ಥೆ ಅಲಕ್ಷ ಮನೋಭಾವವನ್ನು ಕಂಡು ಪೈ ಅವರಿಗೆ ಮರುಕವುಂಟಾಗಿದೆ. ಸಂಪಾದಕರ ತಾತ್ಸಾರದ ಮಾತುಗಳಿಂದ ನೊಂದ ಅವನು ಹೊರಟುಹೋದ. 'ಹಾಗಾದರೆ ನನ್ನ ಲೇಖನದ ಗತಿ ಏನೆಂದು ಅಲ್ಲಿ ಕುಳಿತಲ್ಲಿ ನನ್ನ ತಲೆಗೆ ಏರುತ್ತದೆ, ಚಿಲಕಕ್ಕೆ ಮೊಳಕೈ ತಗಲಿದಂತಾಯಿತು. ಪೆಟ್ಟೆಲ್ಲ ಅವನಿಗಾದರೂ ನೋವೆಲ್ಲ ನನಗಾಯಿತು.[೨] ಲೇಖನ, ಕವನ ಪ್ರಕಟನೆಯ ವಿಷಯ ದಲ್ಲಿನ ತರುಣ ಕವಿಯ ಕಾತುರ, ಆಸಕ್ತಿ, ಹಂಬಲ ಅದಕ್ಕೆ ದೊರೆಯುವ ನಿರುತ್ಸಾಹ ದಾಯಕ ಸಂಪಾದಕರ ಪ್ರತಿಕ್ರಿಯೆ ಪೈ ಅವರಿಗೆ ನೇರ ಹೊರಮೈಗೆ ನೋವನ್ನುಂಟು ಮಾಡಿರದಿದ್ದರೂ ಮನದಾಳದಲ್ಲಿ ಇರಿಯುತ್ತದೆ.

ಲೇಖಕರ ಬಗ್ಗೆ ಸಂಪಾದಕರಿಗೆ ಈ ರೀತಿಯ ತಾತ್ಸರ ಭಾವನೆಯಿರುವದೂ ತಿಳಿದಾಗಲೂ, ಕರ್ನಾಟಕದ ಯಾವ ಯಾವುದೋ ಮೂಲೆಯಿಂದ ಪ್ರಕಟವಾಗುತ್ತಿದ್ದ ಚಿಕ್ಕದೊಡ್ಡ ಪತ್ರಿಕೆಗಳ ಸಂಪಾದಕರು ಲೇಖನ: ಕವನವನ್ನು ಕೋರಿ ಪೈ ಅವರಿಗೆ ಕಾಗದ ಬರೆದಾಗ ಅವರು ನಿರಾಶೆಗೊಳಿಸದೇ ಕವನ: ಲೇಖನಗಳನ್ನು ನೀಡಿ ಸಹಕರಿಸಿ ದವರು. ಆದರೆ ಪ್ರತಿಯಾಗಿ ಸಂಪಾದಕರು ಲೇಖಕರ ಬಗ್ಗೆ ತೋರುವ ಅನಾದರ, ಅಸಡ್ಡೆ ಪೈ ಅವರ ಮುಗ್ಧ ಮನೋಭಾವಕ್ಕೆ ಆಗಾಗ ನೋವನ್ನುಂಟು ಮಾಡಿದೆ. ಒಂದು ಸಂಶೋಧನ ಲೇಖನದಲ್ಲಿ ಒಂದು ಶಾಸನದ ಕಾಲವನ್ನು ಸಕಾರಣವಾಗಿ ನಿರ್ದಿಷ್ಟಪಡಿಸಿ ಅಡಿಬರಹದಲ್ಲಿ ಪೈ ಅವರು ಬರೆದಿದ್ದರೆ, ಯಾವ ಕಾರಣವನ್ನೂ ಕೊಡದೆ 'ಆ ನಿರ್ಧಾರ ಸರಿಯಲ್ಲ' ಎಂದು ಸಂಪಾದಕರು ಒಂದು ಮಾತನ್ನು ನಾಗ ದಂತದಲ್ಲಿ ತೂರಿಸಿದ್ದರು.[೩] ಸಂಶೋಧಕರು ಪರಿಶ್ರಮಪೂರ್ವಕ ಆಧಾರಭೂತವಾಗಿ

---

೧. ಅದೇ, ಪು–೪

೨. ಅದೇ, ಪು–೭

೩. ಅದೇ, ಪು–೧೦

ಮಂಡಿಸಿದ ವಿಚಾರಗಳನ್ನು ಅಲ್ಲಗಳೆಯುವ ಸಂಪಾದಕರ ಅನಿಯಂತ್ರಿತ ಸ್ವಾತಂತ್ರ್ಯದ ಪರಿಣಾಮವನ್ನು ಪೈ ಅವರಂತೆಯೇ ಅನುಭವಿಸುವದಷ್ಟೇ ಲೇಖಕನ ಪಾಲಿನ ಕರ್ತವ್ಯ.

ವಿಶೇಷ ಸಂಚಿಕೆಗಳನ್ನು ಪ್ರಕಟಿಸಲು ಮುಂದಾದ ಸಂಪಾದಕರ ಧೋರಣೆಯೂ ಯಾವ ಕಟ್ಟು–ಪಾಡುಗಳಿಗೆ ಒಳಗಾಗುವದಿಲ್ಲವೆಂಬುದನ್ನು ಪೈ ಅವರು ಅನುಭವಿಸಿದುದನ್ನು ಬಹಿರಂಗಗೊಳಿಸಿದ್ದಾರೆ. ವಿಶೇಷ ಸಂಚಿಕೆಗಾಗಿ ಸ್ವೀಕರಿಸಿದ ಲೇಖನವನ್ನು ಅವರಲ್ಲಿ ಪ್ರಕಟಿಸದೆ, ಸಾಮಾನ್ಯ ಸಂಚಿಕೆಯಲ್ಲಿ ಪ್ರಕಟಿಸುವ ಸಂಪಾದಕರ ಕ್ರಮವೂ ಪೈ ಅವರ ದೃಷ್ಟಿಯಲ್ಲಿ, 'ಹಬ್ಬ ತಪ್ಪಿತೇ ಹೊರತು ಹೋಳಿಗೆ ತಪ್ಪಲಿಲ್ಲ ಎಂಬುದು ದಿಟವೇ. ಆದರೆ ಎಂದೋ ಬಡಿಸಿದ ಹೋಳಿಗೆಯನ್ನು ಹಬ್ಬದ ಹೋಳಿಗೆ ಎಂದು ತಿಂಬರೇ ?[೧] ಎಂದು ಪ್ರಶ್ನೆ ಉದ್ಭವಿಸುವದು. ಆಯಾ ಸಂದರ್ಭ, ನೀಡಿದ ಭರವಸೆ, ಕಾಲಪರಿಮಿತಿ, ಲೇಖಕ–ಸಂಪಾದಕ ಸಂಬಂಧದ ಪಾವಿತ್ರ್ಯ ಇವೆಲ್ಲವುಗಳ ಬಗ್ಗೆ ಸಂಪಾದಕರ ಶ್ರದ್ಧೆ ಅನಿವಾರ್ಯವಿಲ್ಲವೆ ? ಇದರಂತೆ ಲೇಖನದ ಕೊನೆಯ ಕರಡಚ್ಚನ್ನು ತಿದ್ದುವ ಕುರಿತು ಅದನ್ನು ತಮ್ಮ ಬಳಿಗೆ ಕಳಿಸುವಂತೆ ಪೈ ಅವರು ಕಟ್ಟಳೆಯನ್ನು ಹಾಕುತ್ತಿದ್ದರೂ ಈ ವಿಷಯದಲ್ಲೂ ಅವರ ಅನುಭವ ಉತ್ಸಾಹದಾಯಕವೂ ಸಮಾಧಾನಕಾರವೂ ಆಗಿಲ್ಲ. ಕರಡು ತಿದ್ದಲು ಇತ್ತ ಕಳಿಸಿ ಅತ್ತ ಮುದ್ರಿಸಿ ಬಿಡುತ್ತಿದ್ದ ಕ್ರಮವು 'ಹಿಂಡಿ ಮುಗಿಸಿದ ಕೆಚ್ಚಲಿಗೆ ಕರುವನ್ನು ಬಿಡುವ ಶಾಸ್ತ್ರ ಮಾಡಿದಂತಾಯಿತು.[೨] ಇನ್ನೊಂದು ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಬಗ್ಗೆ ಅವರೇ ತಿಳಿಸಿದ್ದಾರೆ. :– ಆ ಲೇಖನದ 'ತುದಿಯಿಂದ ತುದಿಯವರೆಗೂ ತಿದ್ದೇ ತಿದ್ದು. ಮೆಕ್ಬೆತನು ನಿದ್ದೆಯನ್ನು ಕೊಂದನಾದರೆ ಇಲ್ಲಿ ನನ್ನ ಕನ್ನಡವನ್ನು, ಕೊಂದಿತ್ತು'[೩] ಕರಡು ಸರಿಯಾಗಿ ತಿದ್ದದೇ ಪ್ರಕಟವಾಗುತ್ತಿದ್ದ ಪತ್ರಿಕೆಗಳ ಬಗ್ಗೆ ಅವರ ಅಸಮಾಧಾನ, ಅತೃಪ್ತಿ ಹಲವಾರು ಬಾರಿ ವ್ಯಕ್ತವಾಗಿದೆ.

ಅದರಂತೆ ವಿಶೇಷ ಸಂಚಿಕೆಯ ಸಂಪಾದಕರುಗಳು ಅನುಸರಿಸುತ್ತಿದ್ದ ಕ್ರಮವು ಗೋವಿಂದ ಪೈ ಅವರ ಸೂಕ್ಷ್ಮ ಸಂಶೋಧನ ದೃಷ್ಟಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಎರಡು ಬಗೆಯ ಕಾಗದವನ್ನು ವಿಶೇಷ ಸಂಚಿಕೆಗಳಿಗಾಗಿ ಬಳಸಿ, ಕನಿಷ್ಠ ದರ್ಜೆಯ ಪ್ರತಿಯನ್ನು ಲೇಖಕರ ಗೌರವಪ್ರತಿಯಾಗಿ ಕಳಿಸುವದನ್ನು 'ನೋಡುತ್ತಲೇ ಕೊಳೆತ ಕುಂಬಳಕಾಯನ್ನು ಏನು ಮಾಡಬೇಕು ? ಎಮ್ಮೆಗೆ ಹಾಕು, ಎಮ್ಮೆ ತಿನ್ನೋದಿಲ್ಲ. ಸರಿ ಕರಣಿಕನಿಗೆ ಕೊಡು ಎಂದ ಮಾತಿನ ನೆನಪಾಗುತ್ತದೆ'[೪] ಪೈ ಅವರಿಗೆ. ಸಂಪಾದಕ, ಲೇಖಕರ ಸಂಬಂಧದ, ಎಂದೂ ಬಿಡಲಾಗದ, ಬದಲಾಗದ ಸಂಬಂಧದ

೧. ಅದೇ, ಪು–೧೧

೨. ಅದೇ, ಪು–೧೧

೩. ಅದೇ, ಪು–೯

೪. ಅದೇ, ಪು–೧೨

ಬಗ್ಗೆ ಆಲೋಚಿಸುತ್ತಾ ಪೈ ಅವರ ಸಂಶೋಧಕ ಬುದ್ಧಿ ಒಂದು ನಿತ್ಯ ಸತ್ಯವನ್ನು ಕಂಡುಕೊಂಡು ನಿರೂಪಿಸುವಲ್ಲಿ ಯಶಸ್ವಿಯಾಗಿದೆ. ಸಂಪಾದಕರು ಎಂದೂ ಅತ್ತೆ, ಲೇಖಕರು ಎಂದೂ ಸೊಸೆ'. ಅತ್ತೆ–ಸೊಸೆಯರ ಸಂಬಂಧ ನಿತ್ಯ ಜೀವನದಲ್ಲಿ ಕಾಲ ಖಂಡ ಬದಲಾಗಬಹುದಾದರೂ ಇಲ್ಲಿ ಅವು ಸಾರ್ವಕಾಲಕ್ಕೂ ತಮ್ಮ ತಮ್ಮ ಪಕ್ಕಾ ಬಾಧ್ಯತೆ ಅಧಿಕಾರಗಳಿಗೆ ಒಳಪಟ್ಟು ಮುಂದುವರಿಯುವಂತಹವೆಂಬುವ ನಿರ್ಣಯವನ್ನು ಪೈ ಅವರು ತಲುಪಿದ್ದಾರೆ.

ವ್ಯವಹಾರದ ಮೇಲೆಯೇ ಕಣ್ಣಿರಿಸಿರುವ ಪತ್ರಿಕಾಸಂಪಾದಕರ ನೀತಿ ಒಂದು ರೀತಿಯದಾದರೆ ಪ್ರಶಸ್ತಿ ಗ್ರಂಥಗಳ ಸಂಪಾದಕರ ನೀತಿ ಇನ್ನೊಂದು ರೀತಿಯದು. ೧೦–೧೨ ವರ್ಷಗಳು ಕಳೆದರೂ ಗ್ರಂಥಗಳು ಪ್ರಕಟವಾಗದಿರುವದು ಅದರ ಒಂದು ಮುಖವಾದರೆ, ಈ ವಿಷಯ ಕುರಿತು ಲೇಖಕರ ಪತ್ರಗಳಿಗೆ ಉತ್ತರವೂ ಇಲ್ಲದೆ, ಆ ಪ್ರಶಸ್ತಿ ಗ್ರಂಥಕ್ಕೆ ಕಾರಣ ಪುರುಷರಾಗಿದ್ದ ಶ್ರೇಷ್ಠ ಸಾಹಿತಿಗಳು ಕಣ್ಣು ಮುಚ್ಚಿದರೂ ಅವು ಬೆಳಕಿಗೆ ಬರುವದಿಲ್ಲವೆಂಬುದು ಸಂಪಾದಕರ ದಿವ್ಯನಿರ್ಲಕ್ಷ; ಮನೋಭಾವಕ್ಕೆ ದ್ಯೋತಕವಾಗಿ ಪೈ ಅವರು ಬಗೆಯುತ್ತಾರೆ. ಇಂಥ ಒಂದೆರಡು ಪ್ರಶಸ್ತಿಗ್ರಂಥಗಳಿಗೆ ಕಳಿಸಿದ ಲೇಖನಗಳ ಬಗ್ಗೆ ಸಾಕಷ್ಟು ಕುತೂಹಲವಿದ್ದರೂ, ನಿರಾಶೆಯಿಂದ 'ಹಗ್ಗವನ್ನು ಬಿಚ್ಚಿ ಬಿಟ್ಟಿದ್ದೇನೆ ಎಂದು ಬೇಕೋ ಅಂದು ದೊಡ್ಡಿಗೆ ಬರಲಿ' ಎಂದು ತಮ್ಮಷ್ಟಕ್ಕೆ ತಾವೇ ಸಮಾಧಾನ ಹೇಳಿಕೊಂಡಿದ್ದಾರೆ. ವಿಶ್ವವಿದ್ಯಾಲಯ ಮೊದಲಾದ ಸಂಘ–ಸಂಸ್ಥೆಗಳ ಪಠ್ಯಪುಸ್ತಕಗಳ ಸಂಪಾದಕರು ಪ್ರಕಟನೆಗೊಂಡ ಪುಸ್ತಕದ ಪ್ರತಿಗಳನ್ನು ಕಳಿಸುವ ವಿಷಯದಲ್ಲಿ ಪೈ ಅವರಿಗೆ ಯಾವ ತೃಪ್ತಿಯನ್ನು ನೀಡಿಲ್ಲ. ಪತ್ರಿಕಾ ಸಂಪಾದಕರು ವಿಶೇಷ ಸಂಚಿಕೆ–ಪ್ರಶಸ್ತಿ ಗ್ರಂಥಗಳ ಸಂಪಾದಕರು, ಪಠ್ಯಪುಸ್ತಕಗಳ ಸಂಪಾದಕರು ಇವರೆಲ್ಲ ಲೇಖಕನ ಬಗೆಗೆ ಇರಿಸಿಕೊಂಡ ದೃಷ್ಟಿ ಪೈ ಅವರಲ್ಲಿ ಅಸಮಾಧಾನವನ್ನು ಉಂಟು ಮಾಡಿರುತ್ತದೆ. ಆದರೆ ಇದಕ್ಕೆ ಪರಿಹಾರೋಪಾಯವನ್ನು ಕಾಣದೆ, ಲೇಖಕರಿಗೆ ಪೈ ಅವರು ಸಮಾಧಾನವನ್ನು ಹೇಳುವಲ್ಲಿ ಅವರ ಸಂಯಮ, ತಾಳ್ಮೆ, ಸಹಕಾರ ಮನೋಭಾವ ವ್ಯಕ್ತವಾಗಿದೆ' 'ಆದರೆ ಬರಹಗಾರರ ಬಾಳ್ವೆಯಲ್ಲಿ ಹೀಗೆ ತರತರದ ಹಲವು ತಾರುತಟ್ಟುಗಳಿದ್ದರೂ ಕೊನೆಗೆ ಅಳಿದವರೇ ಬಳಲುವರಲ್ಲದೆ ಬಳ್ಳಿ ಬಳಲುವುದೆ? ಎಂದೊಮ್ಮೆ ಮನಸ್ಸಿನ ಸೂತಕ ಕಳೆವುದೆ'[೧] ಲೇಸೆಂದು, ಲೇಖಕ ಇಂಥೆಲ್ಲ ಕಿರುಕುಳ, ಮಾನಸಿಕ ಆಘಾತಗಳಿಗೆ ಬಲಿಯಾಗದೆ ತನ್ನ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆಂಬುದು ಪೈ ಅವರ ಧೋರಣೆಯಾಗಿದೆ.

ಮುನ್ನುಡಿಕಾರ ಹಾಗೂ ವಿಮರ್ಶಕನ ಕರ್ತವ್ಯಗಳ ಬಗ್ಗೆ ಗೋವಿಂದ ಪೈ ಅವರ ನಿಲುವು ಸ್ಪಷ್ಟವಿದೆ. 'ತಾನು ಮುನ್ನುಡಿ ಬರೆವ ಗ್ರಂಥದಲ್ಲಿ ಉಳ್ಳ ಕೊರತೆಗಳನ್ನು ಸುಟ್ಟಿ ತೋರಿಸುವುದು ಮುನ್ನುಡಿಕಾರನ ಕೆಲಸವಲ್ಲ. ಸರ್ವಥಾ ಅಲ್ಲ. ಅದಕ್ಕೆ

---

೧. ಅದೇ, ಪು–೧೨

ಸಹಸ್ರಾಕ್ಷನಾದ ವಿಮರ್ಶಕನಿದ್ದಾನೆ. ಭಾಪು, ಭಾಪು, ಎಂದು ತನ್ನ ಬೆನ್ನು ಚಪ್ಪರಿಸುವುದೂ. ಜಾಗೂ ಜಾಗೂ ಎಂದು ಅವನನ್ನು ಹುರಿದುಂಬಿಸುವುದೂ ಇದಿಷ್ಟೇ ಮುನ್ನುಡಿಕಾರನ ಕೆಲಸ. ಮುನ್ನಡಿಕಾರನು ಪುರೋಹಿತನಂತೆ ತನ್ನ ಬಳಿಗೆ ಬಂದಾತನ ಪೌರೋಹಿತ್ಯವನ್ನು ನಡೆಸಿ ಅವನಿಗೆ ಶ್ರೇಯಸ್ಸನ್ನು ಕೋರಿ ಆಶೀರ್ವದಿಸಬೇಕು. ಆತನ ಊಹೆಯುಗಳ ಕಡೆಗೆ ನೋಡಬಾರದು. ವಿಮರ್ಶಕನಾದರೋ ವೈದ್ಯನಂತೆ ತನ್ನ ಬಳಿಗೆ ಬಂದಾತನಿಗೆ ಚಿಕಿತ್ಸೆಯನ್ನು ನಡೆಸಿ, ನಿರೋಗಿಯಾದವನ ಆರೋಗ್ಯವನ್ನು ಕೊಂಡಾಡಬೇಕು, ಸಿಗುಳಬೇಕಾದಲ್ಲಿ ಸಿಗುಳಲೂಬೇಕು'[೧] 'ಆವಿನಂತೆ ಕವಿ ಹಿಂಡುವುದು ಹಾಲನ್ನು. ಅದರಿಂದ ಬೆಣ್ಣೆ ಕಡೆವುದೊ. ತುಪ್ಪ ಕಾಸುವುದೊ ವಿಮರ್ಶೆಯ ಕೆಲಸ. ನನ್ನ ಅನುಭವದ ಮಟ್ಟಿಗೆ ಕವಿ ಮನೋಲಿದಂತೆ ಬರೆವನಲ್ಲದೆ ಬೇರೆ ಯಾವ ಗುರಿಯನ್ನೂ ಅರಿಯ'[೨] ವಿಮರ್ಶೆಯ ಬಗ್ಗೆ ಪೈ ಅವರದು ಉದಾರ ದೃಷ್ಟಿ. ಯಾರ ಮನಸ್ಸಿಗೂ ನೋವಾಗದಂತೆ. ಪ್ರೋತ್ಸಾಹವನ್ನೀಯುವ ಮುನ್ನುಡಿಕಾರನದಾಗಿರಬೇಕೆಂದೂ ವಿಮರ್ಶಕನಾದರೆ ಒಳ್ಳೆಯ ಅಂಶಗಳನ್ನು ಕೊಂಡಾಡಿ, ದೋಷಗಳನ್ನು ತಿದ್ದಲು ನೆರವಾಗಬೇಕೆಂದೂ ಪೈ ಭಾವಿಸುತ್ತಾರೆ. ಆದರೂ ಕವಿಸೃಷ್ಟಿ ಸ್ವತಂತ್ರವಾದುದೆಂದೂ ಅದು ವಿಮರ್ಶಕನನ್ನು ದೃಷ್ಟಿಯಲ್ಲಿರಿಸಿಕೊಂಡು ಬರೆದುದಲ್ಲವೆಂಬುದನ್ನು ಪೈ ಅವರು ಸ್ಪಷ್ಟಪಡಿಸುತ್ತಾರೆ.

ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಗೆಗಿನ ಕನ್ನಡಿಗರ ಅನಾದರ, ಉಪನ್ಯಾಸ ಸಮಾರಂಭಗಳನ್ನು ಏರ್ಪಡಿಸುವ ಸಂಘ–ಸಂಸ್ಥೆಗಳವರ ಅನಾಸಕ್ತಿ. ಆಹ್ವಾನಿತ ವಿದ್ವಾಂಸರ ಬಗ್ಗೆ ಅವರ ವಿಚಾರಗಳನ್ನು ತಿಳಿಯುವಲ್ಲಿ ಕುತೂಹಲವಿರಹಿತ ಸಭಿಕರ ದೃಷ್ಟಿ, ಅದರಂತೆ ಗೋವಿಂದ ಪೈ ಅವರ ನವಿರಾದ ಹಾಸ್ಯ ಇವೆಲ್ಲವುಗಳು 'ಬರಹಗಾರನ ಹಣೆಬರಹ' ಪ್ರಬಂಧದಲ್ಲಿ ಕೊನೆಗೊಂಡಿವೆ. ಸಂಶೋಧನಾತ್ಮಕ ಉಪನ್ಯಾಸವೀಯಲು ಹೋದ ಪೈ ಅವರ ಈ ಅನುಭವ ಲಘುಹಾಸ್ಯ ಬರಹವೆನ್ನುವಂತೆ, ಕಹಿಯನ್ನು ನುಂಗಿ ನಗುವನ್ನು ನೀಡುವುದಾಗಿದೆ. 'ಹೊತ್ತಿಗೆ ಮುಂಚೆಯೇ ಆ ಶಾಲೆಗೆ ಹೋಗಿ ನನ್ನ ಭಾಷಣದ ಕೋಣೆಯನ್ನು ಪರಿಚಿಸಿಕೊಂಡು ಹೊತ್ತಾಗುವಾಗ ಒಳಹೊಕ್ಕೆನು. ವೇದಿಕೆಯಲ್ಲಿ ಅಧ್ಯಕ್ಷರಿಲ್ಲ. ಶ್ರೋತ ನೇತ್ರಕ್ಕೆ ಅಚ್ಚಳಿಗೆಯಲ್ಲಿ ನುಸಿಯಿಲ್ಲ. ನನ್ನ ಜೊತೆಗಾರರು ಮಾತ್ರ. ಬಾಗಿಲ ಹೊರಗೆ ಶಾಮನೊ ಶಬಲನೊ ಒಬ್ಬ ದ್ವಾರಪಾಲಕ. ಆತನೂ ಕನ್ನಡದ ಮಟ್ಟಿಗೆ ಅನೇಡ ಮೂಕ. ಆತ ಕಂಬಳಿಗೆ ಕಾಯುತ್ತಿದ್ದನಲ್ಲದೆ ಹರಿಕಥೆಗೆ ಬಂದಿದ್ದವನಲ್ಲ. ಅಂದರೆ ತಾಳಕ್ಕೊ ಮೇಳಕ್ಕೊ ನಾನೇ ಆದೆ'[೩] ಎಂದು ಆ ಉಪನ್ಯಾಸದ ವ್ಯವಸ್ಥೆ, ಜನರ ಆಸಕ್ತಿ, ಆಮಂತ್ರಣವನ್ನು ಸ್ವೀಕರಿಸಿ

---

೩. ಅದೇ, ಪು–೧೧
೪. ಅದೇ, ಪು–೫
೧. ಅದೇ, ಪು–೮

ಅಗಲೇ ಬಂದು ಬಿಟ್ಟ ಸನ್ನಿವೇಶ, ಆದರೂ ಇದರಿಂದ ಯಾರಿಗೂ ನೋವಾಗದಂತೆ ತನ್ನ ನೋವನ್ನು ಸವಿರಾದ ಹಾಸ್ಯದಲ್ಲಿ ಪರಿವರ್ತಿಸಿ ನಿರೂಪಿಸುವ ಪೈ ಅವರ ಸಾತ್ವಿಕ ವ್ಯಕ್ತಿತ್ವ ಇಲ್ಲಿ ಮೂಡಿ ನಿಲ್ಲುತ್ತದೆ.

ಭಾಷೆಯ ಬೆಳವಣಿಗೆಯ ವಿಷಯಕ ಪೈ ಅವರ ಮಹತ್ವಪೂರ್ಣ ಧೋರಣೆ ಅವರ ಪ್ರಬಂಧಗಳಲ್ಲಿ ವ್ಯಕ್ತವಾದುದುಂಟು. ಪದಸ್ಖಾಲಿತ್ಯ ಅಕ್ಷರ ಸ್ಖಾಲಿತ್ಯಗಳನ್ನು ಕುರಿತುಶುದ್ಧ ತೆಯ ಬಗೆಗೆ ಪ್ರತಿಪಾದಿಸುವ ಗೋವಿಂದ ಪೈ ಅವರು ಪರಂಪರೆಯನ್ನು ಮನ್ನಿಸುವವ ರಾಗಿ ಕಾಣುತ್ತಾರೆ. ಆದರೆ ಭಾಷೆಯ ಸಾಧ್ಯತೆಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಹೊಸ ಹೊಸ ಪದಗಳ ಸೃಷ್ಟಿ ಅಗತ್ಯವೆಂದು ಭಾವಿಸಿ ಆ ದಿಶೆಯಲ್ಲಿ ನಡೆದೂ ತೋರಿದ್ದಾರೆ. ಕರೆತ, ಬಹುಜನೀನ ಮುಂತಾದ ಅನುವಾದ ಪದಗಳು, ಅಜ್ಜತನದ ಮನೆಯಲ್ಲಿ ಕೂರಿಸು: 'ಹಿಂಡಿ ಮುಗಿಸಿದ ಕೆಚ್ಚಲಿಗೆ ಕರುವನ್ನು ಬಿಡುವ ಶಾಸ್ತ್ರ ಮಾಡು', 'ಸಂಪಾದಕರು ಎಂದೂ ಅತ್ತೆ, ಲೇಖಕರು ಎಂದೂ ಸೊಸೆ; 'ಅಳೆದವರೇ ಬಳಲುವರಲ್ಲದೇ ಬಳ್ಳ ಬಳಲುವುದೇ' ಮುಂ. ನುಡಿಗಟ್ಟು ಸ್ವಾರಸ್ಯಪೂರ್ಣವಾಕ್ಯರಚನೆಗಳು ಪೈ ಅವರ ವಿಶಿಷ್ಟ ಕೊಡುಗೆಗಳು. ಸವ್ಯಸಾಚಿಸು, ಪರಿಚಿತು... ಇತ್ಯಾದಿ ಪದಗಳನ್ನು ರೂಪಿಸಿಕೊಳ್ಳುವ ಮಾರ್ಗವನ್ನೂ ಅವರು ತೋರಿದ್ದಾರೆ. ಅವರ ಪ್ರಬಂಧದಲ್ಲಿ ಪಡೆನುಡಿ. ನುಡಿ ಗಟ್ಟು, ಗಾದೆಯ ಮಾತುಗಳ ಅಧಿಕ್ಯವನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಆದರೆ ಇವುಗಳ ಬಳಕೆಯಲ್ಲೂ ಪೈ ಅವರು ಸಂಯಮಧಾರಿಗಳಾಗಿದ್ದಾರಲ್ಲದೆ ಅವು ಗಳ ಮೋಹಕ್ಕೆ ಒಳಗಾಗಿಲ್ಲ. ಈ ಪ್ರಯೋಗಗಳ ಹಿನ್ನೆಲೆಯಲ್ಲಿ ಪೈ ಅವರ ವಿವಿಧ ಭಾಷೆಗಳ ಅಧ್ಯಯನ ಹಾಗೂ ಸುತ್ತಲಿನ ಆಡುಮಾತಿನ ಸಂಪರ್ಕದ ಪಾತ್ರ ಗಣ ನೀಯವಾಗಿದೆ.

ಹೊರನೋಟಕ್ಕೆ ಕಾಣುವ ಪೈ ಅವರ ವ್ಯಕ್ತಿತ್ವದಂತೆಯೇ ಅವರ ಪ್ರಬಂಧಗಳೂ ಗಂಭೀರವಾದ ನಡಿಗೆಯನ್ನವಲಂಬಿದರೂ ಅಲ್ಲಲ್ಲಿ ನವಿರಾದ ಹಾಸ್ಯದ ಮಿಂಚು ಅದಕ್ಕೆ ಕಳೆಯನ್ನಿತ್ತಿದೆ. ಸಂಶೋಧನೆಗೆ ಸಂಬಂಧಪಟ್ಟ ಅವರ ಲೇಖನಗಳ ಭಾಷೆ ಲಲಿತ ಪ್ರಬಂಧಗಳ ಭಾಷೆಯಲ್ಲಿ ಅಂತರವಿರುವುದನ್ನು ಸಹಜವಾಗಿ ಗುರುತಿಸಬಹು ದಾಗಿದೆ. ವಿಷಯಕ್ಕೆ ತಕ್ಕ ಭಾಷೆಯನ್ನು ಬಳಸುವ ಧೋರಣೆ ಅವರದಾಗಿದೆ.

ಗೋವಿಂದ ಪೈ ಅವರದು ತುಂಬಿದ ವ್ಯಕ್ತಿತ್ವ. ದ್ವೇಷ. ಅಸೂಯೆ. ಅಹಂಕಾರ ಗಳಿಂದ ದೂರವಾದ ಮುಕ್ತ. ನಿರ್ಲಿಪ್ತ. ಮನದ ವಿಹಾರವನ್ನು ಅವರ ಲಲಿತ ಪ್ರಬಂಧ ಗಳಲ್ಲಿ ಕಾಣುತ್ತೇವೆ. ವೈಯಕ್ತಿಕತೆಯ ಸೋಂಕು ತಗುಲದೆ. ಮೃದು. ಮಧುರ ರೀತಿಯಲ್ಲಿ ಓದುಗರನ್ನು ವಿಶ್ವಾಸಕ್ಕೆ ಒಳಗು ಮಾಡಿಕೊಳ್ಳುವ ಬರವಣಿಗೆ ಅವರದು. ಅವರ ಬರವಣಿಗೆಯ ಧೋರಣೆ ಸೌಮ್ಯವಾಗಿರುವಂತೆಯೇ ಧೃಢವೂ, ಗಂಭೀರವೂ ಎಂಬುದು ಅಲ್ಲಲ್ಲಿ ವ್ಯಕ್ತವಾಗಿದೆ. ಅಡ್ಡಗೋಡೆಯ ಮೇಲೆ ದೀಪವಿಡುವ ವರ್ಗಕ್ಕೆ

ಸೇರಿದವರು ಅವರಲ್ಲ. ತಮ್ಮ ಖಂಡಿತ ಅಭಿಪ್ರಾಯವನ್ನು ಖಚಿತವಾದ ರೀತಿಯಲ್ಲಿ ಪ್ರತಿಪಾದಿಸಲು ಅವರು ಹಿಂಜರಿಯುವ ಮನೋಭಾವದವರಲ್ಲ. ದೈವಶ್ರದ್ಧೆಯುಳ್ಳ, ಕಿರಿಯರ ಬಗ್ಗೆ ಭರವಸೆಯನ್ನಿರಿಸಿಕೊಂಡ ಗೋವಿಂದ ಪೈ ಅವರು ಸಂಪ್ರದಾಯ ಪ್ರಿಯತೆಯೊಂದಿಗೆ ಪ್ರಯೋಗಶೀಲತೆಯನ್ನು ಮೇಳೈಸಿಕೊಂಡುದುದರಿಂದ ಅವರ ವ್ಯಕ್ತಿತ್ವದ ಹಿರಿಮೆ ವ್ಯಕ್ತವಾಗುತ್ತದೆ.

●

ರಾಷ್ಟ್ರಕವಿ ಶ್ರೀ ಗೋವಿಂದ ಪೈಗಳ ಕಾವ್ಯ

● ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

‘ತಾಯೆಬಾರ ಮೊಗವ ತೋರ, ಕನ್ನಡಿಗರ ಮಾತೆಯೆ
ಹರಸು ತಾಯೆ. ಸುತರ ಕಾಯೆ ನಮ್ಮ ಜನ್ಮದಾತೆಯೆ’ ಎಂಬ

ಸಾಲುಗಳು ಶ್ರೀ ಗೋವಿಂದ ಪೈ ಅವರ ನೆನಪು ಜನಮನದಲ್ಲಿ ನಿರಂತರವಾಗಿರುವುದನ್ನು ಸೂಚಿಸುತ್ತವೆ. ಇದು ಪೈಗಳ ವ್ಯಕ್ತಿತ್ವದ ಕಾವ್ಯಗೊಮ್ಮಟ ದರ್ಶನಕ್ಕೆ ಧವಲಗಿರಿಯೇರುವ ಪ್ರಥಮ ಮೆಟ್ಟಿಲು. ಇಲ್ಲಿ ಕಾಣುವ ನಿಶಾಂತವಾದ ಕನ್ನಡ ನಾಡು–ನುಡಿಯ ಪ್ರೇಮ, ಅಭಿಮಾನ, ಆತಂಕ, ಕೊರಗು, ಹಾರೈಕೆ ಹಾಗೂ ಅಭಿವ್ಯಕ್ತಿ ಅನನ್ಯತೆ, ಜೀವಂತತೆ ಪೈಗಳ ಕಾವ್ಯ ಸಾಧನೆಯ ರೀತಿ–ನೀತಿಗಳನ್ನು ಪ್ರತಿನಿಧಿಸುತ್ತದೆ. ಹಾಗೂ ಧ್ವನಿಸುತ್ತದೆ. ಅಂತೆಯೇ ತಮ್ಮ ಪ್ರಥಮ ಕವನ ಸಂಕಲನ ‘ಗಿಳಿವಿಂಡು’ವಿನ ಒಳ ಮುಖ ಪುಟದಲ್ಲಿ ‘Those who make nothing new, destroy’ ಎಂಬ ಮೆಸ್‌ಫೀಲ್ಡನ ಪ್ರಸಿದ್ಧ ಹೇಳಿಕೆ ಪೈಗಳ ಕಾವ್ಯ ನಿರ್ಮಿತಿಗಷ್ಟೇ ಅಲ್ಲ, ಅವರ ಮಹಾ ಬದುಕಿನ ಚಾಲಕ ‘ಸ್ವಿಚ್‌ಕೀ’ ಎಂಬಂತೆ ತೋರುತ್ತದೆ. ಹೊಸತನ್ನು ಮಾಡಲೇ ಬೇಕೆಂಬ ಛಲ, ಮಾಡಿದ ಕೃತಿಯೆಲ್ಲ ಹೊಸ ನಿರ್ಮಿತಿಯಷ್ಟೇ ಅಲ್ಲ, ‘ನಿಚ್ಚಂ ಪೊಸತು ಅರ್ಣವಂಬೋಲ್– ಸಮುದ್ರದಂತೆ ನಿತ್ಯನೂತನವೆಂಬ– ಪಂಪನ ಆದರ್ಶವನ್ನು ಬದುಕಿಗಳಿಸಿದ, ಕಾವ್ಯ ನಿರ್ಮಿಸಿದ ಪೈಗಳ ಕಾವ್ಯ destroy ಆಗದಂಥದು. ನಿತ್ಯ ನೂತನವಾಗಿಸಿದುದು. ಎಚ್ಚೆತ್ತ ಮಾನವನ ಬದುಕೇ ಒಂದು ನಿರಂತರವಾದ ಅನ್ವೇಷಣೆ– ನಿರಂತರವಾದ ಪ್ರಯತ್ನ– ನಿಷ್ಠೆಯ ದುಡಿಮೆ. ಜೀವನದ ಅನುಭವ–ಚಿಂತನೆ ಸಮಸ್ತವನ್ನು ಸಂಪೂರ್ಣವಾಗಿ ಅಭಿವ್ಯಕ್ತಿಗೊಳಿಸುತ್ತವೆ. ವ್ಯಕ್ತಿಯ ಎಲ್ಲ ಗೆಲ್ಮೆ–ಗೆಯ್ಮೆಗಳು. ಜೀವನದಲ್ಲಿ ದೊಡ್ಡ ಸಾಧನೆ. ವಿಶೇಷ ಸಿದ್ಧಿಯನ್ನು ಪಡೆದ ಎಲ್ಲ ಮಾನವರಿಗೆ, ಜಗತ್ತಿನ ಅನುಭವಗಳು ಸಂತಸದ ಮಂಜು ಮಳೆಯಾಗಿದ್ದರೂ, ದುಃಖದ ಹುಚ್ಚು ಹೊಳೆ ಎಂಬುದು ಮಾತ್ರ ಸತ್ಯ. ಆ ಶೋಕವೇ ಶ್ಲೋಕವಾಗುವಿಕೆ, ನೋವೇ ಹೂವಾಗುವಿಕೆ, ಹಂಬಲವೇ ಹಾರೈಕೆಯಾಗುವಿಕೆಯಾಕೆಯೇ ಮಾನವ ಬದುಕಿನ ಸೂತ್ರ. ಶ್ರೀ ಗೋವಿಂದ ಪೈಗಳ ಎಂಬತ್ತು ವರ್ಷಗಳ ತುಂಬು ಜೀವನವೆಲ್ಲ ಈ ದುಃಖ–ದುಮ್ಮಾನ,–ನೋವು ಸರಳಿಕೆಯ ಹುಚ್ಚುಹೊಳೆ–ಆದರೂ, ಅದೇ ಅವರ ಕಾವ್ಯ–ಕೃಷಿಯನ್ನು ಮುನ್ನಡೆಸಿದ ಪ್ರೇರಕ ಶಕ್ತಿ. ಅಳುವನ್ನು ‘ನುಂಗಿ’, ಕಾವ್ಯ ನಿರ್ಮಿಸಿ ‘ನಗು’ವಿನ, ತೃಪ್ತಿಯ ಕ್ಷಣಗಳನ್ನೂ ಕಂಡರು ಪೈ :

'ಹಣ್ಣು ಜೀವದ ಕಣ್ಣು ಕಂಡದ್ದು ಇತಿಹಾಸ
ಕಿವಿಗೊಟ್ಟು ಕೇಳಿದ್ದು ಯಾತನೆಯ ದೊಡ್ಡಕಥೆ,
ಶಿಲುಬೆಗೇರಿಸಿದಂಥ ಕ್ರಿಸ್ತ ಪಟ್ಟಿರುವ ವ್ಯಥೆ
ಸಿದ್ಧಾರ್ಥ ಬುದ್ಧನಾಗಲು ಕಳೆದ ವನವಾಸ'[೧] ಎಂಬ ಶ್ರೀ ಎಕ್ಕುಂಡಿ

ಯವರ ಸಾಲುಗಳು ಪೈಗಳ ಜೀವ–ಜೀವನದ 'ಇತಿಹಾಸ'ದ 'ದೊಡ್ಡ ಕಥೆ'ಯನ್ನೂ ಕ್ರಿಸ್ತ–ಸಿದ್ಧಾರ್ಥ 'ವ್ಯಥೆ', 'ವನವಾಸ'ದಲ್ಲಿ ಕಂಡ 'ತ್ಯಾಗ' 'ಬೋಧ'ಗಳನ್ನೂ ಧ್ವನಿಸುತ್ತವೆ. ಅಲ್ಲದೆ, ಪೈಗಳ ಕಾವ್ಯ ಹಾಗೂ ಜೀವನದ ಅನನ್ಯತೆಗೆ ಸೂಕ್ತ ಹೋಲಿಕೆ, ಪೈಗಳಿಗೆ ಅತ್ಯಂತ ಪ್ರಿಯವಾದ 'ಶ್ರೀ ಗೊಮ್ಮಟ'! 'ಬೋಧಕನಲ್ಲದ ಸಾಧಕನಾಗಿ ಅಜೀವ ಶ್ರಾವಕ'ನಾಗಿ ಬದುಕಿದ ಪೈಗಳ ಕಾವ್ಯ ಒಂದು ಪ್ರಾಚೀನ 'ಗೊಮ್ಮಟ'

ಇನ್ನೆಗವಾದುದಿಲ್ಲಮಮ ! ಕಂಡುದುಮಿಲ್ಲೆಮ ! ಮುಂದೆ ಕಾಣಲಿ
ನ್ನಿಲ್ಲ ಬೆಡಂಗಿದನ್ನಿರುಳ ನೇಸರ ಕಾಣ್ಕೆಯ ಭಾಗ್ಯವೆಮ್ಮದೇಂ ! [೨]

ಶ್ರೀ ಗೋವಿಂದ ಪೈಗಳಂಥ ಜೀವ–ಕವಿತೆ 'ಇನ್ನೆಗವಾದುದಿಲ್ಲ', ಇಂಥದ್ದನ್ನು ಮುಂದೆ 'ಕಾಣಲಿನ್ನಿಲ್ಲ' 'ಇರುಳಿನಲ್ಲಿ ನೇಸರನ್ನು ಕಾಣು'ವಂಥಾದುದು ಕನ್ನಡಿಗರ 'ಭಾಗ್ಯ ! ಉತ್ಪ್ರೇಕ್ಷೆಯೆಂಬಂತೆ ಕಂಡರೂ, 'ಪೈಗಳ ಕಾವ್ಯ ಸಾಧನೆ–ಜೀವನ ಸಿದ್ಧಿ' ಅಮಮ ಎನ್ನಿಸುವಂಥದು, ಅಷ್ಟೇ ವಿಶಿಷ್ಟವಾದುದು. ನವೋದಯ ಕಾವ್ಯ ಪರಿಸರದಲ್ಲಿ ಮೂಡಿದ ಪೈಗಳ ಪಳಗನ್ನಡ ಪದ–ಪದ್ಯ ಗಂಧಿಕಾವ್ಯ 'ಇರುಳಿನ ಸೂರ್ಯ'ನೇ ನಿಜ. ಮಾಡಿದರೆ ಹೊಸದನ್ನಲ್ಲದೆ ಬೇರಿನ್ನೇನನ್ನೂ ಮಾಡಬಾರದೆಂಬ ಜೀವನ ಸೂತ್ರದ ನೇರ ಅಭಿವ್ಯಕ್ತಿ ಪೈಗಳ ಈ 'ವಿಚಿತ್ರ ಕಾವ್ಯ'! 'ಪೈಗಳ ಕಾವ್ಯ ಚೇತನವನ್ನು ನಿಲ್ಲಿಸಿ ನಡೆಸುವ ಕಲ್ಪನಾವಿಲಾಸ ಸತ್ವಯುತವಾದದ್ದು; ನಡುಗಣ್ಣ ನೋಟದಿಂದ ಬದುಕನ್ನು ನೋಡುವವನ ಅನುಭವಿಸಿದವನ ಧೀರತೆಯುಳ್ಳದ್ದು; ಪಲಸ್ಪರ್ಶಿಯಾದ ವಿದ್ವತ್ತಿನಿಂದಾಗಿ ಈಡು ಆಳ–ವಿಸ್ತಾರಗಳನ್ನು ಪಡೆದು ಹಿರಿಯ ಸಾಹಿತ್ಯ ವ್ಯಾಸಂಗದಿಂದ ಶ್ರೀಮಂತವಾದದ್ದು; ಸಮತೂಕದ ಜೀವನದೃಷ್ಟಿಯಿಂದಾಗಿ ಅರ್ಥಪೂರ್ಣವಾದದ್ದು; ಸಂವೇದನಾಶೀಲವಾದ ಮನಸ್ಸಿನಿಂದ ಮೊನೆಗೊಂಡದ್ದು'[೩] ಎಂಬ ಶ್ರೀ ವಿ. ಎಂ. ಇನಾಂದಾರರ ವಿಮರ್ಶಕ ನುಡಿಗಳಲ್ಲಿ ಪೈ ಕಾವ್ಯದ ಮುಖ್ಯಾಂಶಗಳ ಸಮೀಕ್ಷೆ ಇದೆ. ಆದರೆ, ಇದೆಲ್ಲದಕ್ಕೂ ಪ್ರೇರಕವಾದ ಪೈ ಚೇತನ ಸಮಗ್ರ ಬದುಕಿನ–ನೋವು–ಸಾವುಗಳಲ್ಲಿಯೂ 'ಸಾರ್ಥಕತೆ'ಯನ್ನು ಕಾಣುವ ಸಾಧನೆ, ಮಾನವೀಯ ಬದುಕಿನ ಔನ್ನತ್ಯದ ಹಂಬಲ, ಮಾಡಿದ್ದೆಲ್ಲ ಹೊಸತೇ ಆಗಬೇಕೆಂಬ ಮೂಲಸ್ಪಂದನ, ಗೋವಿಂದ ಪೈಗಳ,

---

೧. ಶ್ರೀ ಸುಬ್ಬಣ್ಣ ಎಕ್ಕುಂಡಿ –ದೀವಿಗೆ
೨. ಹೃದಯರಂಗದಲ್ಲಿ 'ಶ್ರೀ ಗೊಮ್ಮಟಜಿನ ಸ್ತುತಿ' ಪು. ೩೨ (೧೯೬೯) ಕಾವ್ಯಾಲಯ ಪ್ರಕಾಶನ ಮೈಸೂರು
೩. ವಿ. ಎಂ. ಇನಾಂದಾರ–ಗೋವಿಂದ ಪೈಗಳ ಕಾವ್ಯ ಪು. ೩ (೧೯೬೫)

ಬದುಕಿನ ಹಾಗೂ ಕಾವ್ಯದ ಆಳದಲ್ಲಿ ಹರಿವ ಜೀವಪ್ರವಾಹ, ಅದೇ ಪೈಗಳನ್ನು 'ಧೀರ ಧೀಮಂತ ಚೇತನ'ವನ್ನಾಗಿಸಿದುದು, 'ಬೆಳ್ಳಿಮೀಸೆಯ ಮಗು'ವನ್ನಾಗಿಸಿದುದು, ಕವಿ-ಸಂಶೋಧಕ ಸವ್ಯಸಾಚಿಯಾಗಿಸಿದುದು, ಸಂಸಾರಿ-ಶ್ರಾವಕ-ಸಂನ್ಯಾಸಿಯಾಗಿಸಿದುದು; ಬದುಕಿಗೆ ಬಾಷ್ಪಾಂಜಲಿ-ವಿಧಾತನಿಗೆ ಶ್ರದ್ಧಾಂಜಲಿಯನ್ನಾಗಿಸಿದುದು; ಈ ಧೀಮಂತಿಕೆಯ ಪಟ್ಟ ಶ್ರೀಗಳಿಗೋ ಮೀಸಲೆಂಬಂತೆ ಭಾವಿಸುತ್ತಿದ್ದಾರೆ ಕೆಲವರು. ಆದರೆ, ಅತ್ಯಂತ ಸೃಜನಶೀಲ, ಪ್ರಯೋಗಶೀಲ ಕವಿ 'ಪೈ'ಗಳಲ್ಲಿ ನವೋದಯ ಕಾವ್ಯ ನಿರ್ಮಿತಿಯಲ್ಲಿ ಶ್ರೀಗಳಿಗಿಂತ ಒಂದು ಗುಂಜಿ ಹೆಚ್ಚಿದೆ. ಆ ಬಗೆಗೆ, ಶ್ರೀಗಳಷ್ಟು ಪುಣ್ಯಶಾಲಿ ಪೈಗಳಾಗಲಿಲ್ಲ ಅದಕ್ಕೆ ಕಾರಣಗಳು ಅನೇಕ.

ಮಂಗಳೂರು ಗೋವಿಂದ ಪೈಯನ್ನು ಕವಿಯಾಗಿಸಿದ ಅವರ ಕಾವ್ಯ ದೃಷ್ಟಿಗೆ ವೈಚಿತ್ರ್ಯ ತಂದ ಪ್ರೇರಣೆ-ಪೋಷಣೆಗಳು ಹಲವಾರು :

೧. ಪಡುಗಡಲು, ಪಡುಕರಾವಳಿ, ಸಹ್ಯಾದ್ರಿಯ ಸೆರಗಿನ ಪ್ರಕೃತಿ-ಕವಿಗೆ ಹಿನ್ನೆಲೆ.

೨. ವೈಯಕ್ತಿಕ ಜೀವನ ನಿಷ್ಠೆ-ಆದರ್ಶದ ಹಂಬಲ,-ಆ 'ಧೃತಿ'ಯನ್ನು ಜೀವನದಲ್ಲಿ ಆಗುಮಾಡಿದ ಮಾನವೀಯ ಸಫತೆಯ ಅನ್ವೇಷಣೆ.

೩. ವಿಶ್ವದ-ಅಂತೆಯೇ ವ್ಯಕ್ತಿಯ ದಿಗ್ದರ್ಶಕ ಶಕ್ತಿಯಾದ 'ಶ್ರೀದೇವರಲ್ಲಿ ನಿತಾಂತ ಭಕ್ತಿ, ಶರಣಾಗತ ನಿಷ್ಠೆ. (ವ್ಯಕ್ತಿ ದುಡಿಯಲೇ ಬೇಕು ಫಲವನ್ನು ದೇವರೇ ನೀಡಬೇಕೆಂಬ ಆದರ್ಶ.)

೪. ಸಮಕಾಲೀನ ಬದುಕಿಗೆ ಸ್ಪಂದಿಸುವ ಸಾಮಾಜಿಕ ಪ್ರಜ್ಞೆ-ದೀನ-ದಲಿತ-ಪತಿತ ಆಹತರ ಬಗೆಗೆ ತುಂಬಿ ಹರಿವ ಅನುಕಂಪ, ಅಸಮರ್ಥ ಮಾನವೀಯ ವೈಫಲ್ಯಗಳ ಬಗೆಗೆ ಕೋಪ, ರೋಷ.

೫. ನಾಡು-ನುಡಿ-ರಾಷ್ಟ್ರ ಭಕ್ತಿಯ ಪ್ರಚಂಡ ಪ್ರವಾಹದ ಮಧ್ಯೆ ಬದುಕಿ-ಬಾಳಿದ್ದು, ಅದಕ್ಕೆ ಸಕ್ರಿಯವಾಗಿ ಸ್ಪಂದಿಸಿದುದು. ಆದರ್ಶ ರಾಷ್ಟ್ರ-ಕರ್ನಾಟಕ-ಸ್ವಾತಂತ್ರ್ಯ ಹೋರಾಟ.

೬. ಭಾರತೀಯ ಸಂಸ್ಕೃತಿ, ಚರಿತ್ರೆ, ಸಮಾಜ ಬಗೆಗಿನ ಸಂಶೋಧನಾತ್ಮಕ ಅಧ್ಯಯನ-ಅಭಿಮಾನ

೭. ಬಹುಭಾಷಾ ಪಾಂಡಿತ್ಯ-ಪ್ರಪಂಚದ ಶ್ರೇಷ್ಠ ಸಾಹಿತ್ಯ ಕೃತಿಗಳ ಅಧ್ಯಯನ-ಅನುಕರಿಸುವ, ಅನುವಾದಿಸುವ ಪ್ರೇರಣೆ. ನೂತನ ಸೃಷ್ಟಿಗೈವ ಧೋರಣೆ.

೮. ಪಳಗನ್ನಡ ಭಾಷೆ-ಸಾಹಿತ್ಯದ ಬಗೆಗೆ ವಿಶೇಷವಾದ ಮೋಹ. ತುಳು ಕನ್ನಡದ ಬಗೆಗಿನ ಅವ್ಯಾಜ ಭಕ್ತಿ, ಸರ್ವಭಾಷೆಗಳ ಬಗೆಗಿನ ಸಮಭಾವ.

೯. ಸಾಂಪ್ರದಾಯಿಕ ಹಾಗೂ ಸಾಂಪತ್ತಿಕ ಗೌಡಸಾರಸ್ವತ ಬ್ರಾಹ್ಮಣ ಮನೆತನದಲ್ಲಿ ಜನಿಸಿ, ಯಾರಿಗೂ ತಾಗಿ–ಬಾಗಿ ಬಾಳಬೇಕಾಗಿಲ್ಲದ ಸ್ವತಂತ್ರವಾದ ನಿರ್ಭಿಡೆಯ ಬದುಕನ್ನು ನಡೆಯಿಸಿದ್ದು.

೧೦. ಭಾರತೀಯ ಜೀವನದ ಎಲ್ಲ ರಂಗಗಳ ಸಂಕ್ರಮಣ–ಸಂಘರ್ಷ ಕಾಲಮಾನದಲ್ಲಿ ಬಾಳಿದ್ದು. ಹಳತರಲ್ಲಿ ಹೊಸತನ್ನು ಕಂಡದ್ದು, ಹೊಸತಕ್ಕೆ ಹಳೆಯ ಲೇಪವನ್ನು ನೀಡಿದ್ದು, ಸಮನ್ವಯವನ್ನು ಸಾಧಿಸಿದ್ದು; ಪ್ರಯೋಗಿಸಿದ್ದು.

೧೧. ಜಾತಿಧರ್ಮ ಪ್ರಧಾನವಾದ ಜೀವನ ವ್ಯವಸ್ಥೆಯಲ್ಲಿಯೂ, ಜಾತ್ಯತೀತ ಮಾನವತೆಯನ್ನು ಪ್ರತಿಪಾದಿಸಿದ್ದು.

– ಹೀಗೆ, ಹಲವಾರು ಪ್ರಭಾವಗಳನ್ನು ಪೈಗಳ ಕಾವ್ಯದಲ್ಲಿ ಗುರುತಿಸಬಹುದಾಗಿದೆ. ಈ ಎಲ್ಲ ಪ್ರಭಾವ–ಪ್ರವಾಹಗಳ ಮಧ್ಯದಲ್ಲಿಯೂ 'ಕವಿ ಗೋವಿಂದ ಪೈ' ಕೊಚ್ಚಿ ಹೋಗದ 'ದ್ವೀಪ'ವಾಗಿ ನಿಂತರು, ಮುಂದಿನ ಹಡಗು–ದೋಣಿಗಳಿಗೆ ದಿಕ್ಸೂಚಿಯಾಗುವ 'ದೀಪ'ವಾದರು. ನಮ್ಮ ಶತಮಾನದ ಪ್ರಾರಂಭಿಕ ದಶಕಗಳಲ್ಲಿಯೇ ನವೋದಯ ಕಾವ್ಯಕ್ಕೆ 'ನಾಂದಿ'ಯಾದ ಕಾವ್ಯ–ನಾಟಕಗಳನ್ನು ಮೊಟ್ಟಮೊದಲು ರೂಪಿಸಿ, ಮುಂಚೂಣಿಗರಾದರು.

೨

ಶ್ರೀ ಗೋವಿಂದ ಪೈಗಳ ಬದುಕು ನಿಡಿದಾಗಿರುವಂತೆ, ಅವರ ಜೀವನದ ಸಾಧನೆಗಳೂ ವಿಸ್ತಾರವಾದುವು, ಸಂಶೋಧನೆ ಮತ್ತು ಸಾಹಿತ್ಯ ಸೃಷ್ಟಿ ಎಂದು ಎರಡು ಸ್ಥೂಲ ವಿಭಾಗ ಮಾಡಬಹುದು. ಪೈಗಳ ಸಂಶೋಧನೆಗಳ ವಿಚಾರ ಬೇರೆಕಡೆ, ಬರುತ್ತಿರುವುದರಿಂದ ಆ ವಿಷಯಕ್ಕೆ ಕೈಹಾಕುವುದಿಲ್ಲ. ಅವರ ಸಾಹಿತ್ಯ ಸೃಷ್ಟಿಯ ಮುಖ್ಯ ಭಾಗ ಕಾವ್ಯ, ಅದರ ಅಂಗವಾದ ನಾಟಕ ಹಾಗೂ ಮತ್ತಿತರ ಬರಹಗಳ ಬಗೆಗೂ ಇತರರು ವಿಮೋಚನೆ ಮಾಡುವುದರಿಂದ ಪೈಗಳ ಕಾವ್ಯವೊಂದನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗುವುದು. ಲೇಖಕನೊಬ್ಬನ ಸಾಧನೆಗಳನ್ನು ಹೀಗೆ ವಿವಿಕ್ತವಾಗಿ ಪ್ರಸ್ತಾಪಿಸುವುದು ಸೂಕ್ತವಲ್ಲ, ಆದರೂ, ಸೌಕರ್ಯದ ದೃಷ್ಟಿಯಿಂದ ಮಾತ್ರ ಹೀಗೆ ವಿವೇಚಿಸೋಣವಾಗಿದೆ. ಅವರ ಸಮಗ್ರ ಬರಹದಲ್ಲಿ ಈ ಕಾವ್ಯಸೃಷ್ಟಿಯ ವಿಸ್ತಾರ ಕಡಿಮೆ ಎನಿಸಿದರೂ, ಅದರ 'ಸತ್ವ' ಮಾತ್ರ, ಮಹತ್ವವಾದುದು. ೧೯೦೦ ರಿಂದಲೇ ಪ್ರಾರಂಭವಾದ ಅವರ ಕವನ ಕೃಷಿ, ಅವರ ಅಂತ್ಯಕಾಲದವರೆಗೂ ನಡೆದು, ಸು. ೧೯೦ ಹಿರಿ–ಕಿರಿಯ ಕವನಗಳಾಗಿ ಉಳಿದು ಬಂದಿವೆ. ಗಾಂಧೀಜಿಯನ್ನು ಯೋಜಿಸಿದ್ದ ಒಂದು ಖಂಡಕಾವ್ಯ ಅಪೂರ್ಣವಾಗಿ ಉಳಿದಂತೆ, ಇನ್ನಷ್ಟು ಕವಿತೆಗಳೂ ಉಳಿದಿರಬೇಕು. ಕವಿಯಾಗಿ ಶ್ರೀ ಪೈಗಳ ಸಾಧನೆ–ಸಿದ್ಧಿಗಳೇನು, ಮುಂದಿನ ಕನ್ನಡ ಕಾವ್ಯದ ವಿಕಾಸಕ್ಕೆ ಅವು ನೀಡಿದ ಪ್ರೇರಣೆಗಳೇನು ಎಂಬುದನ್ನು ಸಮೀಕ್ಷಿಸಲು ಈ ಕಾವ್ಯ

ಸಮುದಾಯ ಸಾಕಷ್ಟು ಮಾಹಿತಿಯನ್ನೊದಗಿಸುತ್ತದೆ. ಈ ಬಗೆಗೆ ಕೆಲವು ಅಧ್ಯಯನಗಳು ಈಗಾಗಲೇ ನಡೆದಿರುವುದರಿಂದ ಇಲ್ಲಿ ಅದರ ಸಮೀಕ್ಷೆ ಹಾಗೂ ವಿಮರ್ಶೆಯು ಅತಿ ವಿಸ್ತಾರಕ್ಕಿಳಿಯದೆ ಮುಖ್ಯಾಂಶಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ.

ಪೈಗಳ ಪ್ರಥಮ ಕವನ ಸಂಕಲನ 'ಗಿಳಿವಿಂಡು', (೧೯೩೦), ಇತ್ತೀಚೆಗೆ ಪ್ರಕಟವಾದ 'ನಂದಾದೀಪ' (೧೯೬೮) ಎರಡನೆಯದು 'ಹೃದಯರಂಗ' (೧೯೭೯) ಅವರ ಅಪ್ರಕಟಿತ ಕವಿತೆಗಳ ಸಂಗ್ರಹ, ಮೂರನೆಯದು. ಅವರ ಖಂಡ ಕಾವ್ಯಗಳು ಗೊಲ್ಗೊಥಾ (೧೯೩೭) ಮತ್ತು ವೈಶಾಖಿ (೧೯೪೭) ಶ್ರೀ ಗೊಮ್ಮಟ ಜಿನಸ್ತುತಿ ಪ್ರತ್ಯೇಕವಾಗಿಯೂ, ಇಡಿಯ ಸಂಗ್ರಹದಲ್ಲಿಯೂ ಪ್ರಕಟವಾಗಿದೆ. ಈ ಸಂಗ್ರಹಗಳಲ್ಲಿ ಕೆಲವು ೨–೩ ಬಾರಿ ಪ್ರಕಟವಾಗಿವೆ. ಪೈ ಕಾವ್ಯದ ಸಮಸ್ತ ಸಂಪುಟವೊಂದು ಇನ್ನೂ ಬರಬೇಕಾಗಿದೆ. ಪೈಗಳ ಈ ಎಲ್ಲ ಕಾವ್ಯ ಕೃತಿಗಳ ಶಿರೋನಾಮೆಯೇ ಅರ್ಥಪೂರ್ಣವಾಗಿ, ಕವಿಯ ಕಾವ್ಯಾಭಿವ್ಯಕ್ತಿಯ ಹಂತಗಳನ್ನೂ, ಜೀವನದ ದೃಷ್ಟಿ ವಿಕಾಸದ ಮೈಲುಗಳನ್ನೂ ಸೂಚಿಸುತ್ತವೆ. ಕಿರುಹರೆಯದ, ಪ್ರಾರಂಭಿಕದೆಸೆಯ ಭಾವ–ವಿಲಾಸ ಎಲ್ಲಿಂದಲೋ ಬಂದು, ಯಾವುದೋ ತೋಟದಲ್ಲಿ ಕ್ಷಣ ನಿಂದು, ಮುಂದೆ ಹಾರಿ ಹೋಗುವ 'ಗಿಳಿವಿಂಡಿ' ನಂಥ ಕವಿತೆಗಳು ಇವು.

'ನನ್ನವೀ ನುಡಿಗಳಿರ ! ಕಾಲದಲೆಗಳಲಿ । ನಿಮ್ಮನುರಿಹಣತೆಯಂತಿ
ದೋ ತೇಲಿಬಿಡುವೆ ಹಾಗೂ
ನನ್ನೆದೆಯೋರ್ಮರಗಳಿಗೆ ಉಲಿದುಲಿಸಿದಲ್ಲಿ
ನನ್ನವಾದಿರೆ ? ನಿಮ್ಮ ನನ್ನವೆನಲೆಂತು ?– ಎಂಬ ನುಡಿಗಳಲ್ಲಿ

ಕವಿಯ ಧೋರಣೆ, ವಿನಯ. ವ್ಯಕ್ತವಾಗಿದೆ. 'ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ' ಎಂಬ ಅವರ ವ್ಯಕ್ತಿತ್ವ ಪ್ರಾತಿನಿಧಿಕ ಕವನ ಬಂದುದು ಇದೇ ಸಂಗ್ರಹದಲ್ಲಿ ಅಲ್ಲದೆ, ಪೈಗಳ ಪ್ರಕೃತಿಪ್ರೇಮ, ನಾಡು–ನುಡಿ ಭಕಿ, ದೈವಭಕ್ತಿ, ಜೀವನ ಪ್ರೀತಿ, ಮುಂತಾದ ಎಲ್ಲ ಭಾವಗಳ ಗಿಳಿವಿಂಡನ್ನು ಹಾರಿಸಿರುವರು. ವಿವಿಧ ಛಂದ, ರಾಗ, ಪ್ರಸ್ತಾಪಗಳ ಬಳಕೆಯ ಕವನಗಳಿಲ್ಲಿವೆ. ಗೋವಿಂದ ಪೈಗಳ ವ್ಯಕಿತ್ವದ ಮಜ್ಜೆ–ಮಾಂಸವಾದ ದೈವಭಕ್ತಿ, ಅದರ ಲೀಲಾವಿಲಾಸಗಳು ಹೆಚ್ಚಿನ ಕವಿತೆಗಳಲ್ಲಿ ವಿನ್ಯಾಸಗೊಂಡಿವೆ.

ನಿನ್ನೊಳೆನ್ನಯ ಭಕ್ತಿ. ಅವಳೊಳನುರಕ್ತಿ–
ತೋರದನುರಕ್ತಿ, ಭಕ್ತಿಯನೆಯಕಾಂಬೆ
ನನ್ನ ಕೃಷ್ಣೆಗೊ. ನನ್ನ ಕೃಷ್ಣನಿಗೊ, ವ್ಯಕ್ತಿ
ದ್ವಯುಗಳದ್ವಯಕೊ, ಕೃಷ್ಣಾರ್ಪಣಮಿದೆಂದೆ' ಎಂಬ ಕೊನೆಯ

ಕವನದಲ್ಲಿ ತಮ್ಮ 'ಜೀವನದೃಷ್ಟಿ' ಬಿಂಬಿಸಿರುವರು. ಈ ಸಂಗ್ರಹದ ವೈಶಿಷ್ಟ್ಯವೆಂದರೆ, ತಮ್ಮ ಹೃದಯವನ್ನು ಗೆದ್ದ ಇಂಗ್ಲಿಷ್. ಮರಾಠಿ. ಜರ್ಮನ್. ಪರ್ಷಿಯನ್ ಕವಿ

ಗಳ ಆಯ್ದ ಅನುವಾದಗಳು. ವರ್ಡ್ಸ್‌ವರ್ತ್, ಶೆಲ್ಲಿ, ಇಕ್ಬಾಲ್, ಠಾಕೂರ, ಥಿಯೊಡರ್ ಕ್ರೋನರ್, ಉಮರ್ ಖಯ್ಯಾಮರ ಪದ್ಯಗಳನ್ನು, ಈಗಾಗಲೇ ಕನ್ನಡದ ಇತರ ಕವಿಗಳು ಅನುವಾದಿಸಿದ್ದರೂ, ಪೈಗಳ ಈ ಸಹೃದಯ ಪ್ರಯತ್ನ ಪ್ರಥಮ ಮಾನ್ಯ. ಈ ಪ್ರಯೋಗ ಶ್ರೀಗಳ ಇಂಗ್ಲಿಷ್ ಗೀತೆಗಳಿಗಿಂತ ಹಿಂದಿನದು, ಮಾರ್ಗದರ್ಶಕವಾದುದು. ಅಸಫಲವಾದ ಭಾಷಾಂತರಗಳೇ ಆದರೂ ಪ್ರಥಮಗಣ್ಯವಾದುವು.

'ನಂದಾದೀಪ'ವೆಂಬ ಶಿರೋನಾಮೆಯ ಔಚಿತ್ಯವನ್ನು ಪೈಗಳೇ ಹೀಗೆ ಸೂಚಿಸಿದ್ದರೆ 'ನನ್ನ ಸಹಧರ್ಮಿಣಿಯ ನೆನವಿಗೆ ಬಾಷ್ಪಾಂಜಲಿಯಾಗಿ, ನಮ್ಮನ್ನು ಅಗಲಿಸಿದ ವಿಧಾತನಿಗೆ ಶ್ರದ್ಧಾಂಜಲಿಯಾಗಿ' ೧೯೨೮ರಲ್ಲಿಯೇ ಈ ಕೆಲವು ಕವಿತೆಗಳನ್ನು ಬರೆದು, 'ಅಂದು ಅವಳ ಅಗಲಿಕೆಯಿಂದ ನನ್ನಲ್ಲಿ ಹೊತ್ತಿ, ಮುಂದು ನಾನು ಇದ್ದಿರುವನಕಾ ನಂದದ ಶೋಕಾನಲದಿಂದ ದೇವರ ಮುಂದೆ ಹಚ್ಚಿರಿಸಿದ ದೀಪ'– ಕಾರಣ ಇದು ನಂದಾದೀಪ ಎಂದಿರುವರು. ಪೈಗಳೇ ಸಂಗ್ರಹಿಸಿ, ಸಂಕಲಿಸಿದ್ದ ಈ ಕವನ ಗುಚ್ಛ, ಮರೆಯಲಾರದ ದುಃಖದ 'ಸಖೀಗೀತ'. ಚಿಂತೆಯನ್ನು ಗೆದ್ದು, ದೇವರ ಚಿಂತನೆಯಲ್ಲಿ, ಪ್ರಕೃತಿಯ ವೀಕ್ಷಣೆಯಲ್ಲಿ, ದುಃಖದಿಂದ ಮೂಡಿದ ಬದುಕಿನ ಸಮಾಧಾನದ–ನಂದದ 'ನಂದಾದೀಪ' ಕಿರಣ ವಿನ್ಯಾಸದ ಕವಿತೆಗಳು ಇಲ್ಲಿವೆ. ಪಾಂಡಿತ್ಯದ ಭಾರವಿಲ್ಲದ, ಪ್ರಯೋಗದ ಹಟವಿಲ್ಲದ, ಕವಿಹೃದಯದ ಉಕ್ಕಂದಗಳು ಇವು.

ನೀನೆನ್ನ ಚಿಂತೆಯಲಿ ಸಂತಸಂ ತಳೆಯೆ
ಎಂಬುದಂ ಬಲ್ಲೆ ನಿನ್ನಂ ಬರಿದೆ ದೂರೆ !

*　　*　　*　　*

ಬಾಳ್ವೆಯಾ ಮರವೆಗೊಳಲೇಂ ಗೊಡವೆ ನನ್ನ ?
ಹಗಲಹೆರೆ ಬಲ್ಲುದೇಂ ನೆಯ್ದಿಲೆಯ ಸಲುಗಂ ?
ಹುಣ್ಣಕೆಚ್ಚಲನುಣ ಕಚ್ಚುವಂತೆನ್ನ
ಸುರಿವೆದೆಯೊಳಿರುವುದಿನ್ನೇಕೆ ಬಾಳಲುಗಂ ?

ಸುಡುವ ಹಗ್ಗದ ಸುಡದ ಹುರಿಯೊಲಕ್ಕರೆಯಾ
ನೆನವೆನಗೆ ಕಡೆವರಂ ಕೆಡದೊಲಿರಿ ಸೆರೆಯಾ !

(ನಂದಾದೀಪ ಪು. ೧೯)

ಇಲ್ಲಿನ ಎಲ್ಲ ಕವನಗಳ ಸ್ಥಾಯಿ ಪ್ರಿಯ ಪತ್ನಿಯ ಸಾವಿನ ನೋವು, ಅದು ಪ್ರೇರಿಸಿದ ಭಾವಗಳ ಕಾವು, ಹೊಮ್ಮಿಸಿದ ಸಾವು–ಬದುಕುಗಳ ಚಿಂತನೆ. ಇಲ್ಲಿನ ಸಂಚಾರಿಗಳು. ಭಾವದ ತೀವ್ರತೆ ಪ್ರೇರಿಸಿದಂಥ ವಿವಿಧ ಛಂದಗಳಲ್ಲಿ– (ಅವೆಲ್ಲ ಮುಕ್ತ ಭಾವಗೀತೆಗಳ ಮಾದರಿಗಳು)– ವಿವಿಧ ಲಯ ಗತಿಗಳಲ್ಲಿ, ಆತ್ಮಗತ ಭಾವಗಳ ಮುಕ್ತರೀತಿಯ ಅಭಿವ್ಯಕ್ತಿಯ 'ಸ್ವಾನುಭವ ಪೂರ್ಣ ಕಾಣಿಕೆ' (ಜಿ. ವರದರಾಜರಾವ್) ಯಾಗಿದೆ.

ಪೈಗಳ ಜೀವನದ ಪರಿಣತಿಯಂತೆಯೇ ಅಭಿವ್ಯಕ್ತಿಯ ಪರಿಣತಿ, ವೈವಿಧ್ಯ, ವಿನೂತನತೆಯನ್ನೂ ಇಲ್ಲಿ ಗುರುತಿಸಬಹುದು.

'ಹೃದಯರಂಗ' ಶ್ರೀ ಗೋವಿಂದ ಪೈಗಳ ಸಾಮಾಜಿಕ ಸಮಕಾಲೀನ–ಭಾವ–ಚಿಂತನೆಗಳು, ಅಂದಂದಿಗೆ ಕವಿ ಹೃದಯ ರಂಗದಲ್ಲಿ ಓಡಾಡಿವೆ ಕೀಡಾಡಿವೆ, ತಾರಾಡಿವೆ ಎಂಬುದರ ಪ್ರತೀಕ. ಸಮಕಾಲೀನ ಸ್ಪಂದನದಿಂದ ಕವಿ ದೂರಾ ಉಳಿಯಲಾರ; ಜೀವಂತ ಕವಿ ಬದುಕಿನ ಸಮ–ವಿಷಮ ಭಾವಗಳಿಗೆ ಪ್ರತಿಕ್ರಿಯೆ ತೋರಬೇಕು, ನಾಡು–ನುಡಿ–ರಾಷ್ಟ್ರಪ್ರಜ್ಞೆ, ಪೈಗಳ ವ್ಯಕ್ತಿತ್ವದ ಪ್ರೇರಕ–ಪ್ರಚೋದಕ ಶಕ್ತಿಗಳಲ್ಲೊಂದು ಎಂಬುದನ್ನು ಗಮನಿಸಿದ್ದೇವೆ.* ಕನ್ನಡ ಮಾತೆಯನ್ನು, ತುಳು ತಾಯಿಯನ್ನು ಹಾಡಿ ಹರಿಸಿದ ಕವಿ ಇಲ್ಲಿ, ಭಾರತ ರಾಷ್ಟ್ರದ ದಾಸ್ಯ, ಸಂಕೋಲೆ, ಸಂಕಟಗಳನ್ನು, ಜಗತ್ತಿನ ಇತರ ರಾಷ್ಟ್ರ ಜನಾಂಗಗಳ ಕ್ರೌರ್ಯ, ಅಸಾಯಕತೆಗಳನ್ನು ಕಂಡು, ಕುದಿದು ಮರುಗಿದ್ದಾರೆ. 'ಭಾರತದ ಸ್ವಾತಂತ್ರ್ಯದ ಗಾಯತ್ರಿ' (Quit India), ಅಣುಬಾಂಬು ಯುದ್ಧ ನಿಂತಿತೆ ?' 'ಜಯ ಹಿಂದ ಗೀತೆ' 'ತುತೂರಿ' ಮುಂತಾದ ಕವನಗಳಲ್ಲಿ ಈ ಭಾವ ತೀವ್ರತರವಾಗಿ, ಪರಿಣಾಮಕಾರಿಯಾಗಿ ವ್ಯಕ್ತವಾಗಿದೆ. ಕಥನಗೀತೆಗಳೆನ್ನಬಹುದಾದ 'ಮಾತಂಗಿ' 'ಶೂದ್ರರ್ಷಿ ಕವಷ' 'ವಾಸವದತ್ತೆ' 'ಹಳ್ಳಿಯ ಹುಡುಗಿ' 'ಹುಲ್ಲುಕಟಿಗ'– ಅಸ್ಪೃಶ್ಯರಲ್ಲಿ, ಕೆಳವರ್ಗದವರಲ್ಲಿ ಕವಿ ತೋರಿದ ಅನುಕಂಪ. ಎಚ್ಚರ–ಚಚ್ಚರ, ಧರ್ಮ–ಜಾತಿ ವ್ಯವಸ್ಥೆಯ ಕಬಂಧ ಬಂಧನದಲ್ಲಿಯೂ, ಕ್ರಾಂತಿದನಿಯನ್ನೂ ಮೊಳಗಿಸಿದ್ದಾರೆ ಪೈ. ಪ್ರಾಚೀನ ಸಾಹಿತ್ಯದ, ಪುರಾಣ ಪರಂಪರೆಯ, ಸಂಸ್ಕೃತಿ ಸತ್ಪುತ್ರರ ಜೀವನದ ಒಂದೊಂದು 'ಅಂಶ'ಗಳನ್ನೆತ್ತಿ, ದೃಶ್ಯ, ಸಂಭಾಷಣೆಗಳನ್ನು ತಂದು, ಪೈ ಅತ್ಯಂತ ಮನೋಹರವಾದ ಕಾವ್ಯವನ್ನಾಗಿಸಿದ್ದಿರೆ. ದಲಿತಪ್ರಜ್ಞೆ, 'ಸಂಘರ್ಷ' ಇತ್ಯಾದಿ ಇಂದು ಪಂಥಕಟ್ಟಿ ನುಡಿವವರು ಇದನ್ನು ಗಮನಿಸಿಯಾರೆ ? ಹರಿಜನರ ಬಾಲೆಯೊಬ್ಬಳ ಬಗೆಗೆ ಬರೆದ 'ಮಾತಂಗಿ'ಯಲ್ಲಿ.

'ಪ್ರಕೃತಿ ನೀ ಭಾಗ್ಯ ಶಾಲಿನಿ ! ಮಗಳೆ ಮಾತಂಗಿ
ಕುಲಜೆಯಾದೊಡಮಾರ್ಯರಾದರ್ಶಗಳಿರುವೆ !
ನೀಚ ಜಾತಿಯ ನಿನ್ನ ನಡೆಕಂಡು. ಪಾತಂಗ–
ಳನ್ನೂ ವಿಪ್ರರು ಕಲಿವರೆನಿತೊ ನೀನರಿವೆ' ಎಂಬ ಬುದ್ಧನ

ಮಾತು ಅಂದಿಗದೆಷ್ಟು ಹೊಸತು ! ಆ ಪ್ರಸಂಗವನ್ನೆತ್ತಿ, ಪರಿಣಾಮಕಾರಿಯಾಗಿ ಚಿತ್ರಿಸಿ, ಪೈಗಳು ಪೌರಾಣಿಕ ಪ್ರಸಂಗದಲ್ಲಿ ಸಮಕಾಲೀನ ಪ್ರಜ್ಞೆಯನ್ನು ಬಿಂಬಿಸಿರುವರು. 'ವಾಸವದತ್ತೆ' ಹುಲ್ಲುಕಟಿಗ' 'ಶೂದ್ರರ್ಷಿಕವಷ' 'ಹಳ್ಳಿಯ ಹುಡುಗಿ' ಮುಂತಾದವು ಇಂಥ ದೀರ್ಘ ಕವನಗಳಲ್ಲಿ ಪೈಗಳ ಕಾವ್ಯದ ವಸ್ತುಪ್ರಪಂಚದ ವಿಸ್ತರಣ,

* ಗಾಂಧೀಜಿ ದಂಡಿಯಾತ್ರೆಯಲ್ಲಿ ಹಿಡಿದು ಹೋದ 'ಕೈಕೋಲು' ಪೈಗಳದ ಎಂದು ಈಚೆಗೆ ತಿಳಿದು ಬಂದಿದೆ. ಅವರು ಎಂದಿಗೂ ಖಾದೀಧಾರಿಗಳಾಗಿದ್ದರೆಂಬುದೂ ಗಮನೀಯ ಅಂಶ.

ನಿರೂಪಣೆಯ ವೈವಿಧ್ಯ. ಸರಳ ಭಾಷೆ, ಸನ್ನಿವೇಶದ ದೃಶ್ಯೀಕರಣದ ಸಾಧನೆಗಳನ್ನು ಕಾಣುತ್ತೇವೆ. ಇವುಗಳಲ್ಲಿ ಮಾನವ ಜೀವನದ ನಿತ್ಯ ಸಾರ್ಥಕತೆ ಸಾಮಾನ್ಯರಲ್ಲಿಯೂ ಇದೆ. ಅಷ್ಟೇ ಅಲ್ಲ, ಅವರಲ್ಲಿ ಮೇಲ್ತರದವರಿಗಿಂತ ಹೆಚ್ಚಿದೆ ಎನ್ನುವುದು ಇಲ್ಲಿನ ನಿರಂತರ ಧ್ವನಿ. ಹಾಗೆಯೇ, ಕವಿಯ ಆಧ್ಯಾತ್ಮಿಕ ಪ್ರಜ್ಞೆಯನ್ನು ಬಿಂಬಿಸುವ 'ಯಶೋದೆಯ ಜೋಗುಳ' 'ಭಸ್ಮಾಸುರ' ಮುಂತಾದ ಭಾವಗೀತೆಗಳಲ್ಲಿ ಭಕ್ತಿಯ, 'ಸೌಂದರ್ಯ'ದ ಅಂಶಗಳನ್ನು ಗಮನಿಸಬಹುದು. ಇಲ್ಲಿ 'ಪೈ' ಬದುಕಿನಲ್ಲಿ, ಕಾವ್ಯ ಕೃಷಿಯಲ್ಲಿ 'ಪರಿಣತ' 'ಪರಿಪೂರ್ಣತ'ರಾಗಿರುವರು.

೩

ಶ್ರೀ ಗೋವಿಂದ ಪೈಗಳನ್ನು ಹಿರಿಯ ಕವಿಯೆಂಬ ಪಟ್ಟಕ್ಕೇರಿಸಿದ ಕೃತಿಗಳು ಅವರ ಖಂಡಕಾವ್ಯಗಳು.'ಶ್ರೀ ಗೊಮ್ಮಟ ಜಿನಸ್ತುತಿ' ವೃತ್ತ ಛಂದದಲ್ಲಿಯೂ, ಪರಿಚಿತ ವಸ್ತುವಿನಲ್ಲಿಯೂ ಕವಿಯ ಭಾವವಿಲಾಸ–ವಿಚಾರ ವಿಹಾರಗಳನ್ನು ವಿನೂತನವಾಗಿ ಚಿತ್ರಿಸಬಹುದೆಂಬುದಕ್ಕೆ ಮಾದರಿ. ಗೊಮ್ಮಟನ ಜೀವನ ಸೌಂದರ್ಯ, ಶಿಲ್ಪ ಸೌಂದರ್ಯ ಅವುಗಳನ್ನು ಪರಿಭಾವಿಸುವ ಪೈಗಳ ಸಹೃದಯತೆ, ಚಿಂತನಪರತೆ ಎಂಥವ ರನ್ನೂ ಮೆಚ್ಚಿಸುತ್ತದೆ.

ಕಾಯ್ಕೆ ಭೇದಮನೊಲ್ಲದೆಲ್ಲರಲಿ ಸತ್ಸೌಂದರ್ಯಮಂ ವೀರ್ಯಮಂ
ಕಾಯ್ಕೆ ಗಂಡಸರಲ್ಲಿ ಮಾತೃಭೂಮಿಯಾ ಸಂಪ್ರೀತಿಯಂ ನೀತಿಯಂ
ಕಾಯ್ಕೆ ಹೆಂಗಸರಲ್ಲನನ್ಯಪರ ಪಾತಿವ್ರತ್ಯಮಂ ಸತ್ಯಮಂ
ಕಾಯ್ಕೆ ಮಕ್ಕಳೊಳಾತ್ಮದೀಧಿತಿಯ ನೀ ! ಶ್ರೀ ಗೋಮಟಾಧೀಶ್ವರಾ ॥

(ಪದ್ಯ ೩೫ ಪು. ೩೬)

ಈ ಬಗೆಗೆ ಕನ್ನಡದ ಹಿಂದಿನ–ಇಂದಿನ ಕವಿಗಳೂ ಕಾವ್ಯಸೃಷ್ಟಿಸಿರುವುದರಿಂದ, ಅವುಗಳ ತೌಲನಿಕ ಅಧ್ಯಯನದಿಂದ ಪೈಗಳ ಕಾವ್ಯಸಾಧನೆಯ ವೈಶಿಷ್ಟ್ಯ ನೆಲೆನಿಲ್ಲುತ್ತದೆ. ಇದೇ ಛಂದ–ಬಂಧದಲ್ಲಿ ರಚಿತವಾದ 'ಹಳ್ಳಿಯ ಹುಡುಗಿ' ಸಾಮಾನ್ಯ ವ್ಯಕ್ತಿ–ವಸ್ತುವನ್ನೂ ತಮ್ಮ ಕಲ್ಪನಾಶೀಲ ಕವಿಸ್ವಭಾವದಿಂದ 'ಒಳ್ಳೆಯ ಕಾವ್ಯ'ವನ್ನಾಗಿಸುವ ಪೈಗಳ ಇಬ್ಬಗೆಯ ಶಕ್ತಿಯನ್ನೂ ಗಮನಿಸಬಹುದು. ಗೊಮ್ಮಟ ಪದ್ಯದ 'ಗಾಂಭೀರ್ಯ' ವನ್ನೂ, ಬಿಗಿಶೈಲಿಯನ್ನೂ ಮೆಚ್ಚುವ ಸಹೃದಯ, ಹಳ್ಳಿಯ ಹುಡುಗಿಯ ಸುತ್ತ ಬೆಳೆದ ಭಾವ–ಚಿಂತನ ವಿನ್ಯಾಸವನ್ನೂ, ಕವಿಭಾಷೆಯ ಸರಳತೆ, ಶೈಲಿಯ ಸಲೀಲತೆ ಯನ್ನೂ ಇನ್ನೂ ಮೆಚ್ಚಬಲ್ಲ ಹಾಗೆಯೇ 'ಭಿಕ್ಷುವೂ ಪಕ್ಷಿಯೂ' ಎಂಬ ನೀಳ್ಗವನ ಈ ಎಲ್ಲ ಸಾಧನೆಗಳಿಗೆ ಇನ್ನೊಂದು ಮಾದರಿ. ಚತುಷ್ಪದಿಗಳಲ್ಲಿ, ಸಂವಾದ ರೀತಿ ಯಲ್ಲಿ, ವಿನೂತನ ಉಪಮೆಗಳಲ್ಲಿ ಮೂಡಿದ ಪೈಗಳ ಕಾವ್ಯ ಚೈತನ್ಯದ ವಿಲಾಸವನ್ನು, ವೈವಿಧ್ಯತೆಯನ್ನು ಅನನ್ಯತೆಯನ್ನು ಮೆಚ್ಚದವರಾರು ? ಸಂಸ್ಕೃತಿ ಸಂಶೋಧನೆ, ಆತ್ಮಸಂಶೋಧನೆ, ನಿಶಾಂತ ಚಿಂತನೆಯಲ್ಲಿ ನಿರತವಾದ ಪೈಗಳ ಸೃಜನಕ್ರಿಯೆ, ಇಂಥ

ಕವಿತೆಗಳನ್ನು ನಿರ್ಮಿಸಲು ಸಾಧ್ಯವಾಗಿದೆ. ಬೌದ್ಧಧರ್ಮ. ಜೈನಧರ್ಮ. ಇಸ್ಲಾಂ ಧರ್ಮ'ಗಳ ಬಗೆಗೆ, ಧರ್ಮಪುರುಷರ ಬಗೆಗೆ ಪೈಗಳು ಬೀರಿದ ನೋಟ. ತೋರಿದ ಗೌರವ. ಮಾಡಿದ ಟೀಕೆ. ಅಲ್ಲಿ ಕಂಡುಕೊಂಡ ಸಾರ್ವಕಾಲೀನ ಸತ್ಯ. ಮಾನವೀಯ ಸೌಂದರ್ಯ ಈ ನೀಳ್ಗವನಗಳಿಗೆ ಶಾಶ್ವತತೆಯನ್ನು ತಂಬಿಕೊಟ್ಟಿದೆ. ಪೈಗಳ ಇಬ್ಬಗೆಯ ಸಾಧನೆಗಳನ್ನು ಪ್ರತಿನಿಧಿಸುತ್ತದೆ. ಕವಿಯ ಹಣ್ಣಾದ ಬದುಕಿನ ಪರಿಣತ ಅಭಿವ್ಯಕ್ತಿ ಇಲ್ಲಿದೆ.

ಶ್ರೀ ಗೋವಿಂದ ಪೈಗಳನ್ನು ಎಲ್ಲ ತಲೆಮಾರುಗಳ ಶ್ರೇಷ್ಠಕವಿಯಾಗಿಸಿದ ಖಂಡ ಕಾವ್ಯಗಳು ಗೊಲ್ಗೊಥಾ ಮತ್ತು ವೈಶಾಖಿ. ಒಂದು ೧೯೩೧–೩೭ರ ಕಾಲದಲ್ಲಿ ನಿರ್ಮಿತವಾದರೆ, ಇನ್ನೊಂದು ೧೯೪೭ರಲ್ಲಿ ಕವಿಗೆ ಅರವತ್ತು ವರ್ಷ ತುಂಬಿದ ಕಾಲದಲ್ಲಿ ಸೃಷ್ಟಿಯಾಗಿದೆ. ಪೈಗಳ ಜೀವನಕ್ಕೆ ಅಂತೆಯೇ ಕಾವ್ಯಕ್ಕೆ ಪ್ರೇರಕವಾದ ಎಲ್ಲ ಅಂಶಗಳ ಸಮೂಹಿತ ಶಕ್ತಿಗಳು ಅನನ್ಯ ಅಭಿವ್ಯಕ್ತಿಗಳು ಇವು. ಗೊಲ್ಗೊಥಾ ಸರಳ ರಗಳೆಯ ೩೭೭ ಸಾಲುಗಳ ವಿಸ್ತಾರ ಪಡೆದರೆ. ವೈಶಾಖಿ ೭೩೨ ಪಂಕ್ತಿಗಳಲ್ಲಿ ಹಬ್ಬಿದೆ. ದೇವಮಾನವ ಏಸುಕ್ರಿಸ್ತನನ್ನು ಅಜ್ಞಾನಿ. ಅಹಂಕಾರಿಗಳು ಶಿಲುಬೆಗೇರಿಸಿದ 'ಲೋಕಶೋಕ'ದ ಉಮ್ಮಳದ ಹಾಗೂ ಆತನ ಜೀವಸಂದೇಶದ ಧ್ವಜವೆತ್ತುವ ಕಾವ್ಯ, ಒಂದು ಮಹಾಕಾವ್ಯಕ್ಕೆ ವಸ್ತುವಾಗಬಲ್ಲ ಸಂಗತಿಯನ್ನು. ಒಂದು ಖಂಡಕಾವ್ಯದಲ್ಲಿ ಎರಕಹೊಯಿದಿರುವರು, ವಿಶ್ವವ್ಯಾಪಿಯಾದ ಈ 'ವಸ್ತು'ವನ್ನು. ಇಂಥ ಬೈಬಲ್ಲಿನ ಸಂಗತಿಗಳನ್ನು ಕನ್ನಡಕ್ಕೆ ತಂದ ಮೊದಲಿಗರು ಪೈ. ಆಳವಾದ ಅಭ್ಯಾಸ. ಬಹುದಿನಗಳ ಚಿಂತನೆ ಹಾಗೂ ಆ ಮಾನವೀಯ ಸನ್ನಿವೇಶದ ವಿಶಿಷ್ಟತೆಯನ್ನು. ವಿವಿಧ ಪಾತ್ರ. ಸನ್ನಿವೇಶಗಳ ಹಿತ–ಮಿತ–ಬಿಗಿ ನಿರೂಪಣೆಯಲ್ಲಿ ಆತ್ಮೀಯತೆ ಹಾಗೂ ಅನನ್ಯತೆಯನ್ನು ಸಾಧಿಸಿರುವರು ಪೈ. ವಿಪುಲವಾದ ಅಡಿಟಿಪ್ಪಣಿ. ಕುಡಿಟಿಪ್ಪಣಿ. ಸಂಶೋಧನಾತ್ಮಕ ಮುನ್ನುಡಿಗಳನ್ನೊಳಗೊಂಡ ಈ ಕೃತಿ–ಈ ಮೇಲುನೋಟಕ್ಕೆ ಟೀಕೆಗೊಳಗಾದರೂ ಕಾವ್ಯಾಂತರಾಳಕ್ಕೆ ಹೋಗಬಲ್ಲ ಸಹೃದಯನನ್ನು ಕೃತಿಯನ್ನು ತಲೆಗಿತ್ತಿ ಗೌರವಿಸಬಲ್ಲ. ಹೊಸವಸ್ತು. ನೂತನ ಪರಿಸರ. ವಿಶೇಷ ರೀತಿಯ ಪದಗಳ ಬಳಕೆ ಅನಿವಾರ್ಯ ಹಾಗೂ ಅಂತ್ಯದಲ್ಲಿ ಮೂಡುವ 'ರಸಾನುಭವ'ಕ್ಕೆ ಇವೆಲ್ಲ ಆವಶ್ಯಕವೆಂಬುದನ್ನು ಮನಗಾಣುವನು.

ಕೋಳಿ ಮೂರನೆ ಬಾರಿ ಕೂಗಿ ಯೇಸುವ ಕೊಲ್ಲ
ಲೆಳಸಿದ ಯಹೂದ್ಯರ ಮನಸ್ಸಾಕ್ಷಿಯೊಲು ಸುಮ್ಮನಾಗೆ.........

ಎಂದು ನೇರವಾಗಿ ಪ್ರಾರಂಭವಾಗಿ. ಆ ದುಃಖದ ಸನ್ನಿವೇಶಕ್ಕೆ ಹೊಂದುವ ಪ್ರಕೃತಿ ವರ್ಣನೆ ಹಾಗೂ ಮಾನವ ಸ್ವಭಾವದ ವಿಕೃತಿ ವರ್ಣನೆಯೊಡನೆ ಅತಿಮಾನವನಾಗಿ ನಿಂತ ಏಸುಕ್ರಿಸ್ತನನ್ನು ಕವಿ ಕಂಡುದು ಹೀಗೆ :–

ಇಪ್ಪತ್ತು ಶತಕದ ಹಳೆಯು

ಕಾಲನಾ ಕನ್ನಡಿಯಿನಿಂದಿನೀ ಜವನಿಕೆಗೆ
ಪ್ರತಿಬಿಂಬಿಸುವ ಸೊಂಪ, ಜಗದುಂಬಿಸುವ ಪೆಂಪ
ತನಗೆ ತಾನೆಣೆಯೆ ದೇವಾತ್ಮಜಾತನ ನೋಡ !
ಆಪನಿತು ನೋಡ, ಕಣ್ತುಂಬ ನೋಡೀಗಳಿದೋ
ಈ ಹರೆಯದೀ ಶೋಭೆಯಿೊ ಜಗತ್ಪ್ರೇಮ ದೀ
ಸುಜ್ಞಾನದೀ ಶಾಂತಿಯಿೊ ಮಹಿನೀಯಿೊ ಜಿತಾ
ಸ್ಮತಯಿೊ ತಪಃ ಶಕ್ತಿಯಿೊ ಧರ್ಮದೀ ಮನುಜ
ದೇವತನದೀ ಸುಧಾಸಿಂಧು ಯೋರ್ದನಿನಂತೆ
(ಜೋರ್ಡಾನ್ ನದಿ–Dead. Sea ಗೆ ಬೀಳು)
ಸುರಿವುದಕಟೊ ಮೃತ ಸಮುದ್ರದಲಿ ನೋಡ !

ಮತ್ತೆ, ಮತ್ತೆ ಓದಿ ಪರಿಭಾವಿಸಬೇಕಾದ ಸಾಲುಗಳಿವು. ಅಂತೆಯೇ, ಏಸುವಿನ ಅಂತ್ಯದ ದೃಶ್ಯವೂ. ಲೋಕ ಶೋಕದ ಪ್ರತಿನಿಧಿಯಂತೆ–ಮಹಾಮಾನವನ ಮರಣದಲ್ಲಿ ನಿಷ್ಪಂದ–ಶಾಂತಭಾವದ ವರ್ಣನೆ' ಬೆಳದಿಂಗಳೆತ್ತಲುಂ ನಿಷ್ಪಂದಮೀಸ್ತಲುಂ ಶಾಂತಂ' ಎಂಬ ಗಂಭೀರ ಮೌನ, ಉಸಿರು ಕಟ್ಟಿಸುವ ಶಾಂತತೆಯ ಚಿತ್ರಣ, ಪೈಗಳ ಹೃದಯ ಮಂತಿಕೆ, ಕಲ್ಪನೆಯ ತಾದಾತ್ಮ್ಯತೆಯ ಪ್ರತೀಕ, ಅತಿ ಆಡಂಬರವಿಲ್ಲದ, ಗಂಭೀರ ನಡಿಗೆಯಲ್ಲಿ ನಡೆವ ಗೊಲ್ಗೊಥಾ ಯಾವ ಮಾನದಿಂದಲೂ 'ಕಾವ್ಯದ ಧವಳಗಿರಿ'. ಭಾವಸ್ಪಂದನಕ್ಕೆ, ಆವಶ್ಯಕವಾಗಿ ಪೈಗಳು ಉಪಮಾನಗಳ ಮೇಲು ಪಮಾನಗಳನ್ನು ಅಡಿಕಿಲಾಗಿಸಿರುವರು, ಪ್ರಕೃತಿಯನ್ನು ವರ್ಣಿಸಿರುವರು, ಮಾನವ ಹೃದಯಗಳ ವೈರುಧ್ಯಗಳನ್ನು ಚಿತ್ರಿಸಿರುವರು. ಇಲ್ಲಿನ ಪಾತ್ರಚಿತ್ರಣವೂ ಚಿತ್ರವತ್ತಾಗಿದೆ. ಅರ್ಥ ವತ್ತಾಗಿದೆ. 'ಗೊಲ್ಗೊಥಾ'ವನ್ನು ಪ್ರಶಾಂತ ಮನಸ್ಥಿತಿಯಲ್ಲಿ ಸಮಗ್ರವಾಗಿ ಅನು ಸಂಧಾನ ಮಾಡಿದಾಗ ಮಾತ್ರ, ಈ ಖಂಡಕಾವ್ಯದ ಅಖಂಡ ರಸಾನುಭವವಾಗುತ್ತದೆ. ಇಂಗ್ಲಿಷಿನ ಮುಕ್ತಛಂದವಲ್ಲದ (Blank verse) ವಲ್ಲದ. ದೇಶೀಯ ಲಲಿತ ರಗಳೆಯಲ್ಲಿ ಪೈಗಳು ಮಾಡಿದ ಸಾಧನೆ ಮನನೀಯ, ಇದನ್ನು 'ಝುಂಪೆ'ಯೆಂದೂ, ತ್ರಿಪುಡೆಯೆಂದೂ ಕರೆಯ ಬೇಕೆಂದಿರುವರು ಪೈ. ವಸ್ತುವಿನ್ಯಾಸ, ನೇರ ಅಭಿವ್ಯಕ್ತಿ, ಸಂಕ್ಷಿಪ್ತತೆಗಳ ಅನನ್ಯಮಾದರಿ ಈ ಗೊಲ್ಗೊಥಾ. ಪೈಗಳ ಬದುಕಿನ ಸ್ಥಾಯಿಯಾದ 'ದುಃಖ'ವೇ ಈ 'ರುದ್ರಮೃತಿ ನಾಟಕ, ಉದ್ವೇಗ, ಉತ್ಕಟ ಮರುಕಭಾವಗಳಿಗೆ ಪ್ರೇರಕ ವಾಗಿದೆ.

ಇನ್ನು ಇನ್ನೊಬ್ಬ ಮಾನವ ಮಹಾದೇವನಾದ ಬುದ್ಧ ಭಗವಾನನ ಎಂಬತ್ತು ವರ್ಷದ ಬಾಳಿನ ಕೊನೆಯ ವೈಶಾಖ ಪೂರ್ಣಿಮೆಯ ಪರಿನಿರ್ವಾಣದ ವಸ್ತು 'ವೈಶಾಖಿ' ಯೆಂಬ ಖಂಡಕಾವ್ಯವಾಗಿ ಮೂಡಿದೆ. ಪೈಗಳ ೬೦ ವರ್ಷಗಳ ಜೀವನಾನುಭವ

ಹಾಗೂ ಕಾವ್ಯ ಕೃಷಿಯ ನಲವತ್ತು ವರ್ಷಗಳ ಪರಿಣತಿ ಏಕತ್ರವಾಗಿ ಮೂಡಿದ ವೈಶಾಖಿ, ವೈ ಕಾವ್ಯದ 'ಕಾಂಚನ ಗಂಗೆ. ಬುದ್ಧನ ಪ್ರಶಾಂತ ಪರಿನಿರ್ವಾಣದ ಕತೆ. ಸಿಡಿದಾದ ಬಾಳಿನ ಅಂತ್ಯದಲ್ಲಿ ಮನಶ್ಶಾಂತಿ, ಸಮಾಧಾನ, ಸಂತೃಪ್ತಿಗಳನ್ನು, ಪರಿಪೂರ್ಣತೆಯನ್ನು ಕಂಡು ಕಂಡರಿಸಿದ ಕೃತಿ. ಬೌದ್ಧಧರ್ಮದ ಆಳವಾದ ಸಂಶೋಧನೆ, ಮಾನವತ್ವದ ಮಹಾಸಾಧನೆಯಾವುದೆಂಬ ಬಗೆಗಿನ ಚಿಂತನೆ, ಅನ್ವೇಷಣೆಯ ಕೆನೆ ಇಲ್ಲಿ ಕಾವ್ಯವಾಗಿ ಮೂಡಿದೆ.

'ಆನಂದ ಏಳಿನ್ನೂ ಭಿಕ್ಷುಗಳ ನೆಚ್ಚರಿಸ', ಎಂಬ ನೇರ ನುಡಿಯಿಂದ ಪ್ರಾರಂಭವಾಗುವ ಕಾವ್ಯ, ಬುದ್ಧನ ಪ್ರಶಾಂತತೆ, ಶಿಷ್ಯರ ಭಾವಸಂಘರ್ಷ–ಆಯಾ ಪಾತ್ರಗಳ ವೈವಿಧ್ಯಮಯ ಚಿತ್ರಣ, ಈ ಎಲ್ಲ ಘಟನಗಳಿಗೆ ಹಿನ್ನಲೆಯೂ, ಮೂಕಸಾಕ್ಷಿಯೂ ಆದ ಪ್ರಕೃತಿ ವರ್ಣನೆ–ಮುಂತಾದ ಕಾವ್ಯಾಂಶಗಳೆಲ್ಲ ಘನೀಭೂತವಾದ, ಹಳುಕುಗೊಂಡ (Crystaline) ಕೃತಿ 'ವೈಶಾಖಿ'.

> "ನೀರ ಬುದ್ಬುದದಂತೆ, ಕರೆಗುರುಳ್ವ ತೆರೆಯಂತೆ
> ಉದುರ್ವ ತೀರಗೆಯಂತೆ, ಸುರಿದು ಬರಿದಿಹಮೋಡ
> ದಂತೆ, ಬತ್ತಿಯು ಮೆಣ್ಣೆ ಮುಗಿದ ದೀವಿಗೆಯಂತೆ
> ಕ್ಷಿತಿಜದಿಂ ಸಿಡಿದ ಮಿಂಚಂಬರದೊಳಣೆವಂತೆ
> ಭಗವಂತನೊಡನೆ ಪರಿನಿರ್ವಾಣವಡೆದಂ ॥

ಎಂಬ ಸಾಲುಗಳಲ್ಲಿ ಬಂದಿರುವ, ಒಂದೊಂದು ಅಲಂಕಾರವೂ ಅರ್ಥಪೂರ್ಣ, ಭಾವಪೂರ್ಣ. ಅನಂತರ,

> ಗಡಗಡನೆ ಪೊಡವಿ ನಡುಗಿತು ಪಡಿಯನೊಡವೆಯಂ
> ಸೆಳೆದ ತಕ್ಕಡಿಯಂತೆ……' ಎಂದು ಪ್ರಕೃತಿ ಪ್ರತಿಕ್ರಿಯೆ ತೋರಿದರೆ.
> 'ಭಗವಂತನಂತು ಪರಿನಿರ್ವಾಣ ಹೊಂದುವುದೆ
> ನೆರೆದಿರ್ದ ಭಿಕ್ಷುವೊಳವೀತರಾಗರು ತೋಳ
> ನೀಡಾಡಿ, ಹೊರಳಾಡಿ'— ಪ್ರತಿಕ್ರಿಯೆಯನ್ನು ತೋರಿಸಿರುವರು

ಕೊನೆಯಲ್ಲಿ ಅನಿರುದ್ಧ. 'ಬಾಂದವರೆ ಸಾಕು ಗೋಳಾಡದಿರಿ' ಎಂದು ಬುದ್ಧಜೀವನದ ಸಂದೇಶವನ್ನು ಪ್ರಶಾಂತ ಮುಖಮುದ್ರೆಯಿಂದ. ಗಂಭೀರ ಮೌನವನ್ನು ಒಡೆಯುವಂತೆ ಪುಟ್ಟ ಧಮ್ಮ ಪದವನ್ನೇ ನುಡಿದ, ಆಗ,

> ……ಅಚಂಚಲದಲ ಶಾಂತಿ ದೆಸದೀವೆ, ತಾ
> ರಾ ನಿಚಯಮಶ್ರಾವ್ಯ ಸಂಗೀತ ವಾಚರಿಸೆ,
> ಪಶ್ಚಿಮ ನಿರಭ್ರಭುವನದಲಿ ದಿಗಂತಕೆ ಮೆಲ್ಲ
> ಮೆಲ್ಲನವತರಿಸುತಿರ್ದಂ ಸುಧಾಕಿರಣಂ'

ಎಂಬ ಪ್ರಶಾಂತ ಮೌನ ಚಂದ್ರಿಕೆಯ ವರ್ಣನೆಯೊಡನೆ ಬುದ್ಧನ ಪರಿನಿರ್ವಾಣದ ಕಥೆಯನ್ನು ಕಂಡರಿಸಿರುವರು. 'ಶೋಕ'ದ ಅಂತಿಮ ಗುರಿಯೂ ಶಾಂತವೇ ಎಂಬುದಕ್ಕೆ ಇದು ನೇರ ಉದಾಹರಣೆ. (ಗೊಲ್ಗೊಥಾದ ಅಂತ್ಯದ 'ಬೆಳ್ದಿಂಗಳೆತ್ತಲುಂ ನಿಷ್ಪಂದಮೆತ್ತಲುಂ' ಶಾಂತ' ಎಂಬ ಸಾಲುಗಳೊಡನೆ ಹೋಲಿಸಬೇಕು). ವಿ. ಎಂ. ಇನಾಂದಾರರೆನ್ನುವಂತೆ, 'ವೈಶಾಖಿ ಪರಿಶುದ್ಧ ಸಂಸ್ಕಾರದ ಒಂದು ಭವ್ಯಚಿತ್ರ, ಪರಿಪಕ್ವ ಹೃದಯವಂತಿಕೆಯ ಹೊನಲು', ಶ್ರೀ ಜ. ಸುಂದರೇಶನ್ ಭಾವಿಸುವಂತೆ, 'ಗೊಲ್ಗೊಥಾ ವೈಶಾಖಿ ಖಂಡಕಾವ್ಯಗಳಾದರೂ ಕಥಾನಾಯಕರ ಅಖಂಡ ಜೀವನ ದರ್ಶನವನ್ನೆ ಅರ್ಥಪೂರ್ಣವಾಗಿ ಒದಗಿಸಿವೆ. ಕವಿಯ ಅಮರತ್ವಕ್ಕೂ ಈ ಕಲಾಕೃತಿಗಳು ಚೆಲುವಿನ ಸಾಕ್ಷಿಗಳಾಗಿವೆ.' ಶ್ರೀ ಗೋವಿಂದ ಪೈಗಳ ಜೀವನಾನುಭವ ಸಮಸ್ತದಭಿವ್ಯಕ್ತಿಯ ವಸ್ತುಪ್ರತಿರೂಪಗಳು ಈ ಎರಡು ಕೃತಿಗಳು. ಇವುಗಳ ತೌಲನಿಕ ವಿಮರ್ಶೆ ಮಾಡಲು ಪ್ರಯತ್ನಿಸಿದ ಸಹೃದಯ ವಿಮರ್ಶಕರು 'ಗೊಲ್ಗೊಥಾ ಕಾವ್ಯವು, ವೈಶಾಖಿಗಿಂತ ಶ್ರೇಷ್ಠವೂ ಪರಿಣಾಮಕರವೂ, ಆದ ಕಲಾಕೃತಿ' (ಜ. ಸುಂದರೇಶನ್) ಎಂದರೆ, 'ಒಂದು ಧವಳಗಿರಿ, ಇನ್ನೊಂದು ಕಾಂಚನಗಂಗೆ' (ಇನಾಂದಾರ) ಎಂದು ವರ್ಣಿಸಿರುವರು. ಅದೇನೇ ಇರಲಿ, ವಿಶ್ವದ ಎರಡು ಅನನ್ಯ ಸಂಗತಿಗಳನ್ನು ಆರಿಸಿಕೊಂಡು, ಅತ್ಯಂತ ಭಾವ ತೀವ್ರತೆ, ಸಂಯಮ, ಸಮತೂಕಗಳ ಕಲಾಶಿಲ್ಪಗಳನ್ನಾಗಿ ರೂಪಿಸಿರುವುದು ಇವುಗಳ ವಿಶೇಷ. ಎಂದಿಗೂ ವಿಶ್ವಮಾನ್ಯವಾಗುವ ಕಾವ್ಯಕೃತಿಗಳು, ಶ್ರೇಷ್ಠ ಕವಿಗಳ ಸಾಲಿನಲ್ಲಿ ಸಾವಿಲ್ಲದೆ, ಸ್ಥಾಯಿಯಾಗಿ ನಿಲ್ಲುವ ಖಂಡಕಾವ್ಯಗಳು, ಪೈಗಳನ್ನು ಹಿರಿಯ ಕವಿಗಳಾಗಿಸಿದ, ಎಂದಿಗೂ ಮಾನವ ರಾಷ್ಟ್ರದ ಕವಿಯಾಗಿ ಉಳಿಯುವಂತೆ ಮಾಡಿದ ಸಾಧನಗಳು. ಇಂಗ್ಲೀಷ್, ರಷ್ಯನ್ ಚೀನೀ ಮುಂತಾದ ವಿಶ್ವಭಾಷೆಗೆ ಭಾಷಾಂತರಗೊಂಡು, ಪ್ರಚಾರಪಡೆಯಬೇಕಾಗಿದೆ ಇವು. ಈ ಬಗೆಗೆ ಯಾರೂ ಪ್ರಯತ್ನಿಸಿದಂತೆ ತೋರುವುದಿಲ್ಲ.

೩

ಒಟ್ಟಿನಲ್ಲಿ, ಕವಿ ಗೋವಿಂದ ಪೈಗಳ ಕಾವ್ಯ ಮುಂಚೂಣಿಯದು. ವಿಶಿಷ್ಟವಾದುದು, ಅನನ್ಯವಾದುದು. ಭಾವಗೀತೆ, ಕಥನಕಾವ್ಯ, ಅಷ್ಟಷಟ್ಪದಿ, ಖಂಡಕಾವ್ಯಗಳ ವೈವಿಧ್ಯ ಪ್ರಯೋಗ, ಪರಿಣತಿ, ಹಳೆಯ ಕಂದ, ವೃತ್ತ, ರಗಳೆಗಳಿಗೆ ಜೀವತುಂಬಿದ ಪ್ರಯೋಗಶೀಲತೆ, ದ್ವಿತೀಯಾಕ್ಷರ ಪ್ರಾಸ ಬಂಧನವನ್ನು ಕಳಚಿದರೂ, ಪ್ರಾಸಾನುಪ್ರಾಸಗಳ ಬಂಧ–ಬಿಗಿಗಳನ್ನು, ವಿನೂತನ ಪದಸೃಷ್ಟಿ, ಪ್ರಯೋಗಗಳ ಮೂಲಕ ಹೊಚ್ಚಹೊಸ ಅಲಂಕಾರ ಸಂತತಿಯನ್ನೇ ನಿರ್ಮಿಸಿ, ಕನ್ನಡಕಾವ್ಯ ಪ್ರಪಂಚದ ಹಲವು ಆಯಾಮಗಳನ್ನು ನಿರ್ಮಿಸಿದ ನವೋದಯದ ಶ್ರೇಷ್ಠ ಕವಿಗಳಲ್ಲೊಬ್ಬರಾದರು. 'ನಾನು ಕವಿ ಅಹುದೋ ಅಲ್ಲವೊ ಎಂಬುದು ಭವಿಷ್ಯಕ್ಕೆ ಬಿಟ್ಟ ಪ್ರಶ್ನೆ' ಎಂದ ಪೈಗಳ ಮಾತಿನಲ್ಲಿ ವಿನಯವಿದೆ. ಆದರೆ, ಯಾವ ಭವಿಷ್ಯವೂ ಮರೆಯಲಾರದಂಥ. ಶ್ರೇಷ್ಠ

ಕವಿ ಗೋವಿಂದ ಪೈ ಎಂಬುದು ಈಗಲೇ ಸಾಬೀತಾಗಿದೆ. ಹೆಚ್ಚಿನ ವಿಮರ್ಶೆಯಾದ ಮೇಲೂ ಈ 'ಕೀರ್ತಿಕಿರೀಟ' ಕೆಳಗಿಳಿಯಲಾರದೆಂದೇ ತೋರುತ್ತದೆ.

ಸಾಮಾನ್ಯವಾಗಿ, ಕವಿಗಿಂತ ಅವನ ಜೀವನ ದೊಡ್ಡದು ಎನ್ನುವುದು ಸಂಪ್ರದಾಯ. ಪೈಗಳ ಜೀವನ–ಕಾವ್ಯದ ವಿಷಯದಲ್ಲಿ ಮಾತ್ರ ಇದು ಅದಲು–ಬದಲು. ಪೈಗಳ ಬದುಕು ದೊಡ್ಡದೇ ನಿಜ, ಆದರೆ, ಅವರ ಆದರ್ಶಮಯ ಕಾವ್ಯ ಅದಕ್ಕಿಂತಲೂ ದೊಡ್ಡದು. 'ದೊಡ್ಡವರದೆಲ್ಲವೂ ದೊಡ್ಡದೇ ನೋಡ' ಎಂಬುದನ್ನು ನಿಜವಾಗಿಸಿದ ಪೈ ತಮ್ಮ ಸಂಶೋಧನೆಯ ಸಾಧನೆಗಳನ್ನು, ಕಾವ್ಯಜೀವಾಳ–ಜೀವನದ ಅಳ–ನಿರಾಳಗಳಲ್ಲಿ ನಿಲ್ಲಿಸಿರುವರು. ಸಂಸ್ಕೃತಿ–ಚರಿತ್ರೆಯ ಸಂಶೋಧನೆ ಪೈಗಳ ಜೀವನದ ಸಾಧನೆಯ ವಿಶಿಷ್ಟ ಅಂಶಗಳೇನಾದರೂ,–ದೊಡ್ಡ ಸಂಗತಿಯೇ ಆದರೂ,–ಇತರರಾದರೂ ಮಾಡಬಹುದಾದರೂ, ಪೈಗಳಂಥ ಕಾವ್ಯಸೃಷ್ಟಿ ಆ ಒಂದು ಚೇತನದಿಂದ ಮಾತ್ರ ಸಾಧ್ಯವಾಯಿತೆಂಬುದನ್ನು ಗಮನಿಸಬೇಕಾದ ವಿಶಿಷ್ಟ ಅಂಶ. ಪೈ ತಮ್ಮ ಎಂಬತ್ತು ವರ್ಷಗಳ ದೀರ್ಘವಾದ, ಬದುಕು ಪ್ರೇರಿಸಿದ–ಸಾಧಿಸಿದ 'ಅನುಭವ ಸಮಸ್ತ'ವನ್ನು 'ಅಭಿವ್ಯಕ್ತಿ ಸಮಸ್ತ'ವನ್ನಾಗಿಸಿದ್ದಾರೆ. ತಮ್ಮ ಕಾವ್ಯದಲ್ಲಿ, ಸಾರ್ಥಕ ನವಜೀವನ, ವಿನೂತನ ನವರಾಷ್ಟ್ರ, ವಿಶಿಷ್ಟ ಸಮಗ್ರ ಕರ್ನಾಟಕ ರಾಜ್ಯ, ಮಹೋನ್ನತ ವಿಶ್ವರಾಷ್ಟ್ರ (Universal State)ಮುಂತಾದ ನವ ಮನ್ವಂತರದ ಆಗತ್ಮಿಕ ಪ್ರೇರಣೆಗಳಿಂದ ಸ್ಫೂರ್ತಿ ಪಡೆದು, ಅವೆಲ್ಲವುಗಳಿಗೆ ತಮ್ಮ ಸಮಗ್ರ ಬದುಕನ್ನು ಶರಣಾಗಿಸಿ, ಅವುಗಳ ಸಾಧನೆಯ ಸೋಲು–ಗೆಲುವುಗಳ ಹಂಬಲಿಕೆಯನ್ನೇ ಹಾಡು–ಪಾಡಿಗಿಸಿದ ಕಾರಣ, ಮುಂದಿನ ದಿನಮಾನಗಳಲ್ಲಿ ಪೈ ಉಳಿಯುವುದು, ರಾಷ್ಟ್ರ ಕವಿಯಾಗಿಯಲ್ಲದಿದ್ದರೂ, ವಿಶ್ವಕವಿಯಾಗಿ, ವಿಶ್ವಪ್ರಜೆಯಾಗಿ !

ಗ್ರಂಥಋಣ

೧. ದೀವಿಗೆ– (ಪೈಗಳ ಸಂಭಾವನಾ ಗ್ರಂಥ) ಸಂ. ಆರ್. ರಾಮದೇವ ಶೆಣೈ
ಪ್ರ. ಭಂಡಾರ್ಕರ್ಸ್ ಕಾಲೇಜು, ಕುಂದಾಪುರ

೨. ಗೋವಿಂದ ಪೈಗಳ ಕಾವ್ಯ– ಶ್ರೀ ವಿ. ಎಂ. ಇನಾಂದಾರ.
ಪ್ರ. ಎಂ. ಜಿ. ಎಂ. ಕಾಲೇಜು, ಉಡುಪಿ (೧೯೬೬)

೩. ಗೊಲ್ಗೊಥಾ– ಪೈಶಾಖಿ ವಿಮರ್ಶೆ– ಜಿ. ಸುಂದರೇಶನ್.
ಭವತಾರಿಣಿ. ೫೨. ಚಾಳುಬೀದಿ. ಬೆಂಗಳೂರು–೨

೪. ಪೈಗಳ ಕಾವ್ಯ ಸಂಗ್ರಹಗಳಲ್ಲಿರುವ ಲೇಖಕರ ಹಾಗೂ ಸಂಪಾದಕರ ಮಾತುಗಳು.

ಗೋವಿಂದ ಪೈ ಅವರ ಸಾಹಿತ್ಯ ಸಂಶೋಧನೆ

● ಡಾ. ಬಿ. ವ್ಹಿ. ಮಲ್ಲಾಪುರ

೧

ಒಂದು ಕಾಲವಿತ್ತು. ಸಾಹಿತ್ಯಕೃತಿಗಳ ವಿವಿಧ ನಿಟ್ಟಿನ ಅಧ್ಯಯನ ಅಧ್ಯಾಪನ ಪರಾಮರ್ಶನಗಳಿಗೆ ಅವುಗಳನ್ನು ರಚಿಸಿದವರ ಚರಿತ್ರೆಯೂ ಸಹಾಯಕಾರಿ ಎಂಬ ವಿಚಾರ ನಮಗೆ ಹೊಳೆದಿರಲಿಲ್ಲ. ಅದು ನಮಗೆ ಹೆಚ್ಚು ಮನವರಿಕೆಯಾದುದು ಪಾಶ್ಚಾತ್ಯ ಸಾಹಿತ್ಯದ ಸಂಪರ್ಕ ಮತ್ತು ಅಭ್ಯಾಸಗಳಿಂದಾಗಿ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಮೊದಲು ಬರೆಯಲು ಆರಂಭಿಸಿದವರು ಪಾಶ್ಚಾತ್ಯರು. ಎಫ್. ಕಿಟಲ್ ಅವರ 'Old Kanareseliterature' ಎಂಬ ಲೇಖನ ಕ್ರಿ. ಶ. ೧೮೭೩ರಷ್ಟು ಹಿಂದೆಯೇ ಪ್ರಕಟವಾಗಿದೆ.[೧] ಕನ್ನಡ ಸಾಹಿತ್ಯವನ್ನು ಕುರಿತಂತೆ ಇದೇ ಪ್ರಥಮ ಲೇಖನವೆನ್ನಬಹುದು. ಅದೇ ಕಿಟಲ್ ಅವರು ಕ್ರಿ. ಶ. ೧೮೭೫ರಲ್ಲಿ ಸಂಪಾದಿಸಿ ಪ್ರಕಟಿಸಿರುವ ನಾಗವರ್ಮನ ಛಂದೋಂಬುಧಿಯ ಮುನ್ನುಡಿಯಲ್ಲಿ ಬರೆದಿರುವ 'An essay on kanarese literature' ಎಂಬ ಸುದೀರ್ಘ ಪ್ರಬಂಧವನ್ನೇ ಸಾಮಾನ್ಯವಾಗಿ ಪ್ರಥಮ ಕವಿಚರಿತೆಯೆಂದು ಭಾವಿಸಲಾಗುತ್ತದೆ. ಅವರೇ ಸಂಪಾದಿಸಿರುವ (೧೮೭೨) ಕೇಶಿರಾಜನ 'ಶಬ್ದಮಣಿದರ್ಪಣ'ದ ಇಂಗ್ಲಿಷ್ ಮುನ್ನುಡಿಯಲ್ಲೂ ಅವರು ಕೇಶಿರಾಜನ ಬಗ್ಗೆ ಮತ್ತು ಅವನು ಹೆಸರಿಸಿರುವ ಕವಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ.

ಈ ದಿಸೆಯಲ್ಲಿ ಕಾರ್ಯಗೈದ ಇನ್ನೊಬ್ಬ ಪಾಶ್ಚಾತ್ಯ ವಿದ್ವಾಂಸ. ಬಿ. ಎಲ್. ರೈಸ್ ಅವ 'Early Kannada Authors' ಎಂಬ ಲೇಖನ ೧೮೮೩ರಲ್ಲಿ ಪ್ರಕಟವಾಗಿದೆ.[೨] 'Early History of Kannada Literature' ಎಂಬ ಮತ್ತೊಂದು ಲೇಖನವನ್ನೂ ಅವರು ಪ್ರಕಟಿಸಿದ್ದಾರೆ.[೩] ಅವರೇ ಸಂಪಾದಿಸಿರುವ ನಾಗವರ್ಮನ 'ಕರ್ಣಾಟಕ ಭಾಷಾಭೂಷಣ'ದಲ್ಲಿ (೧೮೮೪), ಸುದೀರ್ಘ ಇಂಗ್ಲಿಷ್ ಉಪೋದ್ಘಾತವಿದ್ದು ಅದರ ಮೊದಲಭಾಗದಲ್ಲಿ ಕೃತಿಕಾರ ಮತ್ತು ಅವನ ಕೃತಿಗಳ ವಿವೇಚನೆಯೂ ಎರಡನೆಯ ಭಾಗದಲ್ಲಿ ಕನ್ನಡ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಪ್ರಬಂಧವೂ ಇದ್ದು, ಮೂರನೆಯ ಭಾಗ ಕನ್ನಡ ಸಾಹಿತ್ಯ ಚರಿತ್ರೆಗೆ ಮೀಸಲಾಗಿದೆ. ಅದರಲ್ಲಿ ಪಂಪಪೂರ್ವ ಕವಿಗಳಿಂದ ಮೊದಲುಗೊಂಡು ಇತ್ತೀಚಿನ 'ಕೃಷ್ಣಪಾರಿಜಾತ'ದ ಕರ್ತೃ ರಾಯಚೂರು ಅಪರಾಳ ತಮ್ಮಣ್ಣನ ವರೆಗಿನ ಗ್ರಂಥಕರ್ತರ ಬಗ್ಗೆ ಕೆಲವರನ್ನು ಕುರಿತು

ಸ್ವಲ್ಪ ವಿಸ್ತಾರವಾಗಿಯೂ, ಕೆಲವರ ಬಗೆಗೆ ಸಂಗ್ರಹವಾಗಿಯೂ ಹೇಳಿ, ಇನ್ನು ಕೆಲವರ ನಾಮೋಲ್ಲೇಖ ಮಾತ್ರ ಮಾಡಲಾಗಿದೆ. ಉಪೋದ್ಘಾತದಲ್ಲಿ ಪರಿಚಯಿಸಿದ ಕವಿಗಳ ಅಪರ ಕೃತಿಗಳ ಅಕಾರಾದಿ ಸೂಚಿಯನ್ನು ಅಲ್ಲಿ ಕೊಟ್ಟಿದೆ. ಈ ಉಪೋದ್ಘಾತವನ್ನು ಅವರು ಬರೆದುದು ೧೮೮೭ರಲ್ಲಿ. ಇವರೇ ಸಂಪಾದಿಸಿದ ಭಟ್ಟಾಕಳಂಕನ 'ಶಬ್ದಾನು ಶಾಸನ'ದ ಮುನ್ನುಡಿಯಲ್ಲೂ (೧೮೯೦) ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ಪ್ರಬಂಧವಿದೆ.

ಕೆ. ಬಿ. ಪಾಠಕ ಮತ್ತು ಆರ್. ನರಸಿಂಹಾಚಾರ್, ರೈಸನಿಂದ ಪ್ರೇರಣೆ ಪ್ರೋತ್ಸಾಹ ಪಡೆದವರು. ಅದನ್ನು ಅವರು ತಾವು ಸಂಪಾದಿಸಿರುವ ಕೃತಿಗಳ ಮುನ್ನುಡಿಯಲ್ಲಿ ನೆನೆದಿದ್ದಾರೆ. 'ಕವಿರಾಜ ಮಾರ್ಗ'ವನ್ನು ಮೊಟ್ಟಮೊದಲು ಸಂಪಾದಿಸಿದ (೧೮೯೮) ಪಾಠಕ್ ಅವರು ತಮ್ಮ ೨೧ ಪುಟಗಳ ಇಂಗ್ಲಿಷ್ ಮುನ್ನುಡಿಯಲ್ಲಿ, ನೃಪತುಂಗನು ಯಾರು ? ಎಂಬ ಪ್ರಶ್ನೆಯನ್ನೆತ್ತಿ, ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ತಮ್ಮ ನಿಲುವನ್ನು ಮಂಡಿಸಿದ್ದಾರೆ. ಕವಿರಾಜಮಾರ್ಗದಲ್ಲಿ ಬರುವ ಕರ್ನಾಟಕದ ವಿಸ್ತಾರ, ಅದು ಸಂಸ್ಕೃತ ಸಾಹಿತ್ಯದ ಮೇಲೆ ಬೀರುವ ಬೆಳಕು, ಆಗಿನ ಕಾಲದ ಧಾರ್ಮಿಕ ಜೀವನ ಇತ್ಯಾದಿಗಳ ಬಗೆಗೂ ಆಲೋಚಿಸಿದ್ದಾರೆ.

ಆರ್. ನರಸಿಂಹಾಚಾರ್ ಸಂಪಾದಿತ 'ಕಾವ್ಯಾವಲೋಕನ' (೧೯೦೩) ಸುದೀರ್ಘ ಮುನ್ನುಡಿಯಿಂದ ಕೂಡಿದೆ. ಅದರಲ್ಲಿ ನಾಗವರ್ಮ ಹೆಸರಿನಲ್ಲಿರುವ ಕೃತಿಗಳೆಷ್ಟು ? ನಾಗವರ್ಮರೆಷ್ಟು ಜನ ? ಅವರಲ್ಲಿ ಯಾರು ಯಾವ ಕೃತಿ ಬರೆದಿದ್ದಾರೆ ? ಇತ್ಯಾದಿ ಗಳನ್ನು ಕುರಿತು ಕಾವ್ಯ, ಶಾಸನಗಳ ಆಧಾರದೊಂದಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಕವಿಚರಿತೆಯ ಮೂರು ಸಂಪುಟಗಳನ್ನು– ಪ್ರಥಮ ಸಂಪುಟ ೧೯೦೭, ದ್ವಿತೀಯ ಸಂಪುಟ ೧೯೧೯ ಮತ್ತು ತೃತೀಯ ಸಂಪುಟ ೧೯೨೯– ಅವರು ಪ್ರಕಟಿಸಿರು ವುದು ಸಾಹಿತ್ಯಸಂಶೋಧನೆಯ ದೃಷ್ಟಿಯಿಂದ ಬಹುದೊಡ್ಡ ಪ್ರಥಮ ಸಾಹಸ. ಒಂದಾದ ಮೇಲೊಂದು ಪ್ರಕಟವಾದ ಆ ಕೃತಿಗಳು ಕನ್ನಡ ಸಾಹಿತ್ಯ ಸಂಶೋಧನ ಕ್ಷೇತ್ರದಲ್ಲಿ ಒಂದು ಹೊಸ ಆಯಾಮವನ್ನೇ ತೆರೆದವು. ತತ್ಫಲವಾಗಿ ಹಲವಾರು ಜನ ವಿದ್ವಾಂಸರು ಸಾಹಿತ್ಯಸಂಶೋಧನೆಯತ್ತ ತಮ್ಮ ಗಮನಹರಿಸಿದರು. ಒಬ್ಬರ ಅಭಿಪ್ರಾಯ ಮತ್ತೊಬ್ಬರಿಗೆ ಒಪ್ಪಿತವಾಗದಿದ್ದಾಗ ಖಂಡನ–ಮಂಡನಗಳೂ ವಾದ ವಿವಾದಗಳೂ ಎದ್ದವು. ಇನ್ನೂ ಅವುಗಳಲ್ಲಿ ಕೆಲವು ಮುಂದುವರಿದಿವೆ. ಮುಂದು ವರಿಯಬೇಕು. ಸಂಶೋಧನಾಸಕ್ತರಿಗೆ ಅವುಗಳಲ್ಲಿರುವ ದಾವು–ಪೇಚುಗಳನ್ನು ಪರಿ ಶೀಲಿಸುವುದೇ ಒಂದು ಸೊಗಸು.

೨

ಹೀಗೆ ಮುಂದುವರಿದ ಸಾಹಿತ್ಯ ಸಂಶೋಧನೆಯಲ್ಲಿ ಹೆಚ್ಚಿನ ಆಸಕ್ತಿವಹಿಸಿ ಅದನ್ನು ಬಹಳ ನಿಷ್ಠೆಯಿಂದ ನಡೆಯಿಸಿಕೊಂಡು ಬಂದ ಕನ್ನಡದ ಹಿರಿಯ ವಿದ್ವಾಂಸರಲ್ಲಿ

ಎಂ. ಗೋವಿಂದ ಪೈ. ಗವುನಾರ್ಹರು. ಪಂಪೋತ್ತರ ಸಾಹಿತ್ಯ ಚರಿತ್ರೆಯಂತೂ ಸರಿಯೆ. ಪಂಪಪೂರ್ವದ ಅಜ್ಞಾತ ಸಾಹಿತ್ಯದ ಹುಡುಕಾಟದಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡು, ಆ ಬಗ್ಗೆ ಕೆಲವು ವಿವರಗಳನ್ನು ಆಧಾರಪೂರ್ವಕ ನೀಡಿರುವುದೂ, ಸಂಭಾವ್ಯ ಊಹೆಗಳನ್ನು ಮಾಡಿರುವುದೂ ಅವರ ಒಂದು ವಿಶೇಷ.

ಸಾಹಿತ್ಯ ಸಂಶೋಧನೆಗೆ ಸಂಬಂಧಿಸಿದ ಗೋವಿಂದ ಪೈಗಳ ಎಲ್ಲ ಲೇಖನಗಳ ಸವಿಸ್ತಾರವಾದ ಪರಿಚಯ, ಅಲ್ಲಿ ಅವರು ಕೈಕೊಂಡ ನಿರ್ಣಯಗಳ ಮಾಡಿದ ಊಹೆಗಳ ತಪ್ಪು–ಒಪ್ಪುಗಳನ್ನು ಕುರಿತು ಸಾದ್ಯಂತ ವಿಮರ್ಶೆ ಈ ಲೇಖನದ ಉದ್ದೇಶವಲ್ಲ. ಅವರ ಅಗಾಧ ವಿದ್ವತ್ತು, ಬಹುಭಾಷಾ ಪರಿಚಯ, ಹರಿತವಾದ ತರ್ಕಸರಣಿ, ಮತ್ತು ಪ್ರಾಮಾಣಿಕತೆಯ ಹಿನ್ನೆಲೆಯಲ್ಲಿ, ಅವರು ನಡೆಸಿದ ಸಂಶೋಧನೆಯ ವಿಧಾನ ಮತ್ತು ಸ್ವರೂಪಗಳನ್ನು ಮಾತ್ರ ಇಲ್ಲಿ ಸ್ಥೂಲವಾಗಿ ಆದರೆ ಸಾಧಾರವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ನೃಪತುಂಗ, ಅವನ ಪೂರ್ವದ ಕವಿಗಳಿಂದ ಮೊದಲುಗೊಂಡು ಮುದ್ದಣ, ಪಂಜೆ ಮಂಗೇಶರಾಯರವರೆಗಿನ ಕನ್ನಡದ ಹಲವಾರು ಕವಿಗಳ ಕಾಲ, ಕೃತಿ, ದೇಶ ಮತ್ತು ಮತ ಇತ್ಯಾದಿಗಳ ಬಗೆಗಿರುವ ಕೆಲವು ಗಂಟುಗಳನ್ನು ಬಿಡಿಸಲು, ಪೈ ಅವರು ತಮ್ಮ ಲೇಖನಗಳಲ್ಲಿ ಪ್ರಯತ್ನಿಸಿದ್ದಾರೆ.[೪] ಅದು ಅವರ ಸಾಹಿತ್ಯ ಸಂಶೋಧನೆಯ ವ್ಯಾಪ್ತಿಯ ಸೂಚಕ.

ಜ್ಞಾನದ ವಿವಿಧ ಕ್ಷೇತ್ರಗಳ ಪರಿಚಯ ಮತ್ತು ಅವುಗಳಲ್ಲಿ ಪರಿಣತಿ, ಸಂಶೋಧಕನಿಗೆ ಇರಬೇಕಾದ ಯೋಗ್ಯತೆಗಳಲ್ಲಿ ಒಂದು. ಕನ್ನಡ ಪ್ರಾಕೃತ ಸಂಸ್ಕೃತಾದಿ ಪ್ರಾಚೀನ ಕಾವ್ಯ, ಪುರಾಣ, ಧರ್ಮಗ್ರಂಥ, ಶಾಸನಗಳ ಮತ್ತು ವ್ಯಾಕರಣ ಛಂದಸ್ಸು ಗಣಿತ ಜ್ಯೋತಿಷ್ಯ ಇತ್ಯಾದಿ ಶಾಸ್ತ್ರಗ್ರಂಥಗಳ ಗಾಢವಾದ ಪರಿಚಯ ಅವರಿಗಿತ್ತೆಂಬುದಕ್ಕೆ ಅವರ ಲೇಖನಗಳ ಒಡಲಲ್ಲಿಯೇ ಸಾಮಾನ್ಯವಾಗಿ ಬರುವ ಅಡಿಟಿಪ್ಪಣಿ ರೂಪದ ಆಧಾರಗಳ ಸೂಚಿಯೆ ಸಾಕ್ಷಿ. "ಇವುಗಳಲ್ಲಿರುವ ಯಾವುದೇ ಅಂಶವನ್ನು ಚೆನ್ನಾಗಿ ಮನನಮಾಡಿಕೊಂಡು ಬೇಕಾದ ಸಂದರ್ಭಗಳಲ್ಲಿ ಅಸ್ಖಲಿತವಾಗಿ ವಿವರಿಸುವಷ್ಟು ಅವರು ಪರಿಣತಿಯನ್ನು ಹೊಂದಿದ್ದರು. ಜ್ಯೋತಿಷ್ಯ ಶಾಸ್ತ್ರದ ಸ್ಕಂಧತ್ರಯಗಳಾದ ಗಣಿತ ಸಂಹಿತ ಮತ್ತು ಹೋರಾ ಇವುಗಳಲ್ಲಿ, ಗಣಿತ ಜ್ಞಾನವು ರಾಜರ ಹಾಗೂ ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೆ ಸಹಾಯಕವಾಗುವಂತಹದಷ್ಟೆ. ಪೈ ಅವರು ಇದರಲ್ಲಿ ನಿಸ್ಸೀಮ ಪಾಂಡಿತ್ಯವನ್ನು ಪಡೆದಿದ್ದರಲ್ಲದೆ, ಫಲಬೋಧಕಗಳಾದ ಇನ್ನೆರಡು ಸ್ಕಂದಗಳನ್ನು ಕಲಿತವರೇ ಆಗಿದ್ದರು. ......ಪೈ ಅವರಂತಹ ಜ್ಞಾನಸಾಧನೆಯ ಆಳ ಮತ್ತು ವಿಸ್ತಾರ ಇರುವ ಅನ್ಯವಿದ್ವಾಂಸರು ಆಧುನಿಕ ಭಾರತದಲ್ಲಿ ಕೇವಲ ಏಳೆಂಟು ಜನ ಮಾತ್ರ ಎನ್ನಬಹುದು"[೫] ಎಂಬ ಮಾತು ಬಹುಮಟ್ಟಿಗೆ ನಿಜ.

ಹಲವಾರು ಭಾಷೆಗಳ ಪರಿಚಯವೂ ಸಂಶೋಧಕನಿಗೆ ನೆರವು ನೀಡುತ್ತದೆ. ಪೈ ಅವರಿಗೆ ಅದೂ ಇತ್ತು. ಕನ್ನಡ ಕೊಂಕಣಿ ಇಂಗ್ಲಿಷಗಳಂತೂ ಸರಿಯೆ. ನೆರೆಯ ಭಾಷೆಗಳಾದ ಮರಾಠಿ ಮಲೆಯಾಳಗಳ ಪರಿಚಯವೂ ಅವರಿಗೆ ಸಹಜವಾಗಿ ಒದಗಿ ಬಂದಿತ್ತು. ಸಾಹಿತ್ಯ ಮತ್ತು ಇತಿಹಾಸಗಳ ಸಂಶೋಧನೆಯಲ್ಲಿ ಅವರಿಗಿದ್ದ ತೀವ್ರ ಆಸಕ್ತಿ ಸಂಸ್ಕೃತ, ಪ್ರಾಕೃತ, ಪಾಲಿ, ಅರ್ಧಮಾಗಧಿ ಭಾಷೆಗಳನ್ನು ಕಲಿಯಲು ಹಚ್ಚಿತು. "ಬೇರೆ ಬೇರೆ ಸಂಶೋಧನ ಲೇಖನಗಳ ಪರಿಶೀಲನೆಯ ದೃಷ್ಟಿಯಿಂದ ಹಿಂದಿ, ಉರ್ದು ತಮಿಳು, ತೆಲುಗು, ಒರಿಯಾ, ಭಾಷೆಗಳನ್ನು ರೂಢಿಸಿಕೊಂಡಿದ್ದರು...... ಅವರು ಜಪಾನಿ ಭಾಷೆಯನ್ನು ಕಲಿಯಲು ಮನಸ್ಸು ಮಾಡಿದುದು 'ನೋ' ನಾಟಕಗಳಿಂದಾಗಿ. ಕ್ರಿ. ಶ. ಒಳಹೊರಗೆ ಭಾರತಕ್ಕೆ ಬಂದ ಹಾಗೂ ರಾಜ್ಯವಾಳಿದ ವಿದೇಶಿಯರ ಕುರಿತು ಸಂಶೋಧನೆ ಮಾಡುವಾಗ ಅವರು ಗ್ರೀಕ್ ಲ್ಯಾಟಿನ್ ಪರ್ಶಿಯನ್ ಭಾಷೆಗಳನ್ನು ಕಲಿತರು"[೬] ಹೀಗೆ ಸುಮಾರು ಇಪ್ಪತ್ತಕ್ಕಿಂತ ಹೆಚ್ಚು ಭಾಷೆಗಳ ಪರಿಚಯ ಅವರಿಗಿದ್ದಂತೆ ತಿಳಿದು ಬರುತ್ತದೆ.

ಈ ಬಗೆಯ ಅವರ ವಿದ್ವತ್ತು ಮತ್ತು ವಿವಿಧ ಭಾಷಾ ಜ್ಞಾನಗಳ ಹಿನ್ನೆಲೆಯಲ್ಲಿ ಅವರ ಸಂಶೋಧನೆಯ ಸ್ವರೂಪವನ್ನು ಕುರಿತು ಇನ್ನು ಪರಿಶೀಲಿಸಬಹುದು.

ಪೈ ಅವರು ತಮ್ಮ ವಾದ ಸಮರ್ಥನೆಗೆ ಕೊಡುವ ಆಧಾರಗಳನ್ನು ಮೂಲ ಆಕರಗಳಿಂದ ಎತ್ತಿಕೊಡುತ್ತಿದ್ದರೇ ವಿನಾ ಅವರಿವರು ಉದ್ಧರಿಸಿದುವುಗಳನ್ನು ತೆಗೆದು ಕೊಳ್ಳುತ್ತಿರಲಿಲ್ಲ. ನಿಜವಾದ ಸಂಶೋಧಕನಿಗಿರಬೇಕಾದ ಅಗತ್ಯಗಳಲ್ಲಿ ಇದೂ ಒಂದು. ಜೈನ ಪರಶುರಾಮನ ಕಥೆಯನ್ನು ಹೇಳುವ ಸಂದರ್ಭದಲ್ಲಿ[೭]. ಒಂದೊಂದು ಘಟನೆಗೂ ಗುಣಭದ್ರನ ಉತ್ತರಪುರಾಣದ ೬೫ನೆಯ ಪರ್ವದ ೫೧ ರಿಂದ ೧೫೦ ರ ವರೆಗಣ ಶ್ಲೋಕಗಳಲ್ಲಿ ಅವಶ್ಯಕವೆನಿಸಿದ ಒಂದೊಂದನ್ನೂ ಉದ್ಧರಿಸಿ ವಿವರಿಸುತ್ತ ಹೋಗಿದ್ದಾರೆ. ಹಾಗೆಯೇ ವೈದಿಕ ಪರಶುರಾಮನ ಕಥೆ ಭಾರತದ ಆದಿಪರ್ವ (ಅಧ್ಯಾಯ ೧೦೪), ಶಾಂತಿಪರ್ವ (೪೮–೪೯). ಭಾಗವತ (ಒಂಬತ್ತನೆಯ ಅಧ್ಯಾಯ. ೧೫–೧೬), ಮತ್ತು ರಾಮಾಯಣ (ಬಾಲಕಾಂಡ. ಸರ್ಗ ೭೪–೭೬) ಹೀಗೆ ಯಾವ ಪರ್ವ ಇಲ್ಲವೆ ಕಾಂಡದ ಯಾವ ಅಧ್ಯಾಯದಲ್ಲಿ ಬಂದಿದೆಯೆಂಬುದನ್ನು ಸೂಚಿಸುವ ಜೊತೆಗೆ ಶ್ಲೋಕಗಳ ಸಂಖ್ಯೆಯನ್ನೂ ಕೊಟ್ಟಿದ್ದಾರೆ. ಇದನ್ನು ಗಮನಿಸಿದಾಗ ಆ ಕೃತಿಗಳನ್ನವರು ಕೈಮುಟ್ಟಿ ಹಿಡಿದು ಕಣ್ಮುಟ್ಟಿ ಓದಿರುವರೆಂಬುದು ಸ್ಪಷ್ಟ. ತಾವು ಆಧಾರವಾಗಿ ಉದ್ಧರಿಸಿರುವ ಎಲ್ಲ ಶಾಸನಗಳನ್ನೂ. ಅವು ಇದ್ದ ಸ್ಥಳದಲ್ಲಿಯೆ ಹೋಗಿ ಓದಿರದಿದ್ದರೂ. ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಶಾಸನಸಂಪುಟ. ಪತ್ರಿಕೆ. ಮತ್ತು ಗ್ರಂಥಗಳಲ್ಲಿ ಪ್ರಕಟಿಸಿದವುಗಳನ್ನು ಖುದ್ದಾಗಿ ನೋಡಿರುವದು ಅವರ ಲೇಖನ ಗಳನ್ನು ಓದುವಾಗ ಮನವರಿಕೆಯಾಗದಿರದು.

ಸಂಶೋಧಕನಲ್ಲಿರಬೇಕಾದ ಮತ್ತೊಂದು ಆವಶ್ಯಕ ಗುಣ ಪ್ರಾಮಾಣಿಕತೆ. ಸಂಶೋಧನ ನಿರತ ಲೇಖಕ ಕೆಲವು ಕಾರಣಗಳಿಂದಾಗಿ ತಾನೇ ತಪ್ಪು ಅಭಿಪ್ರಾಯಕ್ಕೆ ಬಂದಿರಬಹುದು ಇಲ್ಲವೆ ಬೇರೆಯವರು ಆ ತಪ್ಪನ್ನು ತೋರಿಸಿರಬಹುದು. ಸರಿ ಎನಿಸಿದಾಗ ಅವುಗಳನ್ನು ಒಪ್ಪಿಕೊಳ್ಳುವ ದೊಡ್ಡತನ ಲೇಖಕನಲ್ಲಿರಬೇಕು. ಗೋವಿಂದ ಪೈಗಳಲ್ಲಿ ಅದು ಎದ್ದು ಕಾಣುತ್ತಿದೆ. ಕೆಲವು ಆಧಾರಗಳನ್ನವಲಂಬಿಸಿ ಒಂದು ವಿಷಯದ ಬಗ್ಗೆ ಅವರು ನಿರ್ಣಯಕ್ಕೆ ಬರುವದು ರೂಢಿ. ಸದಾ ಅಭ್ಯಾಸನಿರತರಾದ ಅವರಿಗೆ ಆ ವಿಷಯದ ಬಗ್ಗೆ ಹೊಸ ಆಧಾರಗಳು ದೊರೆತು ಅವು ತಮ್ಮ ಮೊದಲ ನಿರ್ಣಯವನ್ನು ನಿರಸನಗೊಳಿಸುವಂತಿದ್ದರೆ; ಅಥವಾ ಹಿಂದೆ ಬರೆದ ತಮ್ಮ ಲೇಖನವನ್ನು ತಾವೇ ಮತ್ತೊಮ್ಮೆ ಓದಿದಾಗ ಅದರಲ್ಲಿಯ ಊಹೆ ಇಲ್ಲವೆ ಅಭಿಪ್ರಾಯ ಸರಿಯೆನಿಸದಿದ್ದರೆ, ಅದನ್ನು ಒಪ್ಪಿ ತಿದ್ದಿಕೊಂಡುದಕ್ಕೆ ಹಲವಾರು ಉದಾಹರಣೆಗಳು ಅವರ ಲೇಖನದಲ್ಲಿ ದೊರೆಯುತ್ತವೆ.

'ರನ್ನನ ಕಾವ್ಯಗಳನ್ನು ಕುರಿತು' ಎಂಬ ಅವರ ಒಂದು ಲೇಖನ ಮಂಗಳೂರಿನ 'ಉದಯಭಾರತ' ಪತ್ರಿಕೆಯಲ್ಲಿ (ಸಂಪುಟ: ೨, ಸಂಚಿಕೆ: ೨) ೧೯೨೮ರಲ್ಲಿ ಪ್ರಕಟವಾಯಿತು. ಅದರಲ್ಲಿ ರನ್ನನ 'ಗದಾಯುದ್ಧ'ದ ತೃತೀಯ ಮುದ್ರಣದ ಉಪೋದ್ಘಾತದಲ್ಲಿ ಬಂದಿರುವ–ರನ್ನನು ತನ್ನ ಮಕ್ಕಳಾದ 'ರಾಯ' ಮತ್ತು 'ಅತ್ತಿಮಬ್ಬೆ'ಯರ ಹೆಸರುಗಳಿಗಾಗಿ ಈ ಕೃತಿಗಳು (ಪರಶುರಾಮಚರಿತ ಮತ್ತು ಚಕ್ರೇಶ್ವರ ಚರಿತ) ರಚಿಸಲ್ಪಟ್ಟವು. ಪದ್ಯಗಳಲ್ಲಿರುವ ಗ್ರಂಥಗಳ ಮತ್ತು ಮಕ್ಕಳ ಹೆಸರುಗಳ ಕ್ರಮವನ್ನು ನೋಡಿದರೆ, ಪರಶುರಾಮ ಚರಿತವನ್ನು 'ರಾಯ'ನಿಗೂ ಚಕ್ರೇಶ್ವರ ಚರಿತವನ್ನು 'ಅತ್ತಿಮಬ್ಬೆ'ಗೂ ಅಂಕಿತ ಮಾಡಿರುವನೆಂದು ಗೊತ್ತಾಗುತ್ತದೆ– ಎಂಬರ್ಥದ ಮಾತುಗಳನ್ನು ಸರಿಯಾಗಿರಬೇಕೆಂದು ನಂಬಿ, ಹಾಗೆಯೇ ಆ ಲೇಖನದಲ್ಲಿ ಹೇಳಿದ್ದರು. ಆಮೇಲೆ ಆ ವಿಷಯ ಬರುವ 'ಅಜಿತಪುರಾಣ'ದ "ನೆಗಟ್ದಪರಿರ್ಪರ ಪೆಸರ್ಗಂ" ಮತ್ತು "ಕರಮೆಸೆದವು ರತ್ನತ್ರಯಪರಿಕಲ್ಪದೆ" ಪದ್ಯಗಳನ್ನು ಮತ್ತೊಮ್ಮೆ ಲಕ್ಷಗೊಟ್ಟು ಓದಿದಂತೆ ತೋರುತ್ತದೆ. ಆಗ ಅವರಿಗೆ ಆ ಉಪೋದ್ಘಾತದ ಮಾತುಗಳನ್ನು ಸಾಕಷ್ಟು ವಿಮರ್ಶಿಸದೆ ನಂಬಿದುದು ತಪ್ಪೆಂದು ಅವರಿಗೆ ಹೊಳೆದಿದೆ. ಎಂತಲೇ ಅವರು "ಈಗ ಆಲೋಚಿಸಿದರೆ ಅಜಿತಪುರಾಣದ ೧೨–೫೩ನೆಯ ಕಂದದಿಂದ ಆ ಅರ್ಥವು ಹೊರಡುವಂತಿಲ್ಲ. ಅದರ ಅರ್ಥವು ತೀರ ಅನ್ಯಥಾ ಇದೆಯೆಂದೇ ತೋರುತ್ತದೆ" ಎಂದು ಹೇಳಿ, ಆ ಪದ್ಯವನ್ನು ತಮ್ಮದೇ ಆದ ರೀತಿಯಲ್ಲಿ ಅರ್ಥಯಿಸಿ ಮುಂದೆ ರನ್ನನ ಮಕ್ಕಳಾದ ರಾಯ ಮತ್ತು ಅತ್ತಿಮಬ್ಬೆಯರು ಹುಟ್ಟಿದ ವರ್ಷಗಳನ್ನು ಸೂಚಿಸಿ ಕೊನೆಗೆ, "ಆದಕಾರಣ ಅವೆರಡು ಕೃತಿಗಳನ್ನು ತನ್ನ ಮಕ್ಕಳ ಬಗ್ಗೆ ರಚಿಸಿದುದೂ ಅಲ್ಲ, ಅವರಿಗೆ ಅಂಕಿತ ಮಾಡಿದುದೂ ಅಲ್ಲವೆಂದು ಸಿಷ್ಪಷ್ಟವಾಗುವುದರಿಂದ ಈ ಮೊದಲು ನನ್ನಿಂದ ಆಗಿಹೋದ ತಪ್ಪಿಗೆ ವಿಷಾದಪಡುತ್ತೇನೆ" ಎಂದಿದ್ದಾರೆ.[೧೦] ಮೊದಲ

ಲೇಖನ ಪ್ರಕಟವಾದ ೧೨ ವರ್ಷಗಳ ಅನಂತರ ಎಂದರೆ ೧೯೪೦ರಲ್ಲಿ ಈ ಹೇಳಿಕೆ ಬಂದಿದೆ. ಅದೇ ಉಪೋದ್ಘಾತದ ಮಾತನ್ನು ನಂಬಿ ಗದಾಯುದ್ಧದ ರಚನಾ ಕಾಲವನ್ನು ೯೮೨ ಅಕ್ಟೋಬರ್ ೨೭ ಎಂದು ಹೇಳಿದ[೧೧] ಪೈ ಅವರು ಆ ಮೇಲೆ ಗದಾಯುದ್ಧದ ರಚನೆಯ ಕಾಲವನ್ನು ಸೂಚಿಸುವ "ಶಕಸಮಗತ ಋತುಯುಗ" (೧೦–೨೩) ಪದ್ಯವನ್ನು ಮತ್ತೊಮ್ಮೆ ಪರಿಶೀಲಿಸಿ ೧೨, ೧೩ ವರ್ಷಗಳ ಅನಂತರ ಅದು ೧೦೦೬ರಲ್ಲಿ ರಚಿತವಾಗಿರಬೇಕೆಂದು ತಿಳಿಸಿದ್ದಾರೆ.[೧೨]

ಒಂದೇ ವಿಷಯದ ಬಗ್ಗೆ ಎರಡು ಸಲ ತಮ್ಮಿಂದಾದ ತಪ್ಪನ್ನು ಒಪ್ಪಿಕೊಂಡ ಬಗ್ಗೆಯೂ ಉದಾಹರಣೆಯಿದೆ. ರನ್ನನ ಅನುಪಲಬ್ಧಕೃತಿ ಪರಶುರಾಮಚರಿತೆಯ ಕಥಾವಸ್ತುವಿನ ಬಗ್ಗೆ ೧೯೨೮ರಲ್ಲಿ– ಜೈನಪುರಾಣೋಕ್ತ ದ್ವಾದಶ ಚಕ್ರವರ್ತಿಗಳಲ್ಲಿ ಒಬ್ಬನಾದ ಸುಭೌಮನಿಗೆ ಕಾರ್ತವೀರ್ಯನೆಂದೂ ಹೆಸರಿದೆ. ಸುಭೌಮನೆಂಬ ಕಾರ್ತವೀರ್ಯನನ್ನು ಸದೆಬಡೆದ ಅಥವಾ ಗೆದ್ದ ಪರಶುರಾಮನ ಕಥೆಯೇ ಪರಶುರಾಮ ಚರಿತದಲ್ಲಿ ಬಂದಿರಬೇಕು"– ಎಂದು ಊಹಿಸಿ ಬರೆದಿದ್ದರು.[೧೩] ಗುಣಭದ್ರನ 'ಉತ್ತರ ಪುರಾಣ'ವನ್ನು ಓದಿದಾಗ ಸುಭೌಮನೆಂಬ ಕಾರ್ತವೀರ್ಯನೇ ಜಾಮದಗ್ನ್ಯನಾದ ಪರಶುರಾಮನನ್ನು ಕೊಂದನೆಂಬುದು ಅವರಿಗೆ ತಿಳಿದು ಬಂದಿತು. ಆಗ ಅವರು "ರನ್ನನ ವೀರರಸೋಪಾಸನೆಗೆ ತಕ್ಕಂತೆ ಕೇವಲ ವೀರರಸಮೂರ್ತಿಯಾದ ವೈದಿಕ ಪರಶುರಾಮನೆ ಅವನ ಪರಶುರಾಮಚರಿತದ ನಾಯಕನೆ ವಿನಾ ಅವನ ತೂಕಕ್ಕೆ ಬಾರದ ಜೈನ ಪರಶುರಾಮನಲ್ಲ" ಎಂದು ತಮ್ಮ ಅಭಿಪ್ರಾಯವನ್ನು ನಾಲ್ಕು ವರ್ಷಗಳ ಅನಂತರ ಮಾರ್ಪಡಿಸಿಕೊಂಡರು.[೧೪] ತಮ್ಮ ಈ ಅಭಿಪ್ರಾಯದ ಸಮರ್ಥನೆಗೆ, ರನ್ನನ 'ಗದಾಯುದ್ಧ'ದಲ್ಲಿ ವೈದಿಕ ಪರಶುರಾಮನನ್ನು ಕುರಿತು ಬರುವ ಹಲವಾರು ಗೌರವಪೂರ್ಣ ಮಾತುಗಳನ್ನು ಮುಖ್ಯವಾಗಿ "ಹುತವಹ ಬಾಣದಿಂದ ಮಿಸೆ ತೂಳ್ದುದು...... ಆ ಪರಶುರಾಮನಿಂ" ಎಂಬುದನ್ನು ಆಧಾರವಾಗಿ ಕೊಟ್ಟಿದ್ದಾರೆ. ಮುಂದೆ ೧೯೪೦ರಲ್ಲಿ ಧಾರವಾಡದಲ್ಲಿ ಮಾಡಿದ ರನ್ನನನ್ನು ಕುರಿತ ಉಪನ್ಯಾಸದಲ್ಲಿ– ರನ್ನನ ಪರಶುರಾಮಚರಿತ ಜೈನಕಾವ್ಯ. ಅದರ ವಾಸ್ತವಿಕ ನಾಯಕನಾದರೂ ಸುಭೌಮನೆಂಬ ಆ ಕಾರ್ತವೀರ್ಯನೇ ವಿನಾ ಪರಶುರಾಮನಲ್ಲ. ಪರಶುರಾಮ ಅದರ ಪ್ರತಿನಾಯಕ– ಎಂದು ಪುನಃ ಮೊದಲಿನ ಅಭಿಪ್ರಾಯಕ್ಕೇ ಅಂಟಿಕೊಂಡಿದ್ದಾರೆ. ಅಲ್ಲದೆ ರನ್ನನು ಆ ಕಾವ್ಯಕ್ಕೆ 'ಸುಭೌಮಚರಿತ' 'ಕಾರ್ತವೀರಚರಿತ' ಇಲ್ಲವೆ 'ಪರಶುರಾಮವಧ' ಎಂಬ ಹೆಸರಿಡದೆ. 'ಪರಶುರಾಮ ಚರಿತ' ಹೆಸರೇಕಿಟ್ಟ? ಎಂಬುದಕ್ಕೆ ತಮ್ಮದೇ ಆದ ಸಮರ್ಥನೆಯನ್ನೂ ಪೈ ಅವರು ಕೊಟ್ಟಿದ್ದಾರೆ.[೧೫] ಅವರ ಅಭಿಪ್ರಾಯವನ್ನು ಒಪ್ಪುವುದು ಸಾಧ್ಯವಿಲ್ಲ. ಆದರೂ ಹೀಗೆ ತಾವೇ ಬರೆದ ಲೇಖನಗಳನ್ನು ಮತ್ತೆ ಮತ್ತೆ ಓದಿ ಆಲೋಚಿಸಿ ಆದ ತಪ್ಪನ್ನು ಒಪ್ಪಿಕೊಂಡು,

ಆ ಆಲೋಚನೆಯ ಬೆಳಕಿನಲ್ಲಿ ಮತ್ತೊಂದನ್ನು ಮುಂದಿಡುವುದು ಅವರ ಪ್ರಾಮಾಣಿಕತೆಯ ದ್ಯೋತಕ.

ತಾವು ಮಾಡುವ ಊಹೆಗಾಗಲೀ, ಕೈಕೊಳ್ಳುವ ನಿರ್ಣಯಕ್ಕಾಗಲಿ ಇರಿಸಿಕೊಂಡಿರುವ ಆಧಾರಗಳು ಪ್ರಬಲವಾದುವೆಂಬುದನ್ನು ಮನವರಿಕೆ ಮಾಡಿಕೊಡಲು, ಅವುಗಳಿಗೆ ಸಮರ್ಥನೆ ನೀಡುವ ಬೇರೆ ಕೆಲವು ಆಧಾರಗಳನ್ನು ಪೈ ಅವರು ಒದಗಿಸುತ್ತಾರೆ. ಅದು ಅವರ ಸಂಶೋಧನ ಲೇಖನಗಳ ಒಂದು ವೈಶಿಷ್ಟ್ಯವೂ ಅಹುದು. ಒಂದು ಶಬ್ದದ ಅರ್ಥ ಇಲ್ಲವೆ ಅದರ ಸಂಕೇತಾರ್ಥ ತಮಗೆ ಸಂದಿಗ್ಧವೆಂದು ತೋರಿದಾಗ ಅದನ್ನು ಪರಿಹರಿಸಿಕೊಳ್ಳಲು ಕೂಡ ಮೇಲಿನ ವಿಧಾನವನ್ನೇ ಅವರು ಅನುಸರಿಸಿರುವುದು ಕಂಡುಬರುತ್ತದೆ. ಅಜಿತಪುರಾಣದಲ್ಲಿ ರನ್ನನ ಮಗನಾದ 'ರಾಯ' ಹುಟ್ಟಿದ ಕಾಲ, ವಿರೋಧಿ ಸಂವತ್ಸರ ಭಾದ್ರಪದ ಶುಕ್ಲ ಬಿದಿಗೆ ಆದಿವಾರ ಎಂದಿದೆ (೧೨–೫೧). ಕಾಲನಿರ್ಣಯದಲ್ಲಂತೂ ಪೈ ಅವರಿಗೆ ಶಕವರ್ಷ, ಸಂವತ್ಸರ, ಮಾಸ, ಪಕ್ಷ, ವಾರ, ತಿಥಿ, ನಕ್ಷತ್ರ ಎಲ್ಲವೂ ಸರಿಹೊಂದಬೇಕು. ಮೇಲಿನ ಕಾಲಸೂಚನೆಯಲ್ಲಿರುವ 'ವಾರ' ಆದಿವಾರವಾಗಿರದೆ 'ಕುಜವಾರ'ವಾಗಿರಬೇಕೆಂದು ಅವರ ಲೆಕ್ಕ. ಆದುದರಿಂದಲೆ ಅವರು ರಾಯನು ಹುಟ್ಟಿದ ಕಾಲವನ್ನು ಕ್ರಿಸ್ತ ಶಕದಲ್ಲಿ ೯೮೯, ಅಗಸ್ಟ ೬ ಕುಜವಾರ ಎಂದೇ ಹೇಳಿದ್ದಾರೆ. ತಮ್ಮ ಆ ಹೇಳಿಕೆಯನ್ನು ಸಮರ್ಥಿಸಲು ಅವರು ಅಡಿಟಿಪ್ಪಣಿಯಲ್ಲಿ "ಕ್ರಿ. ಶ. ೯೮೯ರಲ್ಲಾಗಲಿ ಅದರ ಆಚೀಚೆಯ ಹಲವು ವರ್ಷಗಳಲ್ಲಾಗಲಿ ಭಾದ್ರಪದ ಶುದ್ಧ ಬಿದಿಗೆ ಆದಿ(ತ್ಯ)ವಾರ ಬಂದಿರಲಿಲ್ಲ. ಕ್ರಿ.ಶ. ೯೮೯ರ ವಿರೋಧಿಯಲ್ಲಿ ಅದು 'ಕುಜವಾರ' ಬಂದಿತ್ತು" ಎಂದು ಹೇಳಿ, ಮುಂದೆ ಅಜ್ಞರಾದ ಸಂಪ್ರತಕಾರರಿಂದ 'ಆರ'ವು 'ಆದಿ' ಎಂದು ತಪ್ಪಾಗಿ ಬರೆಯಲ್ಪಟ್ಟಿರಬಹುದು[೧೬] ಎಂದಿದ್ದಾರೆ. ಆ ಮೇಲೆ ಕುಜನಿಗೆ 'ಆರ' ಹೆಸರಿದ್ದುದನ್ನು ಸಮರ್ಥಿಸಲು ವರಾಹಮಿಹಿರನ 'ಬೃಹಜ್ಜಾತಕ' (೨–೨), ಮತ್ತು ಹೇಮಚಂದ್ರನ 'ಅಭಿಧಾನ ಚಿಂತಾಮಣಿ' (೧೧೬) ಯ ಶ್ಲೋಕಗಳನ್ನು ಉದ್ಧರಿಸಿದ್ದಾರೆ.[೧೭]

ರತ್ನಾಕರವರ್ಣಿಯ ಕಾಲವನ್ನು ಸೂಚಿಸುವ, "ಮಣಿಶೈಲಗತಿಯಿಂದು ಶಾಲಿಶಕಕಾಲಂ" ಎಂಬ ಪದ್ಯವಿದೆ. ಅದರಲ್ಲಿ ಮಣಿ = ೯, ಶೈಲ = ೭, ಇಂದು = ೧, ಎಂಬ ಸಂಕೇತಾರ್ಥದ ಬಗ್ಗೆ ಅವರಿಗೆ ಖಚಿತವಾಗಿದೆ. ಆದರೆ 'ಗತಿ' ಶಬ್ದದ ಸಂಕೇತಾರ್ಥ ಮೂರೊ? ನಾಲ್ಕೊ? ಎಂಬ ಬಗ್ಗೆ ಸಂದೇಹ ಬಂದಂತೆ ತೋರುತ್ತದೆ. ಅದನ್ನು ಪರಿಹರಿಸಿಕೊಳ್ಳಲು, ಕ್ರಿ. ಶ. ೯ ರಿಂದ ೧೨ನೆಯ ಶತಮಾನದವರೆಗಿನ ಕನ್ನಡ ಸಂಸ್ಕೃತ ಪ್ರಾಕೃತ ಕಾವ್ಯಗಳಲ್ಲಿ ಅದು ಪ್ರಯೋಗಗೊಂಡ ಒಂದಲ್ಲ ಹದಿನಾಲ್ಕು ಉದಾಹರಣೆಗಳನ್ನು ಎತ್ತಿಕೊಂಡು ಅವುಗಳಲ್ಲಿ 'ಗತಿ' ಶಬ್ದಕ್ಕೆ 'ನಾಲ್ಕು' ಎಂಬ ಸಂಕೇತಾರ್ಥವಿರುವುದನ್ನು ಖಚಿತಪಡಿಸಿಕೊಂಡು, ರತ್ನಾಕರವರ್ಣಿಯ ಕಾಲವನ್ನು ನಿರ್ಣಯಿಸಿದ್ದಾರೆ[೧೮]

ಪೈ ಅವರು ತಮ್ಮ ಸಂಶೋಧನ ಲೇಖನಗಳಲ್ಲಿ ಮುಖ್ಯ ವಿಷಯದ ಪ್ರತಿಪಾದನೆಗೆ ಕೊಡುವ ಆಧಾರಗಳನ್ನು ಸಮರ್ಥಿಸಲು ಸಂದರ್ಭಾನುಸಾರ ಮತ್ತೆ ಕೆಲವು ಆಧಾರಗಳನ್ನು ವಿಸ್ತಾರವಾಗಿಯೇ ವಿವರಿಸುತ್ತಾರೆ. ತತ್ಫಲವಾಗಿ ಮೂಲ ಸಂಶೋಧನೆಗೆ ಹೊಂದಿಕೊಂಡು ಮರಿಸಂಶೋಧನೆಗಳೂ ಹೊರಬರುತ್ತವೆ. ರನ್ನನು ಓಲಗಿಸಿದ ಸಾಮಂತ ರಾಜರ ನಿರ್ಣಯಾವಸರದಲ್ಲಿ ಶಂಕರಗಂಡನವಿಚಾರ, ಪಂಪನ ದೇಶಕಾಲಗಳನ್ನು ಕುರಿತು ಹೇಳುವಾಗ ಅರಿಕೇಸರಿಯ ಕಾಲವಿಚಾರ, ಹಾಗೆಯೆ ನೃಪತುಂಗನ ಕಾಲವನ್ನು ಕುರಿತು ವಿವೇಚಿಸುವಾಗ ಜಿನಸೇನನ ಕಾಲವಿಚಾರ–ಇತ್ಯಾದಿಗಳು ಬಂದಿರುವುದನ್ನು ಉದಾಹರಣೆಗಾಗಿ ನೋಡಬಹುದು[೧೯].

ತಮ್ಮ ಅಭಿಪ್ರಾಯಗಳಿಗೆ ವಿರೋಧವಾದ ಅಭಿಪ್ರಾಯಗಳು ಬಂದಾಗ ಅವುಗಳಿಗೆ ಉತ್ತರ ನೀಡುವಲ್ಲಿ ಪೈಯವರು ಎಂದೂ ಮನನೋಯುವಂತಹ ಭಾಷೆ ಬಳಸುತ್ತಿರಲಿಲ್ಲ. ಅವರು ಎತ್ತಿದ ಆಕ್ಷೇಪಣೆಗಳನ್ನು ಒಂದೊಂದಾಗಿ ಎತ್ತಿಕೊಂಡು. ಯುಕ್ತಿಯುಕ್ತವಾಗಿ ಸಾಧಾರವಾಗಿ ನಿರಾಕರಿಸುತ್ತ ಹೋಗುವುದು ಪೈ ಅವರು ಅನುಸರಿಸುತ್ತಿದ್ದ ವಿಧಾನ. ಫ್ಲೀಟರ ಮತ್ತು ಮಾ. ಆ. ರಾಮಾನುಜಯ್ಯಂಗಾರರ ಕೆಲವು ಅಭಿಪ್ರಾಯಗಳನ್ನು ಸಾಧಾರವಾಗಿ ನಿರಾಕರಿಸಿರುವ ಪೈ ಅವರ ಬಗೆಯನ್ನು ಆಸಕ್ತರು ನೋಡಬಹುದು[೨೦]. ಒಂದೊಂದು ಸಲ ವಿನೋದದ ಛಾಯೆಯುಳ್ಳ ಉತ್ತರಗಳನ್ನೂ ಅವರು ಕೊಟ್ಟದ್ದುಂಟು. ರನ್ನ ಹೆಸರಿನ ಕವಿಗಳು ಇಬ್ಬರಿದ್ದಾರೆಂಬ (ಗದಾಯುದ್ಧದ ಬ್ರಾಹ್ಮಣ ರನ್ನ ಮತ್ತು ಅಜಿತಪುರಾಣದ ಜೈನರನ್ನ) ಅಭಿಪ್ರಾಯವನ್ನು ಕೆಲವು ಜನ ವಿದ್ವಾಂಸರು ತಮ್ಮವೇ ಆದ ಕೆಲವು ಆಧಾರಗಳ ಹಿನ್ನೆಲೆಯಲ್ಲಿ ವ್ಯಕ್ತಪಡಿಸಿದ್ದರು.[೨೧] ಅದನ್ನು ಒಪ್ಪದ ಪೈ ಅವರು, ತಮ್ಮ ನಿಲುವನ್ನು ಸಮರ್ಥಿಸಲು 'ರನ್ನನೊಬ್ಬನೇ' ಎಂಬ ಸುದೀರ್ಘ ಲೇಖನವನ್ನು ಬರೆದರು.[೨೨] ಅದರಲ್ಲಿ ಒಂದೆಡೆ "......ಹೀಗೆಂಬುದರಿಂದ (ರನ್ನ ಹೆಸರಿನ ಕವಿಗಳು ಇಬ್ಬರು ಎಂಬುದರಿಂದ) ಗದಾಯುದ್ಧದ ರನ್ನನೂ ಅಜಿತಪುರಾಣದ ರನ್ನನೂ ಭಿನ್ನವ್ಯಕ್ತಿಗಳೆಂದಾದರೂ, ಅವರಿಬ್ಬರು ಒಂದೇ ಸಾಮ್ರಾಜ್ಯದಲ್ಲಿ ಒಬ್ಬನೇ ಸಾಮ್ರಾಟನ ಆಳಿಕೆಯಲ್ಲಿ ಇದ್ದಿರಬೇಕೆಂದು ನಿಷ್ಪನ್ನವಾಗುತ್ತದೆ. ಆದರೆ ಒಂದೇ ಕಾಲದಲ್ಲಿ ಒಂದೇ ಸಾಮ್ರಾಜ್ಯದಲ್ಲಿ ಇಬ್ಬರು ಕವಿಚಕ್ರವರ್ತಿಗಳು ಎಂದಾದರೂ ಉಂಟೇ ?... ಒಬ್ಬನೇ ಚಕ್ರವರ್ತಿ ಯಾರೊಬ್ಬ ಕವಿಗೆ ಕವಿಚಕ್ರವರ್ತಿಯೆಂಬಾ ಉಚ್ಚತಮವಾದ ಅದ್ವಿತೀಯವಾದ ಬಿರುದನ್ನಿತ್ತು, ಆತನು ಇನ್ನು ಇದ್ದಿರುವಾಗ ಇನ್ನೊಬ್ಬ ಕವಿಗೂ ಅದೇ ಬಿರುದನ್ನು ಕೊಡುವುದುಂಟೆ ? ಅಥವಾ ಹಾಗೆ ಕೊಟ್ಟನೇ ಎಂದಾದರೆ ಆ ಬಿರುದಿಗೆ ಬೆಲೆಯುಂಟೇ ?...... ಶ್ರೀಮನ್ನರಾಯಣನ ಸೃಷ್ಟಿಯಲ್ಲಿ ಒಂದೇ ಕಾಲದಲ್ಲಿ ಬ್ರಹ್ಮನೊಬ್ಬನೆ ಇರಲಾಪನಲ್ಲದೆ ಇಬ್ಬರು ಬ್ರಹ್ಮರು ಒಂದೇ ಬಾರಿಗೆ ಎಂದಿಗೂ ಇರಲಾರರಷ್ಟೆ ?...... ಆದಕಾರಣ, ಒಂದೇ ಕಾಲದಲ್ಲಿ ಒಬ್ಬನೇ ಚಕ್ರವರ್ತಿಯ ಆಳಿಕೆ

ಯಲ್ಲಿ 'ಕವಿಚತುರ್ಮುಖ' ಎಂಬ ಅದೊಂದೇ ಬಿರುದನ್ನು ಪಡೆದಿದ್ದ ಆ ಗದಾರತ್ನನೂ ಆ ಅಜಿತರನ್ನನೂ ಒಬ್ಬನೇ ಆಗಿರಬೇಕು, ಒಬ್ಬನೇ ಆಗಿದ್ದನು ವಿನಾ ಇಬ್ಬರೆಂದಿಗೂ ಆಗಿರಲಾರರು" ಎಂದು ದೃಢವಾಗಿ ಹೇಳಿದ್ದಾರೆ. ಇಲ್ಲಿರುವ ನವುರಾದ ವಿನೋದ, ಕಾಕುಗಳು ಪರಿಭಾವನಾರ್ಹ.

ಸಂಶೋಧನ ಲೇಖನಗಳ ಶೈಲಿ ಕಾದಂಬರಿ ಇಲ್ಲವೆ ಹರಟೆಗಳ ಶೈಲಿಯಂತೆ ಸರಸವಾಗಿರಬೇಕೆಂದು ಅಪೇಕ್ಷಿಸುವುದು ಸರಿಯಲ್ಲ. ಏಕೆಂದರೆ ಸಂಶೋಧನೆಯಲ್ಲಿಯ ವಿಷಯ ಗಂಭೀರ ಮತ್ತು ಕ್ಲಿಷ್ಟ. ಆದರೂ ಅದರ ಭಾಷಾಬಂಧ ಸ್ವಲ್ಪ ಶ್ರಮವಹಿಸಿ ಓದಿದಾಗಲಾದರೂ ವಿಷಯ ತಿಳಿಯುವಂತಿರಬೇಕು. ಪೈ ಅವರ ಸಂಶೋಧನ ಲೇಖನಗಳಲ್ಲಿ ಅಂಥ ಶೈಲಿ ಎಲ್ಲ ಕಡೆಗೂ ಕಂಡುಬರುವುದಿಲ್ಲ. ಮಂಡಿಸಬೇಕೆಂದಿರುವ ವಿಷಯ ಪೂರ್ಣ ಮುಗಿಯುವವರೆಗೆ, ಒಂದೇ ವಾಕ್ಯವನ್ನು– ಅದು ಎಷ್ಟೇ ಉದ್ದವಾದರೂ ನಿಲ್ಲಿಸದೆ– ಪೈ ಅವರು ಮುಂದುವರಿಸಿಕೊಂಡು ಹೋದುದೂ ಉಂಟು. ಉದಾಹರಣೆಗಾಗಿ "ಶ್ರೀ ಪೃಥ್ವೀವಲ್ಲಭಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕನೆಂಬ ಚಟ್ಟಿಗದೇವ ಅಂದರೆ ರಾಷ್ಟ್ರಕೂಟ ನಿತ್ಯವರ್ಷIII– ಕೊಟ್ಟಿಗ (ಅಥವಾ ಖೊಟ್ಟಿಗ) ನ ಆಳಿಕೆಯ (ಕ್ರಿ. ಶ. ೯೬೭–೯೭೨)............... ಆ ಬನವಾಸಿ ನಾಡಿನಲ್ಲಿ ಒಳಪಟ್ಟ ಬನವಾಸಿ ೧೨೦೦೦ವನ್ನು ಆಳುತ್ತಿರಬೇಕು"[೨೩] ಎಂಬ ವಾಕ್ಯವನ್ನು ನೋಡಬಹುದು. ಈ ಒಂದೇ ವಾಕ್ಯ ೧೬ ಸಾಲುಗಳುದ್ದಕ್ಕೂ ಹರಿದು ಬಂದಿದೆ. ರಾಷ್ಟ್ರಕೂಟ ಮೂರನೆಯ ಕೊಟ್ಟಿಗ, ಎರಡನೆಯ ಕಕ್ಕ ಮತ್ತು ಚಾಲುಕ್ಯ ತೈಲಪ ಈ ಮೂವರ ಆಳಿಕೆಗೆ ಸೇರಿದ ಸೊರಬದ ೪೬೫, ೪೫೫, ೪೫೪, ೪೧೩ ಈ ಶಾಸನಗಳಲ್ಲಿ ಉಲ್ಲೇಖಿತನಾಗಿರುವ ಚಟ್ಟಿಗದೇವ ಅಥವಾ ಚಟ್ಟಯ್ಯನು ಒಬ್ಬನೇ ಎಂದು ಹೇಳಬೇಕಾಗಿರುವುದು ಇಲ್ಲಿ ಅವರ ಮುಖ್ಯ ಉದ್ದೇಶ. ಇಷ್ಟನ್ನು ಹೇಳುವ ಈ ವಾಕ್ಯ ಸಾಕಷ್ಟು ದೀರ್ಘವಾಗಿರುವ ಜೊತೆಗೆ ವಾಕ್ಯದ ಒಡಲಲ್ಲಿಯೆ, ಚಟ್ಟಿಗದೇವನೆಂದರೆ ಚಟ್ಟಯ್ಯ ಎಂಬಂತಹ ವಿವರಣೆ, ಶಕವರ್ಷ, ಸಂವತ್ಸರ, ಮಾಸ, ಪಕ್ಷ, ವಾರ, ತಿಥಿ ಸಂಕ್ರಮಣ ಸೂರ್ಯಾಸ್ತಗಳ ಹೇಳಿಕೆಯೊಂದಿಗೆ ಅದಕ್ಕೆ ಸಮಾನವಾದ ಕ್ರಿಸ್ತವರ್ಷ, ತಿಂಗಳು ದಿನಾಂಕ, ವಾರಗಳ ಉಲ್ಲೇಖ; ಒಂದು ಶಾಸನದ ಬಗ್ಗೆ ಹೇಳಿದ ಕೂಡಲೆ ವಾಕ್ಯವನ್ನು ಅಲ್ಲಿಗೆ ಮುಗಿಸದೆ ಮತ್ತೊಂದು ಶಾಸನದ ಬಗ್ಗೆ ಹೇಳುತ್ತ ಮುಂದುವರಿಸಿರುವುದು –ಇವೆಲ್ಲ ಒಂದರೊಡನೊಂದು ತಳಕುಹಾಕಿಕೊಂಡು, ಓದುಗನಿಗೆ ಕಕಮಕ ಹಿಡಿಸುತ್ತವೆ. ಬೇರೆ ವಿದ್ವಾಂಸರ ಸಂಶೋಧನ ಲೇಖನಗಳ ಶೈಲಿಯ ಜೊತೆ ಪೈ ಅವರ ಇಂತಹ ಶೈಲಿಯನ್ನು ಹೋಲಿಸಿ ನೋಡಿದಾಗ, ಅವರ ಶೈಲಿ ಸಂಶೋಧನ ಲೇಖನಗಳಿಗೆ ಕೆಲವು ಕಡೆ ಬಗ್ಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅವರ ಶೈಲಿಯ ಕ್ಲಿಷ್ಟತೆಗೆ ಕಠಿಣ ಶಬ್ದಗಳ ಬಳಕೆ ಕಾರಣವಲ್ಲ, ಅವರ ವಾಕ್ಯರಚನಾ ವಿನ್ಯಾಸ ಕಾರಣ. ತಮ್ಮ ಲೇಖನ ಎಲ್ಲ ವಿವರಗಳಿಂದ ಕೂಡಿರಬೇಕೆಂಬ ಅವರ ಉದ್ದೇಶ

ಸಾಧುವಾದುದೇ ಆದರೆ ಹಾಳತಾದ ವಾಕ್ಯಗಳನ್ನು ಬಳಸಿದ್ದರೆ ಅವರ ಆ ಉದ್ದೇಶ ಹೆಚ್ಚು ಸಫಲವಾಗುತ್ತಿತ್ತು. ಸುಫಲವಾಗುತ್ತಿತ್ತು.

ಸಂಶೋಧನೆಯಲ್ಲಿ ಕೆಲವು ಸಂದರ್ಭಗಳಲ್ಲಿ ತರ್ಕಕ್ಕೂ ಸ್ಥಾನವಿದೆ. ಪೈ ಅವರ ಸಂಶೋಧನ ಲೇಖನಗಳಲ್ಲಿ ಅದನ್ನು ಹಲವೆಡೆ ಕಾಣಬಹುದು. ರನ್ನನ ಅನುಪಲಬ್ಧ ಕೃತ ಚಕ್ರೇಶ್ವರಚರಿತದ ನಾಯಕ, ಜೈನ ದ್ವಾದಶ ಚಕ್ರವರ್ತಿಗಳಲ್ಲಿ ಮೊದಲನೆಯವನಾದ ಭರತನೆಂಬ ತಮ್ಮ ಅಭಿಪ್ರಾಯವನ್ನು ಸಮರ್ಥಿಸಲು ಮಾಡಿರುವ ತರ್ಕಸರಣಿ ಪರಿಭಾವನಾರ್ಹ. ಮೊದಲು. ರನ್ನಕವಿಗೆ ಭರತ ಚಕ್ರವರ್ತಿಯ ಬಗ್ಗೆ ಹೆಚ್ಚಿನ ಗೌರವಭಾವನೆ ಇದ್ದುದನ್ನು ಸ್ಪಷ್ಟಪಡಿಸಲು ಅವನ 'ಅಜಿತಪುರಾಣ'ದಿಂದ ನಾಲ್ಕಾರು ಉದಾಹರಣೆಗಳನ್ನು ಪೈ ಅವರು ಕೊಟ್ಟಿದ್ದಾರೆ. ತದನಂತರ "ಇವೆಲ್ಲಕ್ಕೂ ಮಿಗಿಲಾಗಿ ಅಜಿತಪುರಾಣದಲ್ಲಿ (೯–೩೪ ಗದ್ಯ)–ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯಂ ಕಾಕಿಣೀರತ್ನದೊಳ್ ಕವಿರತ್ನನಿಂ ಬರೆಯಿಸಿ– ಎಂದಿರುವಲ್ಲಿಯ ಕವಿರತ್ನನಾದರೊ...... ನಾವು ಬಾರಿ ಬಾರಿಗೂ ಬಲ್ಲ ರನ್ನನೆ ವಿನಾ ಮತ್ತಾರೂ ಅಲ್ಲವೆಂಬುದು ಖಂಡಿತ. ಈಗ ಗದ್ಯದಲ್ಲಿ 'ಬರೆಯಿಸಿ' ಎಂಬ ಭೂತನ್ಯೂನವೂ ಆಗಿಹೋದ ವಿಷಯವನ್ನು ಸೂಚಿಸುತ್ತದೆಯೆಂಬುದೂ ಖಂಡಿತ. ಹಾಗಾದರೆ ಅಜಿತಪುರಾಣಕ್ಕೆ ಮುಂಚೆ ರನ್ನನು ಬರೆದ 'ಚಕ್ರೇಶ್ವರ ಚರಿತ'ವು ಭರತೇಶ ಚಕ್ರವರ್ತಿಯ ಚರಿತ್ರವಲ್ಲವಾದರೆ ಬೇರಾವುದಾಗಿರಬೇಕು?" ಎಂದು ನಮಗೆ ಸವಾಲಿಸೆಯುತ್ತಾರೆ. ಮುಂದೆ ಮೇಲಣ ಗದ್ಯಭಾಗಕ್ಕಿರುವ "ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯಂ ಸಮಾಪದೊಳ್ ನಿಜಂ ಕಾಕಿಣೀರತ್ನದೊಳ್ ಕವಿರತ್ನನಿಂ ಬರೆಯಿಸಿ" ಎಂಬ ಪಾಠಾಂತರ ಭಾಗವನ್ನು ಎತ್ತಿಕೊಂಡು, "......ಸಮಾಪ ಎಂದರೆ ಮುಗಿತಾಯ...... ಸಮಾಪದೊಳ್ ನಿಜಂ ಕಾಕಿಣೀರತ್ನದೊಳ್ ಕವಿರತ್ನನಿಂ ಬರೆಯಿಸಿ ಅಂದರೆ ಭರತೇಶ್ವರ ಚಕ್ರವರ್ತಿಯ ಪ್ರಶಸ್ತಿಯನ್ನು ಬರೆದು ಮುಗಿಸುತ್ತಲೇ ತನ್ನ ಪ್ರಶಸ್ತಿಯನ್ನು ಬರೆಯಿಸಿ" ಎಂದರ್ಥವಾಗುತ್ತದೆ. "ಇದರಿಂದ ಅವೆರಡೂ ಪ್ರಶಸ್ತಿಗಳನ್ನು ಬರೆದವನೊಬ್ಬನೆ ಎಂಬುದು ಸ್ವಯಂ ಸಿದ್ಧವಾಗುವುದು" ಎಂದು ತರ್ಕಬದ್ಧವಾಗಿ ವಾದಿಸಿ ಅದನ್ನೂ ತಮಗೆ ಅನುಕೂಲವಾಗುವ ರೀತಿಯಲ್ಲಿಯೆ ಅರ್ಥಯಿಸಿದ್ದಾರೆ. ಮತ್ತೆ ಕ್ರಿ. ಶ. ೧೧೦೨ರ ಚಿಕ್ಕಮಗಳೂರು ಶಾಸನದಲ್ಲಿ (E c VI ೧೬೦) ಭರತೇಶ್ವರ ಹೆಸರಿನ ಒಬ್ಬ ಚಮೂಪತಿಯನ್ನು ವರ್ಣಿಸುವ "ಭರತೇಶ್ವರ ಚಕ್ರೇಶ್ವರ ಚರಿತಮೆ ನಿಜಚರಿತಮೆನೆ ಎಂಬ ಮಾತನ್ನು ತಮ್ಮದೆ ಆದ ರೀತಿಯಲ್ಲಿ ಅರ್ಥಯಿಸುತ್ತ "ಆ ಚರಿತವೆಂಬ ಕ್ಲಿಷ್ಟಪದದಿಂದ ರನ್ನನ ಕಾವ್ಯದ ಹೆಸರನ್ನೂ (ಶಾಸನಕವಿ) ಧ್ವನಿಸಿರುವಂತೆ ಸಾಕಷ್ಟು ಸ್ಪಷ್ಟವಿರುವುದು" ಎಂದು ಹೇಳಿ ಅದನ್ನು ತಮ್ಮ ವಾದಸಮರ್ಥನೆಗೆ ಹೊಂದಿಸಿಕೊಂಡಿದ್ದಾರೆ.[೨೫] ಅಲ್ಲದೆ ಆ ಶಾಸನದ ಕಾಲದ (೧೧೦೨) ವರೆಗಾದರೂ ರನ್ನನ ಚಕ್ರೇಶ್ವರ ಚರಿತ ನಷ್ಟವಾಗಿರಲಾರದು ಎಂದೂ ಊಹಿಸಿದ್ದಾರೆ. ಇಲ್ಲಿ ಮೊದಲ ಭಾಗ ತರ್ಕಪ್ರಧಾನ

ವಾಗಿದ್ದರೆ, ಎರಡನೆಯ ಭಾಗವನ್ನು ತಮ್ಮ ವಾದಸಮರ್ಥನೆ ಎಳೆದು ತಂದಿರುವುದು ಸ್ಪಷ್ಟವಿದೆ. ಆದರೂ ಪೈ ಅವರ ತರ್ಕಸರಣಿಗೆ ಇದೊಂದು ಒಳ್ಳೆಯ ಉದಾಹರಣೆ ಎನ್ನಬಹುದು.

ಪೈ ಅವರ ಸಂಶೋಧನ ಲೇಖನಗಳಲ್ಲಿ ಊಹೆಗಳು ಅನುಮಾನಿತ ಅಂಶಗಳು ಅಧಿಕವಾಗಿರುವುದಕ್ಕೆ ಅವುಗಳಲ್ಲಿ ಮತ್ತೆ ಮತ್ತೆ ಬರುವ 'ಇದ್ದಿರಬೇಕು' 'ರಚಿತವಾಗಿರಬೇಕು' 'ಪ್ರಾಯಶಃ' 'ತೋರುತ್ತದೆ' 'ಹೀಗಿರಲಾರದು'– ಇತ್ಯಾದಿ ಮಾತುಗಳೆ ಸಾಕ್ಷಿಯಾಗಿವೆ. ಅಲ್ಲದೆ ಅವರು ಮಾಡಿರುವ ಕೆಲವು ಊಹೆಗಳು ಇನ್ನೂ ಪ್ರಬಲ ಆಧಾರಗಳನ್ನು ಬಯಸುತ್ತವೆ.

'ಪ್ರಶ್ನೋತ್ತರ ರತ್ನ ಮಾಲಿಕೆ' ಎಂಬ ಗ್ರಂಥದ ಕರ್ತೃವಿನ ಹೆಸರು ಒಂದು ಪ್ರತಿಯಲ್ಲಿ ವಿಮಲನೆಂಬ ಶ್ವೇತಾಂಬರ ಜೈನಮುನಿಯೆಂದೂ, ಇನ್ನೊಂದರಲ್ಲಿ ಅಮೋಘೋದಯನೆಂದೂ ಬರುತ್ತದೆ. ಈ ವಿಮಲ ಮತ್ತು ಅಮೋಘೋದಯನೆಂದರೆ ಕವಿರಾಜಮಾರ್ಗದಲ್ಲಿ ಬರುವ ವಿಮಲೋದಯನಿರಬೇಕೆಂದು ಪೈ ಊಹಿಸಿ, ಅವನೇ 'ಪ್ರಶ್ನೋತರರತ್ನಮಾಲಿಕೆಯ' ಕರ್ತೃವೆನ್ನುತ್ತಾರೆ.[೨೬] ವಿಮಲೋದಯ ಎಂಬ ಪದ 'ವಿಮಲ' ಮತ್ತು 'ಉದಯ' ಎಂಬ ಎರಡು ಹೆಸರುಗಳನ್ನು ಸೂಚಿಸುತ್ತದೆಯೆ?. ಅಥವಾ ಅದು ಒಬ್ಬನದೇ ಹೆಸರೆ? ಎಂಬ ಬಗ್ಗೆ ಪಂಡಿತರಲ್ಲಿ ಏಕಾಭಿಪ್ರಾಯವಿಲ್ಲ. ಆದುದರಿಂದ ಪೈ ಅವರ ಅಭಿಪ್ರಾಯಕ್ಕೆ ಖಚಿತತೆ ಸಾಧ್ಯವಿಲ್ಲ. ಪ್ರಶ್ನೋತ್ತರರತ್ನಮಾಲಿಕೆಯ ಕರ್ತೃ ವಿಮಲನೆಂದು ಒಪ್ಪಿದರೂ, ಈ ವಿಮಲ ಕವಿರಾಜಮಾರ್ಗೋಕ್ತ ವಿಮಲೋದಯ, ಅಥವಾ ವಿಮಲನೆನ್ನಲು ಆಧಾರಗಳಿಲ್ಲ.

'ಚೂಡಾಮಣಿ' ಗ್ರಂಥದ ಕರ್ತೃವಾದ ಶ್ರೀ ವರ್ಧದೇವನ ಕಾಲದ ಬಗ್ಗೆ ಪೈ ಅವರು "ಕ್ರಿ. ಶ. ಆರನೆಯ ಶತಮಾನದಲ್ಲಿದ್ದ ದಂಡಿಯಿಂದ ಸ್ತುತಿಸಲ್ಪಟ್ಟ ಶ್ರೀವರ್ಧದೇವನು ಆ ಶತಕಕ್ಕಿಂತ ತಕ್ಕಷ್ಟು ಹಿಂದೆಯೇ ಆಗಿ ಹೋಗಿರಬೇಕು" ಎಂದು ಹೇಳಿದ್ದಾರೆ. ಆದರೆ ದಂಡಿಯ ಕಾಲ ಕ್ರಿ. ಶ. ಏಳನೆಯ ಶತಮಾನದ ಕೊನೆ ಎಂದು ಬಹುಜನ ವಿದ್ವಾಂಸರ ಅಭಿಪ್ರಾಯ. ಆದುದರಿಂದ ಪೈ ಅವರ ಊಹೆ ಸಂದೇಹಾಸ್ಪದ.

ಭಟ್ಟಾಕಳಂಕ ಹೇಳುವ ೯೬ ಸಾವಿರ ಗ್ರಂಥ ಪ್ರಮಾಣದ ಕೃತಿ, ಶ್ರೀವರ್ಧದೇವನ ಚೂಡಾಮಣಿಯಾಗಿರಬೇಕೆಂದು ಪೈ ಹೇಳಿದ್ದಾರಲ್ಲದೆ, ತುಂಬಳೂರಾಚಾರ್ಯ ಅದಕ್ಕೆ 'ಚೂಡಾಮಣಿ' ಹೆಸರಿನ ವ್ಯಾಖ್ಯಾನ ಬರೆದಿರಬಹುದೆಂದೂ ತಿಳಿಸಿದ್ದಾರೆ. ಅವೆರಡೂ ಬೃಹತ್ ಕೃತಿಗಳು ಕನ್ನಡದಲ್ಲಿದ್ದು ಪದ್ಯಬದ್ಧವಾಗಿರಬೇಕೆಂದು ಅವರ ಊಹೆ.[೨೮] ಆದರೆ, ತುಂಬಳೂರಾಚಾರ್ಯ ಬರೆದ 'ಚೂಡಾಮಣಿ' ಗ್ರಂಥ, ಷಟ್ ಖಂಡಾಗಮ ಮತ್ತು ಕಷಾಯ ಪಾಹುಡಗಳಿಗೆ ಬರೆದ ವ್ಯಾಖ್ಯಾನಕೃತಿ; ಹಾಗೆಯೆ ಭಟ್ಟಾಕಳಂಕ ಹೇಳುವ ೯೬ ಸಾವಿರ ಗ್ರಂಥಪ್ರಮಾಣದ 'ಚೂಡಾಮಣಿ', ತತ್ತ್ವಾರ್ಥ

ಸೂತ್ರಕ್ಕೆ ಬರೆದ ವ್ಯಾಖ್ಯಾನ (ಕರ್ತೃ ಗೊತ್ತಿಲ್ಲ), ಇವೆರಡೂ ಕನ್ನಡ ಕೃತಿಗಳು. ಶ್ರೀವರ್ಧದೇವನದು ಚೂಡಾಮಣಿ ಕಾವ್ಯ. ಇದರ ಭಾಷೆ ಸಂಸ್ಕೃತ, ಪ್ರಾಕೃತ ಇಲ್ಲವೆ ಕನ್ನಡವಿರಬಹುದು– ಎಂಬ ಅಭಿಪ್ರಾಯ ಬಂದಿದ್ದು.[19] ಅದು ಸಬಲ ಕಾರಣಗಳಿಂದ ಕೂಡಿದೆ. ಆದುದರಿಂದ ಪೈ ಅವರ ಊಹೆ ಅಗ್ರಾಹ್ಯವೆಂದೇ ಹೇಳಬಹುದು.

ವಡ್ಡಾರಾಧನೆಯಲ್ಲಿ ಬರುವ 'ಕಲ್ಪಿಸು' 'ಒಡ್ಡಿಸು' 'ಬಟ್ಟಿದೊಂ' 'ಕೆಂದು' 'ಕೇಳಿ' 'ಲುಂದು' 'ಇಟಿಗ್' 'ಪೊಟ್ಟಿ' 'ಒಡೆಯು'– ಇತ್ಯಾದಿ ವಿಶಿಷ್ಟ ಪದಗಳನ್ನೂ ಜೊತೆಗೆ ಕೆಲವು ಅಪರೂಪ ಪ್ರಯೋಗಗಳನ್ನೂ ಗಮನಿಸಿ, ಹಲವಾರು ಪ್ರಾಚೀನ ಕನ್ನಡ ಶಾಸನಗಳಲ್ಲಿ ಇವು ಬಂದಿರುವುದನ್ನು ಎತ್ತಿತೋರಿಸಿ "ನನಗಾದರೊ ಕನ್ನಡ ವೊಡ್ಡಾರಾಧಣವು ಕ್ರಿ. ಶ. ೬ನೆಯ ಶತಮಾನಕ್ಕಿಂತ ಈಚಿನದಲ್ಲವೆಂದು ತೋರುತ್ತದೆ" ಎಂದು ಹೇಳಿದ್ದಾರೆ.[20] ಪೈ ಅವರು ವಡ್ಡಾರಾಧನೆಯ ಕಾಲನಿರ್ಣಯಕ್ಕೆ ಹೆಚ್ಚಾಗಿ ಆಂತರಿಕ ಪ್ರಮಾಣವನ್ನೇ ಅವಲಂಬಿಸಿರುವುದು ಕಂಡುಬರುತ್ತದೆ. ಬಾಹ್ಯ ಪ್ರಮಾಣದ ಬೆಂಬಲವಿಲ್ಲದ ಹೊರತು ಇವಕ್ಕೆ ಹೆಚ್ಚಿನ ಬೆಲೆ ಬರಲಾರದು. ಅಲ್ಲದೆ ಅವರು ಕಾಣಿಸಿರುವ ಎಲ್ಲ ವಿಶಿಷ್ಟ ಪದಗಳು ಈಚಿನ ಕಾಲದ ಹಳಗನ್ನಡ ಗ್ರಂಥಗಳಲ್ಲೂ. ಶಾಸನಗಳಲ್ಲೂ ಕಂಡುಬರುತ್ತವೆ. ಪದಗಳ ರೂಪ ಅವುಗಳನ್ನೊಳಗೊಂಡ ಕೃತಿಯ ಕಾಲನಿರ್ಧಾರಕ್ಕೆ ಕೆಲವು ಸಂದರ್ಭಗಳಲ್ಲಿ ಸಹಾಯಕವಾಗಬಹುದಾದರೂ ಅದೊಂದನ್ನೇ ಹೆಚ್ಚಾಗಿ ಅವಲಂಬಿಸಿ ಕೃತಿಯ ಕಾಲವನ್ನು ನಿರ್ಧರಿಸುವುದು ಸರ್ವಸಮ್ಮತವಾಗಲಾರದು. ಆದುದರಿಂದ. ವಡ್ಡಾರಾಧನೆಯ ಕಾಲವನ್ನು ಪೈ ಅವರ ಊಹೆಯಂತೆ ಅಷ್ಟು ಹಿಂದಕ್ಕೆ ಒಯ್ಯಲು ಬರುವುದಿಲ್ಲ.

ಅರಿಕೇಸರಿ. ಪಂಪನಿಗೆ ಕೊಟ್ಟ ಶಾಸನದ ಅಗ್ರಹಾರ 'ಧರ್ಮಪುರ'. ಇಂದಿನ ಡಂಬಳವೆಂಬ ಫ್ಲೀಟರ ಅಭಿಪ್ರಾಯವನ್ನು ಪೈ ಒಪ್ಪುತ್ತಾರೆ. ಹಾಗೆಯೇ ಪಂಪನು ಹೇಳಿರುವ ಕೊಟ್ಟೂರು ನಿಡುಗುಂದಿ (ನಿಡುಂಗೊಂಡೆ) ಮುಂತಾದವು ಪೂರ್ವಚಾಲುಕ್ಯ ಸೀಮೆಯ ವೆಂಗಿನಾಡಿನ ವೆಂಗಿಪಳುವಿನೊಡನೆ ಹೋಲಿಸಲ್ಪಟ್ಟಿರುವ ಇಂದಿನ ಕರ್ನಾಟಕ ಪ್ರದೇಶಗಳೆಂದು ಅವರ ಗ್ರಹಿಕೆ.[21] ಇವೆಲ್ಲವನ್ನು ಇತ್ತೀಚೆ ದೊರೆತ ಪಂಪನ ತಮ್ಮ ಜಿನವಲ್ಲಭನ ಕುರ್ಕ್ಯಾಲಶಾಸನ ನಿರಸನಗೊಳಿಸುತ್ತದೆ. ಅದೇ ರೀತಿ ವೇಮುಲವಾಡ ಶಾಸನದಲ್ಲಿ (ಸು. ೯೩೦) ಅರಿಕೇಸರಿಗೆ 'ಗುಣಾರ್ಣವ' ಬಿರುದಿರುವುದನ್ನು ಆಧರಿಸಿ: ಪಂಪನಿಗೆ 'ಕವಿತಾಗುಣಾರ್ಣವ. ಎಂಬ ಬಿರುದು ಆ ದೊರೆಯ ಸಂಬಂಧದಿಂದ ಬಂದಿರಬಹುದೆಂದೂ. ಆದಿಪುರಾಣದ ರಚನಾಕಾಲಕ್ಕೆ ಪಂಪ. ಅರಿಕೇಸರಿಯ ಪೋಷಣೆಗೆ ಸೇರಿರಬೇಕೆಂದೂ ಪೈ ಊಹಿಸುತ್ತಾರೆ.[22] ಆದರೆ ಅರಿಕೇಸರಿಯ ಪ್ರಸ್ತಾಪ 'ಆದಿಪುರಾಣ'ದಲ್ಲಿ ಬರುವುದಿಲ್ಲವಾದುದರಿಂದ. ಅವರ ರಚನಾಕಾಲಕ್ಕೆ. ಅರಿಕೇಸರಿಯ ಆಸ್ಥಾನ ಸೇರಿದ್ದನೆಂಬುದನ್ನು ಸಾಧಿಸುವುದು ಕಷ್ಟ.

ರನ್ನನ ಅನುಪಲಬ್ಧ ಕೃತಿ 'ಪರಶುರಾಮಚರಿತ'ದ ನಾಯಕ, ಜೈನದ್ವಾದಶ ಚಕ್ರವರ್ತಿಗಳಲ್ಲಿ ಒಬ್ಬನಾದ ಸುಭೌಮನೆಂಬ ಕಾರ್ತವೀರ್ಯನೆಂದೂ, ಕೃತಿಗೆ ಪರಶುರಾಮಚರಿತ' ಹೆಸರಿಡಲು ಬೇರೆ ಕಾರಣಗಳಿವೆಯೆಂದೂ,[೩೩] ಆ ಕೃತಿಯನ್ನು, ಚಾಲುಕ್ಯ ತೈಲಪನ ಕೈಕೆಳಗಿನ ರಟ್ಟದೊರೆ ಒಂದನೆಯ ಕಾರ್ತವೀರ್ಯ ಅಥವಾ ಕತ್ತನ (ಅವನು ಜೈನ) ಆಸ್ಥಾನವನ್ನು ಹೊದಲು ಸೇರಿ. "ಅಲ್ಲಿ ತನ್ನೊಡೆಯನೂ ಸ್ವಜ್ಞಾತಿಯನೂ ಆದ ಒಂದನೆಯ ಕಾರ್ತವೀರ್ಯನ ಗೌರವಾರ್ಥವಾಗಿ ಹಾಗೂ ನಾಮಸಾದೃಶ್ಯದಿಂದ ವ್ಯಕ್ತವಾಗುವಂತೆ ಆತನಿಗೆ ಅಂಕಿತವಾಗಿ. ಆತನ ಹೆಸರಿನ ಸ್ಮಾರಕವಾಗಿ ಯಥಾರ್ಥವಾಗಿ ಕಾರ್ತವೀರ್ಯಚರಿತವಾದ ತನ್ನ ಪರಶುರಾಮಚರಿತವನ್ನು ಅತನ ಆಳಿಕೆಯಲ್ಲಿ (ಕ್ರಿ. ಶ. ೯೭೮ರ ಆಚೀಚೆ)" ರನ್ನನು ರಚಿಸಿರಬೇಕೆಂದೂ ಪೈ ಊಹಿಸಿದ್ದಾರೆ.[೩೪] ಈ ಊಹೆಗಳು ಆಧಾರಗಳನ್ನು ಎಳೆದು ತಂದು ಸುತ್ತು ಬಳಸಿಮಾಡಿದ ಊಹೆಗಳಾಗಿವೆ. ಆದುದರಿಂದ ಅವುಗಳಲ್ಲಿರುವ ಸಂಭಾವ್ಯತೆ ತೀರ ಕಡಿಮೆ ಎಂದು ಹೇಳಬಹುದು.

ಕನ್ನಮಯ್ಯನ 'ಮಾಳವೀ ಮಾಧವ'ವನ್ನು ಕುರಿತು ಪಂಡಿತರು. ಅದು ಭವಭೂತಿಯ ಸಂಸ್ಕೃತ ನಾಟಕದ ಅನುವಾದವೊ ಅನುಕರಣವೊ ಆಗಿರಬಹುದೆಂದೂ, ಸಂಸ್ಕೃತದ 'ಮಾಲತೀ ಮಾಧವ' ಹೆಸರು ಕನ್ನಡದಲ್ಲಿ 'ಮಾಳವೀ ಮಾಧವ' ಆಗಿರಬಹುದೆಂದೂ ಹೇಳುತ್ತಾರೆ[೩೫] "ಮಾಳವೀ ಮಾಧವ ಎಂದೂ ಮಾಲತೀಮಾಧವ ಎಂದೂ ತೀರ ಸರಿಬರಿಯಾದ ಹೆಸರಿನ ಎರಡು ಅನ್ಯಾನ್ಯಕೃತಿಗಳು ಕನ್ನಡದಲ್ಲಿ ಇದ್ದಿರಲಾರವು"[೩೬] ಎಂದು ಹೇಳುವ ಪೈ ಅವರು, ದುರ್ಗಸಿಂಹನ ಪಂಚತಂತ್ರದಲ್ಲಿ 'ಮಾಳವೀ ಮಾಧವ' ಎಂಬ ಹೆಸರೇ ಇರುವುದರಿಂದ "ಮಾಳತೀ ಮಾಧವಮಂ ಎಂಬ ಪಾಠವಿರುವ ಪಂಚತಂತ್ರದ ಹಸ್ತಪ್ರತಿದೊರೆಯುವವರೆಗೆ ಅಲ್ಲಿ ಹೆಸರಿಸಿರುವ ಗ್ರಂಥವು ಮಾಳವೀಮಾಧವ ಎಂದೇ ಒಪ್ಪಿಕೊಳ್ಳಬೇಕು"[೩೭] ಎಂದು ಒತ್ತುಕೊಟ್ಟಿರುವುದನ್ನು ಗಮನಿಸಬೇಕು ಅಲ್ಲದೆ ಮಾಳವೀಮಾಧವದ ವಸ್ತುವನ್ನು ಕುರಿತು "......ಅಥವಾ ಮಾಧವನೆಂಬ ಶ್ರೀಕೃಷ್ಣನ ಅಷ್ಟ ಮಹಿಷಿಯರಲ್ಲಿ ಮಾಳವಿ ಎಂಬ ಯಾರೊಬ್ಬಳಿದ್ದು (ಮಾಲವದರಾಜಧಾನಿ ಅವಂತಿ, ಅತ ಏವ ಅವಂತಿಯ ರಾಜ ಕನ್ಯೆಯೂ ಕೃಷ್ಣನ ರಾಣಿಯೂ ಆಗಿದ್ದ ಮಿತ್ರವಿಂದೆ ಮಾಲವಿ ಎಂದು ಸಾಹಜಿಕವಾಗಿ ಕರೆಯಲ್ಪಡಲೂ ಬಹುದು) ಅದು ಆಕೆಗೂ ಆತನಿಗೂ ಆಗ ವಿವಾಹವನ್ನು ಬಣ್ಣಿಸುವ ನಾಟಕವಾಗಿರಲೂಬಹುದು"[೩೮] ಎಂಬ ಪರ್ಯಾಯವಾದ ಊಹೆಯೊಂದನ್ನು ಮುಂದಿಟ್ಟಿದ್ದಾರೆ. ಇದು ಒಂದು ಕಲ್ಪನೆಯಾಗಬಹುದೇ ವಿನಾ ಸಂಭಾವ್ಯ ಊಹೆ ಆಗಲಾರದು.

ಕನ್ನಡದ ಸಾಹಿತ್ಯದ ಪ್ರಾಚೀನತೆ' ಮತ್ತು 'ಕನ್ನಡ ಸಾಹಿತ್ಯದ ಹಾಗೂ ಭಾಷೆಯ ಹಳಮೆ'[೪೦] ಲೇಖನಗಳಲ್ಲಿ ಪೈ ಅವರು ಹಲ್ಮಿಡಿಶಾಸನದ ಹಿಂದಣ ಶಾಸನಗಳನ್ನು

ಸೂಚಿಸಿದ್ದಾರೆ. ಹಲ್ಮಿಡಿ ಶಾಸನಕ್ಕೆ ಪ್ರಾಚೀನವಾದ ಶಾಸನಗಳನ್ನು ಕೆಲವರು ಕೃತಕವೆಂದು ಸಾಧಿಸಿದ್ದಾರೆ.[೪೧] ಆದುದರಿಂದ ಪೈ ಅವರು ಉದ್ಧರಿಸುವ ಹಲ್ಮಿಡಿ ಶಾಸನದ ಪೂರ್ವದ ಶಾಸನಗಳ ಖಚಿತತೆಯ ಬಗ್ಗೆ ಸಂದೇಹ ಉಳಿದುಕೊಳ್ಳುತ್ತದೆ. ವಿದ್ವಾಂಸರಿಗೆ ಒಪ್ಪಿತವಲ್ಲದ, ಇಲ್ಲವೆ ಅವರು ಸಂದೇಹಿಸುವ, ಪೈ ಅವರ ಎಲ್ಲ ನಿಲುವುಗಳನ್ನು, ಊಹೆಗಳನ್ನು ಇಲ್ಲಿ ಕೊಡಲು ಸಾಧ್ಯವಿಲ್ಲ. ಉದಾಹರಣೆಗಾಗಿ ಕೆಲವರನ್ನು ಮಾತ್ರ ಕೊಡಲಾಗಿದೆ.

ಮೇಲೆ ನೋಡಿದಂತೆ ಪೈ ಅವರ ಭಾಷಾಶೈಲಿ ಕೆಲವೆಡೆ ಕ್ಲಿಷ್ಟವಾಗಿರಬಹುದು. ಅವರು ತಳೆದ ನಿಲುವು, ಮಾಡಿದ ಊಹೆಗಳಲ್ಲಿ ಕೆಲವು ಎಲ್ಲರಿಗೂ ಒಪ್ಪಿತವಾಗದಿರಬಹುದು.ಆದರೆ ಸಂಶೋಧನ ಕ್ಷೇತ್ರಕ್ಕೆ ಅಂದಿನ ಕಾಲದಲ್ಲಿ ಅವರು ಸಲ್ಲಿಸಿದ ಸೇವೆ ಸ್ಮರಣೀಯ. ಪೈ ಅವರು ಕೈಕೊಂಡ ಕೆಲವು ನಿರ್ಣಯಗಳ, ತಳೆದ ನಿಲುವುಗಳ ಸಾಧುತ್ವ ಸಮಂಜಸತೆಗಳನ್ನು ವಿದ್ವಾಂಸರು ಒಪ್ಪಿಕೊಂಡಿರುವುದು ಅವರ ಸಂಶೋಧನೆಯ ಮೌಲಿಕತೆಗೆ ಸಾಕ್ಷಿಯಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಡಬಹುದು.

ನಾಗಚಂದ್ರನಿಗೆ ಕವಿಚರಿತೆಕಾರರು ಮತ್ತು ಎ. ವೆಂಕಟಸುಬ್ಬಯ್ಯವರು ಕೊಟ್ಟ ಕಾಲವನ್ನು (ಕ. ಚ. ಕಾರರದು ಸು. ೧೧೦೦, ಎ. ವೆಂಕಟಸುಬ್ಬಯ್ಯನವರದು ೧೦೪೦ರ ಮೊದಲು) ಪೈ ಅವರು ಒಪ್ಪದೆ, ನಾಗಚಂದ್ರನ ಪಂಪರಾಮಾಯಣ ರಚಿತವಾದಕಾಲ ೧೧೪೦ ಇರಬೇಕೆಂದು ಹೇಳಿದ್ದಾರೆ.[೪೨] ಅವರ ಆ ಲೇಖನವನ್ನು ವಿಮರ್ಶಿಸುತ್ತ ಎ. ವೆಂಕಟಸುಬ್ಬಯ್ಯನವರು ಕೆಲವು ಆಕ್ಷೇಪಗಳನ್ನು ಎತ್ತಿದರು.[೪೩] ಪೈ ಅವರು ಅವುಗಳಿಗೆ ಸಕಾರಣ ಉತ್ತರನೀಡಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.[೪೪] ಡಿ. ಎಲ್. ಎನ್. ಅವರು ಕೂಡ ಪೈ ಅವರ ಲೇಖನದ ವಿಮರ್ಶೆಮಾಡುತ್ತ, ಅದರಲ್ಲಿಯ ಕೆಲವು ಅಂಶಗಳ ಬಗೆಗೆ ಪ್ರಬುದ್ಧಕರ್ಣಾಟಕದಲ್ಲಿಯೂ (೧೬–೩ ಪುಟ ೧೦೪–೧೩೬) ಮತ್ತು ತಾವು ಸಂಪಾದಿಸಿದ ಪಂಪರಾಮಾಯಣ ಸಂಗ್ರಹದ ಪ್ರಥಮ ಮುದ್ರಣದ ಮುನ್ನುಡಿಯಲ್ಲಿಯೂ ಕೆಲವು ಸಂದೇಹಗಳನ್ನೆತ್ತಿದರು. ಅವುಗಳಿಗೂ ಪೈ ಅವರು 'ಸ್ವದೇಶಾಭಿಮಾನಿ' ದಸರಾಸಂಚಿಕೆ (೧೯೩೬) ಯಲ್ಲಿ ಉತ್ತರಿಸಿ ತಮ್ಮ ನಿಲುಮೆಗೇ ಅಂಟಿಕೊಂಡರು. ಅದನ್ನು ಓದಿದ ಮೇಲೆ, ಡಿ. ಎಲ್. ಎನ್. ಅವರು "ಅವರ (ಪೈ ಅವರ) ನಿರ್ಣಯವನ್ನು ಕುರಿತು ನಾನು ಮಾಡಿರುವ ಟೀಕೆ ಸುತರಾಂ ತಪ್ಪೆಂದು ಇಲ್ಲಿ ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ"[೪೫] ಎಂದು ಹೇಳಿರುವುದನ್ನು ಗಮನಿಸಬೇಕು. ಪೈ ಅವರ ಹೇಳಿಕೆಯನ್ನು ಸಮರ್ಥಿಸುವ ಮತ್ತೊಂದು ಅಂಶವನ್ನೂ ಡಿ. ಎಲ್. ಎನ್. ಅಲ್ಲಿ ಸೂಚಿಸಿದ್ದಾರೆ.

ಬಿ. ಎಸ್. ಸಣ್ಣಯ್ಯ ಸಂಪಾದಿತ ಎರಡನೆಯ ನಾಗವರ್ಮನ 'ವರ್ಧಮಾನ ಪುರಾಣ' ಇತ್ತೀಚೆ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಅದರಲ್ಲಿರುವ ಕಾಲಸೂಚಕ ಪದ್ಯದಿಂದ (೧೬–೪೭), ನಾಗವರ್ಮನ ಕಾಲ ೧೦೪೨ ಅಕ್ಟೋ

ಬರ್ ೭ ಎಂದು ಬಹುಮಟ್ಟಿಗೆ ಖಚಿತವಾಗಿರುವುದರಿಂದ, ನಾಗಚಂದ್ರನ ಕಾಲದ ಬಗೆಗಿನ ಪೈ ಮತ್ತು ಡಿ. ಎಲ್. ಎನ್. ಅವರ ಅಭಿಪ್ರಾಯಗಳೂ ಈಗ ನಿಲ್ಲುವಂತೆ ತೋರುವುದಿಲ್ಲ. ಆದರೆ ಆ ಕಾಲಸೂಚಕ ಪದ್ಯ ಕೆಲವು ಪ್ರತಿಗಳಲ್ಲಿಲ್ಲದುದರಿಂದ ಇನ್ನೂ ಸ್ವಲ್ಪ ಸಂದೇಹ ಉಳಿದುಕೊಂಡಿದೆ.

ನಾಗವರ್ಮ ಸಮಸ್ಯೆಯ ಬಗ್ಗೆ ಒಂದು ಕಾಲಕ್ಕೆ ಅನೇಕ ವಾದವಿವಾದಗಳು ನಡೆದಿದ್ದವು. ಪೈ ಅವರು ಕೂಡ ಅದರಲ್ಲಿ ಭಾಗವಹಿಸಿ; ನಾಗವರ್ಮನ ಹೆಸರಿನಲ್ಲಿರುವ ಆರೂ ಗ್ರಂಥಗಳನ್ನು ಒಬ್ಬನೇ ಬರೆದಿರುವನೆಂಬ ಎ. ವೆಂಕಟಸುಬ್ಬಯ್ಯನವರ ವಾದವನ್ನು[೪೬] ಒಪ್ಪದೆ, ಕವಿಚರಿತೆಕಾರರ ನಿಲುಮೆಯನ್ನೇ ಎತ್ತಿ ಹಿಡಿದಿದ್ದಾರೆ.[೪೭] ಆದರೆ ಪೈ ಅವರ ವಿವೇಚನೆಯ ಒಂದು ವೈಶಿಷ್ಟ್ಯವೆಂದರೆ, 'ಕರ್ನಾಟಕ ಕಾದಂಬರಿ'ಯ 'ಕೃತಿಪತಿನರೇಂದ್ರ ಚಂದ್ರಂ' ಎಂಬ ಪದ್ಯದದತ್ತ ಲಕ್ಷ್ಯ ಹರಿಸಿದುದು. ಆ ಬಗ್ಗೆ ಅವರು ಕೂಲಂಕಷವಾಗಿ ವಿಮರ್ಶಿಸಿ ಕೆಲವು ಆಧಾರಗಳ ಹಿನ್ನೆಲೆಯಲ್ಲಿ "ಅತ ಏವ ಈ ನಾಗವರ್ಮನು ತನ್ನ ಕನ್ನಡ ಕಾದಂಬರಿಯನ್ನು ಕೊಲ್ಲಾಪುರದ ಶಿಲಾಹಾರ ಅರಸನಾದ ಚಂದ್ರನ ಹಾಗೂ ಧಾರಾಪುರದ ಅರಸನಾದ ಪರಮಾರ ಭೋಜನ ಆಳಿಕೆಗಳ ಸರಿಗಾಲವಾದ ಕ್ರಿ. ಶ. ೧೦೦೦ ದಿಂದ ೧೦೦೫ರೊಳಗೆ ರಚಿಸಿರುವನೆಂದು ಹೇಳಬಹುದು" ಎಂದಿದ್ದಾರೆ. ಇದನ್ನು ಎಚ್. ಎಮ್. ಶಂಕರನಾರಾಯಣ ಅವರೂ ಪುಷ್ಟೀಕರಿಸಿದ್ದಾರೆ.

ರನ್ನನ ಗದಾಯುದ್ಧದ ರಚನಾಕಾಲವನ್ನು ಕುರಿತ ಪೈ ಅವರ ಅಭಿಪ್ರಾಯ ಗಟ್ಟಿ ಆಧಾರಗಳಿಂದ ಕೂಡಿದೆ. ಫ್ಲೀಟರು ಹೇಳುವ– ಚೋಳ ದೊರೆ ಒಂದನೆಯ ರಾಜರಾದ (೯೮೫–೧೦೧೪) ಮತ್ತು ಸತ್ಯಾಶ್ರಯ (೯೯೭–೧೦೦೮) ಇವರ ಮಧ್ಯೆ ನಡೆದ ಕಾಳಗವನ್ನು ತಿಳಿಸುವ ೧೦೦೫ರ ಚೋಳರಶಾಸನ, ರಾಜರಾಜನ ಮಗ ರಾಜೇಂದ್ರ ಚೋಳ ದಾಳಿ ಮಾಡಿದಾಗ ಅವನನ್ನು ರಟ್ಟಪಾಡಿಯಲ್ಲಿ ಸತ್ಯಾಶ್ರಯನು ಸೋಲಿಸಿದನೆಂದು ಹೇಳುವ ಹೊಟ್ಟೂರು ಶಾಸನ (೧೦೦೫), ಮತ್ತು ಚೋಳರನ್ನು ಸೋಲಿಸಿ ಸತ್ಯಾಶ್ರಯನು ದಕ್ಷಿಣಕ್ಕೆ ನುಗ್ಗಿದನೆಂದು ತಿಳಿಸುವ ಚೆಬ್ರೋಲು ಶಾಸನ (೧೦೦೬) – ಈ ಶಾಸನಗಳನ್ನು ಗಮನಿಸಿ, ಗದಾಯುದ್ಧದಲ್ಲಿ ದುರ್ಯೋಧನನಿಗೆ ರಾಜರಾಜನೆಂದು ಕರೆದಿರುವುದನ್ನೂ (೩–೮೪ ಗದ್ಯ, ೪–೪೯ ಗದ್ಯ ಇತ್ಯಾದಿ), ಭೀಮಸೇನನಿಗೆ "ಬಲವತ್ತುಂಗ ಕಳಿಂಗರಾಜ ಮದವನ್ಮಾತಂಗಸಿಂಗಂ" "ಕರಿಯುಂಮುಂಗಿ ಕಳಿಂಗನಂ ನೋಗೆದ"ಎಂ ಮುಂತಾಗಿ ಬಣ್ಣಿಸಿರುವುದನ್ನೂ ಅನುಲಕ್ಷಿಸಿ, ಪೈಅವರು "ಇಲ್ಲಿ ಭೀಮನಿಂದ ಅಂದರೆ ಭೀಮನಲ್ಲಿ ಹೋಲಿಸಲ್ಪಟ್ಟ ಸತ್ಯಾಶ್ರಯನಿಂದ ಸೋಲಿಸಲ್ಪಟ್ಟವನೆಂದು ಪ್ರತ್ಯಕ್ಷವಿರುವ ಕಳಿಂಗನೆಂಬ ಕಳಿಂಗರಾಜನನ್ನು" ರನ್ನ ಕವಿ "ಸಾಮಗ್ರ್ಯವಾಗಿ ಹೇಳದೆ ಅವನ ದೇಶನಾಮದಿಂದ" ಉಲ್ಲೇಖಿಸಿದ್ದಾನೆಂದು ಹೇಳುತ್ತಾರೆ. ಮುಂದೆ ಈ ಕಳಿಂಗರಾಜನು ಬೇರಾರೂ ಆಗಿರದೆ ಕಳಿಂಗದೇಶವನ್ನು ೧೦೦೦ದಲ್ಲಿ ಗೆದ್ದ ರಾಜೇಂದ್ರ

ಚೋಳನ ಸರಿ, ಎಂದು ೧೦೦೩ರ ತಮಿಳು ಶಾಸನದಿಂದ ಸಮರ್ಥಿಸಿ "ಕ್ರಿ. ಶ. ೧೦೦೫–೧೦೦೬ರಲ್ಲಿ (ಸತ್ಯಾಶ್ರಯನಿಂದ) ಆದ ಚೋಳರ ಪರಾಭವವನ್ನು ಹೇಳಿರುವ ಗದಾ ಯುದ್ಧವು ೧೦೦೬ ರಿಂದ ಈಚೆ ರಚಿತವಾಗಿರಬೇಕು" ಎಂದು ತಿಳಿಸುತ್ತಾರೆ.[೪೯] ಹೀಗೆ ರನ್ನನು ದುರ್ಯೋಧನನಿಗೆ 'ರಾಜರಾಜ' ಎಂದು ಹೆಸರಿಸಿ ಅಲ್ಲಿ ಚೋಳ ರಾಜನನ್ನು ಅನ್ವಯಿಸಿದ್ದಾನೆಂಬ ಪೈ ಅವರ ಅಭಿಪ್ರಾಯ ಡಿ. ಎಲ್. ಎನ್. ಅವರಿಗೂ ಒಪ್ಪಿತವಿದ್ದಂತೆ[೫೦] ಅವರ ಸಾಹಿತ್ಯಚರಿತ್ರೆಯ ತರಗತಿಯ ಟಿಪ್ಪಣಿಗಳಿಂದ ತಿಳಿದು ಬರುತ್ತದೆ. ಉಳಿದ ಬಹುತೇಕ ವಿದ್ವಾಂಸರಿಗೂ ಇದು ಒಪ್ಪಿತವಾಗಿದೆ.

ಎಂ. ಎಂ. ಕಲಬುರ್ಗಿ ಅವರು ಗೋವಿಂದ ಪೈ ಅವರ ಕೆಲವು ಊಹಾತ್ಮಕ ಅಭಿಪ್ರಾಯಗಳನ್ನು ನಿರಾಕರಿಸಿದ್ದರೂ, ಅವರ ಕೆಲವು ಅಭಿಪ್ರಾಯಗಳ ಸಾಧುತ್ವ ವನ್ನೂ ಮೌಲಿಕತೆಯನ್ನೂ ಒಪ್ಪಿದ್ದಾರೆ.– ಗುಣಭದ್ರನ ಉತ್ತರಪುರಾಣದ ಕೊನೆಗೆ ಬರುವ ಪ್ರಶಸ್ತಿರೂಪದ ಪದ್ಯವನ್ನು ಆಧರಿಸಿ ಕೆಲವರು, ನೃಪತುಂಗ. ಜಿನಸೇನನ ಶಿಷ್ಯನೆಂದು ವಾದಿಸಿದ್ದಾರೆ.[೫೧] ಆದರೆ ಪೈ ಅವರು "ಇದರಿಂದ (ಪ್ರಶಸ್ತಿರೂಪದ ಪದ್ಯದಿಂದ) ಅಮೋಘವರ್ಷನು ಜಿನಸೇನನನ್ನು ವಂದಿಸಿ ತಾನು ಇಂದು (=ಅದ್ಯ) ಧನ್ಯನಾದೆನೆಂದು ಭಾವಿಸಿಕೊಂಡನೆಂದಷ್ಟೇ ತಿಳಿಯುತ್ತದಲ್ಲದೆ ಜಿನಸೇನನಿಂದ ಆತನು ಜೈನಧರ್ಮವನ್ನವಲಂಬಿಸಿದನೆಂದಾಗಲಿ ಸ್ವಧರ್ಮವನ್ನು ತ್ಯಜಿಸಿ ಜಿನಸೇನನ ಶಿಷ್ಯತೆ ಯನ್ನು ವಹಿಸಿಕೊಂಡನೆಂದಾಗಲಿ ಅರ್ಥವಾಗುವುದು ಹೇಗೋ ನಾನರಿಯೆ" ಎಂದಿದ್ದಾರೆ.[೫೨] ಈ ಬಗ್ಗೆ ಕಲಬುರ್ಗಿ ಅವರು "(ಪೈ ಅವರು ಈ ಹೇಳಿಕೆ, ನೃಪತುಂಗನು ಜೈನನೆಂದು ಹೇಳುವವರು ತಳ್ಳಿಹಾಕಲು ಬಾರದ ಮಾತಾಗಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೫೩] ಹಾಗೆಯೆ ಅವರು, ಅಸಗನ ಸಂಸ್ಕೃತ ವರ್ಧಮಾನ ಪುರಾಣದ ಕಾಲಸೂಚಕ ಪದ್ಯದಲ್ಲಿ ಬರುವ ಶ್ರೀನಾಥನ ಬಗೆಗೆ ಪೈ ಹೇಳಿರುವುದನ್ನು[೫೪] ಗಮನಿಸಿ "ಅಸಗನ ಬಹುಮಟ್ಟಿನ ಚರಿತ್ರೆಯನ್ನೊಳಗೊಂಡ ಈ ಪದ್ಯದ ಹೇಳಿಕೆಯನ್ನು ಒರೆ ಹಚ್ಚುವ ಕಾರ್ಯ ಈವರೆಗೆ ನಡೆದಿರಲಿಲ್ಲ. ಗೋವಿಂದ ಪೈಗಳು ಮಾತ್ರ ಈ ಶ್ರೀನಾಥನೆಂಬ ಅರಸನೆಂದರೆ ಕ್ರಿ. ಶ. ೮೪೬ರ ವರೆಗೆ ಆಳಿದ ಶ್ರೀಪತಿ ಎಂಬ ಹೆಸರಿದ್ದ ಕೋಕಿಳ್ಳಿ ಎಂಬ ಚೋಳರಾಜನು" ಎಂದು ಹೇಳಿ[೫೫] ಪೈ ಅವರ ಸಂಶೋಧನೆಯ ವಿಶೇಷತೆಯನ್ನು ಗುರುತಿಸಿದ್ದಾರೆ. ಅದು ಬಹುಮಟ್ಟಿಗೆ ನಿಜವೂ ಅಹುದು. ಅದೇ ರೀತಿ ಛಂದೋನುಶಾಸನದ ಕರ್ತೃ ಜಯಕೀರ್ತಿಯ ಕಾಲದ ಬಗೆಗೆ ಕೆಲವು ಆಧಾರಗಳ ಹಿನ್ನೆಲೆಯಲ್ಲಿ ಪೈ ಅವರು 'ಅವನು (ಜಯಕೀರ್ತಿ) ಪಂಪನಿಗೆ (೯೪೧) ಮೊದಲು. ಅಸಗನಿಗೆ (೮೫೩) ತರುವಾಯ ಎಂದರೆ ಕ್ರಿ. ಶ. ೯೦೦ರಲ್ಲಿ ಬಾಳಿರಬೇಕು" ಎಂದು ಅಭಿಪ್ರಾಯಪಟ್ಟುದಕ್ಕೆ[೫೬]. ಪ್ರತಿಕ್ರಿಯಿಸುತ್ತ ಕಲಬುರ್ಗಿ ಅವರು "ಛಂದೋನು ಶಾಸನ ಹೆಸರಿಸುವ ಬಂಧಗಳಲ್ಲಿ ಕೆಲವು ಪಂಪೋತ್ತರ ಯುಗದಲ್ಲಿ ಲಭಿಸುತ್ತವಾದರೂ ಅವನು (ಜಯಕೀರ್ತಿ) ಆಕರವಾಗಿ ಹೇಳಿದ ಕಾವ್ಯಗಳೆಲ್ಲ ಪಂಪಪೂರ್ವಯುಗಕ್ಕೆ

ಸಂಬಂಧಿಸಿವೆ. ಆದ್ದರಿಂದ ಜಯಕೀರ್ತಿಯ ಕಾಲ ಪಂಪನಿಗೆ ಮೊದಲು. ಪೈ ಹೇಳುವಂತೆ ಕನಿಷಪಕ್ಷ ಕ್ರಿ. ಶ. ೯೦೦ ಆಗಬಹುದು" ಎಂದಿದ್ದಾರೆ. ಇದು ಯುಕ್ತಾಯುಕ್ತವಾಗಿರುವುದರಿಂದ ಹೆಚ್ಚು ಸಂಭವನೀಯವೆನಿಸುತ್ತದೆ.

ದುರ್ಗಸಿಂಹನ ಪಂಚತಂತ್ರದ ಒಂದು ಪ್ರತಿ ಆರಾದಲ್ಲಿದೆ. ಅದರಲ್ಲಿರುವ "ಅತಿಸಂಪನ್ನತೆವೆತ್ತ ಸದ್ಗೃಹನಿವಾಸಸ್ಥಾನವಾದ ಪ್ರಜಾಪತಿಸಂವತ್ಸರ......" (೪೫೬) ಎಂಬ ದುರ್ಗಸಿಂಹನ ಕಾಲಸೂಚಕ ಪದ್ಯವನ್ನು ಮೊದಲು ಗುರುತಿಸಿದವರು ಗೋವಿಂದ ಪೈಗಳು.[೫೭] ಅದರಿಂದಾಗಿ ದುರ್ಗಸಿಂಹನಕಾಲ (ಕ್ರಿ. ಶ. ೧೦೩೧) ಖಚಿತವಾಯಿತು. ವಡ್ಡಾರಾಧನೆಯ ಒಡಲಲ್ಲಿ ಬರುವ "ಯಾವತ್ ಸ್ವಸ್ಥಮಿದಂ ಶರೀರಮರುಜಂ' ಎಂಬ ಶ್ಲೋಕ ಭರ್ತೃಹರಿಯ ವೈರಾಗ್ಯ ಶತಕದಲ್ಲೂ (೭೫), "ನೀರ್ವೀರ್ಯಾ ಪೃಥಿವೀ" ಎಂಬದು ಕೊಂಚ ಪಾಠಭೇದದಿಂದ ಸಂಸ್ಕೃತ ಸುಭಾಷಿತ ರತ್ನಭಂಡಾಗಾರ' ದಲ್ಲಿಯೂ ಇರುವವೆಂದು ಪೈಗಳು ಸೂಚಿಸಿರುವುದನ್ನು[೫೮] ಗಮನಿಸಬೇಕು.

ಮೇಲಿನ ವಿವರಣೆಯಿಂದ ಪೈ ಅವರು ಸಾಹಿತ್ಯ ಸಂಶೋಧನೆಗೆ ಸಲ್ಲಿಸಿದ ಸೇವೆ ಎಷ್ಟು ಮೌಲಿಕವಾದುದೆಂಬುದು ಸಿದ್ಧವಾಗುತ್ತದೆ.

ಅಡಿ ಟಿಪ್ಪಣಿಗಳು

೧. Evangetical Review, ಸಂಪುಟ ೧, ಪುಟ ೬೬ ರಿಂದ ೬೯. (ನೋಡಿ, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ (೧೯೭೩); ಎಂ. ಎಂ. ಕಲಬುರ್ಗಿ ಪುಟ ೨೭೬, ಅಡಿಟಿಪ್ಪಣಿ ೬೦)

೨. Journal of the Royal Asiatic Society, xv, ಪುಟ ೨೯೫.

೩. ಅದೇ xxii ಪುಟ ೨೫೪.

೪. ಕನ್ನಮಯ್ಯ, ಅಸಗ, ಪಂಪ, ಪೊನ್ನ, ರನ್ನ, ದುರ್ಗಸಿಂಹ, ಜಯಕೀರ್ತಿ, ದೇವರದಾಸಿಮಯ್ಯ ನಾಗಚಂದ್ರ, ನಾಗವರ್ಮ, ಬಸವೇಶ್ವರ, ರೇವಣಸಿದ್ಧ, ಬ್ರಹ್ಮಶಿವ, ಸೋಮರಾಜ, ಹರಿಹರ ರಾಘವಾಂಕ, ರತ್ನಾಕರವರ್ಣಿ, ಕುಮಾರವ್ಯಾಸ, ಶಿಶುಮಾಯಣ, ಷಡಕ್ಷರದೇವ, ಲಕ್ಷ್ಮೀಶ– ಇತ್ಯಾದಿ ಕವಿಗಳಲ್ಲಿ ಹೆಚ್ಚಿನವರ ಕಾಲವನ್ನು ಕೆಲವರ ಕೃತ ಮತ್ತು ಮತವನ್ನು ಕುರಿತು ಅವರು ಲೇಖನ ಬರೆದಿದ್ದಾರೆ. ಅವು ಯಾವ ಪತ್ರಿಕೆ ಮತ್ತು ಗ್ರಂಥಗಳಲ್ಲಿ ಪ್ರಕಟವಾಗಿವೆ ಎಂಬುದನ್ನು ಆ ಲೇಖನಗಳ ಸಂಕ್ಷಿಪ್ತ ಪರಿಚಯವನ್ನು ತಿಳಿಯಲು, ನೋಡಿ–'ಗೋವಿಂದ ಪೈ ವಾಙ್ಮಯ ದರ್ಶನ (೧೯೬೬) ಮು. ವಿ. ನಾಯಕ ಮತ್ತು ಶ್ರೀನಿವಾಸ ಹಾವನೂರು. ಪು. ೩೧–೪೨

೫. ಗೋವಿಂದ ಪೈ ವಾಙ್ಮಯ ದರ್ಶನ (೧೯೬೬); ಪುಟ ೩೦–೩೧

೬. ಅದೇ. ಪುಟ ೩೧–೩೨

೭. ರನ್ನನ ಕೃತಿಗಳು ಮೂರು ಉಪನ್ಯಾಸಗಳು (೧೯೪೦) ಪುಟ ೫–೮

೮. ಅದೇ ಪುಟ ೯.

೯. ಆ ಉಪೋದ್ಘಾತ ಬರೆದವರು ಎಂ. ಎ. ರಾಮಾನುಜೈಯಂಗಾರ್, ಗದಾಯುದ್ಧಂ ಮೈಸೂರು (೧೯೨೫)

೧೦. ರನ್ನನ ಕೃತಿಗಳು 'ಮೂರು ಉಪನ್ಯಾಸಗಳು' ಪುಟ ೨–೪

೧೧. ಉದಯ ಭಾರತ ೧–೨, ೪

೧೨. 'ರನ್ನರ ಕೃತಿಗಳು', ಮೂರು ಉಪನ್ಯಾಸಗಳು ಪುಟ ೪೧–೫೧

೧೩. 'ಉದಯಭಾರತ' ೨–೩ ಪುಟ ೬೮

೧೪. 'ದೇಶರಂಜನ' ೧–೨, ಪುಟ ೯–೧೦

೧೫. 'ರನ್ನನಕೃತಿಗಳು' ಮೂರು ಉಪನ್ಯಾಸಗಳು ಪುಟ ೩೧, ೩೨

೧೬. ಒಂದು ಶಬ್ದಕ್ಕೆ ಪಾಠಾಂತರಗಳಿಲ್ಲದಿದ್ದರೂ, ತಮಗೆ ಅನುಕೂಲವಾಗುವಂತೆ ಅದನ್ನು ತಿದ್ದಿಕೊಳ್ಳುವುದು ಸಮಾಜಸವೇ ? ಎಂಬ ಪ್ರಶ್ನೆ ಏಳುತ್ತದೆ. ಕೆಲವು ಸಂದರ್ಭಗಳಲ್ಲಿ ಅದು ಸರಿಯೆನಿಸುವ ಸಾಧ್ಯತೆಯಿದೆ. ಉದಾಹರಣೆಗಾಗಿ ಪೈ ಅವರೇ ನಾಗಚಂದ್ರನ ಮಲ್ಲಿನಾಥ ಪುರಾಣದ 'ಜಿನಪತಿಸಭೆಯೊಳ್' ಪೂಜ್ಯಂ ಎಂಬ ಪದ್ಯದಲ್ಲಿರುವ 'ಜನಪತಿ' ಶಬ್ದ, ಅಲ್ಲಿಯ ಸಂದರ್ಭಕ್ಕೆ ಹೊಂದಿಕೊಳ್ಳದೆ, 'ಜಿನಪತಿಸಭೆ(= ಸಮವಸರಣ)ಯಲ್ಲಿ ನಾಗಚಂದ್ರನು ಪೂಜ್ಯ ನಾಗಿದ್ದ' ಎಂಬ ಅಪಾರ್ಥವಾಗುತ್ತದೆಂದು ಸರಿಯಾಗಿಯೆ ಆಲೋಚಿಸಿ ಅದು 'ಜನಪತಿ' ಆಗಿರಬೇಕೆಂದು ತಿದ್ದಿರುವುದನ್ನು ನೋಡಬಹುದು (ಅಭಿನವಪಂಪನೆಂಬ ನಾಗಚಂದ್ರನ ಕಾಲ ವಿಚಾರ' ಅಭಿನವಪಂಪ' ಕರ್ನಾಟಕ ಕಾಲೇಜ ಧಾರವಾಡ ೧೯೩೨)

೧೭. 'ರನ್ನನಕೃತಿಗಳು' ಮೂರು ಉಪನ್ಯಾಸಗಳು ಪುಟ ೩

೧೮. 'ರತ್ನಾಕರವರ್ಣಿಯಕಾಲವಿಚಾರ' ಕನ್ನಡ ಸಾಹಿತ್ಯ ಪರಿಷತ ಪತ್ರಿಕೆ ೨೮, ಪುಟ ೧–೧೩

೧೯. 'ದೀವಿಗೆ' ಭಾಗ–೧ ರಲ್ಲಿ ಬರುವ ಎಸ್.ಎಂ. ವೃಷಭೇಂದ್ರಸ್ವಾಮಿ ಅವರ "ಸಿಂಹದ ಗವಿಯಲ್ಲಿ ಮೀನಿನ ಹೆಜ್ಜೆ" ಲೇಖನವನ್ನು ನೋಡಿ.

೨೦. 'ರನ್ನನ ಕೃತಿಗಳು' ಮೂರು ಉಪನ್ಯಾಸಗಳು ಪುಟ ೪೬, ೪೮ ಇತ್ಯಾದಿ.

೨೧. ಶ್ರೀನಿವಾಸರಂಗಾಚಾರ್ಯ, ಜಯಕರ್ನಾಟಕ ೮–೧೧ ಆರ್. ಶಾಮಾಶಾಸ್ತ್ರಿ ಮತ್ತು ನಾ. ಶ್ರೀ ರಾಜಪುರೋಹಿತ ಅವರೂ ಇದೇ ಅಭಿಪ್ರಾಯದವರು. ವಿವರಗಳಿಗೆ ನೋಡಿ– 'ರನ್ನ' ಸಂ. ವಿ. ಸೀತಾರಾಮಯ್ಯ ಐ.ಬಿ.ಎಚ್. ಪ್ರಕಾಶನ. ಬೆಂಗಳೂರು (೧೯೭೩) ಪುಟ ೪೯ ಅ ಟಿ.

೨೨. ಜಯಕರ್ನಾಟಕ ಸಂಪುಟ ೯, ಸಂಚಿಕೆ ೪–೭, ೧೧, ೧೨

೨೩. 'ರನ್ನನ ಕೃತಿಗಳು' ಮೂರು ಉಪನ್ಯಾಸಗಳು ಪುಟ ೩೫, ೩೬

೨೪. ಪೈ ಅವರ ಶಬ್ದಪ್ರಯೋಗಗಳ ವಿಚಾರಕ್ಕೆ 'ದೀವಿಗೆ' ಭಾಗ ೧ ರಲ್ಲಿ ಶ್ರೀ ಶೇಖರ ಇದ್ಯರ ಲೇಖನ ನೋಡಿ

೨೫. 'ರನ್ನನ ಕೃತಿಗಳು' ಮೂರು ಉಪನ್ಯಾಸಗಳು ಪುಟ ೧೬–೧೮

೨೬. 'ನಪತುಂಗನ ಮತವಿಚಾರ' ಗೋವಿಂದ ಪೈ ಕ.ಸಾ.ಪ. ೧೨–೪. ಪುಟ ೨೫೭

೨೭. 'ಕನ್ನಡ ಸಾಹಿತ್ಯದ ಪ್ರಾಚೀನತೆ' ಮೂರು ಉಪನ್ಯಾಸಗಳು. ಪುಟ ೧೨೫

೨೮. ಅದೇ

೨೯. ಎಂ. ಎಂ. ಕಲಬುರ್ಗಿ ಕವಿರಾಜಮಾರ್ಗ ಪರಿಸರದ ಸಾಹಿತ್ಯ (೧೯೭೩) ಪುಟ ೧೬೭

೩೦. 'ಕನ್ನಡ ಸಾಹಿತ್ಯದ ಪ್ರಾಚೀನತೆ' ಮೂರು ಉಪನ್ಯಾಸಗಳು. ಪುಟ ೧೨೨

೩೧.–೩೨. 'ಪಂಪನ ದೇಶಕಾಲಗಳ ವಿಚಾರ' ಪಂಪಮಹಾಕವಿ (೧೯೫೧), ಪುಟ ೮೪, ೯೩

೩೩. 'ರನ್ನನ ಕೃತಿಗಳು' ಮೂರು ಉಪನ್ಯಾಸಗಳು. ಪುಟ ೩೧, ೩೨

೩೪. ಅದೇ ಪುಟ ೩೮

೩೫. ಕನ್ನಡ ಸಾಹಿತ್ಯ ಚರಿತ್ರೆ ಮೂರನೆಯ ಸಂಪುಟ. ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ (೧೯೭೭) ಪುಟ ೭೫೫

೩೬, ೩೭, ೩೮. ಕನ್ನಡ ನಾಟಕಗಳ ಹಳಮೆ. ಕ.ಸಾ.ಪ. ೩೧–೨, ಪುಟ ೬೨

೩೯. ಕನ್ನಡ ಸಾಹಿತ್ಯದ ಪ್ರಾಚೀನತೆ, ಮೂರು ಉಪನ್ಯಾಸಗಳು ಪುಟ ೧೦೧–೧೩೮

೪೦. ಉಪಾಯನ ಪುಟ ೯೪

೪೧. ಕ. ರಾ. ಮಾ. ಪರಿಸರದ ಕನ್ನಡ ಸಾಹಿತ್ಯ ಪುಟ ೧೨೭, ಅ. ಟಿ. ೨

೪೨. 'ಅಭಿನವ ಪಂಪನೆಂಬ ನಾಗಚಂದ್ರನ ಕಾಲ ವಿಚಾರ' ಅಭಿನವಪಂಪ ಪುಟ ೧–೧೪

೪೩. ಕ. ಸಾ. ಪ. ೧೪–೩ ಪುಟ ೨೯೬–೩೦೨

೪೪. ಜಯಕರ್ನಾಟಕ ೧೩ ೧೩ (೧೯೩೫) ಪುಟ ೧೦೬-೧೧೭

೪೫. ಪಂಪರಾಮಾಯಣ ಸಂಗ್ರಹ (೧೯೫೧), ಪೀಠಿಕೆ ಪುಟ xiv ಅಡಿ ಟಿಪ್ಪಣಿ

೪೬. ನಾಗವರ್ಮನ ಕೃತಿಗಳು, ಪ್ರಬುದ್ಧ ಕರ್ಣಾಟಕ ಸಂಪುಟ ೧೫, ಸಂಚಿಕೆ ೩

೪೭. ನಾಗವರ್ಮರು ಎಷ್ಟು ಮಂದಿ ? ಕ.ಸಾಪ. ೨೦–೧, ೨, ಪುಟ ೨೯–೬೨, ೧೯೩–೭೧

೪೮. ಒಂದನೆಯ ನಾಗವರ್ಮ ಸಂ. ವಿ. ಸೀ. ಪುಟ ೧೨

೪೯. 'ರನ್ನನ ಕೃತಿಗಳು' ಮೂರು ಉಪನ್ಯಾಸಗಳು ಪುಟ ೫೦, ೫೧

೫೦. ಕನ್ನಡ ಸಾಹಿತ್ಯ ಚರಿತ್ರೆ ಮೂರನೆಯ ಸಂಪುಟ. ಕನ್ನಡ ಅಧ್ಯಯನ ಸಂಸ್ಥೆ. ಮೈ. ವಿ. ವಿ. (೧೯೭೬) ಎನ್. ಎಸ್. ತಾರಾನಾಥ, ಪುಟ ೫೮೨ ಅಡಿಟಿಪ್ಪಣಿ ೨೯೬

೫೧. ಕ. ರಾ. ಮಾ. ಪರಿಸರದ ಕನ್ನಡ ಸಾಹಿತ್ಯ ಪುಟ ೪೧

೫೨. ನೃಪತುಂಗನ ಮತವಿಚಾರ. ಕ.ಸಾ.ಪ. ೧೨, ಪುಟ ೨೪೩ (೧೯೨೮)

೫೩. ಕ. ರಾ. ಮಾ. ಪ. ಕನ್ನಡ ಸಾಹಿತ್ಯ ಪುಟ ೪೧

೫೪. ಕನ್ನಡ ನಾಟಕಗಳ ಹಳಮೆ, ಕ. ಸಾ. ಪ. ೩೧–೨ ಪುಟ ೬೧

೫೫. ಕ. ರಾ. ಮಾ. ಪ. ಕನ್ನಡ ಸಾಹಿತ್ಯ ಪುಟ ೨೦೨

೫೬. ಜಯಕೀರ್ತಿಯ ಛಂದೋನು ಶಾಸನದ ಕಾಲ, ಪ್ರ ಕ. ೨೮–೩, ಪುಟ ೧೧೩–೧೨೧

೫೭. ಕನ್ನಡ ಸಾಹಿತ್ಯ ಚರಿತ್ರೆ, ಮೂರನೆಯ ಸಂಪುಟ (೧೯೭೬), ರಾಮೇಗೌಡ, ಪುಟ ೬೯೦

೫೮. ಕನ್ನಡ ಸಾಹಿತ್ಯದ ಪ್ರಾಚೀನತೆ, ಮೂರು ಉಪನ್ಯಾಸಗಳು, ಪುಟ ೧೧೨

ಗೋವಿಂದ ಪೈಗಳ ಇತಿಹಾಸ ಸಂಶೋಧನೆ

● ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

೧

ಇತಿಹಾಸ ಸಂಶೋಧಕರಾಗಿ ಗೋವಿಂದ ಪೈಗಳ ಸಾಧನೆಯ ಸಮೀಕ್ಷೆ ಹಾಗೂ ಅದರ ಮೌಲ್ಯಮಾಪನ ಗಂಭೀರ ಅಧ್ಯಯನದ ವಿಷಯ. ಅದು ಈ ಗೋಷ್ಠಿಯ* ಪ್ರಬಂಧಕಾರನ ಕಾಲಮಿತಿಗೂ ಬುದ್ಧಿಮಿತಿಗೂ ಮೀರಿದ್ದು. ಆದ್ದರಿಂದ ಬಲ್ಲವರಾದ ತಮ್ಮ ಕ್ಷಮೆ ಯಾಚಿಸಿ, ನನ್ನ ಕೈಯಲ್ಲಾದ ಮಟ್ಟಿಗೆ ಅವರ ಇತಿಹಾಸಪ್ರಬಂಧಗಳೆಂಬ ವ್ಯಗ್ರೋಗ್ರ ನದೀ ಪ್ರವಾಹದಲ್ಲಿ ಕೈಕಾಲು ಬಡಿಯುತ್ತೇನೆ. ಈ ಪ್ರಯತ್ನದಲ್ಲಿ ನಾನು ತೇಲಿದರೂ, ಮುಳುಗಿದರೂ ಗೋಷ್ಠಿಯ ವ್ಯವಸ್ಥಾಪಕರನ್ನೂ ನನ್ನನ್ನೂ ದಿವಂಗತ ಗೋವಿಂದ ಪೈಗಳ ಚರಿತಾರ್ಥಗೊಂಡ ದಿವ್ಯಾತ್ಮ ತಪ್ಪು ತಿಳಿಯುವುದಿಲ್ಲ. ಕೃಪೆಯ ಕಟಾಕ್ಷವನ್ನು ಬೀರದೆ ಇರುವುದಿಲ್ಲ–ಎನ್ನುವ ವಿಶ್ವಾಸ ನನಗಿದೆ.

ಗೋವಿಂದ ಪೈಗಳು ಸು. ೧೯೨೫ರಷ್ಟು ಹಿಂದಿನಿಂದಲೇ ಈ ಕ್ಷೇತ್ರದಲ್ಲಿ ಸಂಶೋಧನೆಗೆ ತೊಡಗಿದಂತೆ ತೋರುವುದು. ಅವರು ತೀರಿಕೊಳ್ಳುವವರೆಗೆ ದೀಕ್ಷೆ ಹಿಡಿದಂತೆ ಈ ಕೆಲಸವನ್ನು ಸಾಗಿಸಿದರು. ಅವರು ಸು. ೬೦ ಲೇಖನಗಳನ್ನು ಈ ದಿಕ್ಕಿನಲ್ಲಿ ಬರೆದಿದ್ದರೂ,[೧] ವಿರಳವಾಗಿ ಹೊರತು ಗ್ರಂಥರೂಪವಾಗಿ ಅವು ಒಗ್ಗೂಡಿ ಓದುಗರಿಗೆ ದೊರಕದೇ ಹೋದುದು ನಮ್ಮ ದೌರ್ಭಾಗ್ಯ. "ಇತಿಹಾಸ ಸಂಶೋಧನೆಯ ಹಲವು ಕ್ಷೇತ್ರಗಳಲ್ಲಿ ಹೊಸ ಮಾರ್ಗ ಕಲ್ಪಿಸಿ ಕೊಟ್ಟಂತಹ ಉದ್ದಾಮ ಪಂಡಿತರು" ಎಂಬ ಹಿರಿಮೆಗೆ ಪಾತ್ರರಾದ ಅವರು.[೨] ತಮ್ಮ ಅಧ್ಯಯನಕ್ಕೆ ಸಮಗ್ರ ಭಾರತದ ಇತಿಹಾಸ ಕ್ಷೇತ್ರವನ್ನೇ ಆಯ್ದುಕೊಂಡರಾದರೂ ಅವರ ಸೇವೆ ವಿಶೇಷವಾಗಿ ಸಂದಿರುವುದು ತಾಯ್ನೆಲೆಯಾದ ಕರ್ಣಾಟಕದ ಇತಿಹಾಸಕ್ಕೆ. ಆದರೆ ವ್ಯಾಪಕವಾದ ದೃಷ್ಟಿಯಿಂದಾಗಿ. ಸ್ಥಾನಿಕ ಇತಿಹಾಸದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಅವರಿಗೆ ಆ ಅಧ್ಯಯನ ತುಂಬ ಸಹಾಯಮಾಡಿತು.

ಉತ್ತರ ಹಾಗೂ ಮಧ್ಯಭಾರತದ ಮೌರ್ಯ. ಶಕ. ಪಹ್ಲವ. ಕುಷಾನ. ಗುಪ್ತ. ವಲಭಿ. ಚೇದಿ. ವಾಕಾಟಕ ಈ ಕೆಲವು ಮನೆತನಗಳ ಇತಿಹಾಸ ಕುರಿತು ಅವರು ಬರೆದಿದ್ದಾರೆ: ದಕ್ಷಿಣದ ಪಲ್ಲವರು ಚೋಳರು ಮೊದಲಾದವರ ಬಗೆಗೆ ಬರೆದಿದ್ದಾರೆ. ಕರ್ಣಾಟಕದ ಸಾತವಾಹನರು. ಚುಟುಗಳು. ಆಳುಪರು. ಪುನ್ನಾಟರು. ಆಜಿರರು. ಬನವಾಸಿ ಹಾಗೂ ಗೋವೆಯ ಕದಂಬರು. ಪಶ್ಚಿಮಗಂಗರು. ಬಾದಾಮಿ. ವೇಮುಲ

ವಾದ ಹಾಗೂ ಕಲ್ಯಾಣದ ಚಾಲುಕ್ಯರು, ರಾಷ್ಟ್ರಕೂಟರು, ವಿಜಯನಗರದರಸರು ಈ ಹಲವು ರಾಜಮನೆತನಗಳನ್ನು ಕುರಿತು ಅವರು ಸವಿಸ್ತರವಾಗಿ ಬರೆದಿದ್ದಾರೆ. ಈ ಬರೆಹಗಳಲ್ಲಿ ರಾಜಕೀಯ ಇತಿಹಾಸಕ್ಕೆ, ಪ್ರಮುಖವಾಗಿ ವಂಶಾನುಕ್ರಮಣಿ ಕಾಲಾನುಕ್ರಮಣಿಗಳಿಗೆ, ಹೆಚ್ಚು ಪ್ರಾಶಸ್ತ್ಯ ಸಂದಿರುವುದು ಕಾಣುತ್ತದೆ. ಕರ್ಣಾಟಕ ಇತಿಹಾಸಕ್ಕೆ ಸಂಬಂಧಪಟ್ಟ ಹಾಗೆ ಪೈಗಳ ಶೋಧನೆಯ ಒಂದು ಸಮೀಕ್ಷೆ ಪ್ರಸ್ತುತ ಪ್ರಬಂಧದ ಗುರಿ.

೨

Satiyaputra of Asoka's Edict II ಎಂಬ ಲೇಖನದಲ್ಲಿ[೩], ಮೌರ್ಯ ಅಶೋಕನ ಶಾಸನವೊಂದರಲ್ಲಿಯ ಸ (ಸಾ) ತಿಯ ಪುತ್ರ ಎಂಬ ಪ್ರದೇಶ ಯಾವು ದೆಂಬುದರ ವಿಚಾರವಿದೆ. ಹಲವರ ಚರ್ಚೆಗೆ ಗುರಿಯಾಗಿರುವ, ಆದರೆ ಇನ್ನೂ ಬಗೆ ಹರಿಯದಿರುವ ಸಮಸ್ಯೆಯಿದು. ಅಶೋಕನ ಹಲವು ಶಾಸನಗಳ ಬೇರೆ ಬೇರೆ ಪ್ರದೇಶವಾಚಕಗಳ ಹಿನ್ನೆಲೆಯಲ್ಲಿ ಈ ಮಾತನ್ನೆತ್ತಿಕೊಂಡು ಪೈಗಳು ಪಶ್ಚಿಮ ಕರಾವಳಿ ಯಲ್ಲಿ ಅಪರಾಂತ ಮತ್ತು ಕೇರಳಗಳ ನಡುವೆ ಇರುವ ಪ್ರದೇಶವನ್ನು ಇದು ಹೇಳುವು ದೆಂದು ಮೊದಲು ಸೂಚಿಸಿ, ಶಾಂತಿಕ ಎಂಬ ಪ್ರದೇಶವಾಚಕದೊಂದಿಗೆ ಅಭಿನ್ನವಾಗಿ ರುವ ಈ ಮಾತು ದಕ್ಷಿಣ ಕನ್ನಡ ಜಿಲ್ಲೆಯನ್ನು ಒಳಕೊಳ್ಳುವ ಮಾತಾಗಿ ತೋರುತ್ತದೆ ಎಂದಿದ್ದಾರೆ.

ಕರ್ನಾಟಕದ ಇತಿಹಾಸದಲ್ಲಿ ಅನಂತರ ಪ್ರಸ್ತುತವಾಗುವುದು ಸಾತವಾಹನರ ಇತಿಹಾಸವೇ. ಈ ಸಂಬಂಧವಾದ ಒಂದೆರಡು ಲೇಖನಗಳಲ್ಲಿ, 'ಉತ್ತರ ಕಾಲೀನ ಸಾತವಾಹನರು' ಎಂಬುದರಲ್ಲಿ[೪] ಪ್ರಾಚೀನ ಕರ್ನಾಟಕದ ಸಮಸ್ಯಾತ್ಮಕ ಇತಿಹಾಸದ ರಾಜಮನೆತನಗಳಲ್ಲಿ ಒಂದಾಗಿರುವ ಸಾತವಾಹನ ಮನೆತನದ ದೊರೆಗಳ ಹೆಸರುಗಳು, ಸಾಮಾಜಿಕ ಸ್ಥಾನಮಾನಗಳು, ರಾಜಕೀಯ ಚಟುವಟಿಕೆಗಳು ಇವುಗಳ ಪ್ರಾಸ್ತಾವಿಕ ಹಿನ್ನೆಲೆಯಲ್ಲಿ ಆ ಮನೆತನದ ದೊರೆಗಳ ವಂಶಾನುಕ್ರಮಣಿಯನ್ನು ಗೊತ್ತುಮಾಡುವ ಪ್ರಯತ್ನವನ್ನು ಪೈಗಳು ಮಾಡಿದ್ದಾರೆ. ಮೊದಲನೆಯ ಗೌತಮೀ ಪುತ್ರ ಶಾತ ಕರ್ಣಿಯಿಂದ ಹಿಡಿದು, ಎಂಟನೆಯ ಅರಸು ಪುಳುಮಾವಿಯವರೆಗೆ ಕ್ರಿ. ಶ. ಸು. ೬೦ ರಿಂದ ಸು. ೨೦೫ ಈ ಮನೆತನದ ಆಳಿಕೆಯ ಅವಧಿಯೆಂದು ಅವರು ನಿರ್ಣಯಿಸಿ ದ್ದಾರೆ. ಅವರ ನಿರ್ಣಯದ ವಿವರಗಳಲ್ಲಿ ಊಹೆಗಳೂ ವಿವಾದಗ್ರಸ್ತವಾಗುವ ಅಂಶ ಗಳೂ ಇರುವುದು ನಿಜವಾದರೂ, ಅವರು ಈ ದೊರೆಗಳಿಗೆ ಗೊತ್ತುಮಾಡಿರುವ ಕಾಲಾನುಕ್ರಮಣಿ ಈಚೆಯ ಇತಿಹಾಸ ಶೋಧಕರು ಗೊತ್ತುಮಾಡಿರುವುದಕ್ಕೆ ಹತ್ತಿರ ದಲ್ಲಿಯೇ ಇರುವುದು ಒಂದು ಸಮಾಧಾನದ ಸಂಗತಿ. ಮೂಲಪುರುಷ ಗೌತಮೀ ಪುತ್ರ ಶಾತಕರ್ಣಿಯ ಕಾಲವನ್ನು ಪೈಗಳು ಸು. ೬೦–೯೧ ಎಂದಿದ್ದರೆ, ಕೆ. ಎ. ನೀಲ ಕಂಠಶಾಸ್ತ್ರಿಗಳು ಸು. ೮೦–೧೧೪ ಎಂದಿದ್ದಾರೆ. ಹೀಗೆಯೇ ಮನೆತನದ ಪ್ರಬಲನಾದ

ದೊರೆ ಯಜ್ಞಶ್ರೀ ಶಾತಕರ್ಣಿಯ ಕಾಲವನ್ನು ಪೈಗಳು ಸು. ೧೫೨–೧೮೧ ಎಂದು ಹೇಳಿದ್ದರೆ, ಶಾಸ್ತ್ರಿಗಳು ಸು. ೧೭೦–೯೯ ಎಂದು ಹೇಳಿದ್ದಾರೆ.[೫] "ಬಹಳ ಹಳೆಯ ಕಾಲದಿಂದಲೂ ಕರ್ಣಾಟಕ ವಿಷಯದ ಪ್ರಧಾನಭಾಗವಾಗಿರುವ ಕುಂತಲ ದೇಶದಲ್ಲಿ ಕ್ರಿಸ್ತ ಪೂರ್ವದಿಂದಲೆ ರಾಜಧಾನಿ ಇದ್ದ ಸಾತವಾಹನರು ಕರ್ಣಾಟಕದ ಪ್ರಥಮ ಚಕ್ರವರ್ತಿಗಳಾಗಿರುತ್ತಾರೆ" ಎಂಬ ಅವರ ಅಭಿಮಾನದ ಅತ್ಯುಕ್ತಿಗೆ ಸಾರ್ವತ್ರಿಕ ಮನ್ನಣೆಯಿರದಿದ್ದರೂ, ಶಾತವಾಹನರ ಒಂದು ಶಾಖೆಯಾದರೂ ಕುಂತಲನಾಡಿನಲ್ಲಿ ಅಧಿಕಾರ ಪಡೆದಿದ್ದುದಂತೂ ನಿಶ್ಚಯವೆನ್ನಬಹುದು.

ಇದೇ ಮನೆತನದ ಬಗೆಗೆ ಮುಂದುವರಿದ ಚರ್ಚೆ The Vilivayakuras and Sivalakuras of the Kolhapur Coins ಎಂಬ ಒಂದು ಇಂಗ್ಲಿಷ್ ಲೇಖನದಲ್ಲಿ[೬] ಕಾಣಿಸಿಕೊಂಡಿದೆ. ಈ ಲೇಖನದ ಆರಂಭಭಾಗದಲ್ಲಿ ಉತ್ತರಕಾಲೀನ ಸಾತವಾಹನರ ವಂಶಾವಳಿ ಹಾಗೂ ಟಾಲೆಮಿಯ ಭೂಗೋಳದಲ್ಲಿಯ ವ್ಯಕ್ತಿನಾಮ ಸ್ಥಲನಾಮ ಸಂಬಂಧವಾದ ಚರ್ಚೆ ಬಂದಿದೆ. ಅನಂತರದಲ್ಲಿ 'ವಿಳಿವಾಯ ಕುರ' ಹಾಗೂ 'ಸಿವಲ ಕುರ' ಈ ಶಬ್ದಗಳ ರೂಪಗಳ ಜಿಜ್ಞಾಸೆಗೆ ತೊಡಗಿ ವಿಳಿವಾಯ–ಕುಮಾರ $\to$ ವಿಳಿವಾಯ ಕುರ, ಸಿವಲ–ಕುಮಾರ $\to$ ಸಿವಲಕುರ ಆಗಿ ಪರಿವರ್ತಿಸಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ. ವಿಳಿವಾಯ ಎಂಬುದು ಪುಳುಮಾಯಿ (ವಿ) ಎಂಬುದರ ಪರ್ಯಾಯ ನಾಮವೆಂದೂ ವಿಳಿವಾಯಕುರ ಎಂಬುದು ಪುಳುಮಾಯಿ (ವಿ) ಯ ಮಗನನ್ನು ಹೇಳುವ ಮಾತೆಂದೂ ಅವರ ಗ್ರಹಿಕೆ. ಮುಂದೆ ಈ ಮನೆತನದ ಕೆಲವರ ಆಳೊತ್ತಿನ ವಿವರಗಳನ್ನು ಚರ್ಚಿಸಿದ್ದಾರೆ. ಕೊಲ್ಲಾಪುರದ ಉದ್ದೇಶಿತ ನಾಣ್ಯಗಳಲ್ಲಿ ಉಕ್ತರಾಗಿರುವ ವಿಭಿನ್ನರಾದ, ಇಬ್ಬರು ವಿಳಿವಾಯಕುರರಲ್ಲಿ ಮೊದಲನೆಯವನು ವಾಸಿಷ್ಠೀಪುತ್ರನೆಂದೂ ಎರಡನೆಯವನು ಗೌತಮೀ ಪುತ್ರನೆಂದೂ ಅವರು ತಿಳಿಸಿ, ಇವರಲ್ಲಿ ಟಾಲೆಮಿ ಹೆಸರಿಸುವ Baleokuros ಎಂಬವನು ಮೊದಲ ನಾಣ್ಯದ ವಾಸಿಷ್ಠೀಪುತ್ರ ವಿಳಿವಾಯಕುರನೇ ಸರಿ ಎಂದು ಗ್ರಹಿಸಿದ್ದಾರೆ. ವಿಳಿವಾಯ ಮತ್ತು ಪುಳುಮಾಯಿ ಎಂಬ ಶಬ್ದಗಳ ಚರ್ಚೆ ಹಲವರು ಇತಿಹಾಸಕಾರರನ್ನು ಆಕರ್ಷಿಸಿದ್ದು, ಅವು ಆರ್ಯಮೂಲವಾದವೇ ದ್ರಾವಿಡ ಮೂಲವಾದವೇ, ಅವುಗಳ ಅರ್ಥವೇನು– ಇವನ್ನು ನಿಶ್ಚಿತವಾಗಿ ಇನ್ನೂ ಗೊತ್ತುಮಾಡಲು ಸಾಧ್ಯವಾಗಿರುವಂತೆ ತೋರುವುದಿಲ್ಲ.

'ಉತ್ತರ ಕಾಲೀನ ಸಾತವಾಹನರು' ಲೇಖನದ ಉತ್ತರ ಭಾಗವಾದ "ಪ್ಟೊಲೆಮಿಯ 'ಹಿಪ್ಪೊಕೂರ' (Hippokoura)" ಎಂಬುದರಲ್ಲಿ[೭] ವಾಸಿಷ್ಠೀ ಪುತ್ರ ವಿಳಿವಾಯ ಕುರನ (Baleokouros) ನೆಲೆವೀಡೆಂದು ಟಾಲೆಮಿ ಹೇಳಿರುವ ಹಿಪ್ಪೊಕೂರ ಎಂಬ ಸ್ಥಳ ಯಾವುದು ಎನ್ನುವುದನ್ನು ಪತ್ತೆಮಾಡುವ ಪ್ರಯತ್ನ ನಡೆದಿದೆ. ಈ ಪ್ರಯತ್ನದಲ್ಲಿ ಟಾಲೆಮಿ ಉಲ್ಲೇಖಿಸುವ, ಗ್ರೀಕ್ ಭಾಷೆಯ ಭಾರತೀಯ ಸ್ಥಲವಾಚಕಗಳನ್ನು,

ಅದರಲ್ಲಿಯೂ ಭೀಮಾನದಿ ಬನವಾಸಿಗಳ ನಡುವಣವನ್ನು, ಭಾಷಿಕ ಒನ್ನೆಲೆಯಲ್ಲಿ ವಿಸ್ತಾರವಾಗಿ ಪೈಗಳು ಚರ್ಚಿಸಿದ್ದಾರೆ. "ಪಿಪ್ಪರಕಾಪುರ = ಪಿಪ್ಪರಕಪುರ = ಪಿಪ್ಪರ ಕವುರ = ಪಿಪ್ಪರಕೂರ = ಪಿಪ್ಪರರ್ಕೂರ = ಪಿಪ್ಪರ್ಕೂರ = ಪಿಪ್ಪಕೂರ = ಇಪ್ಪಕೂರ = ಪ್ಟೊಲೆಮಿಯಲ್ಲಿ ಇಪ್ಪೊಕೂರ ಎಂಬುದರಿಂದ, ಆತನು Baleokouros (ಬಲೆಒಕುರ) ಎಂಬ ವಾಸಿಷ್ಠೀಪುತ್ರ ವಿಳಿವಾಯಕುರನ ರಾಜಧಾನಿ ಎಂದಿರುವ ಆ ಊರು ಸರ್ವಥಾ ಹಿಪ್ಪೊಕೂರ (Hippokoura) ಅಲ್ಲ, ಇಪ್ಪೊಕೂರ ತಾನ ಎಂದೂ. ಅಂದು ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನಲ್ಲಿಯ ಹಿರೇಹಿಪ್ಪರಗಿ ಎಂದೂ ಕರೆಯ ಲ್ಪಡುವ ಹೂವಿನ ಹಿಪ್ಪರಗಿ ಎಂಬ ಊರೆಂದೂ ಧಾರಾಳವಾಗಿ ನಿಶ್ಚಯವಾಗುತ್ತದೆ. ಹೀಗೆಂಬುದು ಪೈಗಳ ನಿರ್ಣಯ. ಇದಕ್ಕೊಂದು ತಿದ್ದುಪಡಿ ಲೇಖನವನ್ನು ಅನಂತರ ದಲ್ಲಿ ಬರೆದು, ಅಲ್ಲಿ ಟಾಲೆಮಿಯ ಗ್ರಂಥವಲ್ಲಿ 'ಹಿಪ್ಪೊಕೂರ' ಎಂಬುದಾಗಿ ಓದಿರುವ ಪಾಠವನ್ನು ನ್ಯಾಯವಾಗಿ 'ಇಪ್ಪೊಕೂ (ಕು) ರು ಎಂಬುದಾಗಿಟ್ಟುಕೊಳ್ಳಬೇಕೆಂದು ಸೂಚಿಸಲಾಗಿದೆ. ಪೈಗಳ ಗ್ರೀಕ್ ಭಾಷಾಜ್ಞಾನ ಇಲ್ಲಿ ಚೆನ್ನಾಗಿ ಕೆಲಸಕ್ಕೆ ಬಂದಿದೆ. ಈ ದಿಕ್ಕಿನಲ್ಲಿ ಅವರ ವಿಚಾರಗಳು ಗಮನಾರ್ಹವಾಗಿದ್ದು, ಕನ್ನಡ ನಾಡು ನುಡಿಗಳ ಪ್ರಾಚೀನತೆಯನ್ನು ಸಯುಕ್ತಿಕವಾಗಿ ಸಮರ್ಥಿಸಲು ಸಹಾಯಕವಾಗಿವೆ. ಅವರು ಸಮೀಕರಣಮಾಡಿದ ಸ್ಥಾನಿಕ ವಿವರಗಳಲ್ಲಿ ಅಭಿಪ್ರಾಯಭೇದಗಳು. ವ್ಯಕ್ತವಾಗಿದ್ದರೂ ಗ್ರಾಹ್ಯವಾಗಿರುವ ವಿಸ್ತೃತ ನಿರೂಪಣೆ ಮೊದಲು ಕಾಣಿಸಿಕೊಂಡುದು ಪ್ರಾಯಃ ಪೈಗಳ ಲೇಖನದಲ್ಲಿಯೇ.

ಈ ಸಂದರ್ಭದಲ್ಲಿಯೇ ಸಾತವಾಹನರ ಮಾಂಡಲಿಕರಾಗಿ ಹಾಗೂ ಆ ಕಾಲದಲ್ಲಿ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕರಾವಳಿ ಸೀಮೆಯಲ್ಲಿ ಪ್ರಸಿದ್ಧಿಗೆ ಬಂದಿದ್ದವ ರಾದ ಕೆಲವರ ಬಗೆಗೆ, ಮುಖ್ಯವಾಗಿ ಚುಟುಗಳು, ಆಳುಪರು ಇವರ ಬಗೆಗೆ ಪೈಗಳ ಶೋಧನೆ ಏನು ಎಂಬುದನ್ನು ಗಮನಿಸಬೇಕು; ಜೊತೆಗೆ ಸರಿಸುಮಾರು ಇದೇಕಾಲದ ವರಾದ, ಮೈಸೂರಿಗೆ ದಕ್ಷಿಣದಲ್ಲಿ ರಾಜ್ಯವನ್ನು ಹೊಂದಿದ್ದ ಪುನ್ನಾಡರ ಬಗೆಗೆ ಅವರು ನಡಸಿದ ಶೋಧನೆಗಳನ್ನು ತಪ್ಪದೆ ಗಮನಿಸಬೇಕು. 'ಇತಿಹಾಸದ ಇರುಳಲ್ಲಿ ತುಳು ನಾಡು' ಎಂಬ ಅವರ ಬಹು ಹಿಂದಿನ ಒಂದು ಲೇಖನದಲ್ಲಿಳ ಅವರು ಸಾತವಾಹನ ರನ್ನೂ ಚುಟುಗಳು ಹಾಗೂ ಆಳುಪರನ್ನೂ ಕುರಿತು ಸ್ವಾರಸ್ಯವಾಗಿ ಕೆಲವು ಸಂಗತಿ ಗಳನ್ನು ವಿಚಾರಮಾಡಿದ್ದಾರೆ. ಸ(ಸಾ)ತ್ಯತರು, ತಾಲೀಯರು. ಸಾತಿಯ (ಪುತ)ರು, ಸಾತವಾ(ಹ)ನರು, ಅನೂ(ಲೂ)ಪರು ಎಂಬವರ ಬಗ್ಗೆ ವಿವೇಚಿಸಲು ತೊಡಗಿ ಅವರು ತಿಳಿಸುವ ಕೆಲವು ಸಂಗತಿಗಳು ಹೀಗಿವೆ:

(೧) ಋಗ್ವೇದದ ಐತರೇಯ ಬ್ರಾಹ್ಮಣದಲ್ಲಿ ಹೇಳಿರುವ ಸತ್ವತರು ಯದು ವಂಶದ ಸತ್ತ್ವರಾಯಣ ವಂಶೀಯರಾದ ಭೋಜ–ಅಂಧಕವೃಷ್ಣಿ ಮೊದಲಾದ ಶಾಖೆ ಯವರಾದ ಸಾತ್ತ್ವಕರೇ ಆಗಿರಬೇಕು. (೨) ತಾಲವನ ಎಂಬುದು ತುಳುನಾಡಿನ

ಪುರಾಣಕಾಲದ ಹೆಸರಾಗಿರಬೇಕು. ಶಾಲೀಯ (ಶಾಲಿಯ) ಶಬ್ದವೇ ದ್ರಾವಿಡ ಸ್ವರ ವ್ಯತ್ಯಯದ ಅನುಸಾರವಾಗಿ ಸಾತಿಯ (ಸತಿಯ) ಆಗಿ ಪರಿವರ್ತಿಸಿ. ಇವರೇ ಅಶೋಕನ ಶಾಸನಗಳ ಸಾತಿಯಪುತರೆಂಬವರಾಗಿರಬೇಕು. ಶಾಲಾಃ, ಶಾಲವಾನಾಃ ಶಾಲೀವಾನಾಃ ಎಂಬ ಶಬ್ದಗಳೇ ಸಾತಾ, ಸಾತವಾನಾ, ಸಾಲಿ(ೀ)ವಾನ ಎಂದಾಗಿ, ಸಾತವಾನ. ಸಾಲಿವಾನ, ಸಾತವಾಹನ ಮುಂತಾದ ರೂಪಗಳಿಗೆ ದಾರಿಮಾಡಿಯವು. ಹೀಗೆ ಭೂಮಿಕೆ ಹಾಕಿಕೊಂಡು ಪೈಗಳು 'ಸಾತವಾಹನ' ಹೆಸರಿನ ಇನ್ನೂ ವಿಸ್ತಾರವಾದ ಚರ್ಚೆಯೊಂದಿಗೆ ಈ ಸಾತವಾಹನರು ಆಂಧ್ರರೆಂಬ ವಾದವನ್ನು ನಿರಾಕರಿಸಿ, ಅವರು ಆರ್ಯರು, ಆರ್ಯಾವರ್ತದಿಂದ ದಕ್ಷಿಣಕ್ಕೆ ಇಳಿತಂದು ತುಳುನಾಡಿನಲ್ಲಿ ನೆಲಸಿರಬೇಕು, ಅನಂತರದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೂ ಕೆಲಕಾಲವಿದ್ದು, ಅಲ್ಲಿಂದ ಉಜ್ಜಯಿನಿಯತ್ತ ಸರಿದಿರಬೇಕು ಎಂದು ವಿಚಾರಮಾಡಿದ್ದಾರೆ. ಬಳಿಕ ಅನೂಪ ಮತ್ತು ಅಲೂಪ ಶಬ್ದಗಳು ಪರ್ಯಾಯ ವಾಚಕಗಳೆಂದು ನಿರೂಪಿಸಿ, ಈ ಅಲೂಪರಾದರೂ ಸಾತವಾಹನರ ವಂಶದವರೇ ಆದ ಚುಟುಕುಲದವರು ಅಥವಾ ಚುಟು ಕುಲದಿಂದ ಮೊಳೆತ ಒಂದು ಶಾಖೆಯವರು ಎಂದು ಗ್ರಹಿಸಿದ್ದಾರೆ. ಮುಂದುವರಿದು, ಚುಟು ಎಂಬ ಮೂಲ ಶಬ್ದದಿಂದಲೇ ತುಳು ಎಂಬ ಶಬ್ದ ನಿಷ್ಪನ್ನಗೊಂಡು ಈ ದೇಶಕ್ಕೆ ಆ ಹೆಸರು ಬಂದಿರಬೇಕು, ಚುಟುಕುಲದ ಸಾತವಾಹನರಿಗೂ ಈಚಿನ ಚೌಟರಿಗೂ ಸಂಬಂಧವೇನೂ ಇರುವಂತೆ ತಿಳಿಯುವುದಿಲ್ಲವಾದರೂ ಇಬ್ಬರಿಗೂ ಆ ಹೆಸರುಗಳು 'ಚುಟು' ಎಂಬ ದೇಶವಾಚಕದಿಂದ ಬಂದುದಾಗಿರಬೇಕು. ಹೇಗೂ ಚುಟು ಎಂಬುದೇ ತುಳು ಎಂಬ ದೇಶದ ಹೆಸರಾಗಿ ಮುಂದೆ ಮಾರ್ಪಟ್ಟಿರಬೇಕು ಎಂದು ತಮ್ಮ ವಿಚಾರ ಸರಣಿಯನ್ನು ಮುನ್ನಡೆಸಿಕೊಂಡು ಹೋಗಿದ್ದಾರೆ.

ಈ ಲೇಖನದ ಮುಖ್ಯ ಭಾಗದಲ್ಲಿಯೂ ಅಡಿಟಿಪ್ಪಣಿಗಳಲ್ಲಿಯೂ ಸಾಂಸ್ಕೃತಿಕ ಹಾಗೂ ಭಾಷಿಕ ಪ್ರಾಮುಖ್ಯದ ಹಲವು ಕುತೂಹಲಕರ ಸಂಗತಿಗಳು ತುಂಬಿಕೊಂಡಿರುವಂತೆಯೇ ಐತಿಹಾಸಿಕವಾಗಿ ಗೋಜು ಗೊಂದಲಗಳ ಮನೆತನಗಳ ಚರಿತ್ರೆಗಳೂ ಅವುಗಳ ನಡುವೆ ಸಂಬಂಧ ಸಮೀಕರಣಗಳ ತರ್ಕಗಳೂ ತುಂಬಿಕೊಂಡಿವೆ." ಇದರಲ್ಲಿ ಐತಿಹಾಸಿಕವಾಗಿ ವಾಸ್ತವಿಕ ನೆಲೆಗಟ್ಟಿನ ಮೇಲೆ ನಿಲ್ಲುವ ಒಂದೆರಡು ಅಂಶಗಳ ಸುತ್ತಲೂ ಭಾಷೆಯ ನೂಲನ್ನು ಸುತ್ತಿ ವಿಚಿತ್ರವಾದ ನಿರ್ಧಾರಗಳಿಗೆ ಬರುವ ಮನೋಭಾವ ಇಲ್ಲಿ ಕಾಣುತ್ತದೆ. ಈ ವಾದಗಳೆಲ್ಲಾ ಒಪ್ಪತಕ್ಕವಲ್ಲ. ಅದಕ್ಕೆ ಪ್ರತಿವಾದಗಳನ್ನು ಹೂಡಿದೆ, ಹೂಡಬಹುದಾಗಿದೆ" ಎಂಬುದು ಡಾ. ಬಿ. ಆರ್. ಗೋಪಾಲ್ ಅವರ ಅಭಿಪ್ರಾಯ"[೯] "ಇತಿಹಾಸಕಾರನಲ್ಲಿರುವ ಒಲವು (bias) ಎಂಬ ಕುಂದು ಇಲ್ಲಿ ಎದ್ದು ತೋರುತ್ತದೆ. ಸ್ವದೇಶಾಭಿಮಾನ–ಸ್ವಪ್ರದೇಶಾಭಿಮಾನ ಇಂತಹ ವಾದಗಳಿಗೆ ಕಾರಣ" ಎಂಬುದಾಗಿ ಅವರ ಆಕ್ಷೇಪಣೆಯೂ ಇದೆ.[೧೦] ಆದರೆ ತುಳುವ ಇತಿಹಾಸದ ಬಗ್ಗೆ ಮೊದಲ ಕೃಷಿ ನಡಸಿದವರು ಪೈಗಳೇ: ಆ ಇತಿಹಾಸದ ವಿಷಯದಲ್ಲಿ ಸ್ಥಳೀಯರಲ್ಲಿ ಅಭಿಮಾನವನ್ನೂ ಅರಿವನ್ನೂ ಮೂಡಿಸಿದವರೂ ಅವರೇ; ಆ ಬಳಿಕ

ಸಾಲೆತೊರೆ, ರಮೇಶ್. ಗುರುರಾಜಭಟ್ಟ ಮುಂತಾದವರು ಈ ಬಗ್ಗೆ ಅಧ್ಯಯನಗಳನ್ನು ನಡೆಸಿದರೆನ್ನಬಹುದು.

ಸಾತ್ತ್ವತರು ಐತಿಹಾಸಿಕವಾಗಿ ಸ್ಥಾನಮಾನಗಳುಳ್ಳ ಮನೆತನದವರಾಗಿ ತೋರುವುದಿಲ್ಲ. ತಾಲವನ–ತಾಲೀಯುರು–ಸಾತಿಯ (ಪುತ) ರು ಪರಸ್ಪರ ಸಂಬಂಧದ ಮಾತುಗಳಾಗಿ ತೋರದಿರುವುದಕ್ಕೆ ಕಾರಣಗಳು ಬಹಳವಾಗಿವೆ. ತಾಲವನ ತಾಲೀಯಗಳು ಭಿನ್ನ ಪ್ರದೇಶವಾಚಕಗಳಾಗಿದ್ದು ಇವಕ್ಕೂ ಸಾತಿಯ ಪುತ್ರಕ್ಕೂ ಸಂಬಂಧವೇನೂ ಇರಲಾರದೆಂದು ಪಿ. ಗುರುರಾಜಭಟ್ಟರ ಗ್ರಹಿಕೆ. ತಾಲೀಯರೂ ಸಾತಿಯ (ಪುತ) ರೂ ಒಂದೇ ಎನ್ನುವುದನ್ನು ಸಾಬ್ದಿಕವಾಗಿ ಮಾತ್ರ ಪೈಗಳು ಸಾಧಿಸಿದ್ದರೂ ಅದು ಸಂಭಾವ್ಯವಲ್ಲ. ತುಳುನಾಡಿನ ಇತಿಹಾಸದ ಬಗ್ಗೆ ವಿಶೇಷವಾಗಿ ಅಧ್ಯಯನ ನಡಸಿರುವ ಡಾ. ಕೆ. ವಿ. ರಮೇಶ್ ಅವರು "ಪಾಲಿ ಭಾಷೆಯಲ್ಲಿ ಪುತ್ತ–ಪುತ್ರ ಎಂಬ ಶಬ್ದಕ್ಕೆ 'ಜನಾಂಗಕ್ಕೆ ಸೇರಿದವ'ನೆಂದರ್ಥ. 'ಸಹ್ಯಪುತ್ರ'ವು ಸಹ್ಯಾದ್ರಿಯಲ್ಲಿ ಮತ್ತು ಅದರ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ನೆಲೆಸಿದ್ದ ತುಳುವರ ಹೆಸರಿದ್ದಿರಬಹುದು. ಸಂಸ್ಕೃತದ ಸಹ್ಯವು ಪಾಲಿಯಲ್ಲಿ ಸಹಿಯ 7 ಸಹಿಅ ಎಂದಾಗುತ್ತದೆ. ಇದೇ ಅಶೋಕನ ಶಾಸನಗಳಲ್ಲಿ ಸತಿಯ ಎಂದಾಗಿರಬೇಕು" ಎಂದು ತರ್ಕಿಸಿದ್ದಾರೆ.೧೧ ಹೀಗೆಯೇ ಸಾತವಾಹನ ಶಬ್ದದ ಚರ್ಚೆಯಲ್ಲಿಯೂ ಅಂತಿಮ ನಿರ್ಣಯ ಇನ್ನೂ ಸಾಧ್ಯವಾಗದ ಅನೇಕ ನಿಷ್ಪತ್ತಿಗಳು ಸೂಚಿಸಲ್ಪಟ್ಟಿವೆ; ಇದರೊಂದಿಗೆ 'ಸಾತಕರ್ಣಿ' ಶಬ್ದದ ಚರ್ಚೆಯೂ ಸೇರಿಕೊಂಡಿದೆ. ಪೈಗಳು 'ಸಾತವಾಹನ' ಉಲ್ಲೇಖದ ಅನೇಕ ಸಾಹಿತ್ಯಿಕ ಆಧಾರಗಳನ್ನು ಒಂದು ಕಡೆ ಸಂಗ್ರಹಿಸಿ ಕೊಟ್ಟು, ಅಭ್ಯಾಸಿಗಳಿಗೆ ತುಂಬ ಸಹಾಯಮಾಡಿದ್ದಾರೆನ್ನಬಹುದು. ಸಾತವಾಹನರು ಆಂಧ್ರರಲ್ಲ. ಆರ್ಯರು ಎಂಬುದೂ ಅವರ ಮೂಲಸ್ಥಾನ ತುಳುನಾಡು ಎನ್ನುವುದೂ ವಿವಾದಗ್ರಸ್ತ ವಿಷಯವೇ. ಸಾತವಾಹನರನ್ನು ಆಂಧ್ರರೆಂದೋ ಆಂಧ್ರಭೃತ್ಯರೆಂದೋ ಕರೆದಿರುವುದು ಪುರಾಣಗಳಲ್ಲಿ ಮಾತ್ರವೇ. ಶಾಸನಗಳಲ್ಲಿ ಅವರನ್ನು ಸಾತವಾಹನರೆಂದೇ ಕರೆದಿದೆ. ಹೀಗಾಗಿ ಪೈಗಳು ಭಾವಿಸುವಂತೆ ಸಾತವಾಹನರು ಆಂಧ್ರರಾಗಿರಲಾರರು ಎಂದೇ ಇನ್ನೂ ಕೆಲವರು ಇತಿಹಾಸಕಾರರು ಭಾವಿಸಿದ್ದಾರೆ. ಆದರೆ ಅವರು ತಿಳಿಯುವಂತೆ ತುಳುನಾಡು ಎಷ್ಟರಮಟ್ಟಿಗೆ ಸಾತವಾಹನರ ಒಡುವಳಿಯಲ್ಲಿದ್ದಿತೋ ಎನ್ನುವುದೇ ನಿಶ್ಚಯವಿಲ್ಲದಿರುವಾಗ: ಅದೇ ಅವರ ಮೂಲಸ್ಥಾನವಾಗಿದ್ದಿರಬೇಕು ಎನ್ನುವುದಂತೂ ಗ್ರಾಹ್ಯವಾಗುವುದಕ್ಕೆ ದೂರವೇ ಉಳಿಯಿತು. ಈ ಮನೆತನದ ಒಂದೇ ಒಂದು ಶಾಸನ ತುಳುನಾಡಿನಲ್ಲಿ ದೊರೆತಿಲ್ಲವೆಂದೂ ಈ ಮನೆತನದವರು ತುಳುನಾಡಿನಲ್ಲಿದ್ದು ಅನಂತರ ದಖನ್ನಿಗೆ ಹೋಗಿ ಅಧಿಪತ್ಯ ಸ್ಥಾಪಿಸಿರಬೇಕೆಂಬುದು ಒಂದು ಕಲ್ಪನೆಯೆಂದೂ ಪಿ. ಗುರುರಾಜಭಟ್ಟರು ಭಾವಿಸಿದ್ದಾರೆ. ಗೌತಮೀಪುತ್ರ ಸಾತಕರ್ಣಿಯ ನಾಸಿಕ ಶಾಸನದಲ್ಲಿ ಮಲಯಾದ್ರಿ ಮತ್ತು ಸಹ್ಯಾದ್ರಿಗಳು ಅವನ ಅಧೀನದಲ್ಲಿದ್ದವೆಂದು ಹೇಳಲಾಗಿದೆಯಾದರೂ" ಈ

ಶಾಸನದಲ್ಲಿ ಉಕ್ತವಾಗಿರುವ ಸಹ್ಯಾದ್ರಿಯು ತುಳುನಾಡನ್ನೂ ಒಳಗೊಂಡಿತ್ತೊ ಇಲ್ಲವೆ ಎಂದು ನಿರ್ಧರಿಸಲು ಈಗಿರುವ ಆಧಾರಗಳು ಸಾಲವು" ಎಂಬುದು ಡಾ. ರಮೇಶ್ ಅವರ ಅಭಿಪ್ರಾಯ.[೧೨] ಇನ್ನು ಅನೂಪ–ಅಲೂಪ ಸಮೀಕರಣ ವಿಚಾರ. ಇದಾದರೂ ಐತಿಹಾಸಿಕವಾಗಿ ಸಂಗತವಾಗಿಲ್ಲದ ವಿಚಾರವೇ. ನರ್ಮದಾ ತೀರದ ಅನೂಪ ಎಂದರೆ ಮಾಳವದೇಶದೊಂದಿಗೆ. ವಂಶವಾಚಕವಾದ ಆಳುಪದೊಂದಿಗೆ ಸಂಬಂಧವುಳ್ಳ ಅಲೂಪ ಶಬ್ದವನ್ನು ಸೇರಿಸಿ ಚರ್ಚಿಸಿರುವುದರಲ್ಲಿ ಏನೂ ಹುರುಳಿಲ್ಲ. ಆಲುವ–ಅಲುಪ ಶಬ್ದಗಳು ಶಾಸನಗಳಲ್ಲಿ ಗೋಚರಿಸುವುದಿಲ್ಲ. ಪೈಗಳೇ ಇನ್ನೊಂದು ಬರೆಹದಲ್ಲಿ ಆಳುಪದ ನಿಷ್ಪತ್ತಿಯನ್ನು ಬೇರೆಯಾಗಿ ಹೇಳಿರುವುದು ಕಾಣುತ್ತದೆ. ಹೀಗೆಯೇ ಚುಟು–ತುಳು ಸಂಬಂಧವೂ ನಿಲ್ಲತಕ್ಕುದಲ್ಲವೆನ್ನುವುದನ್ನು ಈಗಾಗಲೇ ತೋರಿಸಿ ಕೊಡಲಾಗಿದೆ.

ಪೈಗಳು 'ತುಳುನಾಡು–ಪೂರ್ವಸ್ಮೃತಿ' ಎಂಬೊಂದು ಲೇಖನದಲ್ಲಿ[೧೩] ಪಶ್ಚಿಮ ಕರಾವಳಿಯು ಉತ್ತರ ಕನ್ನಡ ಜಿಲ್ಲೆಯಿಂದ ತೊಡಗಿ ಕನ್ಯಾಕುಮಾರಿಯವರೆಗೆ. ಅದರಲ್ಲಿಯೇ ಸೇರಿರುವ ತುಳುನಾಡು ಸಹವಾಗಿ, ಹಳಗಾಲದಲ್ಲಿ ಅನಾರ್ಯರಾದ ಶಂಖರೆಂಬ ನಾಗರ ನೆಲೆವನೆಯಾಗಿದ್ದಿತು ಎಂದೂ ಪಶ್ಚಿಮ ಕರಾವಳಿಯು ಶಾಂತಿಕ ಎನ್ನುವುದು ತುಳುನಾಡು ಎಂದೂ ಅಶೋಕನ ಶಾಸನಗಳ 'ಸಾತಿಯ ಪುತ' ಶಾಂತಿಕ ಎಂಬ ಈ ತುಳುನಾಡೇ ಸರಿ ಎಂದೂ ವಿಪುಲ ಸಾಹಿತ್ಯಾಧಾರಗಳನ್ನು ಕೊಟ್ಟು ವಾದಿಸಿದ್ದಾರೆ. ಆಳುವ (ಆಳ್ವ) ಖೇಡವೂ ದೇಶವಾಚಕವೇ ಆದ ಅಲುವವೂ ಸರ್ವ ಎಂಬರ್ಥದ ತಮಿಳಿನ 'ಆಲುವಾಯ್' ಎಂಬುದರಿಂದ ಬಂದವಾಗಿರಬಹುದು ಇಲ್ಲವೆ ಸಮುದ್ರದ ತೀರಭೂಮಿ ಎಂಬರ್ಥದ ಅಟುವ (ಆಟುವ) ಎಂಬ ದ್ರಾವಿಡ ಶಬ್ದದ ಸಂಸ್ಕೃತೀಕರಣಗೊಂಡ ರೂಪಗಳಿಂದಾಗಿರಬಹುದು ಎನ್ನುವುದು ಪೈಗಳ ಇನ್ನೊಂದು ವಿಚಾರ. ಅಲ್ಲದೆ ತಮಿಳಿನಲ್ಲಿ 'ತುಟ್ಟೈ' ಎಂದರೆ 'ನೀರಿನಲ್ಲಿ ಹುಟ್ಟು ಹಾಕು' ಎಂದೂ 'ತುಳೈ' ಎಂದರೆ ಮುಳುಗು, ನೀರಿನಲ್ಲಿ ಆಡು ಎಂದೂ ಅರ್ಥವಿರುವುದರಿಂದ. ತುಳುನಾಡಿನ ಜನರನ್ನು 'ಹರಿವಂಶ'ದಲ್ಲಿ "ತಸ್ಯ ದಾಶಾ ಜಲೇ ಮಗ್ನಾಃ... ಸಮುದ್ರೋದರ ಚಾರಿಣಃ" ಎಂಬುದಾಗಿ ವರ್ಣಿಸಿರುವುದರಿಂದ ಬೆಸ್ತರೂ ಅಂಬಿಗರೂ ಸಹಜವಾಗಿ ಅಧಿಕವಾಗಿದ್ದ ಕಡಲಕರೆಯ ತುಳುನಾಡಿಗೆ ಆ ಹೆಸರು ಬಿದ್ದಿರಬೇಕೆಂದು ಬೇರೊಂದು ವಿಚಾರವನ್ನೂ ಅವರೂ ಗುರುತಿಸಿದ್ದಾರೆ. ಇಲ್ಲಿಯೇ ತುಳುನಾಡಿನ ಕೆಲವು ಪ್ರದೇಶಗಳ– ಮಂಗಳೂರು. ಕಾಸರಗೋಡು. ಪುತ್ತೂರು. ಕಾರ್ಕಳ. ಕುಂದಾಪುರ. ಉಡುಪಿ ಮುಂತಾದವುಗಳ–ಪರಿಚಯವೂ ಒಳಕೊಂಡ ಹಾಗೆ ತುಳುನಾಡಿನ ಪ್ರಾಚೀನ ಇತಿಹಾಸವನ್ನೂ ಧಾರ್ಮಿಕ ಚಲನವಲನಗಳನ್ನೂ ವಿಸ್ತಾರವಾಗಿ ನಿರೂಪಿಸಿದ್ದಾರೆ. ಇದೇ ಲೇಖನದ ಕೆಲವು ವಿವರಗಳು. ಮುಖ್ಯವಾಗಿ ಶಾಂತಿಕ. ಹೈಹಯ. ಆಲುವ. ತುಳು. ಎಂಬವುಗಳನ್ನು ಕುರಿತವು. 'ದಕ್ಷಿಣ ಕನ್ನಡದ ಹಳೆಯ ಹೆಸರುಗಳು" ಎಂಬುದರಲ್ಲಿಯೂ[೧೪]

ಸಂಕ್ಷೇಪವಾಗಿ ನಿರೂಪಿತವಾಗಿವೆ. ಮುದ್ಗರಾ→ಮೊಗೇರ ಆಯಿತೆಂಬುದೂ ಪಶುಕ ಪೈಗ ಆಯಿತೆಂಬುದೂ ಕುತೂಹಲಕರವಾದ ಅಂಶಗಳು.

ಪೈಗಳ ಈ ವಂಶ ಮತ್ತು ಸ್ಥಲ ನಿಷ್ಪತ್ತಿಗಳಿಗೆ ಅಂತಹ ಪುರಸ್ಕಾರ ದೊರೆತಿಲ್ಲ. 'ಆಳುಪ ಶಬ್ದವು 'ಆಳಿಕೆ ನಡಸುವುದು', 'ಪ್ರಭುತ್ವಮಾಡು', ಅಧಿಕಾರ ನಡಸು' ಎಂಬೀ ಅರ್ಥಗಳಿರುವ 'ಆಳ್ ಎಂಬ ದ್ರಾವಿಡ ಧಾತುವಿನಿಂದ ಹುಟ್ಟಿದುದು. ಶಾಸನಗಳಲ್ಲಿ ಈ ಕುಲನಾಮವು ಆಳುಕ, ಆಳುಪ, ಆಳುವ, ಆಳ್ವ ಎಂಬ ವಿವಿಧರೂಪಗಳಲ್ಲಿ ಕಂಡುಬರುತ್ತದೆ"– ಎಂದಿರುವ ಡಾ. ರಮೇಶ್ ಅವರು "ಬ್ರಹ್ಮಾಂಡ, ಪದ್ಮ ಮತ್ತು ವಾಮನ ಪುರಾಣಗಳಲ್ಲಿ ಒಂದು ಜನಾಂಗದ ಅಥವಾ ರಾಜ್ಯದ ಅಥವಾ ರಾಜವಂಶದ ಹೆಸರಾಗಿ ಉಕ್ತವಾಗಿರುವ ಆಲಿಕ, ಆಲವ, ಆಲಕ ಶಬ್ದಗಳು ಆಳುಪ ಜನಾಂಗ ಇಲ್ಲವೆ ದೇಶ ಇಲ್ಲವೆ ರಾಜವಂಶ"ವಿರಬಹುದೆಂದಿರುವ ಶಾಸನಸಂಶೋಧಕ ಡಾ. ಡಿ. ಸಿ. ಸರ್ಕಾರ್ ಅವರ ಅಭಿಪ್ರಾಯದ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ.[೧೫] ತುಳು–ತುಳುನಾಡು ಇವುಗಳ ಶಬ್ದರೂಪ ಚರ್ಚೆಯೂ ಹೀಗೆಯೇ ವಿಚಾರಣೀಯವಾದುದು; ಒಪ್ಪಲು ಕಷ್ಟಕರವಾದ್ದೆಂದು ತೋರಿಸಿಕೊಡಲಾಗಿದೆ. ಆದರೆ ಆ ಕೆಲವರು ಭಾವಿಸುವಂತೆ ತುೞು–ತುಟು, ತುೞುನಾಡು–ತುಟುನಾಡು ಎಂಬ ನಿಷ್ಪತ್ತಿಯೂ ಸಂದಿಗ್ಧವಾದದ್ದು.

ವಿಜಯನಗರದ ತುಳವ ಅಥವಾ ತುಳುವ ವಂಶ ಆ ಸಂಸ್ಥಾನವನ್ನು ೧೪೯೭–೧೫೭೦ರ ನಡುವೆ ಆಳಿತಷ್ಟೆ; ಆ ವಂಶದ ಮೂಲ ನೆಲೆ ತುಳು ದೇಶವೇ ಆಗಿರಬಹುದು, ಆ ವಂಶಿಕರು ಅಳಿಯಕಟ್ಟಿನ ಪದ್ಧತಿ ವರ್ಜಿಸಿ ಮಕ್ಕಳ ಕಟ್ಟನ್ನೇ ಮುಂದೆ ಪಾಲಿಸಿರಬೇಕು– ಎಂಬುದಾಗಿ 'ವಿಜಯ ನಗರದ ತುಳವ ಅಥವಾ ತುಳುವ ವಂಶ' ಎಂಬ ಒಂದು ಲೇಖನದಲ್ಲಿ[೧೬] ಪೈಗಳು ವಾದಿಸಿ, ತುರುವ+ಅರಸರ್ ಎಂಬುದೇ ತುರ್ವರಸರ್, ತುರ್ವಸರ್ ಎಂದಾಗಿ ತುರ್ವಸುವಿನ ವಂಶಜರು ಎಂಬ ಐತಿಹ್ಯ ಹುಟ್ಟಿಕೊಂಡಿರಬೇಕು ಎಂದೂ, ತುರುವರಸರ್ ಎಂಬುದೇ ರ–ಳ ಕಾರಗಳವ್ಯತ್ಯಯದಿಂದ ತುಳುವರಸರ್ ಆಗಿದೆಯೆಂದೂ ಅಭಿಪ್ರಾಯಪಟ್ಟಿದ್ದಾರೆ. ಮೂಲತಃ ಈ ವಂಶಜದವರು ತುರುವರು ಎಂದರೆ ದನಕಾಯುವ ಜಾತಿಯವರು ಎಂಬುದು ಅವರ ಗ್ರಹಿಕೆ. ಪೈಗಳು ಇಲ್ಲಿ ತುಳು ಶಬ್ದವನ್ನು ಬೇರೆ ರೀತಿಯಲ್ಲಿ ಅರ್ಥೈಸಿ ನಿಷ್ಪತ್ತಿ ಹೇಳಿರುವುದು ಕಾಣುತ್ತದೆ.

'ಕದ್ರಿಯ ಅಲೂಪರದೊಂದು ಶಾಸನ' ಎಂಬೊಂದು ಬರೆಹದಲ್ಲಿ[೧೭] ಶಾಸನಪಾಠ, ಅದರ ಅನುವಾದ, ತಿದ್ದುಪಡಿ, ಟೀಕೆ ಎಂಬ ಪೂರ್ವಭಾಗದೊಂದಿಗೆ ಶಾಸನದ ಕಾಲ, ಪ್ರಾಚೀನತೆ, ಶಾಸನೋಕ್ತನಾದ ಅಲೂಪರ ದೊರೆ ಕುಂದವರ್ಮ ಯಾರು ಎಂಬ ವಿಚಾರ ಇವುಗಳು ಅನುಕ್ರಮವಾಗಿ ಚರ್ಚಿತವಾಗಿವೆ. ಕದ್ರಿಯ ಮೂಲನಾಮ ಕದರಿ (ಕದರಿಕಾ) ಎಂದೂ 'ಖದಿರ' ಎಂಬ ಸಂಸ್ಕೃತ ಶಬ್ದದ ಅರ್ಥವೇ ಇರುವ

ಕವರ ಎಂಬ ಒಂದು ಜಾತಿಯ ಮರ (=ತರೆಯದ ಮರ) ಕಾರಣವಾಗಿ ಕದ್ರಿ ಎಂಬ ಸ್ಥಳವಾಚಕ ಸಿದ್ಧವಾಯಿತೆಂದೂ ಪೈಗಳು ಭಾವಿಸಿದ್ದಾರೆ. ಅವರ ಗಣಿತದಂತೆ ಈ ಶಾಸನದ ಕಾಲ ಸು. ೬೩೦. ಡಾ. ರಮೇಶ್ ಅವರು ಈ ದೊರೆಯ ವೇಣೂರು ಗ್ರಾಮದ ಮತ್ತೊಂದು ಶಾಸನವನ್ನೂ ಗಮನಿಸಿ (ಪೈಗಳೂ ಗಮನಿಸಿದ್ದಾರೆ) ಇವೆರಡೂ ೯೭೮ರಲ್ಲಿ ಹುಟ್ಟಿದವು ಎಂದು ನಿರ್ಣಯಿಸಿರುವುದಲ್ಲದೆ, ಕುಂದವರ್ಮನು ರಣಂಜಯನ (೯೦೦–೩೦) ಮಗನೆಂದೂ ಚಿಕ್ಕಪ್ಪನಾದ ೧ನೆಯ ದತ್ತಾಳುಪನನ್ನು (೯೩೦–೫೦) ಪದಚ್ಯುತಿಗೊಳಿಸಿ ಪಟ್ಟವೇರಿದನೆಂದೂ ಕದ್ರಿಶಾಸನದ ಆಧಾರದಿಂದಲೇ ಸ್ಪಷ್ಟಪಡಿಸಿದ್ದಾರೆ.[೧೮] ಪೈ ಓದಿರುವ ಶಾಸನಪಾಠದಲ್ಲಿ "ದತ್ತಾಭೂಪನ್ನಿರಾಕೃತ್ಯ..." ಎಂದಿದ್ದರೆ, ರಮೇಶ್ ಗಮನಿಸಿರುವ ಪಾಠದಲ್ಲಿ "ದತ್ತಾಳುಪಂ ನಿರಾಕೃತ್ಯ..." ಎಂದಿದ್ದು, ಈ ವ್ಯತ್ಯಾಸ ಐತಿಹಾಸಿಕ ಸಂಗತಿಗಳ ವಿಶದೀಕರಣಕ್ಕೆ, ಆಳುಪ ವಂಶದ ಇತಿಹಾಸ ರಚನೆಗೆ ಬಹುಮುಖ್ಯವಾಗಿ ಪರಿಣಮಿಸಿದೆ.

ತುಳುನಾಡಿನ ಇತಿಹಾಸವನ್ನು ಕುರಿತಂತೆ ಪೈಗಳು ಬರೆದಿರುವ ಲೇಖನಗಳಲ್ಲಿ "ಹೈಗ–ಹೈವೆ" ಸಾಕಷ್ಟು ವಿಸ್ತಾರವಾದ್ದು,[೧೯] ಸಾಂಸ್ಕೃತಿಕ ಪ್ರಾಮುಖ್ಯದ ದೃಷ್ಟಿಯಿಂದ ತುಂಬ ಗಮನಾರ್ಹವಾದುದು. ಇಲ್ಲಿ ಹೈಹಯ, ಪಶುಕ, ಅಹಿಚ್ಛತ್ರ ಇತ್ಯಾದಿ ದೇಶವಾಚಕಗಳ ವಿಶ್ಲೇಷಣೆ ನಡೆದಿದೆ. ಈಗಿನ ಉತ್ತರ ಕನ್ನಡ ಜಿಲ್ಲೆಯ ಹೈಗದ ಸ್ಥಾನಿಕ ಇತಿಹಾಸ ಕುರಿತ ಹಾಗೆ ಈ ಲೇಖನ ಪ್ರಶಸ್ತವಾದ್ದು. ಈ ಪ್ರದೇಶದಲ್ಲಿ ಅನಾರ್ಯರಾದ ನಾಗರು ಹಾಗೂ ಅನಾರ್ಯರೋ ಆರ್ಯರೋ ಆದ ಗರುಡರು ಎಂಬ ಜನಾಂಗದವರು ವಾಸಿಸುತ್ತಿದ್ದರು. ವಿದ್ಯಾಧರ ವಂಶದ ಆರ್ಯ ಜೀಮೂತವಾಹನ ಇವರ ನಡುವಣ ಜಗಳವನ್ನು ಪರಿಹರಿಸಿದನು– ಎಂಬುದನ್ನಿಲ್ಲಿ ವಿವರಿಸಿದೆ. ಪ್ರಾಸಂಗಿಕವಾಗಿ ಉತ್ತರಾಪಥದ ಅಹಿಚ್ಛತ್ರದಿಂದ ಮಯೂರಶರ್ಮನು ಬ್ರಾಹ್ಮಣ ಮನೆತನಗಳನ್ನು ತಂದನೆಂಬುದರ ಪ್ರಸ್ತಾಪವನ್ನು ಎತ್ತಿ, ಅದು ಹೇಗಿರಬೇಕಾಗಿಲ್ಲ, ಹಲವು ಶತಮಾನಗಳ ಹಿಂದೆಯೇ ಕುಂತಳದ ಬನವಾಸಿಯಲ್ಲಿಯೇ ಅಲ್ಲದೆ ಇಡಿಯ ದಕ್ಷಿಣಾಪಥದಲ್ಲಿಯೇ ಬ್ರಾಹ್ಮಣ ಬಾಹುಳ್ಯವಿದ್ದಿತೆನ್ನುವುದನ್ನು ಸಮರ್ಥವಾಗಿ ಸಾಧಿಸಿದ್ದಾರೆ.

ಈಗ ಪುನ್ನಾಡರ ಬಗ್ಗೆ ನೋಡೋಣ. Ruler of Punnata ಎಂಬ ಒಂದು ಲೇಖನದಲ್ಲಿ[೨೦] ಪೈಗಳು ಈ ಪುನ್ನಾಟದೊರೆಗಳ ವಂಶಾನುಕ್ರಮಣಿಯನ್ನು ಸವಿಸ್ತರವಾಗಿ ಚರ್ಚಿಸಿದ್ದಾರೆ. ಕದಂಬರ ಆಳಿಕೆಗೊಳಪಟ್ಟು, ಬಳಿಕ ಗಂಗರಾಜ್ಯದೊಂದಿಗೆ ಸೇರಿಹೋದ ಈ ರಾಜಮನೆತನದ ಬಗ್ಗೆ ಮೊದಲ ವಿಸ್ತಾರವಾದ ಹಾಗೂ ಪ್ರತ್ಯೇಕವಾದ ಚರ್ಚೆಯನ್ನು ಕೈಕೊಂಡವರು ಪೈ ಅವರೇ ಇರಬೇಕು. ಪುನ್ನಾಟ ರಾಜ್ಯ, ಅದರ ಸೀಮೆ, ಅರಸರು, ಅವರ ವಂಶಾನುಕ್ರಮಣಿ, ಅನ್ಯ ಅರಸು ಮನೆತನಗಳೊಂದಿಗೆ ಅವರ ಸಂಬಂಧ ಇತ್ಯಾದಿಗಳನ್ನು ಇಲ್ಲಿ ವಿಸ್ತಾರವಾಗಿ ಕುರಿತಿದೆ. ವಿಚಾರಕ್ಕೆ

ಮುಖ್ಯವಾಗಿ ಮಾಂಬಳ್ಳಿ, ಬಸವನಪುರ, ಮತ್ತು ಕೊಮರಲಿಂಗ ಶಾಸನಗಳನ್ನು ಆಧರಿಸಿದೆ. ವಂಶಾವಳಿಯ ವಿವರಗಳೂ ತಲಕಾಡು ಗಂಗರು, ಕದಂಬರು ಮತ್ತು ಪಲ್ಲವರೊಂದಿಗೆ ಘಟಿಸಿದ ವೈವಾಹಿಕ ಮತ್ತು ರಾಜ ನೈತಿಕ ಸಂಬಂಧಗಳೂ ಗಾಢ ವಾಗಿ ಚರ್ಚಿತವಾದ ಮೇಲೆ, ಸಂಭಾವ್ಯವೆಂದು ತೋರಿದ ಮನೆತನದ ವಂಶಾನು ಕ್ರಮಣಿಯನ್ನು ರಚಿಸಿಕೊಟ್ಟಿದೆ. ಪೈಗಳ ಅಭಿಪ್ರಾಯದಂತೆ ಮಿಕ, ತಾಮ್ರಕಶ್ಯಪ ರಾಜಾದಿತ್ಯರಿಂದ ತೊಡಗಿ ರವಿದತ್ತನವರೆಗೆ ಸಾಗುವ ಈ ಮನೆತನದ ವಂಶಾನು, ಕ್ರಮಣಿಯಲ್ಲಿ ತೇದಿ ಗುರುತಿಸಲು ಸಾಧ್ಯವಾದ ವಿಷ್ಣುದಾಸನಿಂದ ರವಿದತ್ತನವರೆಗೆ ೮ ಮಂದಿ ಅರಸರು ಕ್ರಿ. ಶ. ೩೪೦ ರಿಂದ ೪೯೫ರ ವರೆಗೆ ರಾಜ್ಯವಾಳಿದರೆಂದು ತಿಳಿಯ ಬೇಕಾಗುತ್ತದೆ. ಪುನ್ನಾಟ ರಾಜ್ಯ ಗಂಗರಾಜ್ಯದೊಳಗೆ ಸೇರಿಸಲ್ಪಟ್ಟದ್ದು ಸು. ೫೦೦ ರಲ್ಲಿ ಎಂದು ಕೆಲವರು ತಿಳಿದಿರುವುದಕ್ಕೆ ಇದು ಹೊಂದಿಕೊಳ್ಳುತ್ತದೆ.[೨೧] ಆದರೆ ಈ ವಿಷಯದಲ್ಲಿ ಮತಭೇದ ವ್ಯಕ್ತವಾಗಿದೆ. ಈ ಮನೆತನದ ಅರಸರ ಬಗ್ಗೆ ಈಚೆಗೆ ಪ್ರತ್ಯೇಕವಾಗಿ ಬರೆದಿರುವ ಡಾ. ಬಿ. ಆರ್. ಗೋಪಾಲ್ ಅವರು ಕೊಮರಲಿಂಗಂ ತಾಮ್ರಶಾಸನದ ಪ್ರಾಮಾಣಿಕತೆಯನ್ನು ಪ್ರಶ್ನಿಸಿರುವ ಫ್ಲೀಟ್ ಅವರ ಅಭಿಪ್ರಾಯದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತ, ಬಸವನಪುರ ಶಾಸನದ ವಿಷಯವೂ ಹೀಗೆಯೇ ಎಂದು ಅನುಮಾನಿಸಿದ್ದಾರೆ. ಪೈಗಳು ಗೊತ್ತುಮಾಡಿರುವ ಕಾಲಾನುಕ್ರಮಣಿಯನ್ನು ಒಪ್ಪಲು ಸಾಧ್ಯವಾಗದೆಂದು ಅವರ ಗ್ರಹಿಕೆ. ಪುನ್ನಾಟರ ಮೇಲಿನ ಮೂರೂ ಶಾಸನಗಳ ಕಾಲ ಲಿಪಿ ದೃಷ್ಟಿಯಿಂದಲೂ ಇತರ ಕಾರಣಗಳಿಂದಲೂ ೬ನೆಯ ಶತಮಾನದ ಮಧ್ಯಭಾಗದಿಂದ ೯ನೆಯ ಶತಮಾನದ ಆದಿಭಾಗದವರೆಗೆ ಬೀಳುವುದೆಂದೂ ತೇದಿ ಗುರುತಿಸಬಹುದಾದ ಈ ಮನೆತನದ ಅರಸರ ಆಳಿಕೆಯ ಕಾಲವನ್ನು ಕ್ರಿ. ಶ. ೪೦೫–೫೫೦ರ ನಡುವೆ ಎಂಬುದಾಗಿ ಗುರುತಿಸಬೇಕಾಗುವುದೆಂದೂ ಅವರು ಭಾವಿಸಿದ್ದಾರೆ. ಆದರೆ ವಂಶಾನುಕ್ರಮಣಿಯು ಮಟ್ಟಿಗೆ ಅಲ್ಪ ವ್ಯತ್ಯಾಸದ ಹೊರತು ಪರಸ್ಪರವಾಗಿ ಸಾಮ್ಯವೇ ಇದೆ ಎನ್ನುವುದನ್ನು ಗಮನಿಸಬೇಕು.[೨೨] ಈ ಸಂಬಂಧದಲ್ಲಿ ಇನ್ನು ವಿವಿಧ ವಾದ ಅಭಿಪ್ರಾಯಗಳು ವ್ಯಕ್ತವಾಗಿರುವುದರಿಂದ ನಿರ್ಣಯ ಸದ್ಯದಲ್ಲಿ ಸಾಧ್ಯವಾಗ ಲಾರದೇನೊ ?

೩

ಕರ್ನಾಟಕದ ಪ್ರಮುಖ ರಾಜಮನೆತನಗಳಲ್ಲಿ ಅನಂತರದ ಘಟ್ಟ ಬನವಾಸಿಯ ಕದಂಬರದು. ಈ ಮನೆತನದ ವಂಶಾನುಕ್ರಮಣಿ ಕಾಲಾನುಕ್ರಮಣಿಗಳ ಅಧ್ಯಯನ ದಲ್ಲಿ ಗೋವಿಂದ ಪೈ ತಮ್ಮ ಎಷ್ಟೋ ಅಮೂಲ್ಯವಾದ ಸಮಯವನ್ನು ವಿನಿಯೋಗಿ ಸಿರಬೇಕೆಂದು ಈ ಸಂಬಂಧದ ಅವರ ಬರೆಹಗಳ ಸಂಖ್ಯೆ ವಿಸ್ತಾರಗಳನ್ನು ಗಮನಿಸಿ ದಾಗ ತಿಳಿಯುತ್ತದೆ. ಸರಿಸುಮಾರು ಒಂದೇ ಅವಧಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್

ಭಾಷೆಗಳಲ್ಲಿ ಈ ಬಗ್ಗೆ ತಮ್ಮ ಸಂಶೋಧನ ಪ್ರಬಂಧಗಳನ್ನು ಅವರು ಪ್ರಕಟಿಸಿದ್ದು ಕಾಣುತ್ತದೆ.

"ತಾಳಗುಂದದ ಸ್ತಂಭಲೇಖ ಅಥವಾ ಕದಂಬರ ಮೊತ್ತಮೊದಲು" ಎಂಬ ಒಂದು ಬರೆಹದಲ್ಲಿ ಕದಂಬ ಕಾಕುಸ್ಥವರ್ಮನ ತಾಳಗುಂದದ ಶಾಸನವನ್ನು ಪಾಠ ಮತ್ತು ಅರ್ಥಗಳ ದೃಷ್ಟಿಯಿಂದ ಪರಿಶೀಲಿಸಿ, ಅಲ್ಲಿ ತಿಳಿದುಬರುವಂತೆ ಆ ವಂಶದ ಆರಂಭಕಾಲವನ್ನು ಗುರುತಿಸುವ ಪ್ರಯತ್ನವನ್ನು ಪೈಗಳು ಮಾಡಿದ್ದಾರೆ. ಮಯೂರ ಶರ್ಮನು ಪಲ್ಲವ ರಾಜಧಾನಿ ಕಂಚಿಗೆ ಅಧ್ಯಯನಕ್ಕೆಂದು ತೆರಳಿದಾಗ, ಅಲ್ಲಿ ಆಗಿನ ಪಲ್ಲವ ರಾಜನು ಮಾಡುತ್ತಿದ್ದ ಅಶ್ವಮೇಧಯಾಗದ ಸಂಗರ್ಭದಲ್ಲಿ ಮನಸ್ತಾಪ ಬಂದು, ಸ್ವಶಕ್ತಿಯಿಂದ ಮುಂದೆ ಪಲ್ಲವರನ್ನು ಪ್ರತಿಭಟಿಸಿ ರಾಜ್ಯವನ್ನು ಕಟ್ಟಿದನೆಂಬ ಐತಿಹಾಸಿಕ ಸಂಗತಿಯನ್ನು 'ಅಶ್ವಸಂಸ್ಥಾ' ಎಂದರೆ 'ಅಶ್ವಮೇಧ' ಎಂದು ಸಾಧಾರ ವಾಗಿ, ಸರಿಯಾಗಿ ಅರ್ಥೈಸುವುದರ ಮೂಲಕ ಮೊದಲ ಸಲ ವಿಶದಪಡಿಸಿದವರು ಪ್ರಾಯಶಃ ಪೈ ಅವರೇ. ಮುಂದೆ ಟಿ. ವಿ. ಮಹಾಲಿಂಗಂ ಹಾಗೂ ಡಿ. ಸಿ. ಸರ್ಕಾರ್ ಅವರು ಈ ಅರ್ಥವನ್ನೇ ಬಲುಮಟ್ಟಿಗೆ ಒಪ್ಪಿದ್ದಾರೆ.[೨೪] ರೈಸ್ ಸೂಚಿಸಿರುವ Pallava Horse (or stables) ಎಂಬ ಅರ್ಥವನ್ನು ಪೈ ಸಮರ್ಥವಾಗಿ ವಾದಿಸಿ ನಿರಾಕರಿಸಿದ್ದು, a horse man ಎಂಬುದಾಗಿ ಕೀಲ್ ಹಾರ್ನ್ ಕೊಡುವ ಅರ್ಥವೂ ಇದರಿಂದ ಅಗ್ರಾಹ್ಯವೆಂದು ತಿಳಿಯುವುದು ಸಾಧ್ಯವಾಯಿತು.

ಪೈಗಳ ಇನ್ನೊಂದು ಮುಖ್ಯ ತಿದ್ದುಪಡಿ 'ಶ್ರೀ ಪರ್ವ್ವತಾಂತರ ಸಂಶ್ರಿತಾವ್' ಎಂಬುದನ್ನು 'ತ್ರಿಪರ್ವ್ವತಾಂತರಸಂಶ್ರಿತಾವ್' ಎಂಬುದಾಗಿ ಗ್ರಹಿಸಿರುವುದೇ ಆಗಿದೆ. ಅವರ ಪ್ರಕಾರ ಈ ತ್ರಿಪರ್ವತವೆಂಬುದು ಈಗಿನ ಚಿತ್ರದುರ್ಗ ಜಿಲ್ಲೆಯ ಉಚ್ಚಂಗಿ ಇದಕ್ಕೆ ಅನುಗುಣವಾಗಿ ಅವರು ಪಲ್ಲವರಿಂದ ಮಯೂರಶರ್ಮನಿಗೆ ಪಟ್ಟವಾದುದು ಬನವಾಸಿಯಲ್ಲಿ ಅಲ್ಲ, ಉಚ್ಚಂಗಿಯಲ್ಲಿಯೇ ಎಂದು ನಿರ್ಣಯಿಸಿದ್ದಾರೆ. ಚಂದ್ರ ವಳ್ಳಿಯ ಆತನ ಶಾಸನ ವಿವರಕ್ಕೆ ಇದು ಹೊಂದುವುದೆಂದು ಅವರ ತರ್ಕ. ಆದರೆ ಶ್ರೀಪರ್ವತವೆಂದರೆ ಪ್ರಖ್ಯಾತ ಶ್ರೀಶೈಲವೆಂದೇ ಸಾಮಾನ್ಯ ಗ್ರಹಿಕೆ. ಇದು ಕರ್ನಾಟಕದ ಮಲೆನಾಡು ಸೀಮೆಯಾಗಿದ್ದು ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯ ಸಿಸಿಲ ಇಲ್ಲವೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಇರಬಹುದು ಎಂದು ಈಚೆಗೆ ರಮೇಶ್ ಭಾವಿಸಿ ದ್ದಾರೆ.[೨೫]

ಮತ್ತೊಂದು ತಿದ್ದುಪಡಿ ೨೩ನೆಯ ಪದ್ಯದಲ್ಲಿಯ 'ಕಙ್ಗವರ್ಮ' ಎಂಬ ಹೆಸರನ್ನು ಕುರಿತದ್ದು. ಇದನ್ನು ಪೈಗಳು 'ಸ್ಕಂದವರ್ಮ' ಎಂದು ತಿದ್ದಬೇಕೆಂದಿದ್ದಾರೆ. ಕಙ್ಗ ನಿರರ್ಥಕ ಶಬ್ದವೆಂದು ಅವರ ಭಾವನೆ. ಹೀಗೆ ಭಾವಿಸಿ, ಮಯೂರ ಶರ್ಮನ ಮಗ 'ಶಿವಸ್ಕಂದವರ್ಮ' ಎಂಬ ಹೆಸರಿನ ಸಂಕ್ಷಿಪ್ತರೂಪವೇ ಸ್ಕಂದವರ್ಮನೆಂದು ಅವರು ವಾದಿಸಿದ್ದಾರೆ. ಆದರೆ ಇದೂ ಸರ್ಕಾರ್ ಮುಂತಾದವರಿಂದ ಮಾನ್ಯವಾಗಿಲ್ಲ. ಅಲ್ಲದೆ

ಈಚೆಗೆ ದೊರೆತಿರುವ ರವಿವರ್ಮನ ಗುಡ್ನಾಪುರ ಶಾಸನದಲ್ಲಿ 'ಕು (ಕ) ಜ್ಜ ವರ್ಮ್ಮ' ಎಂದೇ ಇರುವುದರಿಂದ[೨೭] ಪೈಗಳ ತಿದ್ದುಪಡಿ ಅನಾವಶ್ಯಕವೆನ್ನಬಹುದು.

ತಾಳಗುಂದ ಶಾಸನವನ್ನು ಶಾಂತಿವರ್ಮ ಹಾಕಿಸಿದ್ದು ಎಂದು ಪೈಗಳು ಹೇಳಿರುವುದು ಸರಿಯಾಗಿಯೇ ಇದೆ. ಶಾಸನರಚನೆಯ ಕಾಲಕ್ಕೆ ಕಾಕುಸ್ಥವರ್ಮ ಮಗನಿಗೆ ರಾಜ್ಯವೊಪ್ಪಿಸಿ ವಿಶ್ರಾಂತಿಯಲ್ಲಿದ್ದನೆಂದೂ ಅವನ ಮಗ ಶಾಂತಿವರ್ಮನು ತಂದೆಯ ಸಮ್ಮುಖದಲ್ಲಿಯೇ ಅವನ ಪರೋಪಕಾರದ ಕಾರ್ಯವನ್ನು ದಾಖಲಿಸಿದನೆಂದೂ ಆ ಕಾರಣ ಶಾಸನ ಕಾಕುಸ್ಥವರ್ಮ–ಶಾಂತಿವರ್ಮರ ಕಾಲದ್ದೆನ್ನುವುದು ಉಚಿತವೆಂದೂ ಜಿ. ಎಸ್. ಗಾಯಿಯವರ ಗ್ರಹಿಕೆಯಾಗಿದೆ.[೨೮]

ಶಾಂತಿವರ್ಮನನ್ನು ಶಾಸನದಲ್ಲಿ "ಪಟ್ಟತ್ರಯಾರ್ಪ್ಪಣ ವಿರಾಜಿತ ಚಾರು ಮೂರ್ತೇಃ" (ಪ. ೩೪) ಎಂದಿದ್ದು, ಪೈಗಳು ಪಟ್ಟತ್ರಯವೆಂದರೆ ಕದಂಬರ ಮೂರು ರಾಜಧಾನಿಗಳಾದ ಬನವಾಸಿ ಪಲಾಶಿಕಾ ತ್ರಿಪರ್ವತ(ಉಚ್ಚಂಗಿ) ಎಂಬ ಈ ಮೂರು ಸ್ಥಳಗಳ ಪಟ್ಟಗಳು ಎಂಬುದಾಗಿ ಅರ್ಥಮಾಡಿದ್ದಾರೆ. ಇದಕ್ಕೆ ಅವರು ಕೊಟ್ಟಿರುವ ಕಾರಣಗಳು ತೃಪ್ತಿಕರವಾಗಿಲ್ಲ. ನನಗೆ ತಿಳಿದ ಮಟ್ಟಿಗೆ ಪೈಗಳ ಹೊರತು ಈ ಬಗ್ಗೆ ಇತರರು ಯಾರೂ ವಿಶೇಷವಾಗಿ ಯೋಚಿಸಿದಂತಿಲ್ಲ. ಪಟ್ಟಭಾಜ್ ವರ್ಗದ ರಾಜರು ಧರಿಸುವ ಪತ್ರ ಪಟ್ಟ, ರತ್ನಪಟ್ಟ ಮತ್ತು ಪುಷ್ಪ ಪಟ್ಟ ಎಂಬವನ್ನೇ ಪಟ್ಟತ್ರಯವೆಂದು ಇಲ್ಲಿ ಹೇಳಿರಬಹುದು ಎಂದು ನನ್ನ ಭಾವನೆ.[೨೯]

ಮುಂದೆ ಪೈಗಳು ಕದಂಬವಂಶದ ಕಾಲ ನಿರ್ಣಯಕ್ಕೆ ತೊಡಗಿದ್ದಾರೆ. ಪಲ್ಲವರ ಕುಮಾರ ವಿಷ್ಣುವೆಂಬ ಶಿವಸ್ಕಂದವರ್ಮ (ಸು. ೧೬೭–೨೦೦) ಮಯೂರಶರ್ಮನ ಸಮಕಾಲೀನನೆಂದು ಅವರು ಗ್ರಹಿಸಿದ್ದಾರೆ; ಮೊದಲು ಕಂಚಿಯಲ್ಲಿ ಈತನೊಂದಿಗೆ ವೈಮನಸ್ಯವಾದರೂ, ಬಳಿಕ ಅವನಿಂದಲೇ ಪಟ್ಟಬಂಧವಾಗಿ, ವೈಮನಸ್ಯ ತೊರೆದು ಮಗನಿಗೆ ಅವನ ಹೆಸರನ್ನೇ ಇಟ್ಟನೆಂದು ಅವರ ಮುಂದಿನ ನಿರೂಪಣೆ. ಆದರೆ ಸರ್ಕಾರ್ ಅವರು ಸಮಕಾಲೀನ ಪಲ್ಲವ ದೊರೆ ಶಿವಸ್ಕಂದವರ್ಮನೇ ಆದರೂ ಈತ ಕ್ರಿ. ಶ. ೪ನೆಯ ಶ. ದ ಆದಿಭಾಗದಲ್ಲಿ ಆಳುತ್ತಿದ್ದ, ಹಿರೇಹಡಗಲಿ ತಾಮ್ರಶಾಸನದಲ್ಲಿ ಉಕ್ತನಾದ ದೊರೆಯೆಂದು ಸಾಧಾರಣವಾಗಿ ತೋರಿಸಿದ್ದಾರೆ.[೩೦] ಅನಾವಶ್ಯಕವಾಗಿ ಪೈಗಳು ಪೆನುಗೊಂಡೆ ತಾಮ್ರಪಟಗಳ ಪ್ರಸ್ತಾಪವನ್ನು ಇಲ್ಲಿ ತಂದಿರುವುದನ್ನು ಒಪ್ಪದೆ ಬಿಟ್ಟರೂ, ಕದಂಬ ಮೂಲದ ಐತಿಹ್ಯಗಳನ್ನೆಲ್ಲಾ ಅವರು ದೃಢವಾಗಿ ನಿರಾಕರಿಸಿರುವುದನ್ನು ನಾವು ಮೆಚ್ಚಬಹುದಾಗಿದೆ.

ಪೈಗಳ ಪ್ರಕಾರ ಪೀಳಿಗೆಯ ವ್ಯಾಪ್ತಿ ಮಯೂರಶರ್ಮನಿಂದ ಇಮ್ಮಡಿ ಕೃಷ್ಣವರ್ಮನವರೆಗೆ ಸು. ೨ ರಿಂದ ೫ನೆಯ ಶ. ದ ಅವಧಿಯದು; ತಾಳಗುಂದ ಶಾಸನದ ಕಾಲ ಸು. ೩೦೦. ಆದರೆ ಇತಿಹಾಸಕಾರ ಸಾಮಾನ್ಯಾಭಿಪ್ರಾಯದ ಪ್ರಕಾರ ಸು.

೪ ರಿಂದ ೬ನೆಯ ಶ.ದ. ಅವಧಿಯದು; ಹಾಗೂ ಶಾಂತಿವರ್ಮನ ಆಳಿಕೆಯ ಕಾಲವಾದ ಸು. ೪೩೦–೫೫ರೊಳಗೆ.[೨೧]

ಬೇರೊಂದು ಇಂಗ್ಲೀಷ್ ಲೇಖನದಲ್ಲಿಯೂ ಈ ಪೀಳಿಗೆಯ ಬಗೆಗೆ ಪೈಗಳು ಬರೆದಿದ್ದಾರೆ.[೨೨] ಕನ್ನಡದ ಲೇಖನದ ಸಂಗತಿಗಳೇ ಬಹುಪಾಲು ಇಲ್ಲಿ ಆವೃತ್ತಿಗೊಂಡಿವೆ. ಈ ಸುದೀರ್ಘ ಲೇಖನದಲ್ಲಿ ವಿವಿಧ ಸ್ಥಳಗಳ ಶಾಸನಗಳಲ್ಲಿ ಹಾಗೂ ತಾಮ್ರ ಪಟಗಳಲ್ಲಿ ತಿಳಿದು ಬರುವಂತೆ ಕದಂಬರ ವಂಶಾನುಕ್ರಮಣಿಯನ್ನು ಪ್ರತ್ಯೇಕವಾಗಿ ಎತ್ತಿಕೊಟ್ಟು, ಪರಸ್ಪರವಾಗಿ ತುಲನೆಯನ್ನು ಮಾಡಿದೆ. ಬಳಿಕ ಇತರ ಆಧಾರಗಳನ್ನು ಗಮನಿಸಿ ಸಮಗ್ರವಾದೊಂದು ವಂಶಾನುಕ್ರಮಣಿಯನ್ನು ರಚಿಸಿದೆ. ಈಗಾಗಲೇ ಫ್ಲೀಟ್, ಮೊರೇಸ್, ಎನ್. ಲಕ್ಷ್ಮೀನಾರಾಯಣರಾವ್, ಪಂಚಮುಖಿ, ಪಿ. ಬಿ. ದೇಸಾಯಿ ವಿಭಿನ್ನ ವಂಶಪಟ್ಟಿಕೆಗಳನ್ನು ರಚಿಸಿದ್ದು, ಇವುಗಳ ನಡುವೆ ಅಲ್ಲಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ.[೨೩] ಕಾಲಾನುಕ್ರಮಣಿಯಲ್ಲಿಯೂ ಹೀಗೆಯೇ. ಆದರೆ ಕದಂಬರು ಕರ್ನಾಟಕದಲ್ಲಿ ಕ್ರಿ. ಶ. ಸು. ೪ ರಿಂದ ೬ನೆಯ ಶ.ದವರೆಗೆ ಆಳಿದರೆಂಬ ಸಾಮಾನ್ಯ ಕಾಲಾನುಕ್ರಮಣಿಯೂ ಇತ್ತೀಚೆಯ ಇತಿಹಾಸಕಾರರು ಗೊತ್ತು ಮಾಡಿರುವ ವಂಶಾನುಕ್ರಮಣಿಯೂ ಸಾಮಾನ್ಯವಾಗಿ, ಹಾಗೂ ಸೂಕ್ತವಾಗಿ ಅಂಗೀಕೃತವಾಗಿರುವುದರಿಂದ ಪೈಗಳ ನಿರೂಪಣೆ ನಿರ್ಣಯಗಳನ್ನು ಕೈಬಿಡಬೇಕಾಗುತ್ತದೆ. ಪೈಗಳೇನೊ ಎನ್. ಲಕ್ಷ್ಮೀನಾರಾಯಣರಾಯರು–ಪಂಚಮುಖಿಯವರ 'ಕರ್ನಾಟಕದ ಅರಸುಮನೆತನಗಳು' ಪುಸ್ತಕವನ್ನು ವಿಮರ್ಶಿಸುವಾಗ ಕದಂಬ ಮತ್ತು ಗಂಗ ಮನೆತನಗಳ ಬಗ್ಗೆ ತಾವು ಮಾಡಿರುವ ಹಿಂದಿನ ವಂಶಾನುಕ್ರಮಣಿ–ಕಾಲಾನುಕ್ರಮಣಿಗಳನ್ನೇ ಮತ್ತೆ ಸಮರ್ಥಿಸಿಕೊಂಡಿದ್ದಾರೆ; ತಮ್ಮ ಹಳೆಯ ಲೇಖನಗಳ ತಡೆಗೆ ಓದುಗರ ಗಮನ ಸೆಳೆದಿದ್ದಾರೆ.[೨೪] ಇಲ್ಲಿಯೂ ಅಣಜಿಯ ಶಿಲಾಶಾಸನದ ನಣಕ್ಕಾಸ ಪಲ್ಲವರಾಜನ ಹೆಸರನ್ನು ಅವಿದ್ಯಮಾನನಾದೊಬ್ಬ ಪಲ್ಲವರಾಜನ ಹೆಸರು ಎಂದು ಕಾರಣ ಹೇಳಿ ತಿರಸ್ಕರಿಸಿ, ಮೂಲಪಾಠವನ್ನು 'ನ ನಿಷ್ಕಾಸಿತ:' ಎಂದು ಅವರು ತಿದ್ದಿದ್ದಾರೆ. ಆದರೆ ಇದು ಸರಿಯಲ್ಲ. ಪೈಗಳು ಚಂದ್ರವಳ್ಳಿಯ ಪ್ರಾಕೃತ ಶಾಸನವನ್ನು ಇತರರಿಗಿಂತ ಭಿನ್ನವಾಗಿ ಓದಿ ಅರ್ಥೈಸಿರುವುದು ಗಮನಾರ್ಹವಾದ್ದು. ಇದು ಇತಿಹಾಸಕಾರರ ಗಮನವನ್ನು ಏಕೆ ಸೆಳೆದಿಲ್ಲವೋ ತಿಳಿಯದು.

ಪೈಗಳು ಗುಪ್ತಶಕೆ ಕ್ರಿ. ಶ. ೨೭೨–೭೩ರಲ್ಲಿ ಆರಂಭಿಸಿತೆಂದು ತಾವು ಗೊತ್ತು ಮಾಡಿಕೊಂಡ ಕಾರಣ, ಸಂಬಂಧಿಸಿದ ರಾಜವಂಶಗಳ ಕಾಲವನ್ನು ಅದರೊಂದಿಗೆ ಹೊಂದಿಸಬೇಕಾಗಿ ಬಂತು ಎಂಬುದಾಗಿ ಬಿ. ಆರ್. ಗೋಪಾಲ್ ಅಭಿಪ್ರಾಯಪಟ್ಟಿದ್ದಾರೆ.[೨೫] ಆದರೆ ಇದೊಂದೇ ಕಾರಣಕ್ಕಾಗಿ ಅವರು ಕದಂಬ ಹಾಗೂ ಪಲ್ಲವ ವಂಶಗಳ ಪೀಳಿಗೆ ಕಾಲಮಾನಗಳನ್ನು ಹಾಗೆ ನಿರ್ಧರಿಸಿದರು ಎಂದು ವಾದಿಸುವುದು ಸರಿಯಾದೀತೇ ? ಸಾಕ್ಷ್ಯಗಳಿಗೆ ಸಲ್ಲುವ ಬೆಲೆಯನ್ನು ಪೈಗಳಾದರೂ ಕೊಡದಿರುವುದು ಸಾಧ್ಯವೇ ?

೪

ಈಗ ಗಂಗರ ಬಗೆಗೆ ಪೈಗಳ ಶೋಧಗಳನ್ನು ಗಮನಿಸೋಣ. Chronology of the Early gangas ಎಂಬ ಲೇಖನದಲ್ಲಿ[೩೬] ಸವಿಸ್ತರವಾಗಿ ಈ ಮನೆತನದ ಪೀಳಿಗೆ ಕಾಲಮಾನಗಳನ್ನು ಪೈಗಳು ಚರ್ಚಿಸಿದ್ದಾರೆ. ಬಹುಸಂಖ್ಯೆಯ ಶಾಸನಾಧಾರಗಳಿಂದ ಕೊಂಗಣಿವರ್ಮನಿಂದ ಶ್ರೀಪುರುಷನವರೆಗೆ ಪೀಳಿಗೆಯನ್ನು ರಚಿಸಿಕೊಟ್ಟಿದ್ದಾರೆ; ಕಾಲಮಾನದ ವ್ಯಾಪ್ತಿಯನ್ನು ಸು. ೨೫೦–೮೩ ರಿಂದ ೭೨೫ (೭೮೭)ರ ವರೆಗೆ ಎಂದು ನಿರ್ಧರಿಸಿದ್ದಾರೆ. ಇಲ್ಲಿಯೂ ಇತರ ಇತಿಹಾಸಕಾರರ ಗೊತ್ತುಪಡಿಗಳೇ ಬೇರೆ. ಪೈಗಳದೇ ಬೇರೆ. ಇತರರಲ್ಲಿ ಪೀಳಿಗೆ ಇನ್ನೂ ವಿಸ್ತಾರವಾದ್ದು, ಕಾಲವ್ಯಾಪ್ತಿ ೪ನೆಯ ಶ.ದ ಮೊದಲ ಪಾದದಿಂದ ೮ನೆಯ ಶ.ದ ಕೊನೆಯ ಪಾದದವರೆಗೆ ಇರುವಂಥದು.[೩೭] ಗಂಗಪೀಳಿಗೆಯ ರಚನೆಯಲ್ಲಿ ಕೃತಕ ಶಾಸನಗಳ ಹಾಗೂ ಶಾಖೆ ಉಪಶಾಖೆಗಳ ತೊಡಕುಗಳು ಬಹಳ ಹೆಚ್ಚು. ಈ ತೊಡಕುಗಳು ಇತಿಹಾಸಕಾರರನ್ನು ಕಂಗೆಡಿಸಿವೆ. ಪೈಗಳೂ ಈ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡಿದ್ದಾರೆ. ಇದರಿಂದಾಗಿ ಅವರು ಹಿಡಿದಿರುವ ಕ್ರಮಗಳು ಸರಿಯಾದ ಫಲಿತಾಂಶಗಳನ್ನು ಪಡೆಯಲಾಗಿಲ್ಲ.

Genealogy and Chronology of the Western gangas[೩೮] ಮತ್ತು ಅದರ ಸಂಕ್ಷಿಪ್ತ ಕನ್ನಡ ರೂಪವಾದ 'ತಲಕಾಡಿನ ಗಂಗರಸರಿಬ್ಬರ ಆಳೊತ್ತುಗಳು' ಎಂಬ[೩೯] ಬರೆಹಗಳಲ್ಲಿ ಇಮ್ಮಡಿ ಬೂತುಗನ ಮಕ್ಕಳ ಕಾಲಾವಧಿಯನ್ನು ಶಾಸನ ಹಾಗೂ ಸಾಹಿತ್ಯಿಕ ಆಧಾರಗಳ ಮೂಲಕ ಗೊತ್ತುಪಡಿಸಲು ಯತ್ನಿಸಿದ್ದಾರೆ. ವಿಶೇಷವಾಗಿ ಮಾರಸಿಂಹ ರಾಚಮಲ್ಲರ ಆಳೊತ್ತುಗಳನ್ನು ಲಕ್ಷಿಸಿದ್ದಾರೆ. ಮಾರಸಿಂಹನು ೯೬೨–೭೩ರ, ರಾಚಮಲ್ಲನು ೯೭೩–೮೬ರ ನಡುವೆ ಆಳಿದರೆಂದೂ ರಾಚಮಲ್ಲನ ಅನಂತರದಲ್ಲಿ. ಇಮ್ಮಡಿ ರಕ್ಕಸಗಂಗನ ಆಳಿಕೆಯ ಅವಧಿಯಲ್ಲಿ ಸು. ೧೦೦೪ರಲ್ಲಿ ಚೋಳರ ಕೈ ಮೇಲಾಗಿ, ಗಂಗರಾಜ ನಷ್ಟವಾಯಿತೆಂದು ಪೈಗಳು ನಿರ್ಣಯಿಸಿದ್ದಾರೆ. ರಕ್ಕಸಗಂಗನೆಂಬ ಹೆಸರಿನ ಚರ್ಚೆಯಲ್ಲಿ ಸ್ವಲ್ಪ ಗೋದಲವಿರುವಂತೆ ತೋರುತ್ತದೆ.

ವಾಸ್ತವವಾಗಿ ಗಂಗರ ವಂಶಾನುಕ್ರಮಣಿ ಕಾಲಾನುಕ್ರಮಣಿಗಳ ರಚನೆ ತುಂಬ ತೊಡಕಿನದು. ಇಮ್ಮಡಿ ಬೂತುಗನ ಮಕ್ಕಳು ಯಾರು ಯಾರು ಮತ್ತು ಅವರ, ಎಷ್ಟು ಮಂದಿ ಎಂಬ ವಿಷಯದಲ್ಲಿಯೇ ಚರಿತ್ರಕಾರರ ನಡುವೆ ವಿವಿಧವಾದ ಅಭಿಪ್ರಾಯಗಳು ಕಂಡುಬರುತ್ತವೆ.[೪೦] ಇವುಗಳಲ್ಲಿ ಪೈಗಳದೂ ಒಂದು. ಅವರು ನಾಗವರ್ಮನ ಪದ್ಯಗಳನ್ನು ಅರ್ಥೈಸುವಾಗ. ಅಲ್ಲಿಯ ಒಂದು ಪದ್ಯದಲ್ಲಿ ಉಕ್ತನಾಗಿರುವ ರಕ್ಕಸಗಂಗನು ಮಾರಸಿಂಹನ ತಮ್ಮ ರಾಚಮಲ್ಲನೇ ಎಂದು ತಿಳಿದಿರುವುದಕ್ಕೆ, ಆತ ಒಬ್ಬ ಸಂಸ್ಕೃತ ಕವಿಯಾಗಿದ್ದಿರಬೇಕು ಎಂದು ಭಾವಿಸಿರುವುದಕ್ಕೆ ಯಾವ ದೃಢವಾದ ಆಧಾರವೂ ಇರುವಂತೆ ತೋರುವುದಿಲ್ಲ. ಗೊಮ್ಮಟ ಪ್ರತಿಷ್ಠಾಕಾಲದ ವಿಷಯದಲ್ಲಿಯೂ ವಿವಿಧಾಭಿಪ್ರಾಯಗಳು ಪ್ರಕಟವಾಗಿವೆ.

'ತಲಕಾಡಿನ ಪಶ್ಚಿಮಗಂಗರ ಕೊನೆಗಾಲ (ಕ್ರಿ. ಶ. ೯೬೨–೧೦೦೪), ಎಂಬುದರಲ್ಲಿ[೪೧] ನಗರ ೩೫ನೆಯ ಶಾಸನದ ವಂಶಾವಳಿ ವಿವರಗಳ ಹಿನ್ನೆಲೆಯಲ್ಲಿ, ಸ್ವಲ್ಪ ವಿಸ್ತಾರದಲ್ಲಿ ಮಾರಸಿಂಹ ರಾಚಮಲ್ಲ ಹಾಗೂ ನೀತಿಮಾರ್ಗ ಗೋವಿಂದರ ಆಳ್ವಿಕೆಯ ಸಮಸ್ಯೆಗಳನ್ನು ಪೈಗಳು ಚರ್ಚಿಸಿದ್ದಾರೆ. ಮಾರಸಿಂಹನು ೯೬೨–೭೩ರ ನಡುವೆ. ರಾಚಮಲ್ಲ ೯೭೩–೮೬ರ ನಡುವೆ. ನೀತಿಮಾರ್ಗ ಗೋವಿಂದರ ೯೮೬–೧೦೦೩ರ ನಡುವೆ. ಕನಿಷ್ಠನಾದ ವಾಸವನ ಮಗ ಇಮ್ಮಡಿ ರಕ್ಕಸಗಂಗನು ೧೦೦೩–೦೪ರಲ್ಲಿ ಆಳಿದರೆಂಬುದು ಅವರ ಪ್ರತಿಪಾದನೆ. ಇದೇ ಲೇಖನದ ಕೆಲಭಾಗ ಈ ಮೊದಲ ಲೇಖನದಲ್ಲಿಯೂ ಬಂದಿದ್ದು. ಅನಂತರದ ಆ ಲೇಖನದಲ್ಲಿ ಹೆಚ್ಚು ವಿಷಯಗಳು ಸೇರ್ಪಡೆಯಾಗಿವೆ.

ಇನ್ನೊಂದು ಬರೆಹ 'ಗಂಗ–II ಮಾಧವನ ಎರಡು ಹೊಸ ಶಾಸನಗಳು' ಎಂಬುದರಲ್ಲಿ ಕೆರೆಗಾಲೂರು ಮತ್ತು ಕೂಡಲೂರು ತಾಮ್ರಶಾಸನಗಳ ವಸ್ತುವಿಮರ್ಶೆಯಿದೆ. ಕೂಡಲೂರು ಪೆನುಕೊಂಡಗಳ ತಾಮ್ರಪಟ್ಟಗಳಲ್ಲಿಯೂ ಕೆರೆಗಾಲೂರು ಮುಂತಾದೆಡೆಯ ತಾಮ್ರಪಟಗಳಲ್ಲಿಯೂ ಗಂಗ ವಂಶಾವಳಿಯ ನಿರೂಪಣೆಗಳಲ್ಲಿ ಕೊಂಚ ತಾರತಮ್ಯವಿರುವಂತೆ ಮೊದಲ ನೋಟಕ್ಕೆ ತೋರಬಹುದಾದರೂ ಅವುಗಳ ನಡುವೆ ಯಥಾರ್ಥವಾದ ವ್ಯತ್ಯಾಸವೇನೂ ಇಲ್ಲ, ಅವು ಒಂದೇ ಪೀಳಿಗೆಯನ್ನೇ ನಿರೂಪಿಸುತ್ತವೆಯಲ್ಲದೆ ವಿಭಿನ್ನ ಶಾಖೆಗಳನ್ನಲ್ಲ ಎನ್ನುವುದು ಪೈಗಳ ವಾದದ ಸಾರಾಂಶ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯ ಸಮರ್ಥನೆಗೆ ಜೈನ 'ಲೋಕವಿಭಾಗ' ಮುಂತಾದ ಗ್ರಂಥಸಾಕ್ಷ್ಯಗಳನ್ನೂ ತಾವು ನಿರ್ಧರಿಸಿರುವ ಪಲ್ಲವ ಹಾಗೂ ಕದಂಬ ವಂಶಾನುಕ್ರಮಣಿಗಳು ಬೆಂಬಲಿಸುವ ಸಾಕ್ಷ್ಯಗಳನ್ನೂ ಅವರು ಬಳಸಿದ್ದಾರೆ. ಆದರೆ ಈ ವಿಷಯದಲ್ಲಿ ಅಭಿಪ್ರಾಯಭೇದಗಳು ನಿಚ್ಚಳವಾಗಿವೆ, ಹೇರಳವಾಗಿವೆ. ಜೆ. ಡುಬ್ರಯಿಲ್ ತಮ್ಮ Ancient history of the Dekhan ಎಂಬ ಗ್ರಂಥದಲ್ಲಿ ಗಂಗ ವಂಶಾನುಕ್ರಮಣಿಯ ಅಸಾಂಗತ್ಯಗಳನ್ನು ಗಮನಿಸಿ ತಲಕಾಡು ಗಂಗರ ಹಾಗೂ ಪೆನುಕೊಂಡ ತಾಮ್ರ ಶಾಸನದ ಪರುವಿಯ ಗಂಗರ ಎರಡು ಶಾಖೆಗಳಿರಬೇಕೆಂದು ಮೊದಲು ಸೂಚಿಸಿದ ಮೇಲೆ, ಆರ್. ನರಸಿಂಹಾಚಾರ್, ಡಾ. ಶಾಮಶಾಸ್ತ್ರಿ. ಡಾ. ಎಂ. ಎಚ್. ಕೃಷ್ಣ, ಡಾ. ಎಸ್. ಶ್ರೀಕಂಠಶಾಸ್ತ್ರಿ ಈ ಮೊದಲಾದವರು ಗಂಗ ಶಾಖೆಗಳ ಬಗ್ಗೆ ವಿವರವಾಗಿ ವಿಮರ್ಶೆಮಾಡಿದ್ದಾರೆ.[೪೨] ಇದರ ವಿವರಗಳನ್ನೆಲ್ಲ ಇಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ. ಡಾ. ಶಾಮಶಾಸ್ತ್ರಿಗಳೂ ಡಾ. ಶ್ರೀಕಂಠಶಾಸ್ತ್ರಿಗಳೂ ತಲಕಾಡು ಗಂಗಶಾಖೆಯಿಂದ ಬೇರೆಯಾಗಿ. ಎರಡರ ಮೇಲ್ಪಟ್ಟು ಮುಖ್ಯಶಾಖೆ ಉಪಶಾಖೆಗಳನ್ನು ಗುರುತಿಸಬಹುದೆಂದು ತಿಳಿಸಿದ್ದಾರೆ. ಡಾ. ಎಂ. ಎಚ್. ಕೃಷ್ಣ ಈ ಸಂಬಂಧದಲ್ಲಿ ಕೆಲವು ಸಿದ್ಧಾಂತಗಳನ್ನೂ ಅವುಗಳ ದೌರ್ಬಲ್ಯಗಳನ್ನು ನಿರೂಪಿಸಿ "೧ನೆಯ ಮಾಧವನ ಮೃತಿಯಾದ ಮೇಲೆ ಆತನ ಮಕ್ಕಳು ಪರಿವರ್ಮನಿಗೆ ತಲಕಾಡು.

ಕೃಷ್ಣವರ್ಮನಿಗೆ ಕೈವಾರ, ಆರ್ಯವರ್ಮನಿಗೆ ಪರುವಿ ವಿಷಯ ಸೇರಿರಬೇಕು. ಪಲ್ಲವರಾಜ ಸಿಂಹವರ್ಮನು ಮಧ್ಯೆ ಪ್ರವೇಶಿಸಿ ಆರ್ಯವರ್ಮನಿಗೆ ಪಟ್ಟಕಟ್ಟಿರಬೇಕು. ಕ್ರಿ. ಶ. ೪೦೦ ರಿಂದ ೫೦೦ರ ಕಾಲದಲ್ಲಿ ಹೀಗೆ ಮೂರು ಶಾಖೆಗಳಿದ್ದು ತಲಕಾಡು ಕೇಂದ್ರವಾದ ಮೂಲಮನೆತನ ಮತ್ತೆ ಮೇಲಾಗಿರಬೇಕು. ಆದರೆ ಹೀಗೆ ತಿಳಿಯು ವಲ್ಲಿಯೂ ತೊಂದರೆಗಳಿಲ್ಲದೆ ಇಲ್ಲ–ಎಂಬುದಾಗಿ ಪುರಾತತ್ತ್ವ ಇಲಾಖೆಯ ೧೯೩೦ನೆಯ ವರ್ಷದ ವರದಿಯಲ್ಲಿ ವಿಶ್ಲೇಷಿಸಿದ್ದಾರೆ. ರೈಸ್ ಅವರೂ ಅವರನ್ನು ಅನುಸರಿಸಿ ಲಕ್ಷ್ಮೀನಾರಾಯಣರಾವ್ ಪಂಚಮುಖಿ ಮೊದಲಾದವರೂ ಗಂಗ ಶಾಸನಗಳಲ್ಲಿ ಕಂಡುಬರುವ ವಂಶಾನುಕ್ರಮಣಿಯ ಹೆಸರಿನ ವ್ಯತ್ಯಾಸಗಳನ್ನು ಐತಿಹಾಸಿಕ ಸಮಸ್ಯೆಗಳನ್ನು ಸಮಂಜಸವಾಗಿ ಬಿಡಿಸುವ ಪ್ರಯತ್ನಮಾಡಿ, ತನ್ಮೂಲಕವಾಗಿ ತಲಕಾಡು ಮನೆತನವೊಂದೇ ಮುಂದುವರಿದ ಹಾಗೆ ಗ್ರಹಿಸಿದ್ದಾರೆ.[೪೪] ಇದು ಪೈಗಳ ಗ್ರಹಿಕೆಗೆ ಹತ್ತಿರವಾದುದು. ಆದರೆ ಈ ವಿಷಯದಲ್ಲಿ ಇಲ್ಲಿ ನಿರ್ಣಯ ಅಶಕ್ಯ.

೫

ಮುಂದಿನದು ಬಾದಾಮಿ ಚಾಲುಕ್ಯರ ಸರದಿ. 'ಬಾದಾಮಿ ಚಾಲುಕ್ಯ ಇಮ್ಮಡಿ ಪುಲಿಕೇಶಿಯ ಮೋಡಲಿಂಬದ ತಾಮ್ರಪಟ್ಟ' ಎಂಬ ಲೇಖನದಲ್ಲಿ,[೪೫] ಮೀರಜ್ ಸಂಸ್ಥಾನದ ಮೋಡಲಿಂಬವೆಂಬ ಸ್ಥಳದಲ್ಲಿ ದೊರೆತ ತಾಮ್ರಶಾಸನದ ವಸ್ತು ವಿವರಣೆ ಬಂದಿದೆ. ಐಹೊಳೆ ಶಾಸನ, ಹಾಗೂ ಹೈದರಾಬಾದು ಸಾತಾರೆಗಳ ತಾಮ್ರಪಟ್ಟಗಳ ಸಾಕ್ಷ್ಯಗಳ ಹಿನ್ನೆಲೆಯೊಂದಿಗೆ, ಕರ್ತೃಕಾಲಗಳು ಉಕ್ತವಲ್ಲದ ಮೋಡ ಲಿಂಬದ ತಾಮ್ರಪಟ್ಟ ಇಮ್ಮಡಿ ಪುಲಿಕೇಶಿಯ ಕಾಲದ್ದೆಂದೂ ಅದನ್ನು ೨೪–೪–೬೦೯ ರಲ್ಲಿಯೋ ೧೩–೪–೬೧೦ರಲ್ಲಿಯೋ ಹಾಕಿಸಲಾಯಿತೆಂದೂ ಪೈಗಳು ನಿರ್ಧರಿಸಿದ್ದಾರೆ. ಇಮ್ಮಡಿ ಪುಲಿಕೇಶಿಯ ಪಟ್ಟಾಭಿಷೇಕ ೬೧೦ರ ಜುಲೈಯಿಂದ ಅಕ್ಟೋಬರ್ ಒಳಗೆ ಜರುಗಿರಬೇಕು ಎಂದು ತಿಳಿಸಿದ್ದಾರೆ. ದತ್ತಿನೀಡಿದ ಶಾಸನಕಾಲದ ವೇಳೆಗೆ ಆತನು ಇನ್ನೂ ಅನಭಿಷಿಕ್ತನಾಗಿದ್ದನೆಂದು ಭಾವಿಸಲು ಅವರಿಗೆ ಕಾರಣಗಳೇನಿದ್ದುವೋ ತಿಳಿಯದು.

'ಚಳುಕ್ಯ–II ಪುಲಿಕೇಶಿಯ ಆಳಿಕೆಯ ಕೊನೆಗಾಲ' ಎಂಬ ಇನ್ನೊಂದು ಬರೆಹ ದಲ್ಲಿ[೪೬] ಗೋವಿಂದ ಪೈ ಇಮ್ಮಡಿ ಪುಲಿಕೇಶಿಯ ಆಳಿಕೆಯ ಅವಧಿ, ಅದರಲ್ಲಿಯ ಪರಿಳಿತಗಳು ಇವುಗಳ ಬಗ್ಗೆ ಅನ್ಯ ಇತಿಹಾಸಕಾರರ ಕೆಲವು ಸಾಮಾನ್ಯಾಭಿಪ್ರಾಯ ಗಳನ್ನು ಪುನರ್ವಿಮರ್ಶಿಸಿದ್ದಾರೆ. ಸಮಕಾಲೀನ ಪಲ್ಲವ ಇತಿಹಾಸದ ವಿಮರ್ಶೆಯೂ ಇದಕ್ಕೆ ಹೊಂದಿ ನಡೆದಿದೆ. ಪಲ್ಲವ ೧ನೆಯ ನರಸಿಂಹವರ್ಮನಿಂದ ಪರಾಜಿತನಾದ ಚಾಳುಕ್ಯರ ದೊರೆ ಇಮ್ಮಡಿ ಪುಲಿಕೇಶಿಯಲ್ಲ, ೧ನೆಯ ಪುಲಿಕೇಶಿ ಎಂದೂ ಇಮ್ಮಡಿ ಪುಲಿಕೇಶಿ ೬೧೦–೧೧ರಲ್ಲಿ ಪಟ್ಟವೇರಿ, ೬೪೨ರ ಬಳಿಕ ಅಶ್ವಮೇಧವನ್ನು ಮಾಡಿದ ನೆಂದು ಸಿದ್ಧವಾಗುವುದರಿಂದ ಆತನ ಆಳಿಕೆ ಅಲ್ಲಿಂದ ಇನ್ನೂ ಸ್ವಲ್ಪಕಾಲ ಶ್ರೇಯಸ್ಕರ

ವಾಗಿ ಬೆಳೆಯಿತು ಎಂದೂ ೬೫೪ರ ವರೆಗೆ ಆತನೇ ಆಳುತ್ತಿದ್ದು ಅನಂತರದಲ್ಲಿ ಅವನ ಮಗ ೧ನೆಯ ವಿಕ್ರಮಾದಿತ್ಯ ಚಾಲುಕ್ಯ ಸಿಂಹಾಸನವೇರಿದನು ಎಂದೂ ಪೈಗಳು ಇಲ್ಲಿ ಪ್ರತಿಪಾದಿಸಿದ್ದಾರೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು ಎಂದರೆ, ಇಮ್ಮಡಿ ಪುಲಿಕೇಶಿ ವಿಕ್ರಮಾದಿತ್ಯ–(I)ರು ಪಟ್ಟವೇರಿದ ತೇದಿಗಳ ವಿಷಯದಲ್ಲಿ ಭಿನ್ನಮತವೇನೂ ಇಲ್ಲದಿದ್ದರೂ ಪಲ್ಲವ ನರಸಿಂಹವರ್ಮ–(I)ನು ಇಮ್ಮಡಿ ಪುಲಿಕೇಶಿಯನ್ನು ಸು. ೬೪೨ರಲ್ಲಿ ಸೋಲಿಸಿದ ಬಳಿಕ ೬೫೪ರಲ್ಲಿ ಅವನ ಮಗ ವಿಕ್ರಮಾದಿತ್ಯ–(I)ನು ಪಟ್ಟವೇರುವವರೆಗೆ ಘಟನೆಗಳನ್ನು ಯುಕ್ತಿ ಯುಕ್ತವಾಗಿ ನಿರೂಪಿಸುವುದು ಶಕ್ಯವಿಲ್ಲವೆಂಬ ರೂಢಿತವಾದ ಅಭಿಪ್ರಾಯವನ್ನು ಪೈಗಳು ಒಪ್ಪದೆಹೋಗಿರುವುದೇ ಆಗಿದೆ. ಹೊಸೂರು ತಾಮ್ರಪಟಗಳ ಆಧಾರದ ಮೇಲೆ ಕ್ರಿ. ಶ. ೬೫೧ರಲ್ಲಿ ಇಮ್ಮಡಿ ಪುಲಿಕೇಶಿ ಜೀವಂತವಿದ್ದುದು ನಿಶ್ಚಯವಾದ್ದರಿಂದ ೧ನೆಯ ವಿಕ್ರಮಾದಿತ್ಯ ಪಟ್ಟಕ್ಕೆ ಬರುವವರೆಗೆ ಯಾವ ಅರಾಜಕತೆ ಅಂಧಕಾರಾವಧಿಯೂ ಇರಲಿಲ್ಲವೆಂದು ಸಾಧಿಸಲು ಅವರು ಯತ್ನಿಸಿದ್ದಾರೆ. ಆದರೆ ಈ ವಿಷಯಗಳಲ್ಲಿ ಇತಿಹಾಸಕಾರರು ಇದನ್ನೊಂದು ಗ್ರಹಣಕಾಲವೆಂದೇ ಬಗೆದಿರುವಂತೆ ತೋರುತ್ತದೆ.

೬

ರಾಷ್ಟ್ರಕೂಟರನ್ನು ಕುರಿತ ಹಾಗೆ "ರಾಷ್ಟ್ರಕೂಟ–(III) ಗೋವಿಂದನ ಆಳೊತ್ತು" ಎಂಬ ಒಂದು ಚಿಕ್ಕ ಲೇಖನವಿದೆ.[೪೭] ಇಲ್ಲಿ ಮೂರನೆಯ ಗೋವಿಂದನು ಜಿನಸೇನರ 'ಹರಿವಂಶಪುರಾಣ'ದಲ್ಲಿ, ಗ್ರಂಥ ಪ್ರಶಸ್ತಿಭಾಗದಲ್ಲಿ ಬಂದಿರುವ ಶ್ರೀವಲ್ಲಭನೊಂದಿಗೆ ಅಭಿನ್ನನೆಂದು ತಿಳಿದು ಆತ ಆ ಗ್ರಂಥ ರಚನೆಯ ಕಾಲವಾದ ಕ್ರಿ. ಶ. ೭೮೩–೮೪ರಲ್ಲಿ ಆಳುತ್ತಿದ್ದನೆಂದು ಇತಿಹಾಸಕಾರರು ಭಾವಿಸಿರುವುದು ಒಪ್ಪತಕ್ಕದ್ದಲ್ಲ ಎಂದು ಪೈಗಳು ಸಾಧಾರವಾಗಿ ತೋರಿಸಿದ್ದಾರೆ. ಅವರ ಗ್ರಹಿಕೆಯಂತೆ ಆ ಗ್ರಂಥದಲ್ಲಿ ಉಕ್ತನಾಗಿರುವ ಶ್ರೀವಲ್ಲಭನು. ಅದೇ ಬಿರುದನ್ನು ಹೊಂದಿದ್ದ ೩ನೆಯ ಗೋವಿಂದನ ತಂದೆ ಧ್ರುವ ನಿರುಪಮನಿಗೆ ಅನ್ವಯವಾಗಬೇಕು. "ಕೃಷ್ಣ ನೃಪಜೇ ಶ್ರೀವಲ್ಲಭೇ" ಎಂಬುದು ೧ನೆಯ ಕೃಷ್ಣನ ಮಗನಾದ ಧ್ರುವನಿರುಪಮನಿಗೆ ಸಹಜವಾಗಿ ಅನ್ವಯಿಸುತ್ತದೆಂಬುದು ಅವರು ಇದಕ್ಕೆ ಕೊಡುವ ಆಧಾರವಾಗಿದೆ.

೩ನೆಯ ಗೋವಿಂದನು ೭೯೧ರಲ್ಲಿ ಪಟ್ಟವೇರಿ. ೮೧೪–೧೫ರ ವರೆಗೆ ಆಳಿದನೆಂದೂ ಆ ಬಳಿಕ ಅಮೋಘವರ್ಷ ನೃಪತುಂಗನ ಆಳಿಕೆ ತೊಡಗಿತೆಂದೂ ಅವರು ವಾದಿಸಿದ್ದಾರೆ. ಈ ಗ್ರಹಿಕೆಯಲ್ಲಿ ಆಕ್ಷೇಪಣೀಯವಾದ ಅಂಶಗಳೇನಾದರೂ ಇರುವಂತೆ ನನಗೆ ತೋರದು.

ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಬೇರೆ ಒಂದೆರಡು ಪತ್ರಿಕೆಗಳಲ್ಲಿಯೂ ಪೈಗಳ ಈ ಲೇಖನ ಪ್ರಕಟಗೊಂಡಿದೆ.

೭

ಕಲ್ಯಾಣದ ಚಾಲುಕ್ಯರ ಸಂಬಂಧವಾಗಿ ಪೈಗಳು ಬರೆದ ಲೇಖನಗಳಲ್ಲಿ 'ಚಾಲುಕ್ಯ ವಿಕ್ರಮನ ಪಟ್ಟಬಂಧದ ತೇದಿ' ಸುದೀರ್ಘವಾದುದು;[೪೮] ಪ್ರಮುಖವಾದುದು. ಎನ್. ಎಸ್. ರಾಜಪುರೋಹಿತರು ಜಯಕರ್ನಾಟಕದ ಒಂದು ಸಂಚಿಕೆಯಲ್ಲಿ (೮-೬) "ಶ್ರೀಮಚ್ಚಾಳುಕ್ಯ ವಿಕ್ರಮಪುರುಷ" ಎಂಬ ಒಂದು ಲೇಖನವನ್ನು ಬರೆದು, ಅದರಲ್ಲಿ "ತ್ರಿಭುವನಮಲ್ಲ ಚಾಲುಕ್ಯ ವಿಕ್ರಮಾದಿತ್ಯನಿಗೆ ಪಟ್ಟವಾದುದು ಶಾ. ಶ. ೯೯೮ನೆಯ ನಳ ಸಂವತ್ಸರದ ಫಾಲ್ಗುಣ ಶುದ್ಧ ಪಂಚಮೀ ಬೃಹಸ್ಪತಿ ವಾರದಂದು" ಎಂಬುದಾಗಿ ವಡಗೇರಿ ಶಾಸನದ ಆಧಾರದಿಂದ ನಿರ್ಣಯಿಸಿದ್ದರು. ಅದನ್ನು ಪೈಗಳು ವಿಮರ್ಶೆಗೆ ಎತ್ತಿಕೊಂಡಿದ್ದಾರೆ ಇಲ್ಲಿ. ಚಾಲುಕ್ಯ ವಿಕ್ರಮನ ಹಾಗೂ ಅವನ ಹಿರಿಯಣ್ಣ ಭುವನೈಕಮಲ್ಲನ ಆಳಿಕೆಯ ಕಾಲದ ಕೆಲವು ಶಾಸನಗಳನ್ನು ಬಿಲ್ಹಣನ 'ವಿಕ್ರಮಾಂಕದೇವ ಚರಿತ'ವನ್ನೂ ಆಧರಿಸಿ, ಆ ಪಟ್ಟಬಂಧವು ೨೬-೨-೧೦೭೭ರಲ್ಲಿ ಪೂರ್ವವಿಧಿಯೊಂದಿಗೆ ತೊಡಗಿ ೨೭-೨-೧೦೭೭ರಲ್ಲಿ ಜರಗಿತೆಂದೂ ಪಟ್ಟಬಂಧೋತ್ಸವ ನಿಮಿತ್ತದ ಹಲವು ಮಹಾದಾನಗಳು ಕೊಡಲ್ಪಟ್ಟುದನ್ನು ೨-೩-೧೦೭೭ರ ವಡಗೇರಿ ಶಾಸನ ದಾಖಲಿಸಿದೆಯೆಂದೂ ಪೈಗಳು ಅರ್ಥವಾಡಿದ್ದಾರೆ. ಇದಕ್ಕಾಗಿ ಅವರು ವ್ಯಾಪಕವಾಗಿ ಗಣಿತ ಗುಣಿತಗಳನ್ನು ಮಾಡಿದ್ದಾರೆ. ಪಾಂಡುರಂಗ ದೇಸಾಯಿಯವರು ಬೇರೆ ಆಧಾರಗಳ ನೆರವಿನಿಂದ ೨೬-೨-೧೦೭೭ ರಂದೇ ಪಟ್ಟಾಭಿಷೇಕ ನಡೆಯಿತೆಂಬ ತೀರ್ಮಾನಕ್ಕೆ ಬಂದಿರುವುದು ಕಾಣುತ್ತದೆ.[೪೯]

"ಪೊಟ್ಟಲಕೆರೆಯ ಶಾಸನ ವಿಮರ್ಶೆ" ಎಂಬ ಇನ್ನೊಂದು ಲೇಖನದಲ್ಲಿ[೫೦] ಪೈಗಳು ಹೈದರಾಬಾದಿಗೆ ಹತ್ತಿರದ ಪೊಟ್ಲಚರುವಿನಲ್ಲಿ ದೊರೆತ, ಇದೇ ಮನೆತನದ ೩ನೆಯ ಸೋಮೇಶ್ವರನ ಕಾಲದ, ಒಂದು ಶಾಸನವನ್ನು ಪರಿಶೀಲನೆಗೆ ಎತ್ತಿಕೊಂಡು, ಅದರ ಪಾಠ ಮತ್ತು ಅರ್ಥಗಳನ್ನು ವಿಮರ್ಶಿಸಿದ್ದಾರೆ. ಶಾಸನದಲ್ಲಿ ಸೋಮೇಶ್ವರನವರೆಗೆ ಉಕ್ತರಾದ ಹಾಗೂ ಅಲ್ಲಿ ಉಕ್ತರಾಗಿರದ ಚಾಲುಕ್ಯರಾಜರ ವಿಚಾರವನ್ನು ಸ್ವಲ್ಪ ಪ್ರಸ್ತಾಪಿಸಿ, ಅನಂತರದಲ್ಲಿ ಶಾಸನೋಕ್ತ ದಾನದ ವಿಷಯವನ್ನು ಕೊಟ್ಟಿದ್ದಾರೆ. ಈ ಶಾಸನ ಈ ದೊರೆಯ ಮೊದಲನೆಯ ಶಾಸನವೆಂದು ಅವರು ಸಿದ್ಧಮಾಡಿದ್ದಾರೆ. ಈ ಶಾಸನದ ಆರಂಭದ ಸೂರ್ಯಸ್ತುತಿಯನ್ನೂ ಇದೇ ದೊರೆಯ ಮಾನಸೋಲ್ಲಾಸದ ಅವತಾರಿಕೆಯ ಸೂರ್ಯಸ್ತುತಿಯನ್ನೂ ಒಟ್ಟಿಗೆ ಗಮನಿಸಿ, ಈ ಸೋಮೇಶ್ವರನು ಸೂರ್ಯೋಪಾಸಕನಾಗಿದ್ದನೆಂದು ಪೈಗಳು ತರ್ಕಿಸಿದ್ದಾರೆ. ಶಾಸನೋಕ್ತ ವ್ಯಕ್ತಿಗಳ ಬಗ್ಗೆ ತಿಳಿದುಬರುವ ಸಂಗತಿಗಳನ್ನು ಒಗ್ಗೂಡಿಸಿದ್ದಾರೆ. ಈ ದೊರೆಯ ಮಿಕ್ಕ ಶಾಸನಗಳ ತೇದಿಗಳ ಪ್ರಾಮಾಣಿಕತೆ ಹಾಗೂ ಕೃತ್ರಿಮತೆಗಳನ್ನು ಸವಿಮರ್ಶವಾಗಿ ಪಟ್ಟಿ ಮಾಡಿರುವುದು ಗಮನಿಸತಕ್ಕುದಾಗಿದೆ.

ಗೋವೆಯ ಕದಂಬರ ಬಗೆಗೂ ಪೈಗಳ ಒಂದು ಲೇಖನವುಂಟು. "ಸದಾಶಿವ ಗಡದ ಒಂದು ತಾಮ್ರಶಾಸನ" ಎಂಬೊಂದು ಬರೆಹದಲ್ಲಿ[೫೧] ಶಾಸನಪಾಠವನ್ನು ಕೊಟ್ಟು ಅದನ್ನು ವಿಮರ್ಶಿಸಿದೆ. ಗೋವೆಯ ಕದಂಬರ ಇಮ್ಮಡಿ ವಿಜಯಾದಿತ್ಯನ ಈ ಶಾಸನವನ್ನೂ ಇವನ ಮಗ ಷಷ್ಠನೆಯ ಜಯಕೇಶಿಯ ಕಿತ್ತೂರು ಶಾಸನವನ್ನು ಗಮನಿಸಿ. ವಂಶಾವಳಿಯನ್ನು ಪೈಗಳು ರಚಿಸಿದ್ದಾರೆ. ಈ ವಂಶಾವಳಿಯ ವಿವರಗಳು ಸರಿಯಾಗಿವೆ: ಆದರೆ ಈಚೆಗೆ ದೊರೆತ ಮನೆತನದ ಹೆಚ್ಚಿನ ಶಾಸನಗಳ ಹಾಗೂ ಅವುಗಳ ವಿಮರ್ಶೆಗಳ ಫಲಿತವಾಗಿ ವಂಶಾನುಕ್ರಮಣಿ ಇನ್ನೂ ಪರಿಷ್ಕಾರಗೊಂಡಿದೆ. ಡಾ. ಗೋಪಾಲ್ ಅವರು ತಮ್ಮ ಒಂದು ಬರೆಹದಲ್ಲಿ ಇದನ್ನು ಒದಗಿಸಿದ್ದಾರೆ.[೫೨]

ವಿಜಯನಗರದ ಇತಿಹಾಸ ಕುರಿತು ಅವರ ಹೆಚ್ಚಿನ ಬರೆಹಗಳೇನೂ ನನ್ನ ಗಮನಕ್ಕೆ ಬರಲಿಲ್ಲ. ಒಂದು ಲೇಖನದಲ್ಲಿ "ವಿಜಯನಗರದ ನಿರ್ಮಾಣವೂ ಶೃಂಗೇರಿಯ ಗುರು ಪರಂಪರೆಯೂ" ಎಂಬುದರಲ್ಲಿ[೫೩] ವಿಜಯನಗರದ ಅಧ್ಯಯನದ ಪ್ರಾಥಮಿಕ ಸಾಮಗ್ರಿಯಾಗಿ ಒದಗುವ ಸು. ೧೭೮೦–೯೦ರ ಹಸ್ತಪ್ರತಿಯೊಂದನ್ನು, ತಮಗೆ ಮಂಗಳೂರು ಬಾಸೆಲ್ ಮಿಷನ್ನಿನವರು ದೊರಕಿಸಿದ್ದನ್ನು, ಸಂಪಾದಿಸಿ ಪ್ರಕಟಿಸಿದ್ದಾರೆ. ಅಲ್ಲಲ್ಲಿ ಟಿಪ್ಪಣಿಗಳನ್ನೂ ಬರೆದಿದ್ದಾರೆ. ಇಲ್ಲಿಯೇ "ಬಳ್ಳಾರಿಯೂ ಕರ್ಣಾಟಕವೂ" ಎಂಬ ಲೇಖನದ ಬಗ್ಗೆಯೂ[೫೪] ಪ್ರಸ್ತಾಪಿಸಬೇಕು. ಇದರಲ್ಲಿ ಗಂಗ ಶ್ರೀಪುರುಷನ (ಕ್ರಿ.ಶ. ೭೨೫–೮೮) ಕಾಲದಿಂದ ತೊಡಗಿ ವಿಜಯನಗರ ಸಾಮ್ರಾಜ್ಯದ ಅವನತಿಯ ಕಾಲದವರೆಗೆ ಬಳ್ಳಾರಿಯ ಸುತ್ತಮುತ್ತಣ ಪ್ರದೇಶಗಳು ಕರ್ಣಾಟಕದ ಪ್ರದೇಶಗಳೇ ಆಗಿದ್ದುವೆಂದು ಪೈಗಳು ಸಾಧಾರವಾಗಿ ತೋರಿಸಿದ್ದಾರೆ. ವಿಜಯನಗರ ಕಾಲದಲ್ಲಿ ಆಂಧ್ರ ಪಕ್ಷಪಾತ ಆಂಧ್ರಭೂಯಿಷ್ಠತೆಯಿದ್ದುದು ನಿಜವೇ ಆದರೂ "ವಿಜಯನಗರದ ರಾಜ್ಯವು ಕರ್ಣಾಟಕ ರಾಜ್ಯವೇ ವಿನಾ ಸರ್ವಥಾ ಆಂಧ್ರ ರಾಜ್ಯವಲ್ಲವೆಂದೂ ಅದನ್ನು ಸ್ಥಾಪಿಸಿದ ಸಂಗಮ ವಂಶದ ಅರಸರೂ ಕನ್ನಡಿಗರೇ ಹೊರತು ತೆಲುಗರಲ್ಲವೆಂದೂ" ಅವರು ದೃಢವಾಗಿ ಪ್ರತಿಪಾದಿಸಿದ್ದಾರೆ. ತಿರುಮಲೆ ತಾತಾಚಾರ್ಯಶರ್ಮರೂ ಸಮಾನಾಭಿಪ್ರಾಯ ವ್ಯಕ್ತಮಾಡಿದ್ದನ್ನು ಇಲ್ಲಿ ನೆನೆಯಬಹುದು.

ಈ ಪರಿಶೀಲನೆಯ ಕೊನೆಗೆ ಪೈಗಳ ಇತಿಹಾಸ ಸಂಶೋಧನೆಯ ವಿಚಾರದಲ್ಲಿ ಸಾಮಾನ್ಯವಾಗಿ ಒಂದೆರಡು ಮಾತುಗಳನ್ನು ಹೇಳಬಹುದು.

ಕರ್ನಾಟಕದ ಇತಿಹಾಸದ ಬಗ್ಗೆ ಕರ್ನಾಟಕದವರಾಗಿ ಸಂಶೋಧನೆ ನಡೆಸಿದ ತಮ್ಮ ಕಾಲದ ವಿರಳಪಙ್ಕ್ತಿಯ ವಿದ್ವಾಂಸರಲ್ಲಿ ಪೈ ಮೊದಲ ಸಾಲಿನಲ್ಲಿ ನಿಲ್ಲತಕ್ಕವರು. ಅವರು ಕರ್ನಾಟಕದ ಪ್ರಮುಖ ರಾಜಮನೆತನಗಳಲ್ಲಿ ಕದಂಬರು ಹಾಗೂ ಗಂಗರ ಕಾಲಾನುಕ್ರಮಣಿಯನ್ನೂ ವಂಶಾನುಕ್ರಮಣಿಯನ್ನೂ ವ್ಯವಸ್ಥೆಗೆ ತರಲು ತುಂಬ ಪರಿಶ್ರಮಪಟ್ಟರು: ತುಳುನಾಡಿನ ಇತಿಹಾಸದ ರೂಪರೇಷೆಗಳನ್ನು ಗುರುತಿಸಿದ ಮೊದಲಿಗರಾದರು. ಸಾಂದರ್ಭಿಕವಾಗಿ ಅನ್ಯರಾಜಮನೆತನಗಳ ಕೆಲವು ಮುಖ್ಯ ಘಟನೆಗಳನ್ನು

ವಿವೇಚಿಸಿದರು. ರಾಜಕೀಯ ಚರಿತ್ರೆಯ ಜೊತೆಗೆ ಸಾಂಸ್ಕೃತಿಕ ಸಂದರ್ಭಗಳನ್ನು ವಿಶದಪಡಿಸಿದರು; ಸ್ಥಲನಾಮಗಳ ಭಾಷಿಕವಿವೇಚನೆಯನ್ನು ನಡಸಿದರು. ಕನ್ನಡಿಗರಿಗೆ ತಮ್ಮ ಗತ ಇತಿಹಾಸದ ಬಗ್ಗೆ ಹೆಚ್ಚಿನ ಅರಿವು ಅಭಿಮಾನಗಳು ಹುಟ್ಟುವಂತೆ ಮಾಡುವುದರಲ್ಲಿ ಇತರ ಸಂಶೋಧಕರಿಗಿಂತ ಹೆಚ್ಚಿನ ಉತ್ಸಾಹ ತೋರಿಸಿದರು.

ಈ ಪ್ರಯತ್ನಗಳಲ್ಲಿ ಪೈಗಳ ಸಂಶೋಧನಮೌಲ್ಯ ಯಾವ ರೀತಿಯದು ಎಂಬ ಪ್ರಶ್ನೆ ಸಹಜ. ಸಂಶೋಧನೆಯಲ್ಲಿ ಆಯಾ ಕಾಲದ ಸಾಧನ ಸಂಪತ್ತಿ, ಅದು ಲಭ್ಯವಾಗುವ ಸಾಧ್ಯತೆಗಳು ಇವನ್ನು ಹಿಡಿದು ಅಭಿಪ್ರಾಯಗಳ ಮಂಡನೆ ಖಂಡನೆಗಳೂ ನಿರ್ಣಯಗಳೂ ಪ್ರಕಟವಾಗಿರುತ್ತವೆ. ಈ ದೃಷ್ಟಿಯಿಂದ ನೋಡಿದರೆ ಈಗ ಪೈಗಳ ಇತಿಹಾಸ ಸಂಶೋಧನೆಯಲ್ಲಿ ಗ್ರಾಹ್ಯವಾಗುವ, ಕದಲದಿರುವ ನಿರ್ಣಯಗಳುಂಟು, ತ್ಯಾಜ್ಯವಾಗುವ ಹಾಗೂ ಬದಲಾಗಿರುವ ನಿರ್ಣಯಗಳುಂಟು. ಅವರ ಸಂಶೋಧನ ಕ್ರಮದಲ್ಲಿ ಊಹೆ ಅನುಮಾನಿತ ಸತ್ಯಗಳ ಕೈವಾಡವೂ ವಿಸ್ತಾರ ವಿಲಂಬಗತಿಯ ನಿರೂಪಣೆಯೂ ತರ್ಕಬದ್ಧ ವಾಕ್ಯವಿನ್ಯಾಸದ ಭಾಷೆ ಶೈಲಿಗಳ ವೈಲಕ್ಷಣ್ಯವೂ ಇವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಅದು ಅವರು ಮೆಚ್ಚಿದ, ಹಿಡಿದ, ಪ್ರಾಮಾಣಿಕವಾದ ಸಂಶೋಧನಕ್ರಮ. ನಾವು ಸಹಾನುಭೂತಿಯಿಂದಲೂ ಸಾವಧಾನದಿಂದಲೂ ಅದನ್ನು ಒಪ್ಪಿ ಸಾಗಿದರೆ, ಅವರ ಅಭಿಪ್ರಾಯಗಳೂ ನಿರ್ಣಯಗಳೂ ನಮಗೆ ಸ್ಪಷ್ಟವಾಗುವುದರಲ್ಲಿ ಸಂಶಯವಿಲ್ಲ. ಕನ್ನಡ ನಾಡಿನಲ್ಲಿ ಭಾಷೆ ಸಾಹಿತ್ಯ ಇತಿಹಾಸಗಳಲ್ಲಿ, ಸಂಶೋಧನೆಯ ಹೆದ್ದಾರಿಗಳನ್ನು ನಿರ್ಮಿಸಿದ ಆದ್ಯರಲ್ಲಿ ಅವರೂ ಒಬ್ಬರು, ಪ್ರಮುಖರು; ವಿದ್ವತ್ತಿನ ಬೆಳವಣಿಗೆಗೆ ಸ್ಫೂರ್ತಿನೀಡಿದ ಮಾನ್ಯರು, ಇದು ಬಹು ಮುಖ್ಯವಾದ ಸಂಗತಿ.

ಅಡಿಟಿಪ್ಪಣಿಗಳು

*. ರಾಷ್ಟ್ರಕವಿ ಗೋವಿಂದ ಪೈ ಜನ್ಮ ಶತಮಾನೋತ್ಸವ ವಿಚಾರಸಂಕಿರಣ, ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೯, ೩೦ ನವೆಂಬರ್ ೧೯೮೩.

೧. ನೋಡಿ : ಸಂ. ಶ್ರೀನಿವಾಸ ಹಾವನೂರ, ಮ. ವಿ. ನಾಯಕ, ಗೋವಿಂದ ಪೈ ವಾಙ್ಮಯ ದರ್ಶನ ಗೀತಾ ಬುಕ್ ಹೌಸ, ಮೈಸೂರು. ೧೯೬೬, ಪ್ರಕರಣ ೨. ಪು. ೬–೨೮.

೨. ಡಾ. ಕೆ. ವಿ. ರಮೇಶ್, ತುಳುನಾಡಿನ ಇತಿಹಾಸ. ಅವತರಣಿಕೆ. ಪು. ೧೪.

೩. *S. Krishnaswami Aiyangar Commemoration Valume*, 1936, pp. 33–47.

೪. 'ಸಂಭಾವನೆ', ೧೯೪೧. ಪು. ೧೬೮–೮೨: ಇಂಗ್ಲಿಷ್ ರೂಪ – Geneaology of the Later Satavahanas. *New Indian Antiquary*, Vol. III, 1953 pp. 40- 47.

೫. *A History of South India,* Madras, 1976, p. 95.

೬. *Annals of the Bhandarkar Oriental Research Institute,* Silver Jubilee Number, 1942, pp. 319–29.

೭. ಪ್ರಬುದ್ಧ ಕರ್ನಾಟಕ, ಸಂ. ೨೩–೧: ಪು. ೮೩–೧೦೪: ಸಂ. ೨೩–೨. ಪು. ೮೯–೯೨; ಇಂಗ್ಲಿಷ್ ರೂಪ– Ptolemy's Hippokoura, *Studies in Indian History of the Indian Historical Research Institute,* Silver Jubilee Number, 1953, pp. 287–93.

೮. ಪಂಚಕಜ್ಜಾಯ, ಮಂಗಳೂರು ಸಾಹಿತ್ಯ ಸಮ್ಮೇಳನ ಪ್ರಕಟನೆ, ೧೯೨೭. ಪು. ೧೦೧–೧೯.

೯–೧೦. ಇತಿಹಾಸ ಸಂಶೋಧನೆ. 'ಗೋವಿಂದ ಪೈ', ಕನ್ನಡ ಅಧ್ಯಯನಸಂಸ್ಥೆ, ಮೈಸೂರು. ೧೯೮೩. ಪು. ೧೧೯–೨೦.

೧೧-೧೨. 'ತುಳುನಾಡಿನ ಇತಿಹಾಸ'. ಗೀತಾ ಬುಕ್ ಹೌಸ. ಮೈಸೂರು. ೧೯೬೯, ಪು. ೧೮.

೧೩. 'ತೆಂಕನಾಡು', ಕಾಸರಗೋಡು ಸಾಹಿತ್ಯ ಸಮ್ಮೇಳನದ ಪ್ರಕಟನೆ. ೧೯೪೭, ಪು. ೩–೪೮.

೧೪. ಮದರಾಸು ಸಮಾಚಾರ, ಸ್ವಾತಂತ್ರ್ಯೋತ್ಸವ ಸಂಚಿಕೆ. ೧೯೪೯, ಪು. ೯–೧೧.

೧೫. 'ತುಳು ನಾಡಿನ ಇತಿಹಾಸ'. ೧೯೬೯, ಪು. ೨೫.

೧೬. ರಾಷ್ಟ್ರಬಂಧು, ಯುಗಾದಿ ಸಂಚಿಕೆ, ೧೯೨೯.

೧೭. ಕರ್ನಾಟಕ ಕೇಸರಿ, ಸಂ. ೧, ೧೯೨೭, ಪು. ೩೧–೪೧.

೧೮. 'ತುಳುನಾಡಿನ ಇತಿಹಾಸ', ೧೯೬೯, ಪು. ೫೦, ಪು. ೪೩.

೧೯. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯಸಮಿತಿ ಪತ್ರಿಕೆ. ಸಂ.೧, ೧೯೪೧, ಪು. ೨೧೧–೩೯.

೨೦. *Volume of Studies in Indology, Prof. P. V. Kane, Felicitation Volume,* 1941, pp. 302–26; ಕನ್ನಡ ರೂಪ – ಪುನ್ನಾಟದ ಅರಸರು.

೨೧. Karnataka Through The Ages, 1968, p 144.

೨೨. Punnata Chief, *Minor Dyanasties of South India* : Karnataka, Vol. I, Madras, 1982, pp. 9–13.

೨೩. ಜಯಕರ್ನಾಟಕ, ನಂ. ೧೧, ೧೯೩೩, ಪು. ೧೦೪–೧೪.

೨೪. *Kanchipuram in Early South Indian History,* 1969, p. 38; *Successors of Satavahanas,* 1939, p. 388–89.

೨೫. *Ec., VII,* p. 113, *El., VIII,* p. 26.

೨೬. Notes on Some Impasial Dynasties of Karnataka, *Srikanthica,* Mysore, 1973, p. 100–101.

೨೭. Gudnapur Inscription of Kadamba Ravivarma, *Srikanthika,* 1973, p. 69.

೨೮. ತಾಳಗುಂದ ಶಾಸನವು ಕಾಕುತ್ಸ್ಥವರ್ಮನದೆ ? ಪ್ರಬುದ್ಧ ಕರ್ನಾಟಕ. ೨೦–೪. ಪು. ೯೭-೧೧೦.

೨೯. *P. K. Acharya, Indian Architecture,* p. 65 (ಉದ್ಧೃತ).

೩೦. *Succcssors of Satavahanas,* 1939, pp. 184–85, p. 238.

೩೧. Editor P. B. Desai, *A History of Karnataka,* Dharwad, 1981 (2ed), pp. 78–81.

೩೨. *Journal of the Indian History*, Vol. XII, 1933, pp.354–73; Vol. XIII, 1934, pp. 18–34, 132–73.

೩೩. ವಿವರಗಳಿಗೆ ನೋಡಿರಿ : ಬಾ.ರಾ. ಗೋಪಾಲ್, 'ಬನವಾಸಿ ಕದಂಬರು', ಶಿರಸಿ, ಉ.ಕ., ೧೯೮೩, ಪೀಠಿಕೆ, ಪು. xxv–xxx.

೩೪. ಕರ್ನಾಟಕದ ಪೂರ್ವೇತಿಹಾಸದ ಮೇಲೆ ಬೆಳಕು, ಕರ್ಮವೀರ, ೨೨–೮–೧೯೪೯.

೩೫. 'ಗೋವಿಂದ ಪೈ', ೧೯೮೩, ಪು. ೧೧೬–೧೭.

೩೬. *Karnataka Historical Review*, Vol. II–i, pp.1–30, Vol. II–ii, pp. 17–29, 1932–33.

೩೭. Ed. P. B. Desai, *A History of Karnataka*, pp.78–85.

೩೮. *Journal of the Andhra Hitsorical Research Society*, Vol. X, 1937, pp. 145–55.

೩೯. ಜೀವನ, ಸಂ. ೧೩, ಆಗಸ್ಟ್ ೧೯೫೨, ಪು. ೧೩೬–೪೧.

೪೦. ನೋಡಿ : S. Srikantha Sastri, *Sources of Karnataka History*, p. xxx, P. B. Desai, Ibid p. 85, KTA, p. 128.

೪೧. ಕಂಠೀರವ, ದಸರಾ ಸಂಚಿಕೆ, ೧೯೩೭, ಪು. ೮೬–೯೭.

೪೨. ಸ್ವದೇಶಾಭಿಮಾನಿ, ದಸರಾ ಸಂಚಿಕೆ, ೧೯೩೫ (?), ಪು. ३–೯.

೪೩. H. Krishna Sastri, *Epigraphical Report for* 1913–14; B.L.Rise, *El.* XIV, 1917–18, p. 331; D. C. Sivkar, *Select Insuittions*, Vol. I, pp. 480–82; J.F.Flut, *JRAS*, 1915, p. 472, *El.* Vol. III; S. Srikantha Sastri, *SKH.*, Vol. I, p. 29; 'ಪುರಾತತ್ವ ಶೋಧನೆ', ಪು. ೨೮೦–೮೨: 'ಸವಿನೆನಪು', ಪು. ೭೯೪–೯೯; ಎಂ. ಎಚ್. ಕೃಷ್ಣ. ಮೈ ಆರಿ., ೧೯೩೦, ನಂ. ೮೮.

೪೪. B.L. Rice, *El.*Vol. XIV, p.331; 'ಕರ್ನಾಟಕ ಅರಸುಮನೆತನಗಳು.' ಧಾರವಾಡ, ೧೯೪೬, ಪು. ೧೧೯–೨೦.

೪೫. ಸುಬೋಧ, ಜನವರಿ ೧೯೪೬, ಸಂ. ೨೧, ಪು.೧೨೩–೨೬.

೪೬. ಸುಬೋಧ, ನವೆಂಬರ್ ೧೯೩೭, ಸಂ.೮–೧, ಪು. ೧೮–೨೫.

೪೭. ಪ್ರಜಾಮತ, ದೀಪಾವಳಿ ಸಂಚಿಕೆ, ೧೯೪೯, ಪು. ೩೩–೩೪; ಅಂತರಂಗ, ಯುಗಾದಿ ಸಂಚಿಕೆ, ೧೯೪೧, ಪು. ೨೭–೨೮.

೪೮. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೧–೨, ೧೯೩೦, ಪು. ೨೦೦–೪೪.

೪೯. *A History of Karnataka*, p. 177–78.

೫೦. ಶರಣಸಾಹಿತ್ಯ, ಸಂ. ೧೦–೫, ಜುಲೈ ೧೯೪೭, ಪು. ೨೩೬–೫೫.

೫೧. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ. ೭೦–೩, ಅಕ್ಟೋಬರ್ ೧೯೩೫, ಪು. ೨೮೩–೮೭.

೫೨. *Minor Dyvasties of South India :Karnataka*, 1982, p. 48–63.

೫೩. ಸ್ವದೇಶಿ ಪ್ರಚಾರಕ, ಜನವರಿ, ೧೯೩೪, ೧೧೯–೨೪, ೧೩೩–೩೪.

೫೪. *Welcome Bellary Souvenir*, 1–10–1953, p. 33–40,

ಗೋವಿಂದ ಪೈಗಳ ಇತರ ಸಂಶೋಧನೆ

● ಡಾ. ವೀರಣ್ಣ ರಾಜೂರ

೧

ಪೈ ಅವರು ಪ್ರಥಮ ದರ್ಜೆಯ ಸಂಶೋಧಕರು. ನಿಜವಾದ ಸಂಶೋಧಕನಲ್ಲಿ ಇರಬೇಕಾದ ಪ್ರತಿಭೆ, ಪಾಂಡಿತ್ಯ, ವಿದ್ವತ್ತು, ಬಹುಭಾಷಾಜ್ಞಾನ, ತೀಕ್ಷ್ಣ ವಿವೇಚನಾ ಶಕ್ತಿ, ಹರಿತವಾದ ತರ್ಕಸರಣಿ, ಇತಿಹಾಸಪ್ರಜ್ಞೆ, ವಸ್ತುನಿಷ್ಠತೆ, ಪ್ರಾಮಾಣಿಕತೆ, ತಾಳ್ಮೆ, ಸಂಯಮ, ಅಗಾಧವಾದ ಸ್ಮರಣಶಕ್ತಿ, ಕೃಪಣತೆಯಿಲ್ಲದ ವಿಷಯಸಂಗ್ರಹ ಸಾಮರ್ಥ್ಯ, ಸತ್ಯಕ್ಕೆ ಸಮೀಪವಾದ ಊಹಾಪರಿಜ್ಞಾನ ಇವೆಲ್ಲವೂ ಅವರಲ್ಲಿ ಮೈ ಗೂಡಿದ್ದವು. ಹೀಗಾಗಿ ಅವರಿಗೆ ಯಾವುದೇ ವಿಷಯವನ್ನು ಕುರಿತು ಶೋಧಕ್ಕೆ ತೊಡಗಲು, ವಾದಕ್ಕೆ ಇಳಿಯಲು, ವಿವಿಧ ಮೂಲಗಳಿಂದ ಸಾಕ್ಷಿಪುರಾವೆಗಳನ್ನು ಕಲೆ ಹಾಕಿ ಸತ್ಯವನ್ನು ಎತ್ತಿ ತೋರಲು ಸುಲಭಸಾಧ್ಯವಾಯಿತು. ಅವರ ಪ್ರತಿಯೊಂದು ಸಂಶೋಧನಾತ್ಮಕ ಪ್ರಬಂಧಗಳಲ್ಲಿಯೂ ಈ ಗುಣಾಂಶಗಳು ಒಡೆದುಕಾಣುತ್ತವೆ.

ಪೈ ಅವರ ಸಂಶೋಧನ ಕ್ಷೇತ್ರ ಏಕಮುಖವಾದುದಲ್ಲ; ಅದಕ್ಕೆ ಅನೇಕ ಮುಖ ಗಳು. ಅದರ ಹರಹು-ವಿಸ್ತಾರ, ಆಳ-ಅಗಲಗಳು ವಿಸ್ಮಯಕಾರಕ. ನಾಡು, ನುಡಿ, ಸಾಹಿತ್ಯ, ಭಾಷೆ, ವ್ಯಾಕರಣ, ಛಂದಸ್ಸು, ಇತಿಹಾಸ, ಧರ್ಮ, ತತ್ವ, ಜೋತಿಷ್ಯ, ಕಲೆ, ಜಾನಪದ-ಹೀಗೆ ಹಲವು ಹತ್ತು ಶಾಖೋಪಶಾಖೆಗಳಲ್ಲಿ ಅದು ಹಬ್ಬಿಕೊಂಡಿದೆ. ಅವರ ದೃಷ್ಟಿ ಕೇವಲ ಕರ್ನಾಟಕ ಅಥವಾ ಕನ್ನಡ ಸಾಹಿತ್ಯದ ಸೀಮಿತ ವಲಯದಲ್ಲಿ ಮಾತ್ರ ಸುತ್ತುವರಿದುದಲ್ಲ; ವಿಶ್ವದ ವಿಶಾಲತೆಯನ್ನೂ ದಾಟಿ ಒಂದು ಹೆಜ್ಜೆ ಮುಂದು ವರಿದುದು. ಅದಕ್ಕಾಗಿ ಅವರ ಸಂಶೋಧನೆಯಲ್ಲಿ ವಿವಿಧ ಭಾಷೆ, ಸಾಹಿತ್ಯ, ಇತರ ವಿಷಯಗಳ ವೈವಿಧ್ಯವನ್ನು ಕಾಣುತ್ತೇವೆ.

ಗೋವಿಂದ ಪೈ ಅವರ ಒಟ್ಟು ಸಂಶೋಧನ ಪ್ರಬಂಧರಾಶಿಯನ್ನು ೧. ಇತಿ ಹಾಸ ಸಂಶೋಧನೆ ೨. ಸಾಹಿತ್ಯಸಂಶೋಧನೆ ೩. ಇತರ ಸಂಶೋಧನೆ ಎಂದು ಮೂರು ಪ್ರಮುಖ ಗುಂಪುಗಳಲ್ಲಿ ಒಡೆದುಹಾಕಬಹುದು. ಈ ಪ್ರಮುಖ ಗುಂಪು ಗಳಲ್ಲಿ ಮತ್ತೆ ಇತಿಹಾಸ ಸಂಶೋಧನೆಯಲ್ಲಿ ನಾಡಿನ ಇತಿಹಾಸ, ಜನಾಂಗದ ಇತಿಹಾಸ ಎಂದೂ ಸಾಹಿತ್ಯಸಂಶೋಧನೆಯಲ್ಲಿ ಕನ್ನಡ-ಕನ್ನಡೇತರ ಸಾಹಿತ್ಯ, ಕವಿ-ಕಾಲ ವಿಚಾರ, ಕೃತಿವಿಮರ್ಶೆ ಎಂದೂ, ಇತರ ಸಂಶೋಧನೆಯಲ್ಲಿ ಭಾಷೆ, ವ್ಯಾಕರಣ, ಛಂದಸ್ಸು, ಧರ್ಮತತ್ವ, ಧರ್ಮಪುರುಷರ ಚರಿತ್ರೆ ಎಂದೂ ಕೆಲವು ಉಪವಿಭಾಗ ಗಳನ್ನು ಕಲ್ಪಿಸಿಕೊಳ್ಳಬಹುದು.

ಪೈ ಅವರ ಇತರ ಸಂಶೋಧನೆಯನ್ನು ಕುರಿತು ಇಲ್ಲಿ ಸ್ಥೂಲವಾಗಿ ಸಮೀಕ್ಷಿಸಲು ಪ್ರಯತ್ನಿಸಲಾಗಿದೆ.

೨

ಪೈ ಅವರ ಇತರ ಸಂಶೋಧನಾತ್ಮಕ ಪ್ರಬಂಧಗಳಲ್ಲಿ ಭಾಷೆ ಹಾಗೂ ವ್ಯಾಕರಣ ವಿಷಯಕ್ಕೆ ಸಂಬಂಧಿಸಿದ ಲೇಖನಗಳಿಗೆ ಪ್ರಥಮಪ್ರಾಶಸ್ತ್ಯ. ಭಾಷೆ ಹಾಗೂ ವ್ಯಾಕರಣಶಾಸ್ತ್ರದಲ್ಲಿ ಪೈ ಅವರದು ಹೆಚ್ಚಿನ ಪ್ರೌಢಿಮೆ. ಅದರಲ್ಲಿಯೂ ಶಬ್ದಗಳ ನಿಷ್ಪತ್ತಿಯನ್ನು ಕಂಡು ಹಿಡಿಯುವಲ್ಲಿ, ಪದಗಳ ಚರಿತ್ರೆಯನ್ನು ರೂಪಿಸುವಲ್ಲಿ, ಅವುಗಳ ಪ್ರಾಚೀನತೆಯನ್ನು ಗುರುತಿಸುವಲ್ಲಿ ಅವರು ಹೆಚ್ಚಿನ ಮುತುವರ್ಜಿವಹಿಸಿದ್ದಾರೆ. ಶಬ್ದೋತ್ಪತ್ತಿಯನ್ನು ಕುರಿತು ಐದು ಲೇಖನಗಳಲ್ಲಿ ನೇರವಾಗಿ ಚರ್ಚಿಸಿದ್ದರೆ, ಇನ್ನೂ ಹಲವಾರು ಲೇಖನಗಳಲ್ಲಿ ಪ್ರಾಸಂಗಿಕವಾಗಿ ಈ ವಿಷಯವನ್ನು ವಿಚಾರಿಸಿದ್ದಾರೆ. ಅಷ್ಟೇ ಅಲ್ಲ ಪ್ರತಿಯೊಂದು ಲೇಖನದಲ್ಲಿಯೂ ಒಂದಿಲ್ಲೊಂದು ರೀತಿಯಿಂದ ವ್ಯಾಕರಣ ವಿಷಯವು ಇಣಿಕಿಹಾಕದೆ ಬಿಟ್ಟಿಲ್ಲ.

ಕನ್ನಡ ಭಾಷೆಯ ಪ್ರಾಚೀನತೆಯನ್ನು ಗೊತ್ತುಹಚ್ಚುವಲ್ಲಿ ಪೈ ಅವರು ವಹಿಸಿದ ಪಾತ್ರ ಹಿರಿದು. ಶಾಸನ, ಕಾವ್ಯ, ಐತಿಹ್ಯ, ಅನ್ಯಭಾಷೆಯ ಕೃತಿಗಳು ಇತ್ಯಾದಿ ಹಲವು ಮೂಲಗಳ ಆಧಾರದಿಂದ ಅವರು ಕನ್ನಡ ಭಾಷೆಯ ಪ್ರಾಚೀನತೆಯನ್ನು ಒಂದನೆಯ ಶತಮಾನದಷ್ಟು ಹಿಂದಕ್ಕೆ ಒಯ್ದು ನಿಲ್ಲಿಸಿದ್ದಾರೆ. ಇದಕ್ಕೆ ಅವರು ಒದಗಿಸಿದ ನಾಲ್ಕು ಮುಖ್ಯ ಪ್ರಮಾಣಗಳೆಂದರೆ: ೧. ಕ್ರಿ.ಶ. ೧೮೪–೧೯೦ರಲ್ಲಿ ರಚಿತವಾದುದೆಂದು ಲೆಕ್ಕಹಾಕಿದ ನಂಜನಗೂಡಿನ ೧೯೫ನೆಯ ನಂಬರಿನ ಕನ್ನಡಭಾಷೆಯನ್ನೊಳಗೊಂಡ ಶಾಸನ. ೨. ಎರಡನೆಯ ಶತಮಾನದ್ದೆಂದು ನಿರ್ಧರಿಸಿದ ಗ್ರೀಕ್ ಪ್ರಹಸನದಲ್ಲಿ ಬರುವ ಅಚ್ಚಗನ್ನಡ ಮಾತುಗಳು. ೩. ಎರಡನೆಯ ಶತಮಾನದ ಪೊಲೆಮಿಯ ಗ್ರೀಕ್ ಕೃತಿಯಲ್ಲಿ ಸೇರಿರುವ ಕನ್ನಡ ಊರುಗಳ ಹೆಸರುಗಳು. ೪.ಕ್ರಿ.ಪೂ. ಒಂದನೆಯ ಶತಮಾನದಲ್ಲಿದ್ದನೆಂದು ತಿಳಿದುಬರುವ ಹಾಲನ ಗಾಥಾಸಪ್ತಸತಿ ಎಂಬ ಪ್ರಾಕೃತ ಕೃತಿಯಲ್ಲಿ ಬರುವ ಕನ್ನಡ ಪದಗಳು.[೧]

ಈಚಿನ ಸಂಶೋಧನೆಯಿಂದ ಪೈ ಅವರು ಸೂಚಿಸಿದ ಈ ಆಧಾರಗಳಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಆಗಿದೆ.[೧ಅ] ನಂಜನಗೂಡಿನ ಶಾಸನದ ಕಾಲ ೯೧೨–೧೩ ಅಂದರೆ ೧೦ ನೆಯ ಶತಮಾನಕ್ಕೆ ಸರಿದುಬಂದಿದೆ.[೨] ಗ್ರೀಕ್ ಪ್ರಹಸನದಲ್ಲಿ ಬರುವ ಗ್ರೀಕೇತರ ಪದಗಳು ಕನ್ನಡವಾಗಿರದೆ ಮೂಲದ್ರಾವಿಡ, ತಮಿಳು ಅಥವಾ ತುಳು ಆಗಿರಬಹುದು ಎಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಗಾಥಾಸಪ್ತಸತಿಯಲ್ಲಿ ಬರುವ

---

೧. ಕನ್ನಡ ಸಾಹಿತ್ಯ ಹಾಗೂ ಭಾಷೆಯ ಪ್ರಾಚೀನತೆ ಉಪಾಯನ ಪುಟ ೯೪

೧ಅ. ವಿವರಗಳಿಗೆ ನೋಡಿ 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಮೊದಲನೆಯ ಸಂಪುಟ, ಪುಟ ೨೫೫ ರಿಂದ ೩೬೧ ರ ವರೆಗೆ

೨. E.C. III ನಂಜನಗೂಡು ೩೬೦ (ಹೊಸ ಆವೃತ್ತಿ) ಶಾಸನ ನಂ. ೧೯೨, ೧೯೩

ಪ್ರಾಕೃತ–ಸಂಸ್ಕೃತೇತರ ಕೆಲವು ದೇಶ್ಯ ಶಬ್ದಗಳು ಕನ್ನಡವಾಗಿರದೆ ದ್ರಾವಿಡ ಸಾಮಾನ್ಯ ಶಬ್ದಗಳಾಗಿರಬೇಕು ಎಂದು ಹಲವರು ಅಭಿಪ್ರಾಯಪಡುತ್ತಾರೆ. ಹೀಗಿದ್ದೂ ಪೈ ಅವರು ಕನ್ನಡ ಭಾಷೆಯ ಪ್ರಾಚೀನತೆಯನ್ನು ಗುರುತಿಸುವಲ್ಲಿ ಒದಗಿಸಿದ ಈ ಸಾಕ್ಷ್ಯಾಧಾರಗಳು ಸಂಪೂರ್ಣ ವ್ಯರ್ಥವಾಗದೆ ಸ್ವಲ್ಪಮಟ್ಟಿನ ಸಹಾಯವನ್ನಾದರೂ ಮಾಡಿವೆ ಎಂಬುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ.

ಪದನಿಷ್ಪತ್ತಿಯಲ್ಲಿ ಪೈ ಅವರು ಪ್ರಮುಖವಾಗಿ ಕರ್ಣಾಟಕ–ಕರ್ನಾಟಕ, ಗೊಮ್ಮಟ–ಮನ್ಮಥ, ತುಳು, ವೃಷಲ, ತಿಂಗಳು, ಹೈಗ–ಹೈವೆ ಎಂಬ ಶಬ್ದಗಳನ್ನು ಕುರಿತೂ ಪ್ರಾಸಂಗಿಕವಾಗಿ ಮೊರಡಿ–ಮುರಡಿ ಎಂಬ ಪದವನ್ನು ಕುರಿತೂ ವಿಚಾರಿಸಿದ್ದಾರೆ.

ಒಂದು ಕಾಲಕ್ಕೆ ಕರ್ನಾಟಕದ ಎಲ್ಲ ವಿದ್ವಾಂಸರ ಜಿಜ್ಞಾಸೆಗೊಳಗಾಗಿದ್ದ ಕರ್ಣಾಟಕ–ಕರ್ನಾಟಕ ಎಂಬ ಪದಗಳ ಸಾಧುತ್ವದ ವಾದದಲ್ಲಿ ಪೈ ಅವರು ಭಾಗವಹಿಸಿ 'ಕರ್ಣಾಟಕವೊ? ಕರ್ನಾಟಕವೊ? ಅಥವಾ ಕರ್ಣಾಟಕದ ನಿಷ್ಪತ್ತಿ'[೨೮] ಎಂಬ ಸುದೀರ್ಘವಾದ ಲೇಖನವೊಂದನ್ನು ಬರೆದು ತಮ್ಮ ಅಮೂಲ್ಯವಾದ ವಿಚಾರಗಳನ್ನು ಮಂಡಿಸಿದ್ದಾರೆ. ಮೊದಲು ಅವರು ಪ್ರಾಚೀನ ಸಂಸ್ಕೃತ, ಕನ್ನಡ ಭಾಷೆಯಲ್ಲಿರುವ ಇತಿಹಾಸ, ಮಹಾಕಾವ್ಯ, ಪುರಾಣ, ಶಾಸ್ತ್ರ, ನಾಟಕಗ್ರಂಥಗಳಲ್ಲಿ ಬರುವ ಈ ಪದದ ರೂಪವನ್ನು ಕಲೆಹಾಕಿ, ವ್ಯಾಕರಣದ ಒರೆಗೆ ಹಚ್ಚಿ ನೋಡಿ, 'ಕರ್ಣಾಟಕ' ಎಂಬ ಪದವೇ ಸರಿ ಎಂದು ನಿರ್ಧರಿಸುತ್ತಾರೆ. ಮುಂದೆ ಆ ಪದದ ಅರ್ಥ ಮತ್ತು ಮೂಲವನ್ನು ಹುಡುಕಲು ಪ್ರಯತ್ನಿಸಿ, ಅದು ನಾಡಿನ ಹೆಸರೆಂದೂ, ತಮಿಳು ಶಿಲಪ್ಪದಿಕಾರಂ ಮತ್ತು ಕಲಿಂಗತ್ತುಪರಣಿ ಎಂಬ ಕೃತಿಗಳಲ್ಲಿ ಈ ನಾಡಿನ ಜನರನ್ನು 'ಕರುನಾಡಿಯರ್' 'ಕರುನಾಡರ್' ಎಂದು ಕರೆದುದನ್ನು ಗಮನಿಸಿ "ಕರ್ಣಾಟಕವು ದ್ರವಿಡ ಭಾಷೆಯಿಂದ ಸಂಸ್ಕೃತಿಸಲ್ಪಟ್ಟ ಶಬ್ದವೇ ಹೊರತು ಮೂಲಸಂಸ್ಕೃತವಾಗಿರಲಾರದು: ಅತಯೇವ ಅದರ ನಿಷ್ಪತ್ತಿಯನ್ನು ಕುರಿತು ಕನ್ನಡದಲ್ಲಿಯೇ ಹುಡುಕಬೇಕಲ್ಲದೆ ಸಂಸ್ಕೃತದಲ್ಲಿ ಅಲ್ಲ" ಎಂದು. ಕರುನಾಡರ್ > ಕರ್ನಾಟ್ > ಕರ್ನಾಡು = ಕನ್ನಡ–ಹೀಗೆ ಅದು ರೂಪುವಳಿದಿರಬೇಕು ಎಂದು ತಿಳಿಸುತ್ತಾರೆ. ಅಲ್ಲಿವೆ ಮುಂದುವರೆದು "ಕನ್ನಡ ಮೂಲದಿಂದ ಹುಟ್ಟಿ, ಸಂಸ್ಕೃತದಲ್ಲಿ ರೂಪುಪಡೆದ 'ಕರ್ಣಾಟಕ'ವೇ ಸಾಧು. ಅದರ ತದ್ಭವವೇ 'ಕನ್ನಡ'. 'ಕರ್ನಾಟಕ' ಎಂಬುದು ಉಚ್ಚರಿಸಲಿಕ್ಕೆ ಸುಲಭವಾಗುವಂತೆ ತಕ್ಕಷ್ಟು ನುಣುಪು ಮಾಡಿಕೊಂಡ, ಅಂದರೆ ಜೋಗರ ಬಾಯಲ್ಲಿ ಸ್ವಯಮೇವ ಮೆತ್ತನಾದ ಕರ್ಣಾಟಕದ ಪ್ರತ್ಯಕ್ಷ ಗ್ರಾಮ್ಯರೂಪ" ಎಂದು ಅಭಿಪ್ರಾಯಪಡುತ್ತಾರೆ.

---

೨೮. ದೀವಿಗೆ : ಪು. ೪೬-೬೦

ಹದಿನೈದು ಪುಟದ ಈ ಲೇಖನದಲ್ಲಿ ೭೨ ಅಡಿಟಿಪ್ಪಣಿಗಳಿವೆ. ಇಲ್ಲಿ ಅವರು ಕಲೆಹಾಕಿದ ದಾಖಲೆಗಳನ್ನು ಗಮನಿಸಿದರೆ ಪೈ ಅವರ ಅಧ್ಯಯನದ ವಿಸ್ತಾರ, ಬಹುಶ್ರುತತ್ವ ವೇದ್ಯವಾಗುತ್ತದೆ.

'ಕರ್ಣಾಟಕ–ಕರ್ನಾಟಕ' ಈ ಪದಗಳ ನಿಷ್ಪತ್ತಿ, ಅರ್ಥವಿವರಣೆ ಕೊಡಲು ಸು. ೧೫ ಜನ ವಿದ್ವಾಂಸರು ಪ್ರಯತ್ನಿಸಿದ್ದಾರೆ. ಆದರೆ ಖಚಿತವಾದ ನಿರ್ಧಾರಕ್ಕೆ ಬರಲು ಇನ್ನೂ ಯಾರಿಂದಲೂ ಸಾಧ್ಯವಾಗಿಲ್ಲ. ಕಾರಣ "ಸದ್ಯಕ್ಕೆ ಎರಡು ರೂಪಗಳನ್ನೂ ಅಂಗೀಕರಿಸೋಣ...... ಕರ್ಣಾಟಕ–ಕರ್ನಾಟಕಗಳಲ್ಲಿ ಕೊನೆಗೆ ಯಾವುದು ನಿಲ್ಲಬೇಕೆಂಬುದನ್ನು ಕಾಲಪುರುಷನು ನಿರ್ಣಯಿಸಲಿ" ಎಂಬ ತೀ.ನಂ.ಶ್ರೀ. ಅವರ ಮಾತಿನೊಡನೆ ನಾವೂ ದನಿಗೂಡಿಸಿ ನಡೆಯಬೇಕಷ್ಟೆ.[3]

ಪೈ ಅವರನ್ನು ಹೆಚ್ಚು ಚಿಂತನೆಗೊಳಪಡಿಸಿದ ಮತ್ತೊಂದು ಪದ 'ಗೊಮ್ಮಟ'. ಇದರ ನಿಷ್ಪತ್ತಿಯನ್ನು ಕುರಿತು ಅವರು ಹದಿನಾಲ್ಕು ವರುಷದ ಅವಧಿಯಲ್ಲಿ ಮೂರು ಲೇಖನಗಳನ್ನು ಬರೆದಿದ್ದಾರೆ.[4] ಮೊದಲೆರಡು ಲೇಖನಗಳಲ್ಲಿ ಪ್ರಥಮ ತೀರ್ಥಂಕರನ ದ್ವಿತೀಯ ಪುತ್ರನಾದ ಬಾಹುಬಲಿಗೆ ಇರುವ ಮತ್ತೊಂದು ಹೆಸರಾದ ಗೊಮ್ಮಟ ಎಂಬ ಈ ನಾಮವಾಚಿ ಪದ ಹಲವಾರು ಶಾಸನ, ಕಾವ್ಯ, ಪುರಾಣಗಳಲ್ಲಿ ಗೊಮ್ಮಟ, ಗುಮ್ಮಟ, ಗೋಮಟ ಎಂಬ ಭಿನ್ನರೂಪಗಳಲ್ಲಿ ದೊರೆಯುತ್ತದೆ. ಇದರ ಅರ್ಥ ಸುಂದರ, ಮನೋಹರ, ಉತ್ತಮ ಎಂದು. ಇದೇ ಅರ್ಥದಲ್ಲಿ ಮರಾಠಿ, ಕೊಂಕಣಿಯಲ್ಲಿಯೂ ಈ ಪದ ಬಳಕೆಯಲ್ಲಿದೆ. ಇದರ ಮೂಲ ಸಂಸ್ಕೃತದ 'ಮನ್ಮಥ' ಎಂಬುದು. ಕಾತ್ಯಾಯನನ 'ಪ್ರಾಕೃತ ಮಂಜರಿಯ' ಪ್ರಕಾರ ಈ ಮನ್ಮಥ ಎಂಬುದು ಪ್ರಾಕೃತದಲ್ಲಿ 'ವಮ್ಮಹ' 'ಗಮ್ಮಹ' ಎಂದಾಗುತ್ತದೆ. ಈ ಗಮ್ಮಹವೇ ಕನ್ನಡದಲ್ಲಿ ಗುಮ್ಮಟ, ಗೊಮ್ಮಟ ಆಗಿರಬೇಕು ಎಂದು ವ್ಯಾಕರಣ ಪ್ರಕ್ರಿಯಾಧಾರಗಳ ಮೇಲಿಂದ ನಿರ್ಧರಿಸಿದ್ದರು. ಆದರೆ ಕೆಲವು ವರ್ಷಗಳ ನಂತರ ಕೆ. ಜಿ. ಕುಂದಣಗಾರ ಮತ್ತು ಡಾ. ಎ. ಎನ್. ಉಪಾಧ್ಯೆ ಅವರು ಪ್ರಾಕೃತ ವ್ಯಾಕರಣಗಳನ್ನೆಲ್ಲ ಪರಿಶೀಲಿಸಿ, ಮನ್ಮಥಕ್ಕೆ 'ವಮ್ಮಹ' 'ಮಮ್ಮಹ' 'ಬಮ್ಮಹ' ಎಂಬ ರೂಪಗಳಿವೆಯಲ್ಲದೆ ಎಲ್ಲಿಯೂ 'ಗಮ್ಮಹ' ಎಂಬುದಿಲ್ಲ. ಎಂದು ಪೈ ಅವರ ನಿಷ್ಪತ್ತಿಯನ್ನು ನಿರಾಕರಿಸಿದರು. ಅದೇ ರೀತಿ ಶ್ರೀ ಶಾಂತಿರಾಜಶಾಸ್ತ್ರಿ ಎನ್ನುವವರು ಪ್ರಾಕೃತ ತ್ರಿವಿಕ್ರಮವ್ಯಾಕರಣದ ಆಧಾರದಿಂದ ಸಂಸ್ಕೃತದ ಮನ್ಮಥ ಪ್ರಾಕೃತದಲ್ಲಿ 'ವಮ್ಮಹ' ಎಂದಾಗುತ್ತದೆ. 'ಮಹ'

---

೩. ಹೆಚ್ಚಿನ ವಿವರಗಳಿಗೆ ನೋಡಿ 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಮೊದಲನೆಯ ಸಂಪುಟ ಪುಟ ೨೧೨ ರಿಂದ ೨೨೩ ರ ವರೆಗೆ.

೪. i. Why are the Bahubali Colossi Colled Gommata?: Indian historical Quarterly (calcutta) iv (June, 1928) P. 270-286.

ii. ಗೊಮ್ಮಟ ಶಬ್ದದ ನಿಷ್ಪತ್ತಿ : ಚೈತನ್ಯ (ಇಲಕಲ್ಲ) I, ಸಂ. ೬–೯ (೧೯೩೧)

iii. ಗೊಮ್ಮಟ–ಮನ್ಮಥ : ಕಸಾಪ ೨೭–೨ (೧೯೪೨).

ಎಂಬ ಧಾತುವಿಗೆ 'ಗುಮ್ಮಡ' ಎಂದು ಆದೇಶವಾಗಿ ಅದೇ ಕನ್ನಡದಲ್ಲಿ ಗೋಮಟ, ಗೊಮ್ಮಟವಾಗಿದೆ ಎಂದು ವಿವರಿಸಿದರು. ಪೈ ಅವರು ಈ ವಿದ್ವಾಂಸರ ಅಭಿಪ್ರಾಯಗಳನ್ನು ಒಮ್ಮಲೆ ಒಪ್ಪಿಕೊಳ್ಳಲಿಲ್ಲ. ತಮ್ಮ ನಿರ್ಧಾರಕ್ಕೆ ಆಧಾರವಾದ ಕೃತಿಯ ಹಲವು ಹಸ್ತಪ್ರತಿಗಳನ್ನು ಮತ್ತೆ ಪರಿಶೀಲಿಸಿದರು. ಅಲ್ಲಿಲ್ಲಿಯೂ ತಮ್ಮ ಅಭಿಪ್ರಾಯಕ್ಕೆ ಸಮರ್ಥನೆ ಸಿಗದೆ ಹೋದಾಗ ತಾವು ಅವಲಂಬಿಸಿದ ಹಸ್ತಪ್ರತಿಯ ಪಾಠ ಅಶುದ್ಧವಾದುದೆಂದು ಖಚಿತವಾದಾಗ ಮೊದಲಿನ ತಮ್ಮ ನಿರ್ಣಯಕ್ಕೆ ಕಟ್ಟು ಬೀಳದೆ ಅದನ್ನು ಬದಲಿಸಿ "ಮನ್ಮಥಕ್ಕೆ ಗಮ್ಮಹ ಎಂಬ ಪ್ರಾಕೃತರೂಪ ಇಲ್ಲವೆಂದು ನಿಷ್ಕೃಷ್ಟವಾಗಿರುವುದರಿಂದ ಗೊಮ್ಮಟವು ಗಮ್ಮಹದ ದ್ವಾರಾ ಮನ್ಮಥದ ಪ್ರಾಕೃತ ರೂಪವೆಂಬ ನನ್ನ ೧೨–೧೩ ವರ್ಷಗಳ ನಚ್ಚಿಗೆಗೆ ಇನ್ನು ಕೊನೆಯ ನೀರುಬಿಟ್ಟೆ" ಎಂದು ಪ್ರಾಮಾಣಿಕತೆಯಿಂದ ತಪ್ಪನ್ನು ತಿದ್ದಿಕೊಳ್ಳುತ್ತಾರೆ. ಆದರೆ ಅಷ್ಟಕ್ಕೆ ಆ ವಿಚಾರವನ್ನು ಕೈಬಿಡುವುದಿಲ್ಲ. ಮತ್ತೆ ಬೇರೆ ಮೂಲಗಳಿಂದ ಅದರ ನಿಷ್ಪತ್ತಿಯನ್ನು ಕಂಡುಕೊಳ್ಳಲು ಮುಂದಾಗಿ, ಆ ಪದದ ಬಳಕೆಯ ಪ್ರಾಚೀನತೆಯ ಮೇಲಿಂದ ಗೊಮ್ಮಟವೇ ಹಳೆಯ ರೂಪ. ಅದು ನಿಜವಾಗಿ ದೇಶೀ ಶಬ್ದವಾಗಿದ್ದು ನಂತರ ಪ್ರಾಕೃತಕ್ಕೆ ಹೋಗಿರಬೇಕು ಎಂಬ ನಿರ್ಣಯಕ್ಕೆ ಬರುತ್ತಾರೆ. ಈ ಪದದ ನಿಷ್ಪತ್ತಿ ಕುರಿತ ವಿಚಾರಕ್ಕೂ ಇನ್ನೂ ಪೂರ್ಣವಿರಾಮ ಹಾಕಿಲ್ಲ.

ಪೈ ಅವರು 'ತುಳುವ' ಎಂಬ ಶಬ್ದದ ನಿಷ್ಪತ್ತಿಗೆ ತೊಡಗಿ ಮೊದಲು "ತುರುವ–ಅರಸರ್ ಎಂಬುದು ತುರ್ವರಸರ್ ಎಂದಾಗಿ, ಅನಂತರ ತುಳುವರಸರ್ ಎಂಬ ರೂಪ ತಾಳಿರಬೇಕು, ಈ ನಿಷ್ಪತ್ತಿ ಸರಿಯೆಂದಾದರೆ ಈ ವಂಶದ ಪೂರ್ವಜರು ದನಗಾಹಿಗಳ ಹುಟ್ಟಿನವರಾಗಿರಬೇಕು"[೫] ಎಂದು ಹೇಳಿ, ನಂತರ ಈ ನಿರ್ಧಾರವನ್ನು ಬದಲಿಸಿ, ಕೆಲವು ಕೃತಿಗಳಲ್ಲಿ 'ತುಳು' ಎಂಬ ಪದ ಸಂಸ್ಕೃತ 'ತುಲಾ' ಎಂಬುದರಿಂದ ಬಂದಿದೆ ಎಂದು ಉಲ್ಲೇಖಿಸಿರುವುದನ್ನು ಗಮನಿಸಿ. ಅದನ್ನು ಸಮ್ಮತಿಸದೆ "ಅಚ್ಚ ಅನಾರ್ಯ ದೇಶಗಳಾದ ಚೋಳ ಪಾಂಡ್ಯ ಚೇರಗಳಿಗೆ ದ್ರಾವಿಡ ಭಾಷೆಗಳಿಂದ ತಾನೆ ಆಯಾ ಹೆಸರಾದಂತೆ ದ್ರಾವಿಡ ಭಾಷೆಯಿಂದಲೇ ಹುಟ್ಟಿರಬೇಕಾದ 'ತುಳು' ಎಂಬ ಹೆಸರನ್ನು ಸಂಸ್ಕೃತದಿಂದ ಹುಟ್ಟಿಸಲಿಕ್ಕೆ ಹೆಣೆದಿರುವ ಈ ಕಲ್ಪನೆಯಲ್ಲಿ ನೀರು ನಿಲ್ಲುವುದಿಲ್ಲ" ಎಂದು ನಿರ್ಭೀತಿಯಿಂದ ಖಂಡಿಸಿ, ತಮಿಳಿನಿಂದ ಅದರ ನಿಷ್ಪತ್ತಿಯನ್ನು ನಿರ್ಧರಿಸಲು ತೊಡಗಿ, 'ತುಳ್ಳು' ಎಂದರೆ ನೀರಿನಲ್ಲಿ ಹುಟ್ಟುಹಾಕು ಎಂದೂ 'ತುಳೈ' ಎಂದರೆ ಮುಳುಗು, ನೀರಿನಲ್ಲಿ ಆಡು ಎಂದೂ 'ತುಳೈಯಮ್' ಎಂದರೆ ನೀರಿನಲ್ಲಿ ಆಡುವಿಕೆಯೆಂದೂ ಅರ್ಥ; ಕಡಲಕರೆಯ ಈ ಪ್ರದೇಶದಲ್ಲಿ ಹಳಗಾಲದಿಂದಲೂ ಬೆಸ್ತರೂ ಅಂಬಿಗರೂ ಸಹಜವಾಗಿ ಹೇರಳವಾಗಿದ್ದ ಕಾರಣ ಇದಕ್ಕೆ ತುಬು–ತುಳು ಎಂದು ಕರೆದಿರಬೇಕು" ಎಂದು ತಿಳಿಸುತ್ತಾರೆ.[೬]

---

೫. ವಿಜಯನಗರದ ತುಳು ಅಥವಾ ತುಳುವ ವಂಶ: ರಾಷ್ಟ್ರಬಂಧು– ಯುಗಾದಿ ಕಾಣಿಕೆ (೧೯೨೯)
೬. ತುಳುನಾಡು (ಪೂರ್ವಸ್ಮೃತಿ): ತೆಂಕನಾಡು (೧೯೬೭) ಪು. ೧೮–೧೯.

ಉತ್ತರ ಕನ್ನಡಕ್ಕಿರುವ ಹಿಂದಿನ ಹೆಸರಾದ 'ಹೈಗ' ಎಂಬುದರ ನಿಷ್ಪತ್ತಿಯನ್ನು ಪಶುಕ>ಪಯಿಕ>ಪಯಿಗ>ಪೈಗ>ಹೈಗ ಎಂದು ತಿಳಿಸಿದರೆ,[೭] 'ಮೊರಡಿ' 'ಎಂಬ ಶಬ್ದ ಮೂಲದಲ್ಲಿ 'ಮೊರಂಡಿ' ಎಂದಿದ್ದು ನಂತರ ಬಿಂದು ಕಳೆದುಕೊಂಡು 'ಮೊರಡಿ' ಆಗಿ, ಅದೇ ಮುಂದೆ 'ಮುರುಡಿ'ಯಾಗಿರಬೇಕು; ಮೊರಡಿ ಅಂದರೆ ದಿಬ್ಬ, ಅಲ್ಲಿರುವ ಈಶ್ವರನೇ 'ಮುರುಡೇಶ್ವರ' ಎಂಬ ಹೆಸರು ಪಡೆದಿರಬೇಕು ಎಂದು ಸೂಚಿಸುತ್ತಾರೆ.[೮]

ಹಾಗೆಯೇ 'ತಿಂಗಳು' ಎಂಬ ಶಬ್ದದ ನಿಷ್ಪತ್ತಿಯನ್ನು ಕುರಿತು ಡಾ. ದ. ರಾ. ಬೇಂದ್ರೆಯವರು ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ "ಅಮವಾಸ್ಯೆ ಎಂದರೆ ಚಂದ್ರನಿಲ್ಲದ ದಿನ ಎಂದು ಅರ್ಥವಲ್ಲ. ಸೂರ್ಯಚಂದ್ರರ ಸಹಕೂಟದಿಂದ ಅಮವಾಸ್ಯೆ ಎಂಬ ಹೆಸರು ಬಂದಿರಬೇಕು. ಸುಮೇರಿಯದ 'ಸಿನ್' ಶಬ್ದದಿಂದ 'ತಿನ್' ಹುಟ್ಟಿತು. ಅದಕ್ಕೆ ಬಹುವಚನ 'ಗಳ್' ಪ್ರತ್ಯಯಸೇರಿ 'ತಿಂಗಳು' ಆಯಿತೆಂಬುದೂ ಸರಿಯಲ್ಲ. ತಿನ್ + ಕೂಟು್ ಎಂಬುದೂ ಸರಿಯಾಗಲಾರದು. ತಿಂಗ + ಅಳ್ = ತಿಂಗಳ್ > ತಿಂಗಳು = ಅಂದರೆ ತುಂಬಿರುವಾಕೆ ಎಂಬ ಸ್ತ್ರೀಲಿಂಗ ಸೂಚಿ ಶಬ್ದವಿದಾಗಿರಬೇಕು" ಎಂದು ಸ್ಪಷ್ಟಪಡಿಸುತ್ತಾರೆ.[೯]

ವಿಶಾಖದತ್ತನ ಮುದ್ರಾರಾಕ್ಷಸ ನಾಟಕದಲ್ಲಿ ಚಾಣಕ್ಯನು ಚಂದ್ರಗುಪ್ತನನ್ನು ಮೇಲಿಂದ ಮೇಲೆ 'ವೃಷಲ' ಎಂದು ಸಂಬೋಧಿಸುವ ಪದವನ್ನು ಕುರಿತು ವಿಚಾರಿಸುತ್ತ ಪೈ ಅವರು "ಸಂಸ್ಕೃತದಲ್ಲಿ ವೃಷಲ ಎಂಬುದರ ಅರ್ಥ ಶೂದ್ರ ಎಂದು. ಚಾಣಕ್ಯನು ಈ ಅರ್ಥದಲ್ಲಿ ಆ ಪದವನ್ನು ಬಳಸಿರಲಿಕ್ಕಿಲ್ಲ. ಅದು 'ಬಸಿಲ' ಎಂಬ ಗ್ರಿಕ್ ಪದದಿಂದ ಬಂದಿರಬೇಕು. 'ಬಸಿಲಸ್' ಎಂಬುದು ಗ್ರೀಕ್ ದೊರೆ ಸೆಲ್ಯೂಕಸ್‌ನ ಬಿರುದಾಗಿತ್ತು. ಅದರ ಅರ್ಥ ಮಹಾರಾಜ ಎಂದು. ಚಂದ್ರಗುಪ್ತ ಸೆಲ್ಯೂಕಸ್‌ನನ್ನು ಸೋಲಿಸಿ ಆ ಬಿರುದನ್ನು ಕಿತ್ತುಕೊಂಡಿರಬೇಕು. ದೇಶೀ ಭಾಷೆಯಲ್ಲಿ ಬಳಕೆಯಾಗುತ್ತಿದ್ದ ಆ ಪದವನ್ನು ವಿದೇಶಿಯದೆಂಬ ಕಲ್ಪನೆಯಿಲ್ಲದೆ ನಾಟಕಕಾರ 'ಮಹಾರಾಜ' ಎಂಬ ಅರ್ಥದಲ್ಲಿ ಚಾಣಕ್ಯನ ಬಾಯಲ್ಲಿ ಹೇಳಿಸಿರಬೇಕು" ಎಂದು ಅರ್ಥೈಸುತ್ತಾರೆ.[೧೦]

೩

ವ್ಯಾಕರಣ ಕ್ಷೇತ್ರದಂತೆ ಛಂದೋಪ್ರಪಂಚದಲ್ಲಿಯೂ ಪೈಗಳವರದು ಹೆಚ್ಚಿನ ಪರಿಶ್ರಮ. ಕನ್ನಡ ಷಟ್ಪದಿಗಳನ್ನು ಕುರಿತು ನಡೆಸಿದ ಅವರ ಸಂಶೋಧನೆ ಮೌಲಿಕ

೭. ಹೈಗ, ಹೈವೆ: ಲಿಂಗಾಯತ ಅಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿ ಪತ್ರಿಕೆ–೧. ಪುಟ ೨೧೧–೧೯ (೧೯೪೧) ಮತ್ತು ತುಳುನಾಡು (ಪೂರ್ವಸ್ಮೃತಿ) : ತೆಂಕನಾಡು ಪುಟ ೧೩

೮. ತುಳುನಾಡು (ಪೂರ್ವಸ್ಮೃತಿ): ತೆಂಕನಾಡು ಪುಟ ೮–೯ ಅಡಿಟಿಪ್ಪಣಿ ನಂ. ೧೩

೯. ತಿಂಗಳು : ತ್ರಿವೇಣಿ (ದೀಪಾವಳಿ ಸಂಚಿಕೆ ೧೯೩೧)

೧೦. ವಿಶಾಖದತ್ತನ ಮುದ್ರಾರಾಕ್ಷಸ ನಾಟಕದಲ್ಲಿರುವ ವೃಷಲ ಎಂಬ ಶಬ್ದ : ಅಭಿವಂದನೆ. (ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ಅರ್ಪಿಸಿದ ಕೃತಿ) ಪುಟ ೨೪೦–೫೧ (೧೯೫೬)

ವಾದುದು. 'ಕನ್ನಡ ಷಟ್ಪದಿಗಳು' 'ಉದ್ದಂಡ ಷಟ್ಪದಿಯನ್ನು ಕುರಿತು'. 'ಕನ್ನಡ ಭಾರತದೊಳಗಣ ಒಂದು ಜಟಿಲವಾದ ಷಟ್ಪದಿ' ಎಂಬ ಮೂರು ಲೇಖನಗಳನ್ನು ಷಟ್ಪದಿ ಛಂದೋಬಂಧವನ್ನು ಕುರಿತು ಅವರು ಬರೆದಿದ್ದಾರೆ.

'ಕನ್ನಡ ಷಟ್ಪದಿಗಳು'[೧೧] ಎಂಬ ದೀರ್ಘ ಪ್ರಬಂಧದಲ್ಲಿ ಷಟ್ಪದಿಯ ಹುಟ್ಟು, ಪ್ರಕಾರ, ಲಕ್ಷಣ ಇತ್ಯಾದಿ ವಿಷಯಗಳ ವಿವರವಾದ ಚರ್ಚೆ ನಡೆಸಿದ್ದಾರೆ. ಅದರ ಸಾರಸಂಗ್ರಹ ಹೀಗಿದೆ:

೧. ಚಂದ್ರರಾಜ ತನ್ನ 'ಮದನತಿಲಕ' ಎಂಬ ಕೃತಿಯಲ್ಲಿ 'ಎರಡು ಷಟ್ಪದಿಯುಂ' ಎಂದು ಹೇಳಿದ್ದಾನೆ. ಇಲ್ಲಿ ಬರುವ ಎರಡು ಎಂಬುದು ಕೇವಲ ಸಂಖ್ಯಾವಾಚಿಯಲ್ಲ. ಜಾತಿವಾಚಿಯೂ ಆಗಿದೆ. ಅಂದರೆ ಒಂದು ಬಗೆಯ ಎರಡು ಷಟ್ಪದಿಗಳೆಂದು ಮಾತ್ರವಲ್ಲ, ಎರಡುಬಗೆಯ ಷಟ್ಪದಿಗಳೆಂದೂ ಅರ್ಥವಾಗುತ್ತದೆ. ಕಾರಣ ಇವನಿಗಿಂತ ಎಷ್ಟೋ ಮುಂಚೆ ಷಟ್ಪದಿಗಳಿರಬೇಕು. ನಾಗವರ್ಮನಲ್ಲಿರುವ ಶರಷಟ್ಪದಿ ಒಂದೇ ಅಲ್ಲ. ಅವನಿಗಿಂತ ಹಿಂದೆ ಬೇರೆಬೇರೆ ಷಟ್ಪದಿಗಳು ಇರಬೇಕು. ರನ್ನನ ಗದಾಯುದ್ಧದಲ್ಲಿ 'ಮಾತ್ರಾಸಮಕಷಟ್ಪದಿ' ಎಂಬುದರ ಉಲ್ಲೇಖ ಬಂದಿದೆ. ಇದರಿಂದ ರನ್ನ ನಾಗವರ್ಮರಿಗಿಂತ ಮೊದಲೇ ಎಲ್ಲ ಷಟ್ಪದಿಗಳು ಇರಬೇಕು.

೨. ಷಟ್ಪದಿಗಳೆಲ್ಲವೂ ಒಂದಲ್ಲ ಒಂದು ವರ್ಣವೃತ್ತದಿಂದ ತಾನೆ ಹುಟ್ಟಿರಬೇಕಲ್ಲದೆ ಅವು ಸಂಸ್ಕೃತಛಂದಸ್ಸಿನ ಸಂಘಟನವು ಕನ್ನಡಛಂದಸ್ಸಿಗೆ ಒದಗಿರದ ಮುಂಚೆ ಹುಟ್ಟಿರಲಾರವು. ಅಂದರೆ ಅವು ಸ್ವತಂತ್ರವಾದ ಕನ್ನಡ ಛಂದಸ್ಸಿನಿಂದ ಹುಟ್ಟಿರಲಾರವು.

೩. ಈಗ ನಮಗೆ ದೊರೆತಿರುವ ಆರು ಷಟ್ಪದಿಗಳಲ್ಲಿ ಮೊದಲನೆಯದು ಶರಷಟ್ಪದಿ, ಕೊನೆಯದು ವಾರ್ಧಕಷಟ್ಪದಿ. ವಾರ್ಧಕವೆಂದರೆ ಮುಪ್ಪು. ಮುಪ್ಪನ್ನು ಮೀರಿ ಜೀವಿಗಳ ಜೀವನಕಾಲದಲ್ಲಿ ಬೇರೊಂದು ಅವಸ್ಥೆಯಿಲ್ಲ. ಮುಪ್ಪಿನ ಮೇಲೆ ಮರಣವೇ ಎಂಬುದರಿಂದ ವಾರ್ಧಕವೆಂಬೀ ಅನ್ವರ್ಥನಾಮದಿಂದಲೇ ಅದು ಷಟ್ಪದಿಗಳಲ್ಲಿ ಕೊಟ್ಟಕೊನೆಯದಾಗಿರಬೇಕೆಂದೂ, ಅತಏವ ಅದನ್ನು ಮಿಕ್ಕಿ ಏಳನೆಯದೊಂದು ಷಟ್ಪದಿ ಇರಲಾರದೆಂಮೂ ನಿಷ್ಪನ್ನವಾಗುತ್ತದೆ. ಆದರೆ ಸಂಸ್ಕೃತ ಛಂದಸ್ಸಿನ ದೃಷ್ಟಿಯಿಂದ ಶರಕ್ಕಿಂತ ಹಿಂದೆ, ವಾರ್ಧಕಕ್ಕಿಂತ ಮುಂದೆ ಅತಿಕಡಿಮೆಯೆಂದರೆ ಒಂದು ಲಘುವಿನಿಂದ, ಅತಿ ಹೆಚ್ಚೆಂದರೆ ೩೮ ಮಾತ್ರೆಗಳವರೆಗೆ ಷಟ್ಪದಿಗಳು ಇರಬಹುದು. ಸಂಸ್ಕೃತದಲ್ಲಿ ಅತಿಕಡಿಮೆಯೆಂದರೆ ಒಂದು ಲಘುವುಳ್ಳ ಒಂದೇ ಮಾತ್ರೆಯ ಗಣ. ಅತಿಹೆಚ್ಚೆಂದರೆ ಮೂರುಗುರುವುಳ್ಳ ೬ ಮಾತ್ರೆಯ ಗಣ ಬರುತ್ತವೆ. ಈ ನ್ಯಾಯದಂತೆ ಷಟ್ಪದಿಗಳು ೨ ಮಾತ್ರೆಯಿಂದ ೨೪ ಮಾತ್ರೆಯವರೆಗೆ ಲೆಕ್ಕ ಹಾಕಿದರೆ ೧೨ ವಿಧವಾಗುತ್ತವೆ. ಇವುಗಳಲ್ಲಿ ಆರು ಮಾತ್ರ ಈಗ ಸಿಕ್ಕಿವೆ. ಶರಷಟ್ಪದಿಗಿಂತ

---

೧೧. ಕನ್ನಡ ಷಟ್ಪದಿಗಳು : ಜಯಕರ್ನಾಟಕ ೯–೨,೩ ಪು. ೧೩೩–೧೪೦ ಮತ್ತು ೨೪–೫೨: ೧೦–೧೧ ಪು. ೮೧೪–೨೩

ಮೊದಲು ಮೂರು. ಪರಿವರ್ಧಿನಿಯ ನಂತರ ಒಂದು. ವಾರ್ಧಕದ ನಂತರ ಎರಡು ಹೀಗೆ ಇನ್ನೂ ಆರನ್ನು ಗುರುತಿಸಬಹುದು. ಅವುಗಳನ್ನು ಕವಿಗಳು ಹೆಚ್ಚಿಗೆ ಬಳಸ ದಿರಲು ಕಾರಣ ೧೨ನೆಯ ಷಟ್ಪದಿ ಅತಿ ದೀರ್ಘವೆಂಬುದರಿಂದ ಕಾವ್ಯರಚನೆಗೆ ನಿರುಪ ಯೋಗಿ ಎಂದೂ ಮೂರನೆಯದು ಭಾವನೆ, ವರ್ಣನಾದಿಗಳಿಗೆ ಅತಿಸಂಕೋಚವಾಗು ವುದರಿಂದ ಅಪ್ರಯೋಜಕವೆಂದೂ ಆಗರವರು ಸಾಕಷ್ಟು ವಿಚಾರ ಮಾಡಿ ತಾನೆ ಇವೆರಡನ್ನೂ ಕನ್ನಡ ಕಾವ್ಯರಚನೆಗೆ ಸಲ್ಲವೆಂದು ತಳ್ಳಿಹಾಕಿರಬೇಕು.

ಪೈ ಅವರ ಈ ಅಭಿಪ್ರಾಯಗಳಿಗೆ ಶ್ರೀಕುಲಕರ್ಣಿ ಪ್ರಹ್ಲಾದರಾಯರು ಆಕ್ಷೇಪ ವೆತ್ತಿದರು : ೧. ಮದನತಿಲಕದಲ್ಲಿ ಬರುವ 'ಎರಡು ಷಟ್ಪದಿಯುಂ' ಎಂಬುದು 'ಎರಡು ಷಟ್ಪದಿಗಳುಂ' ಎಂದು ಬಹುವಚನವಾಗಿದ್ದರೆ ಎರಡುಬಗೆಯ ಷಟ್ಪದಿಗಳು ಎಂದು ತಿಳಿಯಲು ಬರುತ್ತಿತ್ತು. ೨. ನಾಗವರ್ಮ ಷಟ್ಪದಿಯನ್ನು ಕರ್ಣಾಟವಿಷಯ ಜಾತಿಗಳಲ್ಲಿ ಸೇರಿಸಿರುವುದರಿಂದ ಅದು ಸಂಸ್ಕೃತಜನ್ಯವಲ್ಲ.

ಈ ಆಕ್ಷೇಪಗಳಿಗೆ ಪೈ ಅವರು ಕೊಟ್ಟ ಪ್ರತ್ಯುಕ್ತಿ ಕೆಳಗಿನಂತಿದೆ :

೧. ಮದನತಿಲಕದಲ್ಲಿ ಬರುವ 'ಎರಡು ಷಟ್ಪದಿಯುಂ' ಎಂಬಂತೆ ನಾಗ ವರ್ಮ, ಕೇಶಿರಾಜನು ಬಹುವಚನದಲ್ಲಿ ಇಂಥ ಹಲವಾರು ವಾಕ್ಯ ಪ್ರಯೋಗಗಳನ್ನು ಮಾಡಿದ ನಿದರ್ಶನಗಳಿವೆ. ಕಾರಣ 'ಎರಡುಂ ಷಟ್ಪದಿಯುಂ' ಎಂಬಾ ಮಾತಿ ನಿಂದ ಎರಡು ಷಟ್ಪದಿಗಳೆಂದು ಮಾತ್ರವಲ್ಲ, ಎರಡು ಬಗೆಯ ಷಟ್ಪದಿಗಳೆಂದೂ ಅರ್ಥವಾಗುವಂತೆ ತೋರುತ್ತದೆ ಎಂಬ ನನ್ನ ಹೇಳಿಕೆ ಸರಿಯೋ ತಪ್ಪೋ ಎಂಬು ದನ್ನು ಸುಜ್ಞರಾದ ವಾಚಕರು ನಾಗವರ್ಮ, ಕೇಶಿರಾಜರಂತಹ ಸೀಮಾಪುರುಷರ ಉದಾಹರಣೆಗಳ ಬೆಳಕಿನಲ್ಲಿ ವಿಚಾರಿಸಿ ನೋಡಲಿ. ನಾನು ತಪ್ಪಿರುವೆನಾದರೆ ನಾಗ ವರ್ಮ ಕೇಶಿರಾಜರೊಂದಿಗೆ. ಎರಡು ಬಗೆಯ ಷಟ್ಪದಿಗಳೆಂಬ ಅರ್ಥಕ್ಕೆ ಆಸ್ಪದವಿರ ಬೇಕಾಗಿದ್ದರೆ ಎರಡು ಷಟ್ಪದಿಗಳುಂ ಎಂದು ಬಹುವಚನ ರೂಪವಿರಬೇಕಾಗಿತ್ತು ಎಂಬೀ ಅಲಂಘ್ಯವಾದ ವ್ಯಾಕರಣ ಸೂತ್ರವನ್ನು ನಾಗವರ್ಮ ಕೇಶಿರಾಜರೇ ಅರಿತಿಲ್ಲ ವೆಂದಮೇಲೆ ಅಜ್ಞನಾದ ನನ್ನ ಪಾಡೇನು ?[೧೨]

೨. ನಾಗವರ್ಮನು ಇದನ್ನು (ಷಟ್ಪದಿಯನ್ನು) ಕರ್ಣಾಟಕವಿಷಯಜಾತಿ ಎಂದಿರುತ್ತಾನೆಂಬ ಅದೊಂದು ಕಾರಣದಿಂದ ತಾನೆ ಆ ಮಾತಿಗೆ ತಲೆಬಾಗಿ ಅದ ನ್ನೊಪ್ಪಿಕೊಳ್ಳಬೇಕೊ ? ಅಥವಾ ಸತ್ಯವು ಹೇಗಿದೆ ಎಂದು ಶೋಧಿಸಿ ತಿಳಕೊಂಡು ಅದನ್ನೊಪ್ಪಬೇಕೋ? ಎಂಬುದನ್ನು ನಾಗವರ್ಮನ ಮಾತೇ ಮಾತೆಂದು ನಚ್ಚಿ ಸತ್ಯದ ಮಾತನ್ನು ಅಲ್ಲಗಳೆಯಲೊಲ್ಲದ ಸುಜ್ಞರಾದ ವಾಚಕರು ನಿರ್ಧರಿಸಲಿ. ಕರ್ಣಾಟವಿಷಯಜಾತಿಯವೆಂದು ನಾಗವರ್ಮನು ಹೇಳಿರುವ ಮದನವತಿಯೇ

---

೧೨. ಕನ್ನಡ ಷಟ್ಪದಿಗಳು : ಜಯಕರ್ನಾಟಕ ೧೦–೧೧ ಪು. ೮೧೫

ಮೊದಲಾದ... ಐದು ವೃತ್ತಗಳು ಎಷ್ಟರ ಮಟ್ಟಿಗೆ ಅಚ್ಚಗನ್ನಡ ವೃತ್ತಗಳು ಎನಿಸ ಬಹುದೊ ಅದಕ್ಕಿಂತ ಹೆಚ್ಚಿನ ಮಟ್ಟಿಗೆ ಷಟ್ಪದಿಗಳನ್ನು ಕನ್ನಡ ವೃತ್ತಗಳೆನ್ನಬಹುದು. ಏಕೆಂದರೆ ಸಂಸ್ಕೃತ ವೃತ್ತಗಳಲ್ಲಿ ಇಲ್ಲದ ಆರು ಚರಣಗಳ ಅದೊಂದು ವೈಶಿಷ್ಟ್ಯ ವಾದರೂ ಷಟ್ಪದಿಗಳಲ್ಲಿದೆ. ಇದೊಂದು ಕಾರಣದಿಂದ ಅವುಗಳ ಜಿತ್ರಸ್ನು ಸಂಸ್ಕೃತ ವೃತ್ತಗಳಿಂದ ಆಯ್ದುಕೊಂಡರೂ ಕನ್ನಡದಲ್ಲಿ ಅವುಗಳ ಮೊಳವೂ ಬೆಳವೂ ಸಂಸ್ಕೃತ ವೃತ್ತಗಳಿಂದ ಭಿನ್ನವಾಗಿರುತ್ತದೆಂಬುದು ನಿಜವೇ; ಆದರೆ ಆ ಕಾರಣದಿಂದ ಅವುಗಳ ತಾಯ್ಬೇರು ಸಂಸ್ಕೃತ ಛಂದಸ್ಸಿನಲ್ಲಿ ಇರಲಾರದೆಂದರೆ ಸತ್ಯವನ್ನು ಮರೆಮಾಡಿ ದಂತಾಗದಿರದು.[೧೩]

ಹೀಗೆ ಪೈ ಅವರು ತಮ್ಮ ಹಿಂದಿನ ಹೇಳಿಕೆಗಳಿಗೆ ಪೂರಕವಾಗಿ ಮತ್ತಷ್ಟು ಪುರಾವೆಗಳನ್ನು ಒದಗಿಸಿ ತಮ್ಮ ನಿಲವನ್ನು ಸಮರ್ಥಿಸಿಕೊಂಡರು. ಇದರಂತೆ ಇತರರು ತಮ್ಮ ಅಭಿಪ್ರಾಯ ತಪ್ಪೆಂದು ಎತ್ತಿ ತೋರಿದಾಗ ಅದು ಒಪ್ಪುವಂತಿದ್ದರೆ ವಿಶಾಲ ಮನಸ್ಸಿನಿಂದ ಸ್ವೀಕರಿಸುವ, ಹುರುಳಿಲ್ಲದ ವಾದವಾಗಿದ್ದರೆ ಅದನ್ನು ಸರಿಯಾದ ರೀತಿಯಲ್ಲಿ ಅಲ್ಲಗಳೆದು ತಮ್ಮ ನಿಷ್ಠೆ ನಿರ್ಧಾರಗಳನ್ನು ದೃಢಮನಸ್ಸಿನಿಂದ ಗಟ್ಟಿಗೊಳಿಸಿ ಕೊಳ್ಳುವ ಸಾಮರ್ಥ್ಯವನ್ನು ಪೈ ಅವರಂತೆ ಸಾಧಿಸಿಕೊಂಡವರು ವಿರಳವೆಂದೆ ಹೇಳಬೇಕು.

ಅಂದು ಪೈ ಅವರು ಸಾಧಿಸ ಹೊರಟ ಷಟ್ಪದಿಯ ತಾಯ್ಬೇರು ಸಂಸ್ಕೃತ ಛಂದಸ್ಸಿನಲ್ಲಿ ಇರಬೇಕೆಂಬ ವಾದ ಇಂದು ಬಿದ್ದುಹೋಗಿ ಅದು ಅಚ್ಚದೇಶೀ ಛಂದಸ್ಸಿ ನಿಂದ ಹುಟ್ಟು ಪಡೆದು ಮುಂದೆ ಮಾತ್ರಾಛಂದಸ್ಸಿಗೆ ತಿರುಗಿತು ಎಂಬ ವಿಚಾರ ಗಟ್ಟಿಗೊಂಡಿದೆ. ಅದರಂತೆ ಸಂಸ್ಕೃತ ಗಣಯೋಜನೆಯ ಬೆಳಕಿನಲ್ಲಿ ಷಟ್ಪದಿಯಲ್ಲಿ ೧೨ ಪ್ರಕಾರಗಳನ್ನು ಗುರುತಿಸಲು ಹೊರಟ ಅವರ ಪ್ರಯತ್ನವೂ ಸಫಲವಾಗದೆ. ನಾಗವರ್ಮ ತಿಳಿಸಿದ ಶರ ಕುಸುಮ ಭೋಗ ಭಾಮಿನಿ ಪರಿವರ್ಧಿನಿ ವಾರ್ಧಕ ಎಂಬ ಆರು, ಉದ್ದಂಡ ಎಂಬ ಮತ್ತೊಂದು–ಹೀಗೆ ಒಟ್ಟು ಏಳು ಷಟ್ಪದಿಗಳು ಮಾತ್ರ ಸರ್ವ ಮಾನ್ಯತೆಯನ್ನು ಪಡೆದುಕೊಂಡಿವೆ.

೪

ಪೈ ಅವರ ಹಲವುಮುಖ ಸಂಶೋಧನೆಗಳಲ್ಲಿ ಧಾರ್ಮಿಕ ಸಂಶೋಧನೆಗೂ ನಿಶ್ಚಿತವಾದ ಸ್ಥಾನ ದೊರಕಿದೆ. ಆದರೆ ಅವರು ಅಲ್ಲಿ ಯಾವುದೇ ಧರ್ಮದ ತತ್ತ್ವ ಜಿಜ್ಞಾಸೆಗೆ ತೊಡಗದೆ ಅದರ ಪ್ರಾಚೀನತೆ. ಆ ಧರ್ಮಪುರುಷರ ಚರಿತ್ರೆ. ಅವರು ಬಾಳಿಬದುಕಿದ ಕಾಲ ಇತ್ಯಾದಿ ಐತಿಹಾಸಿಕ ಸಂಗತಿಗಳತ್ತಲೇ ಹೆಚ್ಚಿನ ಗಮನ ಹರಿಸಿ ದ್ದಾರೆ. ಕರ್ನಾಟಕದಲ್ಲಿ ಪ್ರಮುಖವಾಗಿ ಪ್ರಚಾರದಲ್ಲಿದ್ದ ಜೈನ. ಬೌದ್ಧ. ವೀರಶೈವ ಧರ್ಮಗಳ ಮತ್ತು ಧರ್ಮಪುರುಷರ ಬಗೆಗೆ ಅವರು ಶೋಧ ನಡೆಸಿದ್ದಾರೆ.

---

೧೩. ಅದೇ ಪು. ೮೧೮

ಪೈ ಅವರು ಜೈನಧರ್ಮವನ್ನು ಕುರಿತು ವಿಚಾರಿಸುತ್ತ ಅದು ಕ್ರಿ. ಪೂ. ೨೫೦ರಲ್ಲಿ ಕರ್ನಾಟಕವನ್ನು ಪ್ರವೇಶಿಸಿತು. ಅದನ್ನು ಭದ್ರಬಾಹು ಎಂಬ ಮುನಿ ಉತ್ತರದೇಶದಿಂದ ಇಲ್ಲಿಗೆ ತಂದು ಪ್ರಚುರಪಡಿಸಿದನು ಎಂದು ಅದರ ಪ್ರಾಚೀನತೆಯನ್ನು ತಿಳಿಸುತ್ತಾರೆ.[೧೪] ಹಾಗೆಯೇ ಗೊಮ್ಮಟೇಶ್ವರ ಎಂದು ಪ್ರಸಿದ್ಧನಾದ ಬಾಹುಬಲಿಯ ಖಚಿತವಾದ ಚರಿತ್ರೆಯನ್ನು ಶಾಸನ, ಕಾವ್ಯ, ಪುರಾಣಗಳ ಆಧಾರದಿಂದ ರೂಪಿಸಿ, ಅವನ ಪ್ರತೀಕವಾದ ಗೊಮ್ಮಟೇಶ್ವರ ಮೂರ್ತಿಗಳು ಕರ್ನಾಟಕದ ಶ್ರವಣ ಬೆಳ್ಗೊಳ, ಕಾರ್ಕಳ, ವೇಣೂರುಗಳಲ್ಲಿ ಕ್ರಮವಾಗಿ ಮಂತ್ರಿ ಚಾವುಂಡರಾಯನಿಂದ ೧೩ ಮಾರ್ಚ ೯೮೧ರಲ್ಲಿ, ಭೈರವದೊರೆ ವೀರಪಾಂಡ್ಯನಿಂದ ೧೩ ಫೆಬ್ರುವರಿ ೧೪೩೨ರಲ್ಲಿ, ಅಜಿಲರಸು ತಿಮ್ಮಣ್ಣನಿಂದ ೧ ಮಾರ್ಚ ೧೬೦೪ರಲ್ಲಿ ಸ್ಥಾಪಿತವಾದವು ಎಂದು ತಿಳಿಸುತ್ತಾರೆ.[೧೫] ಅದರಂತೆ ಜೈನ ತೀರ್ಥಂಕರರಲ್ಲಿ ಪ್ರಸಿದ್ಧರಾದ ಪಾರ್ಶ್ವನಾಥ ಮತ್ತು ಮಹಾವೀರರ ಜೀವನೇತಿಹಾಸವನ್ನು ವಿರಚಿಸಿದ್ದಾರೆ.[೧೬] ಪೈ ಅವರು ಮಹಾವೀರನ ಬಗೆಗೆ ನಡೆಸಿದ ಶೋಧ, ಪಡೆದ ಸಿದ್ಧಿ ಅದ್ವಿತೀಯವಾದುದು.

ಬೌದ್ಧಧರ್ಮವನ್ನು ಕುರಿತಂತೆ ಪೈ ಅವರು ಮಾಡಿದ ಸಂಶೋಧನೆಯಲ್ಲಿ ಪ್ರಮುಖವಾದುದು ಬುದ್ಧನ ಜೀವನ ಚರಿತ್ರೆ ಮತ್ತು ಅವನ ಬದುಕಿನ ಕೆಲವು ಘಟನೆಗಳ ಕಾಲನಿರ್ಣಯ ಹಾಗೂ ಅವನು ಮಾಡಿದ ಸಾಧನೆ, ಪಡೆದ ಸಿದ್ಧಿಗಳ ವಿವರ. ಬುದ್ಧನ ಚರಿತ್ರೆಯನ್ನು ಅವರು ಪುರಾಣ, ಜಾತಕ ಕಥೆಗಳ ಮೂಲಕ ಅತ್ಯಂತ ಪರಿಶ್ರಮದಿಂದ ನಿರೂಪಿಸಿದ್ದಾರೆ. ಅವನ ವ್ಯಕ್ತಿತ್ವಕ್ಕೆ ವಿಶೇಷವಾಗಿ ಮಾರು ಹೋದ ಅವರು ಮೊದಲು ಕಾವ್ಯರೂಪದಲ್ಲಿ, ನಂತರ ಲೇಖನರೂಪದಲ್ಲಿ, ಆ ಮೇಲೆ ಕೃತಿರೂಪದಲ್ಲಿ ಅವನ ವ್ಯಕ್ತಿವೈಶಿಷ್ಟ್ಯಗಳನ್ನು ಕಂಡರಿಸಿ ತೃಪ್ತಿಪಟ್ಟಿದ್ದಾರೆ.[೧೭]

---

೧೪. ಕರ್ನಾಟಕಕ್ಕೆ ಜೈನ ಧರ್ಮದ ಆಗಮನ : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೨೬ ಪು. ೧–೨೧, ೧೨೫–೪೧ (೧೯೪೧), ಜಯಕರ್ನಾಟಕ ೧೩–೨.

೧೫. ಕರ್ನಾಟಕದಲ್ಲಿಯ ಗೊಮ್ಮಟ ಮಹಾಮುನಿಗಳು : ವೀರವಾಣಿ– ಮುನಿವಿಹಾರಾಂಕ. ೧೯೩೯ ಪು. ೧೪೫–೪೯; ಕರ್ನಾಟಕದಲ್ಲಿಯ ಮೂರು ಗೊಮ್ಮಟ ಮಹಾಮೂರ್ತಿಗಳು : ಮಹಾಮಸ್ತಕಾಭಿಷೇಕ ಸೋವಿನೀರ್ (೧೯೫೩); ಶ್ರೀ ನೇಮಿಸಾಗರಮುನಿಗಳ ಅಭಿನಂದನ ಗ್ರಂಥ (೧೯೫೬); ವಿಶ್ವಬಂಧು ೮–೬–೧೯೫೬; ಬಾಹುಬಲಿ ಗೊಮ್ಮಟೇಶ್ವರ ಚರಿತ್ರ (೧೯೩೯)

೧೬. ಪಾರ್ಶ್ವನಾಥತೀರ್ಥಂಕರ ಚರಿತ್ರ (೧೯೩೩); ಮಹಾವೀರಸ್ವಾಮಿ : ಕ.ಸಾ.ಪ. ೩೫–೨ ಪು. ೧೨–೨೪ (೧೯೫೦); ಮಹಾವೀರನ ಪರಿನಿರ್ವಾಣಕಾಲ : ಪ್ರಕ. ೨೮ ಪು.೮೭–೯೪ (೧೯೪೭) ಬುದ್ಧನ ಮತ್ತು ಮಹಾವೀರನ ಪರಿನಿರ್ವಾಣಗಳ ಕಾಲ : ಪ್ರಕ. ೨೭–೧, ೨ ಪು. ೮೭–೯೪; ೧೩–೨೪ (೧೯೪೫)

೧೭. ವೈಶಾಖಿ (ಖಂಡಕಾವ್ಯ) : ಪ್ರ. ಮಂಗಳೂರ ಬಾಳಿಗಾ ಆ್ಯಂಡ್ ಸನ್ಸ್(೧೯೪೭); ಬುದ್ಧ ಚರಿತ-ಬುದ್ಧ ಧರ್ಮ: ಜಯಕರ್ನಾಟಕ ೩೧–೭ ಪು. ೩೦೯–೧೯ (೧೯೫೩); ಭಗವಾನ್ ಬುದ್ಧ (ಜೀವನ ಚರಿತ್ರ); ಪ. ಮಂಗಳೂರ ತರುಣ ಕಲಾವೃಂದ (೧೯೫೪); ಬುದ್ಧನನ್ನು ಕುರಿತ ಕೆಲವು ಕಥೆ-ಸಾಮತಿಗಳು ಪ್ರಜಾವಾಣಿ ೨೫–೫–೧೯೫೬

ವೀರಶೈವಧರ್ಮಕ್ಕೆ ಸಂಬಂಧಿಸಿದಂತೆ ಪೈ ಅವರು ಕೆಲವು ಮಹಾತ್ಮರ ಕಾಲ ನಿರ್ಣಯ ಕಾರ್ಯವನ್ನು ಕೈಗೆತ್ತಿಕೊಂಡಿದ್ದಾರೆ. ಅವರಲ್ಲಿ ದೇವರದಾಸಿಮಾರ್ಯ. ರೇವಣಸಿದ್ಧ. ಮರುಳಸಿದ್ಧ. ಏಕೋರಾಮಿತಂದೆ. ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕಾಲ ನಿರ್ಧಾರದಲ್ಲಿ ಅವರು ತೋರಿದ ನಿಲವು. ನಿರ್ಧರಿಸಿದ ತೇದಿ ಎಲ್ಲರಿಗೂ ಒಪ್ಪಿತವಾಗಿವೆ.[೧೮] ಹತ್ತಾರು ಶಾಸನಗಳನ್ನು ಹೆಕ್ಕಿ ನೋಡಿ ನಿರ್ಧರಿಸಿದ ಬಸವೇಶ್ವರರ ಕಾಲವನ್ನು ಕುರಿತ ಅವರ ಸಂಶೋಧನೆ ಮಹತ್ವದ್ದೆನಿಸಿದೆ.[೧೯]

ವೈಷ್ಣವ ಧರ್ಮವನ್ನು ಕುರಿತಂತೆ ಪೈ ಅವರು ಮಧ್ವಾಚಾರ್ಯರ ಕಾಲ ನಿರ್ಣಯ[೨೦] ಎಂಬ ಒಂದು ಲೇಖನವನ್ನೂ ಶ್ರೀಕೃಷ್ಣಚರಿತ್ರ[೨೧] ಎಂಬ ಒಂದು ಕೃತಿಯನ್ನೂ ರಚಿಸಿದ್ದಾರೆ.

ಪೈ ಅವರು ಪಂಚಾಂಗ ಪ್ರವೀಣರು: ಜ್ಯೋತಿಷ್ಯ ತಜ್ಞರು. ಅದಕ್ಕಾಗಿ ಅವರ ಎಲ್ಲ ಲೇಖನಗಳಲ್ಲಿಯೂ ಕಾಲವನ್ನು ನಿಗದಿಪಡಿಸುವದೃಷ್ಟಿ ವಿಶೇಷವಾಗಿ ಕಂಡು ಬರುತ್ತದೆ. ಯಾವುದೇ ಕವಿ. ಮಹಾಪುರುಷನ ಕಾಲ ನಿರ್ಣಯಕ್ಕೆ ತೊಡಗಿದರೆ ಅವರು ವಾರ. ತಿಥಿ. ನಕ್ಷತ್ರ. ಮಾಸ. ದಿನಾಂಕ. ವರ್ಷ. ವೇಳೆ ಸಹಿತವಾಗಿ ಲೆಕ್ಕ ಹಾಕಿ ತಿಳಿಸುತ್ತಾರೆ. ಉದಾ: ಬುದ್ಧನ ಜನನ ಕ್ರಿ. ಪೂ. ೫೮೧ನೆಯ ಇಸ್ವಿ ಮಾರ್ಚ ತಿಂಗಳ ೩೦ನೆಯ ತಾರೀಖು ಶುಕ್ರವಾರ ವೈಶಾಖ ಹುಣ್ಣಿಮೆಯಂದು ಆದರೆ ಪರಿನಿರ್ವಾಣ ಕ್ರಿ. ಪೂ. ೫೦೧ ಎಪ್ರಿಲ್ ೧೫ನೆಯ ತಾರೀಖು ಮಂಗಳವಾರ ರಾತ್ರಿ ಕೊನೆಯಜಾವದಲ್ಲಿ ಆಯಿತಂತೆ.[೨೨]

ಪೈ ಅವರು ವೇದ ಉಪನಿಷತ್ತುಗಳಲ್ಲಿ ವ್ಯಕ್ತವಾದ ತಾತ್ವಿಕ ವಿಷಯಗಳತ್ತಲೂ ತಮ್ಮ ದೃಷ್ಟಿಹರಿಸಿದ್ದಾರೆ. ಅವರಲ್ಲಿಯೇ ವಿಶೇಷವಾಗಿ ಭಕ್ತಿಯೋಗವನ್ನು ಕುರಿತು ವಿಶ್ಲೇಷಣೆ ನಡೆಸಿದ್ದಾರೆ. ನಾರದಭಕ್ತಿಸೂತ್ರಗಳಲ್ಲಿರುವ ಹನ್ನೊಂದು ವಿಧದ ರೂಪಗಳನ್ನು ಪುರಂದರದಾಸರ ಕೀರ್ತನೆಗಳಲ್ಲಿ ಕಂಡುಕೊಂಡರೆ.ಭಗವದ್ಗೀತೆಯ ೧೨ನೆಯ ಅಧ್ಯಾಯದಲ್ಲಿ ಬರುವ ಸಗುಣಭಕ್ತಿಯ ಶ್ರೇಷ್ಠತೆಯನ್ನು ನಾರದಭಕ್ತಿ ಸೂತ್ರ ಹಾಗೂ ಭಾರತೀಯ ಅನೇಕ ಸಂತರ ಉಕ್ತಿಗಳ ಆಧಾರದಿಂದ ಎತ್ತಿತೋರಿಸಿ

---

೧೮. ದೇವರ ದಾಸಿಮಯ್ಯನ ಕಾಲ ವಿಚಾರ : ದೇವರದಾಸಿಮಾರ್ಯ ಪ್ರಶಸ್ತಿ ಪೃ. ೧೮೮–೨೦೦ (೧೯೫೩); ರೇವಣಸಿದ್ಧನ ಕಾಲವಿಚಾರ : ಶಸಾ. ೮–೨. ೩: ೫–೬ (೧೯೪೫); ವೀರಶೈವ ಆಚಾರತ್ರಯದ ಕಾಲ : ಶಸಾ. ೯–೧ ಪೃ. ೧೩–೨೪ (೧೯೪೫)

೧೯. ಬಸವೇಶ್ವರನ ಕಾಲ ನಿರ್ಣಯ : ಮೂರು ಉಪನ್ಯಾಸಗಳು (ಕನ್ನಡ ಸಂಶೋಧನ ಸಂಸ್ಥೆ (೧೯೮೦); ಶಾಸನಗಳಲ್ಲಿ ಬಸವೇಶ್ವರ : ಬಸವನಾಳ ಸ್ಮಾರಕ ಸಂಪುಟ ಪೃ. ೫೨೫–೩೪ (೧೯೫೫).

೨೦. ಕ.ಸಾ.ಪ. ೩೦–೨ ಪೃ. ೧೯–೨೫ (೧೯೪೫)

೨೧. ಕಾವ್ಯಾಲಯ ಮೈಸೂರು (೧೯೬೨)

೨೨. ಬುದ್ಧ ಚರಿತ–ಬುದ್ಧಧರ್ಮ : ಜ. ಕ. ೩೧–೭

ದ್ದಾರೆ. ಜೊತೆಗೆ ರಮಣ ಮಹರ್ಷಿಗಳ ಜೀವನ ಹಾಗೂ ಕೃತಿಗಳಲ್ಲಿ ವ್ಯಕ್ತವಾದ ಭಕ್ತಿಯ ಬಗೆಯನ್ನೂ ವಿವರಿಸಿದ್ದಾರೆ.[೨೩]

ಅಲ್ಲದೆ ಬುದ್ಧನ ಬೋಧೆಯನ್ನೊಳಗೊಂಡ ಉರಗ ಸೂಕ್ತ[೨೪], ಸಿಗಾಲಸುತ್ತ,[೨೫] ಬುದ್ಧನನ್ನು ಕುರಿತ ಕೆಲವು ಕಥೆ ಸಾಮಂತಿಗಳು.[೨೬] ವಜ್ರಸೂಚಿ[೨೭] ಎಂಬ ಉಪನಿಷತ್ತಿನ ಕಾಲ, ವಸ್ತು, ಕರ್ತೃತ್ವ ವಿಚಾರ, ಸೃಷ್ಟಿಯ ಮೊತ್ತಮೊದಲಿನ ಉಪದೇಶಗಳೆನಿಸಿದ 'ದ ದ ದ' (ದಾಮ್ಯತ, ದತ್ತ, ದಯಧ್ವಂ) ಎಂಬವು[೨೮]ಗಳ ವಿವರಣೆ, ಜಿನ್‌ಪಾಲ್‌ರಿಕ್ಟರ್ ಎಂಬ ಜರ್ಮನ್ ಲೇಖಕನ ತಾತ್ವಿಕ ವಿಚಾರಗಳ ನಿರೂಪಣೆಯನ್ನೂ ಪೈ ಅವರು ಮಾಡಿದ್ದಾರೆ.[೨೯]

ಪೈ ಅವರು ಕೆಲವು ಪುಣ್ಯಕ್ಷೇತ್ರಗಳ ಪ್ರಾಚೀನತೆ ಹಾಗೂ ಅಲ್ಲಿಯ ದೇವರುಗಳ ಸ್ಥಾಪನೆ, ಹೆಸರು ಇತ್ಯಾದಿ ವಿಷಯಗಳತ್ತಲೂ ತಮ್ಮ ಸಂಶೋಧನ ದೃಷ್ಟಿಯನ್ನು ಹರಿಸಿದ್ದಾರೆ. ಮಂಜೇಶ್ವರದ ದೇವಸ್ಥಾನವನ್ನು ಕುರಿತು ಎರಡು ಲೇಖನಗಳನ್ನು ಬರೆದಿದ್ದಾರೆ. 'ಮಂಜೇಶ್ವರ ದೇವಸ್ಥಾನದ ಪ್ರಾಚೀನತೆ'[೩೦] ಎಂಬ ಲೇಖನದಲ್ಲಿ 'ಮಂಜುಲಕ್ಷೇತ್ರ ಮಹಾತ್ಮ್ಯ' ಎಂಬ ಸ್ಥಳಪುರಾಣದ ಆಧಾರದ ಮೇಲಿಂದ ಅಲ್ಲಿರುವ ಅನಂತೇಶ್ವರ ದೇವಸ್ಥಾನವು ಕ್ರಿ. ಶ. ಪೂರ್ವದ ಹಲವು ಶತಮಾನಗಳಷ್ಟು ಪುರಾತನವಾದುದಾಗಿರಬೇಕು ಎಂದು ನಿರ್ಧರಿಸಿದ್ದಾರೆ. 'ಮಂಜೇಶ್ವರದ ದೇವಸ್ಥಾನ'[೩೧] ಎಂಬ ಇನ್ನೊಂದು ಲೇಖನದಲ್ಲಿ ಆ ದೇವಸ್ಥಾನಕ್ಕಿರುವ ನೃಸಿಂಹ, ಅನಂತೇಶ್ವರ ಸುಬ್ರಹ್ಮಣ್ಯ ಎಂಬ ವಿವಿಧ ಹೆಸರುಗಳನ್ನು ಸೂಚಿಸಿ. ಮೊದಲು ವಿರೂಪಾಕ್ಷನೆಂಬ ಗೋಮಾಂತಕ ಬ್ರಾಹ್ಮಣ, ಅನಂತರ ಶ್ರೀ ಮಧ್ವಾಚಾರ್ಯರು ಈ ಕ್ಷೇತ್ರವನ್ನು ಸಂದರ್ಶಿಸಿದ ಸಂಗತಿ ತಿಳಿಸಿ ಮುಂದೆ ೧೯ನೆಯ ಶತಮಾನದ ಆದಿಯಲ್ಲಿ ವಿಟ್ಲ ಸೀಮೆಯ ಹೆಗ್ಗಡೆ ಹಾಗೂ ಕೊಡಗಿನ ಕಲ್ಯಾಣಪ್ಪ ಇದರ ಮೇಲೆ ದಾಳಿ ಮಾಡಿದ ವಿಷಯವನ್ನು

---

೨೩ ಪುರಂದರದಾಸರೂ ಭಕ್ತಿಮಾರ್ಗವೂ: ಸುಬೋಧ-ರಜತೋತ್ಸಹ ಸಂಚಿಕೆ ಪು.೩೬-೪೮ (೧೯೫೧); ಭಕ್ತಿಯೋಗ : ಪ್ರಭಾತ-ವಿಶೇಷಾಂಕ ಪು. ೧೫೧-೫೭ (೧೯೪೬); place of Bhakti in the life and teachings of Shri Ramana : Golden Jubliee Souvenir – Dedicated to the Maharshi of Tiruvannamalai (1946)

೨೪. ಉರಗಸೂಕ್ತ : ಗೋವಿಂದ ಪೈ ವಾಙ್ಮಯದರ್ಶನ ಪುಟ. ೨೯. ೨೫. ಸಿಗಾಲಸುತ್ತ : ಸ್ವದೇಶಾಭಿಮಾನಿ (೧೯೧೧). ೨೬. ಬುದ್ಧನನ್ನು ಕುರಿತು ಕೆಲವು ಕಥೆ ಸಾಮಂತಿಗಳು : ಪ್ರಜಾವಾಣಿ ೨೫-೫-೧೯೫೬ ೨೭ ವಜ್ರಸೂಚಿ : ಲಿಂ.ವಿ. ಸ. ಪತ್ರಿಕೆ ೨. ೩ ಪು. ೬೧-೬೭ (೧೯೪೨) ೨೮ ದ ದ ದ ಅಥವಾ ಸೃಷ್ಟಿಯ ಮೊತ್ತಮೊದಲಿನ ಉಪದೇಶಗಳು : ವಿಕ್ರಮ ೮-೩೩(೧೯೫೬) ೨೯ ಎರಡುದಾರಿಗಳು : ಗೋವಿಂದ ಪೈ ವಾಙ್ಮಯದರ್ಶನ ಪು. ೨೯.

೩೦. ಶಕ್ತಿ ೨ ಪು. ೪೮೪-೯೮ (೧೯೨೭)

೩೧. ಪ್ರಬುದ್ಧ ಕರ್ನಾಟಕ- ೪೬ ಪು. ೬೯-೮೮, (೧೯೬೪)

ವಿವರಿಸಿ, ಕೊನೆಗೆ ಈ ದೇವಸ್ಥಾನದಲ್ಲಿ ಪ್ರತಿವರ್ಷ ನಡೆದುಕೊಂಡು ಬಂದಿರುವ ಉತ್ಸವ, ಯಜ್ಞಕಾರ್ಯ, ತುಲಾಭಾರ, ತೀರ್ಥಸ್ನಾನ, ಮದಕರಿರೋಗ ಪರಿಹಾರ ಕ್ರಮ ಮುಂತಾದ ವಿವರಗಳನ್ನು ಹೇಳಿದ್ದಾರೆ.

ಕದಿರೆ ಹಾಗೂ ಧರ್ಮಸ್ಥಳಗಳಲ್ಲಿರುವ ಶಿವಲಿಂಗಗಳಿಗೆ 'ಮಂಜುನಾಥ' ಎಂಬ ಹೆಸರು ಹೇಗೆ ಬಂದಿರಬೇಕು ಎಂದು ವಿಚಾರಿಸುತ್ತ ಪೈ ಅವರು ಶಿವನಿಗೆ ಮಂಜು ನಾಥ ಎಂಬ ಹೆಸರು ಎಲ್ಲಿಯೂ ಇಲ್ಲ. ಇದಕ್ಕೆ ನಾಥ ಪಂಥವೇ ಕಾರಣವಾಗಿರ ಬೇಕು. ಕ್ರಿಸ್ತ ಶಕಾರಂಭದಲ್ಲಿ ಕದಿರೆಯು ಮಂಜುಶ್ರೀ ಅಥವಾ ಮಂಜುಘೋಷ ಎಂಬ ಬೋಧಿಸತ್ವನ ವಿಹಾರವಾಗಿತ್ತು. ಬೌದ್ಧಧರ್ಮವು ಖಿಲವಾಗಲು ಮತ್ಸ್ಯೇಂದ್ರ ನಾಥನೆಂಬವನು (೯ನೆಯ ಶತಕ) ಬೌದ್ಧ ಮಹಾಯಾನ ಮತ್ತು ಶೈವಧರ್ಮಗಳ ಸಮನ್ವಯವಾದ ತನ್ನ ನಾಥಪಂಥಕ್ಕನುಸಾರವಾಗಿ ಈ ಶಿವಲಿಂಗವನ್ನು ಇಲ್ಲಿ ಪ್ರತಿ ಷ್ಠಿಸಿ ಅದಕ್ಕೆ ಮಂಜುನಾಥ ಎಂದು ಹೆಸರನ್ನಿಟ್ಟಿರಬೇಕು. ಧರ್ಮಸ್ಥಳದ ಶಿವ ಲಿಂಗವೂ ಕದಿರೆಯ ಶಕಲವೇ ಆದ್ದರಿಂದ ಅದಕ್ಕೂ ಮಂಜುನಾಥ ಎಂಬ ಹೆಸರೇ ಉಳಿಯಿತು" ಎಂದು ತಿಳಿಸುತ್ತಾರೆ.[೩೨] 'ಉಡುಪಿ' ಎಂಬ ಮತ್ತೊಂದು ಲೇಖದಲ್ಲಿ 'ಈ ಸ್ಥಳದ ಮೂಲ ರೂಪವು 'ಉಡುಪು' ಎಂದು ಇದ್ದಿರಬೇಕು. ತೀರ ಚಿಕ್ಕ ಹಳ್ಳಿಯಾಗಿದ್ದ ಅದು ಮಧ್ವಾಚಾರ್ಯರಿಂದ ಈಚೆಗೆ ಪ್ರಸಿದ್ಧಿಯನ್ನು ಪಡೆಯಿತು' ಎಂದು ಅಭಿಪ್ರಾಯಪಡುತ್ತಾರೆ.[೩೩]

'ಶಿವರಾತ್ರಿಯೊ ? ಜಿನರಾತ್ರಿಯೊ ?'[೩೪] ಎಂಬ ಇನ್ನೊಂದು ಲೇಖನದಲ್ಲಿ ಪೈ ಅವರು ಸನಾತನ ಧರ್ಮಿಗಳಾದ ಶೈವರು, ಸ್ಮಾರ್ಥರು ಭಾರತವರ್ಷದಲ್ಲಿ ಶಿವ ರಾತ್ರಿಯೆಂದು ಸಾರ್ವತ್ರಿಕವಾಗಿ ಆಚರಿಸುತ್ತ ಬಂದ ಮಾಘ ಬಹುಳ ೧೪ರಂದೇ ಪುರುದೇವನೂ-ಜೈನ ಪ್ರಥಮ ತೀರ್ಥಂಕರ ವೃಷಭನಾಥ-ನಿರ್ವಾಣ ಪಡೆದನೆಂದು, ಆ ಪುಣ್ಯ ತಿಥಿಯನ್ನು 'ಜಿನರಾತ್ರಿ' 'ಶಿವರಾತ್ರಿ' ಎಂದು ಜೈನರೂ ಅಷ್ಟೇ ಶ್ರದ್ಧೆಯಿಂದ ಆಚರಿಸುತ್ತ ಬಂದಿದ್ದಾರೆ. ಆದರೆ ಆದಿಜಿನನು ಮಾಘ ಬಹುಳ ೧೪ ರಂದು ನಿರ್ವಾಣ ಹೊಂದಿದನೆಂಬುದು ಸರಿಯೆ? ಎಂದು ಪ್ರಶ್ನೆ ಹಾಕಿಕೊಂಡು, ಅವನ ಚರಿತ್ರೆ ಬರುವ ಎಲ್ಲ ಪುರಾಣ, ಕಾವ್ಯಗಳನ್ನು ಅವಲೋಕಿಸಿ, ಅಲ್ಲಿ ಬರುವ ವಾರ, ತಿಥಿ, ಪಕ್ಷಗಳ ಆಧಾರದಿಂದ ಪ್ರಥಮ ತೀರ್ಥಂಕರ ಶಿವರಾತ್ರಿಗಿಂತ ಒಂದು ತಿಂಗಳ ಮೊದಲೇ ನಿರ್ವಾಣಹೊಂದಿದ್ದಾನೆ ಎಂದು ನಿರ್ಧರಿಸುತ್ತಾರೆ. ಅಲ್ಲದೆ ಮುಂದುವರಿದು

---

೩೨. ಕದಿರೆಯ ಮಂಜುನಾಥ : ಪ್ರಭಾತ-ವಿಶೇಷಾಂಕ ಪು. ೨೬-೩೨ (೧೯೪೭). ಧರ್ಮಸ್ಥಳದ ಶಿವಲಿಂಗಕ್ಕೆ ಮಂಜುನಾಥ ಎಂಬ ಹೆಸರು ಹೇಗ ಬಂದಿತು? : ಸಮರ್ಪಣೆ ಪು.೬೩-೬೬(೧೯೫೦)

೩೩. ಉಡುಪಿ : ಉಡುಪಿ ನಗರಸಭೆಯ ರಜತೋತ್ಸವ ಸಂಚಿಕೆ ಪು. ೧-೫ (೧೯೬೧)

೩೪. ಶಿವರಾತ್ರಿಯೋ ? ಜಿನರಾತ್ರಿಯೊ ? : ಕನ್ನಡನುಡಿ-ವಿಶೇಷ ಸಂಚಿಕೆ, ಡಿಸೆಂಬರ್ ೧೯೪೭ ಪು. ೧೩-೧೬ ಮತ್ತು ೫೨.

"ಸನಾತನ ಶಿವರಾತ್ರಿ ಎಂಬ (ನಮ್ಮ) ಮಾಘ ಬಹುಳ ೧೪ ಸರ್ವಥಾ ಶಿವರಾತ್ರಿಯೇ ವಿನಾ ಸರ್ವಥಾ ಜಿನರಾತ್ರಿಯಲ್ಲ. ಏಕೆಂದರೆ ಋಷಭನಾಥನು ನಿರ್ವಾಣಕ್ಕಯ್ದಿದ ಕಾರಣದಿಂದ ಜಿನರಾತ್ರಿ ಎಂಬಾ ತಿಥಿ ನಮ್ಮ ಶಿವರಾತ್ರಿಗೆ ನೇರಾಗಿ ಒಂದು ತಿಂಗಳ ಹಿಂದೆಯೇ ನಮ್ಮ ಪುಷ್ಯ ಬಹುಳ ೧೪ ರಂದು ಆಗಿಹೋಗಿದೆ. ಹಿಂದಿನ ಮೂಲ ಗ್ರಂಥಗಳನ್ನು ನೋಡಿಕೊಂಡು ಪೂರ್ವಪುರಾಣಕಾರ ತಪ್ಪಾಗಿ ಬರೆದ, ಅದನ್ನೇ ಪಂಪಾದಿಗಳು ತಮ್ಮ ಕೃತಿಗಳಲ್ಲಿ ಉಲ್ಲೇಖಿಸುತ್ತ ಬಂದರು" ಎಂದು ಶಿವರಾತ್ರಿ-ಜಿನ ರಾತ್ರಿ ಒಂದೇ ಅಲ್ಲ ಬೇರೆ ಬೇರೆ ಎಂದು ಬಿಡಿಸಿ ತೋರಿಸಿದ್ದಾರೆ.

೫

ಪೈ ಅವರು ಹೆಚ್ಚು ಪರಿಶ್ರಮವಹಿಸಿ ಶೋಧಿಸಿದ ಮತ್ತೊಂದು ವಿಷಯವೆಂದರೆ ತಮ್ಮ ಪೂರ್ವಜರಾದ ಸಾರಸ್ವತ ಬ್ರಾಹ್ಮಣರ ಮೂಲ ಇತಿಹಾಸವನ್ನು ಕುರಿತದ್ದು. ಇದಕ್ಕೆ ಸಂಬಂಧಿಸಿ ಅವರು ಎರಡು ಪ್ರಬಂಧಗಳನ್ನು ಬರೆದಿದ್ದಾರೆ.[೩೫] ಅವರ ಪ್ರಕಾರ "ಹಿಮಾಲಯದಿಂದ ಹರಿದುಬಂದ ಸರಸ್ವತೀ ನದಿಯಿಂದಾಗಿ ಇಂದಿನ ಪಂಜಾಬಕ್ಕೆ ಹಿಂದೆ ಸಾರಸ್ವತದೇಶ ಎಂಬ ಹೆಸರಿದ್ದಿತು. ಈ ದೇಶವಾಸಿಗಳು ಅನಂತರ ಬಿಹಾರದಲ್ಲಿಯ ತಿರ್ಹೂತ್ ಪ್ರದೇಶದಲ್ಲಿ ನೆಲೆನಿಂತರು. ಪರಶುರಾಮನು ಸಪ್ತಕೊಂಕಣವನ್ನು ನಿರ್ಮಿಸಿ, ಇಂದಿನ ಗೋವಾಪ್ರಾಂತ್ಯದಲ್ಲಿ ತ್ರಿಹೋತ್ರದ ಈ ಸಾರಸ್ವತ ಬ್ರಾಹ್ಮಣರನ್ನು ನೆಲಸಿಸಿದನಂತೆ, ಆಗ ಅವರು ಶೈವರಾಗಿದ್ದರು. ಶ್ರೀಮಧ್ವಾ ಚಾರ್ಯರಿಂದಾಗಿ ಅವರಲ್ಲಿ ಅನೇಕರು ವೈಷ್ಣವಧರ್ಮವನ್ನು ಸ್ವೀಕರಿಸಿದರು. ಇತಿ ಹಾಸಕಾಲದಲ್ಲಿ ಗೋವಾನಿವಾಸೀ ಸಾರಸ್ವತರು ಉತ್ತರ ಠಾಣಾ, ರತ್ನಗಿರಿ ಜಿಲ್ಲೆಗಳಿಗೂ, ಪೂರ್ವಕ್ಕೆ ಗಟ್ಟದ ಸೀಮೆಗೂ, ದಕ್ಷಿಣಕ್ಕೆ ತುಳು, ಕೇರಳ ನಾಡುಗಳಿಗೂ ಹೋಗಿ ನೆಲೆ ನಿಂತರು. ಅವರ ಈ ಸ್ವದೇಶತ್ಯಾಗಕ್ಕೆ ಪೋರ್ತುಗೀಜರ ದಬ್ಬಾಳಿಕೆಯೇ ಮುಖ್ಯ ಕಾರಣ. ಇವರ ಭಾಷೆ ಕೊಂಕಣಿ, ಅದು ಮರಾಠಿಯಿಂದ ಹುಟ್ಟಿದುದಲ್ಲ; ಮರಾಠಿ ಗಿಂತಲೂ ಪುರಾತನವಾದುದು. ಏಕೆಂದರೆ ಮರಾಠೀ ಭಾಷೆಯು ಮಹಾರಾಷ್ಟ್ರ ಪ್ರಾಕೃತದಿಂದ ಹುಟ್ಟಿದುದಾದರೆ, ಅದಕ್ಕಿಂತ ಎಷ್ಟೋ ಹಳೆಯದಾದ ಮಾಗಧಿ ಪ್ರಾಕೃತದಿಂದ ಕೊಂಕಣಿಯು ಜನ್ಮವೆತ್ತಿದೆ".

ಇದರಂತೆ ದಕ್ಷಿಣ ಕನ್ನಡ ಜಿಲ್ಲೆಯ (ತುಳುನಾಡು) ಇತಿಹಾಸ, ಅದಕ್ಕಿರುವ ಹಳೆಯ ಹೆಸರುಗಳು, ಆ ಜಿಲ್ಲೆಯ ಜಾನಪದ ಕವಿಗಳಾದ ಯಕ್ಷಗಾನ, ಭೂತದ ಆಟ,

---

೩೫. i. Flashes from the past : Saraswath Bodhini (Alleppi 1926)
ii. ನಮ್ಮ ಹಿರಿಯರನ್ನು ಕುರಿತು : ದೀವಿಗೆ : ಭಾಗ ೨ ಪು. ೩೭-೪೫

ಕೋಳಿ ಅಂಕ, ಕಂಬಳ, ಶಿಲ್ಪಕಲೆ ಹಾಗೂ ಸಾಹಿತ್ಯದ ವೈವಿಧ್ಯ ವೈಭವಗಳನ್ನು ಕುರಿತು ಮೌಲಿಕ ಪ್ರಬಂಧಗಳನ್ನು ಬರೆದಿದ್ದಾರೆ.[೩೬]

ಹೀಗೆ ಬಹುಮುಖವಾಗಿ ಸಂಶೋಧನೆ ನಡೆಸಿದ ಪೈ ಅವರ ಒಂದು ಪ್ರಬಂಧವನ್ನು ಅಭ್ಯಸಿಸುವಲ್ಲಿ ಓದುಗ ಏಕಕಾಲಕ್ಕೆ ೫೦–೬೦ ಗ್ರಂಥಗಳ ಪರಿಚಯ ಮಾಡಿಕೊಳ್ಳುತ್ತಾನೆ; ಎಷ್ಟೋ ತಾನು ಅರಿಯದ ಹೊಸ ವಿಷಯಗಳನ್ನು ಗಮನಕ್ಕೆ ತಂದುಕೊಳ್ಳುತ್ತಾನೆ. ಅವರ ಪ್ರಬಂಧಗಳನ್ನು ಅರ್ಥೈಸಿಕೊಳ್ಳುವದು ಅಷ್ಟು ಸುಲಭವಾದ ಮಾತೇನಲ್ಲ. ಏಕೆಂದರೆ ತಮ್ಮ ವಿಸ್ತಾರವಾದ ಅಧ್ಯಯನದಿಂದ ವೇದ ಅಗಮ ಉಪನಿಷತ್ತು ಪುರಾಣ ಶಾಸನ ಇತಿಹಾಸ ಕಾವ್ಯ ಶಾಸ್ತ್ರ ಐತಿಹ್ಯ ನಾಟಕಾದಿ ಮೂಲಗಳಿಂದ ದಾಖಲಿಸಿದ ಸಾಕ್ಷಿ ಪುರಾವೆಗಳನ್ನು, ಒಂದು ಪ್ರಮಾಣಕ್ಕೆ ಮತ್ತೊಂದು ಪ್ರಮಾಣ, ಅದಕ್ಕೆ ಮತ್ತೊಂದು ಉಪಪ್ರಮಾಣ ಹೀಗೆ ಬೆಳೆದ ಸಾಕ್ಷಾಧಾರಗಳ ಸರಮಾಲೆಯನ್ನು ಅವುಗಳಿಗೆ ಸಂಬಂಧಿಸಿದ ಅಡಿಟಿಪ್ಪಣೆ,, ಮುಖ್ಯ ಅಡಿಟಿಪ್ಪಣೆಗೆ ಜೋಡಿಸಿದ ಕುಡಿ ಟಿಪ್ಪಣೆ, ಮತ್ತೆ ಅದರ ವಿವರಣೆ ಇವೆಲ್ಲವುಗಳನ್ನು ತಿಳಿದುಕೊಂಡಾಗ ಅಲ್ಲದೆ ಇವೆಲ್ಲವುಗಳ ಪೂರ್ವ ಪರಿಚಯವಿದ್ದಾಗ ಮಾತ್ರ ಅದು ಸಾಧ್ಯವಾಗುತ್ತದೆ. ಇದಕ್ಕೆ ಓದುಗನಲ್ಲಿ ಹೆಚ್ಚಿನ ತಾಳ್ಮೆ, ಸಂಯಮ, ಏಕಾಗ್ರತೆ ಅತ್ಯವಶ್ಯವಾಗಿ ಬೇಕು.

ಪೈ ಅವರ ಎಷ್ಟೋ ಅಭಿಪ್ರಾಯಗಳು ಇಂದು ಬದಲಾಗಿರಬಹದು, ಅನೇಕ ವಾದಗಳು ಬಿದ್ದು ಹೋಗಿರಬಹುದು, ಹಲವಾರು ನಿರ್ಧಾರಗಳು ನಿರರ್ಥವೆನಿಸಿರಬಹುದು. ಆದರೆ ಸಂಶೋದನ ಸೌಧಕ್ಕೆ ಅವರು ಹಾಕಿದ ಬುನಾದಿ ಮಾತ್ರ ಎಂದೆಂದಿಗೂ ಭದ್ರವಾದುದು, ಅವರ ಸಂಶೋಧನಪದ್ಧತಿ ಎಲ್ಲಕಾಲಕ್ಕೂ ಮಾದರಿಯಾದುದು; ಎಲ್ಲ ಸಂಶೋಧಕರಿಗೂ ಮಾರ್ಗದರ್ಶಿಯಾದುದು. ಇಂಥ ಸಂಶೋಧಕರ ಎಲ್ಲ ಲೇಖನಗಳು ಇಂದು ಒಂದೆಡೆ ದೊರಕದಿರುವುದೊಂದು ದೊಡ್ಡ ಕೊರತೆ. ನಾಡಿನ ಸಣ್ಣ ದೊಡ್ಡ ಪತ್ರಿಕೆಗಳಲ್ಲಿ ಬಿಡಿಯಾಗಿ ಚೆಲ್ಲವರಿದು ನೋಡಲು ಸಹಿತ ದುರ್ಲಭವಾದ ಪ್ರಬಂಧಗಳನ್ನು ಒಂದೆಡೆ ರಾಶಿಗೊಳಿಸಿ ಇಡಿಯಾಗಿ ಪ್ರಕಟಿಸಿ, ಸುಲಭವಾಗಿ ಎಲ್ಲರಿಗೂ ದೊರೆಯುವಂತೆ ಮಾಡಿದರೆ ಕನ್ನಡ ನಾಡಿನಾದ್ಯಂತ ಈಗ ಆಚರಿಸುತ್ತಿರುವ ಅವರ ಈ ಜನ್ಮಶತಮಾನೋತ್ಸವ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. *

---

೩೬. i) ತುಳುನಾಡು –ಪೂರ್ವಸ್ಮೃತಿ ; ತೆಂಕನಾಡು ಪು. ೩–೯೮ (೧೯೪೭)
ii) ದಕ್ಷಿಣ ಕನ್ನಡದ ಹಳೆದು ಹೆಸರುಗಳು : ಮದರಾಸು ಸಮಾಚಾರ–ಸ್ವಾತಂತ್ರ್ಯೋತ್ಸವ ಸಂಚಿಕೆ ಪು. ೯-೧೧ (೧೯೪೯)
iii) ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಕಲಾವೈಭವ : ಜಯಕರ್ನಾಟಕ ೩೧ ಪು. ೧೮೭–೯೬ (೧೯೫೩)

*. ಪೈ ಅವರ ಲೇಖನಗಳನ್ನೊಳಗೊಂಡ ಕೆಲವು ಪತ್ರಿಕೆಗಳು ಇಂದು ನೋಡಲು ಸಹಿತ ಸಿಕ್ಕುವದಿಲ್ಲ. ಈ ವಿಷಯಕ್ಕೆ ಸಂಬಂಧಿಸಿ ಹಾಗೆ ನನಗೆಸಿಗದೆ ಹೋದ ಅಂಥ ಲೇಖನಗಳ ವಿಷಯವನ್ನು ಮ.ವಿ. ನಾಯಕ ಮತ್ತು ಶ್ರೀನಿವಾಸ ಹಾವನೂರ ಅವರ ಗೋವಿಂದ ಪೈ ವಾಙ್ಮಯ ದರ್ಶನ ಎಂಬ ಕೃತಿಯಿಂದ ಎತ್ತಿಕೊಂಡಿದ್ದೇನೆ.

ಈ ಸಂಚಿಕೆಯ ಲೇಖಕರು

೧. ಶ್ರೀ. ಕಯ್ಯಾರ ಕಿಞ್ಞಣ್ಣ ರೈ
ಖ್ಯಾತ ಸಾಹಿತಿಗಳು, ಕಾಸರಗೋಡು

೨. ಡಾ. ಲಕ್ಷ್ಮೀನಾರಾಯಣ ಭಟ್ಟ
ಕನ್ನಡ ಅಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

೩. ಶ್ರೀ. ಎಸ್. ಪಿ. ಪಾಟೀಲ
ಕನ್ನಡ ಅಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪ ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ
ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ಟಿ. ವ್ಹಿ. ವೆಂಕಟಾಚಲಶಾಸ್ತ್ರಿ
ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೬. ಡಾ. ಬಿ.ವ್ಹಿ. ಮಲ್ಲಾಪುರ
ಕನ್ನಡ ಪ್ರಾಧ್ಯಾಪಕರು. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಡಾ. ವೀರಣ್ಣ ರಾಜೂರ
ಕನ್ನಡ ಅಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ